ಶನಿವಾರ, ಅಕ್ಟೋಬರ್ 11, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ


ರೋಹಿತ್ ಅಭ್ಯಾಸ

ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿಗೆ ಸಜ್ಜಾಗುತ್ತಿರುವ ಭಾರತ ತಂಡದ ರೋಹಿತ್ ಶರ್ಮಾ ಶುಕ್ರವಾರ ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಅಭ್ಯಾಸ ನಡೆಸಿದರು



ಪೋಪ್ ಶುಭಾಶಯ

ವ್ಯಾಟಿಕನ್‌ನಲ್ಲಿ ಶುಕ್ರವಾರ ಪವಿತ್ರ ಜೀವನ ಮಹೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಪೋಪ್ ಲಿಯೊ–14 ಜನರತ್ತ ಕೈ ಬೀಸಿದರು



ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ



ದಿನಾಂಕ: 22.09.2025 ರಿಂದ 18.10.2025 ರವರೆಗೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ, ಶೈಕ್ಷಣಿಕ (ಜಾತಿ ಸಮೀಕ್ಷೆ) ಮತ್ತು ಔದ್ಯೋಗಿಕ ಸ್ಥಿತಿಗತಿಗಳ ಬಗ್ಗೆ ಮನೆ–ಮನೆಗೆ ಭೇಟಿ ನೀಡಿ ಪ್ರತಿ ಕುಟುಂಬ ಸದಸ್ಯರ ಗಣತಿ ಕಾರ್ಯವನ್ನು ಕೈಗೊಂಡಿರುತ್ತದೆ.

ಇತ್ತೀಚಿಗೆ ನ್ಯಾಯಮೂರ್ತಿ ನಾಗಮೋಹನ್ ದಾಸ್‌ರವರ ಆಯೋಗ ನಡೆಸಿದ ಜಾತಿ ಗಣತಿಯಲ್ಲಿ ಅನೇಕಾನೇಕ ಲೋಪಗಳು, ರಾಜಕೀಯ ಸಂಚುಗಳು, ಪಿತೂರಿಗಳು ನಡೆದು ಬಲಗೈಗೆ ಸಂಬಂಧಿಸಿದ ಜಾತಿಗಳ ಜನಸಂಖ್ಯೆಯನ್ನು ಉದ್ದೇಶಪೂರ್ವಕವಾಗಿ ಹಾಗೂ ಈ ಜಾತಿಯವರನ್ನು ಬಲಹೀನರಾಗಿ ಮಾಡಿ, ಸರ್ಕಾರದ ಸೌಲಭ್ಯಗಳು ನೇರವಾಗಿ ಸಿಗದಂತೆ ಮಾಡಲು ರಾಜಕೀಯವಾಗಿ ಎರಡನೇ ಸ್ಥಾನಕ್ಕೆ ದೂಡಿರುತ್ತಾರೆ. ಅಲ್ಲದೆ ಬಲಗೈ ಸಮುದಾಯದ ಜನರು ಸಹ ಸಕ್ರಿಯವಾಗಿ ಜಾತಿ ಗಣತಿಯಲ್ಲಿ ಭಾಗಿಯಾಗಿ, ತಮ್ಮ ಜಾತಿಯನ್ನು ಗಣತಿಯಲ್ಲಿ ದಾಖಲಿಸದೇ ಇರುವುದು ಕಾರಣವಾಗಿದೆ. ಇದರಿಂದ ಮಕ್ಕಳ ಹಾಗೂ ಮುಂದಿನ ಪೀಳಿಗೆಯವರಿಗೆ ನಾಗಮೋಹನ್ ದಾಸ್‌ರವರ ವರದಿ ಆಧಾರಿತ ಆದೇಶಗಳು ಮರಣ ಶಾಸನವಾಗಿದೆ.

ಪುಸ್ತುತ ನಡೆಯುತ್ತಿರುವ ಹಿಂದುಳಿದ ವರ್ಗಗಳ ಸಮೀಕ್ಷೆಯಲ್ಲಿ ಈ ತಪ್ಪುಗಳು ಪುನರಾವರ್ತನೆ ಆಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಆಧ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ಈಗ ನಡೆಯುವ ಸಮೀಕ್ಷೆಯಲ್ಲಿ ಗಣತಿದಾರರು ಮನೆ–ಮನೆಗೆ ಭೇಟಿ ನೀಡಿ ಮಾಹಿತಿಗಳನ್ನು ದಾಖಲಿಸುವ ಸಂದರ್ಭದಲ್ಲಿ ಧರ್ಮ ಮತ್ತು ಜಾತಿಗಳನ್ನು ದಾಖಲಿಸುವುದು.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜನಸಂಖ್ಯೆಯೇ ನಮ್ಮೆಲ್ಲರ ಭವಿಷ್ಯವನ್ನು ಬರೆಯುತ್ತದೆ. ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗವು ಜಾತಿಗಣತಿ ಮಾಡುವಾಗ, ನಮ್ಮ ಜಾತಿಯ ಬಹುಪಾಲು ಜನರು ತಮ್ಮ ಜಾತಿಯನ್ನು ಅನೇಕ ಕಾರಣಗಳಿಂದ ಅಂದರೆ ಜಾತಿ ಕಳಂಕ ಅಂಟಿಕೊಳ್ಳುತ್ತದೆ ಎಂದು, ತಾವು ಬದುಕುತ್ತಿರುವ ಸಮಾಜಕ್ಕೆ ಹೆದರಿ ಹೇಳಿಕೊಳ್ಳದೆ, ಜಾತಿಯನ್ನು ದಾಖಲಿಸದೆ ಮತ್ತು ಗಣತಿ ಕಾರ್ಯದಲ್ಲಿ ಭಾಗವಹಿಸದೆ ಹಿಂದೆ/ ದೂರ ಸರಿದಿರುವುದರಿಂದ ನಮ್ಮ ಜಾತಿಯ ಸುಮಾರು 20 ರಿಂದ 25 ಲಕ್ಷ ಜನಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ. ಈಗ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಯುತ್ತಿರುವ ಜಾತಿ ಗಣತಿಯಲ್ಲಿ ಜನರ ವೈಯಕ್ತಿಕ ಮಾಹಿತಿಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬಾರದೆಂದು ಮತ್ತು ಗೌಪ್ಯವಾಗಿ ಇಡಬೇಕೆಂದು ಮಾನ್ಯ ಉಚ್ಚ ನ್ಯಾಯಾಲವು ಆದೇಶ ನೀಡಿರುತ್ತದೆ. ಹಾಗಾಗಿ ನಿಮ್ಮ ವೈಯಕ್ತಿಕ ವಿವರಗಳು ಎಲ್ಲೂ ಸೋರಿಕೆ ಆಗುವುದಿಲ್ಲ. ದಿನಾಂಕ 28/09/2025 ರಂದು ಹಿಂದುಳಿದ ವರ್ಗಗಳ ಆಯೋಗವು ಜಾತಿ ಗಣತಿಯನ್ನು ತನ್ನ ಆನ್ ಲೈನ್ ವೆಬ್‌ಸೈಟ್‌ನಲ್ಲಿ ದಾಖಲಿಸಲು ಅನುವು ಮಾಡಿಕೊಟ್ಟಿರುತ್ತದೆ. ಅದರ ವೆಬ್‌ಸೈಟ್ ವಿಳಾಸ ಈ ಕೆಳಕಂಡಂತೆ ಇರುತ್ತದೆ.

https://kscbcselfdeclaration.karnataka.gov.in

ಎ) ಕಾಲಂ ನಂ. 8 ರಲ್ಲಿ ಧರ್ಮದ ಕಾಲಂ ಇರುತ್ತದೆ. ಬೌದ್ಧ ಧರ್ಮ ಎಂದು ಬರೆಸಲು ಇಚ್ಚಿಸುವವರು, ಸ್ವ–ಇಚ್ಚೆಯಿಂದ ಬೌದ್ಧ ಧರ್ಮ ಎಂದು ಬರೆಯಿಸಬಹುದು. ಉಳಿದವರು ತಾವು ಇಚ್ಚಿಸಿದ ಧರ್ಮವನ್ನು ಧರ್ಮದ ಕಾಲಂನಲ್ಲಿ ಬರೆಸಬಹುದು.

ಬಿ) ಈ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯವರಿಗೆ ಉಪ–ಜಾತಿಯ ಕಾಲಂನ ಅವಕಾಶ ಇಲ್ಲದಿರುವುದರಿಂದ ಜಾತಿ ಕಾಲಂನಲ್ಲಿಯೇ ನೇರವಾಗಿ ನಿಮ್ಮ ಮೂಲ ಜಾತಿಯನ್ನು ನಮೂದಿಸುವುದು. ಜಾತಿ ಕಾಲಂ: 9ರಲ್ಲಿ ಸ್ಥಳೀಯವಾಗಿ ನಿಮ್ಮ ಜಾತಿಯನ್ನು ಏನೆಂದು ಕರೆಯುತ್ತಾರೋ ಅದನ್ನು ಬರೆಸುವುದು. ಉದಾಹರಣೆಗೆ : ಛಲವಾದಿ/ ಬಲಗೈ /ಮಹರ್/ಮಾಲ/ಹೊಲೆಯ/ಪರಯ್ಯ /ಮುಂಡಾಲ/ಮುಕ್ರಿ/ ಹಸ್‌ಲಾರ್/ಆಡಿಯಾ/ಬ್ಯಾಗಾರ/ಬುಕುಡ/ಬೈರಾ/ಮೊಗೇರ್/ ಮೇಘ್ವಾಲ್/ರಾಣಿಯರ್/ಚನ್ನದಾಸರ, ಇತ್ಯಾದಿ.

ಸಿ) ಜಾತಿಯ ಕಾಲಂನಲ್ಲಿ ಬೌದ್ಧರು (Buddhist) ಅಥವಾ ನಿಯೋ ಬುದ್ದಿಸ್ಟ್ (Neo Buddhist) ಎಂದು ನಮೂದಿಸಬಾರದು. ಏಕೆಂದರೆ ಈ ರೀತಿ ಜಾತಿ ಕಾಲಂನಲ್ಲಿ ದಾಖಲಿಸುವವರನ್ನು ಹಿಂದುಳಿದ ವರ್ಗದ ಗುಂಪು–2ಎ ಗೆ ಸೇರಿಸಲಾಗುವುದು. ನಿಮಗೆ ಪರಿಶಿಷ್ಟ ಜಾತಿಯ ಸರ್ಟಿಫಿಕೇಟ್ ನೀಡಲಾಗುವುದಿಲ್ಲ. ನಿಮಗೆ ಪರಿಶಿಷ್ಟರಿಗೆ ದೊರೆಯುವ ಯಾವುದೇ ಸೌಲಭ್ಯಗಳು ಸಿಗುವುದಿಲ್ಲ. ಎಚ್ಚರಿಕೆಯಿಂದ ಮಾಹಿತಿಯನ್ನು ದಾಖಲಿಸುವುದು.

ಡಿ) ಯಾವುದೇ ಕಾರಣಕ್ಕೂ ಈ ಸಮೀಕ್ಷೆಯಲ್ಲಿ ನಿಮ್ಮ ಜಾತಿಯನ್ನು ಆದಿ ಕರ್ನಾಟಕ/ಆದಿ ದ್ರಾವಿಡ/ಆದಿ ಆಂಧ್ರ ಎಂದು ದಾಖಲಿಸಬಾರದು. ಏಕೆಂದರೆ, ಇವುಗಳು ಮೂಲ ಜಾತಿಗಳಲ್ಲ. ಜಾತಿಗಳ ಗುಂಪುಗಳು.

ಇ) ರಾಜ್ಯದ ಬಲಗೈ ಸಂಬಂಧಿತ ಜಾತಿಯ ಪ್ರತಿಯೊಬ್ಬರು ಈ ಸಮೀಕ್ಷೆಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವುದು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ನಿಮಗೆ ಹಾಗೂ ನಿಮ್ಮ ಮುಂದಿನ ಪೀಳಿಗೆಯವರಿಗೆ ಸರ್ಕಾರಿ ನೌಕರಿಗಳು ದೊರೆಯುವುದಿಲ್ಲ ಮತ್ತು ಗ್ರಾಮ ಪಂಚಾಯತ್/ತಾಲ್ಲೂಕು ಪಂಚಾಯತ್/ಜಿಲ್ಲಾ ಪಂಚಾಯತಿಗಳಲ್ಲಿ, MLA/MP ಸ್ಥಾನಗಳು ಹಾಗೂ ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಕಡಿಮೆಯಾಗುತ್ತದೆ.

ಶ್ರೀ ಶ್ರೀ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ
ಅಧ್ಯಕ್ಷರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀ ಸಿದ್ದಯ್ಯ, ಐ.ಎ.ಎಸ್, (ನಿವೃತ್ತಿ)
ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀಮತಿ ವಾಣಿ ಶಿವರಾಂ
ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀ ಸಂಪತ್ ರಾಜ್
ಮಾಜಿ ಮಹಾಪೌರರು, ಬಿ.ಬಿ.ಎಂ.ಪಿ.
ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀ ಪರುಷೋತ್ತಮ್
ಮಾಜಿ ಮಹಾಪೌರರು, ಮೈಸೂರು
ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀ ನಾಗೇಶ್ವರ್ ರಾವ್
ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಾ ಮಹಾಸಭ
ರಾಜ್ಯ ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀ ಚಂದ್ರಶೇಖರಯ್ಯ
ಅಧ್ಯಕ್ಷರು, ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ. ನೌಕರರ ಸಂಘ

ಶ್ರೀ ಟಿ. ಎಸ್. ಶಿವರಾಮು
ರಾಜ್ಯ ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

"ಯಾವುದೇ ಸಮಾಜವು ಜಾಗರೂಕ, ಸುಶಿಕ್ಷಿತ ಹಾಗೂ ಸ್ವಾಭಿಮಾನಿಯಾಗಿದ್ದರೆ ಮಾತ್ರ ಅದರ ಸಾಮರ್ಥ್ಯ ಹೆಚ್ಚಬಲ್ಲದು".
(ಡಾ: ಬಿ.ಆರ್. ಅಂಬೇಡ್ಕರ್)

ಸಮೀಕ್ಷೆಯ ಸಹಾಯವಾಣಿ ಸಂಖ್ಯೆ: 0850770004

ಡಾ. ಬಿ.ಆರ್.ಅಂಬೇಡ್ಕರ್ ಮೆಡಿಕಲ್ ಕಾಲೇಜ್, ಕೆ.ಜಿ.ಹಳ್ಳಿ, ಬೆಂಗಳೂರು

ಶನಿವಾರ, ಅಕ್ಟೋಬರ್ 11, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 281 | ಪುಟ 32

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೋಫಿ 'ಹ್ಯಾಟ್ರಿಕ್'
ನ್ಯೂಜಿಲೆಂಡ್ ತಂಡದ ನಾಯಕಿ ಸೋಫಿ ಡಿವೈನ್ (63 ರನ್;85ಎ) ಅವರು ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಸತತ ಮೂರನೇ ಬಾರಿ 50+ ರನ್ ಗಳಿಸಿದರು



ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ



ಸೆನ್ಸೆಕ್ಸ್ 82,500 | ನಿಫ್ಟಿ 25,285 | $/₹ 88.72 | ಶುದ್ಧ ಬೆಳ್ಳಿ (kg) ₹1,70,200 (ಬೆಂಗಳೂರು)

ಸಮರ್ಪಕ ಅಭಿವೃದ್ಧಿಗೆ ಜಿಬಿಎ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೊದಲ ಸಭೆಯಲ್ಲಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಿ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದ ಸಮಸ್ತ ಜನರಿಗೆ ಸುಗಮ ಆಡಳಿತ, ಸಮರ್ಪಕ ಅಭಿವೃದ್ಧಿಗಾಗಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ಅಸ್ತಿತ್ವಕ್ಕೆ ತರಲಾಗಿದೆ. ಅದರಡಿ ಐದು ನಗರ ಪಾಲಿಕೆಗಳನ್ನು ರಚಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದ ಮೊದಲ ಸಭೆಯ ಶುಕ್ರವಾರ ನಡೆಯಿತು. ಸಭೆಯಲ್ಲಿ ಜಿಬಿಎ ರಚನೆ ಹಿಂದಿನ ಉದ್ದೇಶಗಳನ್ನು ಪ್ರಸ್ತಾಪಿಸಿ, ನಗರದ ಸರ್ವತೋಮುಖ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಕಸ ವಿಲೇವಾರಿ ಆಗಬೇಕು. ಪಾಲಿಕೆಗಳ ಆದಾಯ ಹೆಚ್ಚಳ ಆಗಬೇಕು. ಟ್ರಾಫಿಕ್ ದಟ್ಟಣೆ ನಿವಾರಣೆ ಆಗಬೇಕು. ನಗರವನ್ನು ಚೊಕ್ಕವಾಗಿಡಬೇಕು.

> **ಚರ್ಚೆ-ಸಂವಾದದಿಂದ ಪ್ರಜಾಪ್ರಭುತ್ವ ಗಟ್ಟಿಯಾಗುತ್ತದೆ. ಅಧಿಕಾರ ವಿಕೇಂದ್ರೀಕರಣ, ಬೆಂಗಳೂರಿನ ಅಭಿವೃದ್ಧಿ ಒಲ್ಲದವರು ಸಭೆಯನ್ನು ವಿರೋಧಿಸುತ್ತಾರೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ರಸ್ತೆ, ಚರಂಡಿ, ಪಾದಚಾರಿ ಮಾರ್ಗ, ಉದ್ಯಾನಗಳ ನಿರ್ಮಾಣಕ್ಕೆ ಆದ್ಯತೆ ನೀಡಿ ಮಾದರಿ ಪಾಲಿಕೆಗಳನ್ನಾಗಿ ರೂಪಿಸಬೇಕು ಎನ್ನುವ ಮಹತ್ತರ ಗುರಿ ಮತ್ತು ಉದ್ದೇಶಗಳೊಂದಿಗೆ ಕಾರ್ಯನಿರ್ವಹಿಸಬೇಕು' ಎಂದು ಅಧಿಕಾರಿಗಳಿಗೆ ಕಟ್ಟಪ್ಪಣೆ ಮಾಡಿದರು.



'ಬೆಂಗಳೂರಿನ ಜನಸಂಖ್ಯೆ 1.40 ಕೋಟಿ ತಲುಪಿದೆ. ಒಂದು ಪಾಲಿಕೆಯಿಂದ ದೊಡ್ಡ ನಗರದ ಸಮರ್ಪಕ ಅಭಿವೃದ್ಧಿ ಬಹಳ ದೊಡ್ಡ ಸವಾಲು. ಈ ಚರ್ಚೆ ಹಲವು ವರ್ಷಗಳಿಂದ ಇದ್ದೇ ಇದೆ. ಒಂದಕ್ಕಿಂತ ಹೆಚ್ಚು ಪಾಲಿಕೆಗಳಿಂದ ಅಭಿವೃದ್ಧಿ ಸಾಧ್ಯ ಎನ್ನುವ ಕಾರಣಕ್ಕೆ, ನಾನು ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗಲೇ ಸಮಿತಿ ರಚಿಸಲಾಗಿತ್ತು. ನಂತರ ಬಂದ ಸರ್ಕಾರಗಳು ಈ ದಿಕ್ಕಿನಲ್ಲಿ ಗಮನಹರಿಸಲೇ ಇಲ್ಲ. ನಮ್ಮ ಸರ್ಕಾರವೇ ಪುನಃ ಅಧಿಕಾರಕ್ಕೆ ಬಂದ ಬಳಿಕ ಸಮಿತಿಯನ್ನು ಪುನರ್ ರಚಿಸಿ, ಅದು ನೀಡಿದ ವರದಿಯಂತೆ ಮುಖ್ಯಮಂತ್ರಿ ಅಧ್ಯಕ್ಷತೆಯ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿದೆ' ಎಂದರು.

'ನಮ್ಮ ಗುರಿ ಮತ್ತು ಉದ್ದೇಶ ನೆರವೇರಲು ಜಲಮಂಡಳಿ, ಬಿಡಿಎ, ಬೆಸ್ಕಾಂ ಸೇರಿ ಎಲ್ಲಾ ಇಲಾಖೆಗಳು ಜಿಬಿಎ ಜತೆ ಪರಸ್ಪರ ಸಹಕಾರ, ಸಹಯೋಗವನ್ನು ಅತ್ಯಂತ ಕಡ್ಡಾಯವಾಗಿ ಆಚರಣೆಗೆ ತರಬೇಕು' ಸೂಚಿಸಿದರು.

'ಬಿಜೆಪಿಯವರು ಚುನಾವಣೆ ಬಹಿಷ್ಕರಿಸಲಿ'

'ಬಿಜೆಪಿಯವರು ಜಿಬಿಎ ವಿರುದ್ಧ ಪ್ರತಿಭಟಿಸುವುದೇ ಆದರೆ, ಅವರು ನಗರ ಪಾಲಿಕೆಗಳ ಚುನಾವಣೆಯನ್ನು ಬಹಿಷ್ಕರಿಸಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಿಬಿಎ ರದ್ದು ಮಾಡಲಾಗುವುದು, ಸಭೆಯ ಕಾರ್ಯಸೂಚಿ ತಿಳಿಸಿಲ್ಲ ಎಂದು ಆರ್.ಅಶೋಕ ಹೇಳಿದ್ದಾರಲ್ಲಾ' ಎಂದು ಸುದ್ದಿಗಾರರರು ಕೇಳಿದಾಗ, 'ಅವರು ಏನಾದರೂ ಟೀಕೆ ಮಾಡಲಿ ನಾವು ನಮ್ಮ ಜನಪರ ಕೆಲಸ ಮುಂದುವರಿಸುತ್ತೇವೆ' ಎಂದು ಪ್ರತಿಕ್ರಿಯಿಸಿದರು.

'ಕಾಂಗ್ರೆಸ್ ಸರ್ಕಾರದ ತೀರ್ಮಾನವನ್ನು ಯಾವುದೇ ಬೇರೆ ಸರ್ಕಾರ ಬದಲಾವಣೆ ಮಾಡಲು ಸಾಧ್ಯವಾಗಿಲ್ಲ. ಭೂಸುಧಾರಣಾ ಕಾಯ್ದೆಯಿಂದ ಬ್ಯಾಂಕುಗಳ ರಾಷ್ಟ್ರೀಕರಣ, ಆಹಾರ ಭದ್ರತೆ, ಉದ್ಯೋಗ ಖಾತ್ರಿ, ಶೈಕ್ಷಣಿಕ ಹಕ್ಕು ಸೇರಿದಂತೆ ಗ್ಯಾರಂಟಿ ಯೋಜನೆಗಳವರೆಗೂ ಕಾಂಗ್ರೆಸ್ ಸರ್ಕಾರಗಳ ತೀರ್ಮಾನವನ್ನು ಬದಲಿಸಲು ಸಾಧ್ಯವಾಗಿಲ್ಲ' ಎಂದು ಹೇಳಿದರು.

'ಮೊದಲ ಸಭೆಯಲ್ಲಿ ಕಾರ್ಯಸೂಚಿ ಇರುವುದಿಲ್ಲ. ಜಿಬಿಎ ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬ ತೀರ್ಮಾನ ಮಾಡಲಾಗುತ್ತದೆ. ಆದರೆ, ಸಭೆಗೆ ಗೈರಾಗುವ ಮೂಲಕ ಬಿಜೆಪಿ ನಾಯಕರು ಬೆಂಗಳೂರು ನಗರದ ವಿರುದ್ಧವಾಗಿ ನಿಂತಿದ್ದಾರೆ. ಜನರು ಕೊಟ್ಟ ಅಧಿಕಾರಕ್ಕೆ ದ್ರೋಹ ಬಗೆದಿದ್ದಾರೆ. ಜನರ ಪರವಾಗಿ ಧ್ವನಿ ಎತ್ತುವುದಕ್ಕಿಂತ ಅವರಿಗೆ ರಾಜಕಾರಣ ಮುಖ್ಯವಾಗಿದೆ. ಅವರ ಈ ನಡೆಗೆ ವಿಷಾದ ವ್ಯಕ್ತಪಡಿಸುತ್ತೇವೆ' ಎಂದರು.

ಜಿಬಿಎ ವಿರುದ್ಧ ಕಾನೂನು ಹೋರಾಟ'

ಬೆಂಗಳೂರಿಗೆ ಮಾರಕವಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಬಿಜೆಪಿ ಶಾಸಕರ ಜತೆಗೂಡಿ ಜಿಬಿಎ ಮೊದಲ ಸಭೆಯನ್ನು ಬಹಿಷ್ಕರಿಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. 'ಈಗಾಗಲೇ ಕೌನ್ಸಿಲ್‌ನಲ್ಲಿ ಹೋರಾಟ ಮಾಡಿದ್ದೇವೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನೂ ಹಾಕಿದ್ದೇವೆ' ಎಂದರು.

▶3C

ಕರಕುಶಲ ವಸ್ತುಪ್ರದರ್ಶನ

ಪ್ರಜಾವಾಣಿ ಚಿತ್ರ



ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿ ಇರುವ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಆಯೋಜಿಸಿರುವ ಇಂಡಿಯನ್ ಆರ್ಟಿಸನ್ಸ್ ಹಾಟ್' ಪ್ರದರ್ಶನವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಶುಕ್ರವಾರ ವೀಕ್ಷಿಸಿದರು

'ಗಂಟು' ಸುಲಿಗೆಗೆ ಮುಂಬೈ ನಂಟು

'ಡಿಜಿಟಲ್ ಅರೆಸ್ಟ್': ₹3.62 ಕೋಟಿ ಕಳೆದುಕೊಂಡ ಮಹಿಳೆ

• ಆದಿತ್ಯ ಕೆ.ಎ.

ಬೆಂಗಳೂರು: ಮಹಾರಾಷ್ಟ್ರದ ಜತೆಗೆ ನಂಟು ಹೊಂದಿರುವ ನಗರದ ಟೆಕಿಗಳು, ಮಹಿಳಾ ಉದ್ಯಮಿಗಳು, ಕಂಪನಿಗಳ ವ್ಯವಸ್ಥಾಪಕರನ್ನೇ ಗುರಿಯಾಗಿಸಿ ಮುಂಬೈ ಪೊಲೀಸರ ಸೋಗಿನಲ್ಲಿ ವಂಚಿಸುತ್ತಿರುವ ಪ್ರಕರಣಗಳು ಬೆಂಗಳೂರಿನ ವಿವಿಧ ಭಾಗಗಳಲ್ಲಿ ಹೆಚ್ಚು ವರದಿಯಾಗುತ್ತಿವೆ. ಹಣ ಕಳೆದುಕೊಂಡವರು ಸೈಬರ್ ಅಪರಾಧ ಠಾಣೆಯ ಮೆಟ್ಟಿಲೇರುತ್ತಿದ್ದಾರೆ.


ವಂಚನೆಗೆ ಒಳಗಾದವರು ಗೋಲ್ಡನ್ ಅವರ್‌ನಲ್ಲಿ (ಒಂದು ಗಂಟೆಯ ಒಳಗೆ) 'ರಾಷ್ಟ್ರೀಯ ಸೈಬರ್ ಕ್ರೈಮ್ ಸಹಾಯ ವಾಣಿ'ಯಲ್ಲಿ ದೂರು ದಾಖಲಿಸದಿರುವ ಕಾರಣಕ್ಕೆ ಹಣ ವಾಪಸ್ ಬರುತ್ತಿಲ್ಲ. ಯಾವ ಖಾತೆಗೆ ಹಣ ವರ್ಗಾವಣೆ ಆಗಿದೆ ಎಂಬುದನ್ನು ಪತ್ತೆ ಹಚ್ಚುವುದಕ್ಕೂ ಸೈಬರ್ ಪೊಲೀಸರಿಗೆ ಸಾಧ್ಯ ಆಗುತ್ತಿಲ್ಲ.

ಪ್ರವಾಸ, ವ್ಯಾಪಾರಕ್ಕೆಂದು ಮುಂಬೈಗೆ ಹೋಗಿದ್ದ ನಗರದ ನಿವಾಸಿಗಳು, ತಮ್ಮ ಮೊಬೈಲ್ ಸಂಖ್ಯೆಯನ್ನು ವಸತಿಗೃಹ, ಹೋಟೆಲ್, ಪ್ರವಾಸಿ ತಾಣದಲ್ಲಿ ನಮೂದಿಸಿರುತ್ತಾರೆ. ಕ್ಯಾಬ್ ಚಾಲಕರಿಗೂ ನೀಡಿ ಬಂದಿರುತ್ತಾರೆ. ಅಲ್ಲದೇ ಡಿಜಿಟಲ್ ವೇದಿಕೆಯ ಮೂಲಕವೂ ವ್ಯವಹಾರ ನಡೆಸಿರುತ್ತಾರೆ. ಅಂತಹವರ ಮೊಬೈಲ್ ಸಂಖ್ಯೆ ಪಡೆದುಕೊಳ್ಳುವ ಸೈಬರ್ ವಂಚಕರು, ಉದ್ಯಮಿಗಳು ಹಾಗೂ ಟೆಕಿಗಳಿಂದ ಕೋಟ್ಯಂತರ ರೂಪಾಯಿ ದೋಚುತ್ತಿದ್ದಾರೆ.

▶4

ಅರ್ಧ ಸಾಲ ಮನ್ನಾ 'ಆಫರ್'!

ಮಕ್ಕಳ ಶಿಕ್ಷಣ, ವಾಹನ ಹಾಗೂ ನಿವೇಶನ ಖರೀದಿ, ಮನೆ ನಿರ್ಮಾಣ ಸೇರಿ ವಿವಿಧ ಕಾರಣಕ್ಕೆ ಜನಸಾಮಾನ್ಯರು ಬ್ಯಾಂಕ್‌ಗಳಿಂದ ಸಾಲ ಪಡೆದುಕೊಂಡಿರುತ್ತಾರೆ. ಸಾಲ ಪಡೆದವರನ್ನೂ ಗುರಿಯಾಗಿಸಿ ಅರ್ಧ ಸಾಲ ಮನ್ನಾ ಹೆಸರಿನಲ್ಲೂ ವಂಚಿಸಲಾಗುತ್ತಿದೆ. 'ನಿಮ್ಮ ವಾಹನದ ಮೇಲೆ ಸಾಲ ಇಲ್ಲದಿದ್ದರೂ ಹಳೆಯ ಸಾಲ ಬಾಕಿಯಿದ್ದು, ಅದನ್ನು ಚುಕ್ತಾ ಮಾಡಲು ತಮ್ಮ ಬಳಿ 'ಆಫರ್' ಇದೆ ಎಂಬುದಾಗಿ ವಂಚಕರು ನಂಬಿಸುತ್ತಿದ್ದಾರೆ. ₹5 ಲಕ್ಷ ಸಾಲವಿದ್ದರೆ ₹4 ಲಕ್ಷ ಮಾತ್ರ ಪಾವತಿಸಿದರೆ ಸಾಕು ಎಂದು ಹೇಳಿ ಸಂದೇಶ ಕಳುಹಿಸುತ್ತಿದ್ದಾರೆ. ಆ ರೀತಿಯ ಸಂದೇಶಗಳನ್ನು ನಂಬಿ ಆನ್‌ಲೈನ್‌ನಲ್ಲಿ ಹಣ ಪಾವತಿಸಿದವರು ಹಣ ಕಳೆದುಕೊಂಡಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.



> **ಸಾಲ ಮರುಪಾವತಿಯಲ್ಲಿ 'ಆಫರ್' ನೀಡುವುದಾಗಿ ಹೇಳಿ ಬರುವ ವಾಟ್ಸ್‌ಆ್ಯಪ್ ಸಂದೇಶಗಳಿಗೆ ಪ್ರತಿಕ್ರಿಯಿಸುವುದು ಬೇಡ. ಹಣ ಕಳೆದುಕೊಳ್ಳುವ ಸಾಧ್ಯತೆ ಇದೆ**
> **ಎಂ.ಎ.ಸಲೀಂ,** ರಾಜ್ಯ ಪೊಲೀಸ್ ಮಹಾನಿರ್ದೇಶಕ

> **'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿ ವಂಚಿಸುತ್ತಿದ್ದ ಪ್ರಕರಣಗಳು ಆರು ತಿಂಗಳ ಅವಧಿಯಲ್ಲಿ ಕಡಿಮೆ ಆಗಿದ್ದವು. ಈಗ ಅದೇ ಮಾದರಿಯ ಪ್ರಕರಣಗಳು ಹೆಚ್ಚು ವರದಿ ಆಗುತ್ತಿವೆ**
> **ಸಿ.ವಂಶಿಕೃಷ್ಣ,** ಹೆಚ್ಚುವರಿ ಪೊಲೀಸ್ ಕಮಿಷನರ್ (ಪಶ್ಚಿಮ ವಿಭಾಗ)

ಚಿನಕುರುಳಿ ಪ್ರಕಾಶ್ ಶೆಟ್ಟಿ



ಅಫ್ಗಾನಿಸ್ತಾನದಲ್ಲಿ ರಾಯಭಾರಿ ಕಚೇರಿ ಆರಂಭಕ್ಕೆ ತೀರ್ಮಾನ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಭಾರತದ ತಾಂತ್ರಿಕ ನೆರವು ಕೇಂದ್ರವನ್ನು ಮೇಲ್ದರ್ಜೆಗೇರಿಸಿ ಪೂರ್ಣ ಪ್ರಮಾಣದ ರಾಯಭಾರ ಕಚೇರಿ ಆರಂಭಿಸಲು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಭಾರತವು ಶುಕ್ರವಾರ ಒಪ್ಪಿಗೆ ಸೂಚಿಸಿದೆ.

ಭಾರತಕ್ಕೆ ಆರು ದಿನಗಳ ಪ್ರವಾಸ ಕೈಗೊಂಡಿರುವ ಅಫ್ಗಾನಿಸ್ತಾನದ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಜೊತೆಗೆ ಶುಕ್ರವಾರ ವಿಸ್ತೃತ ಚರ್ಚೆ ನಡೆಸಿದ ಬಳಿಕ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಈ ಘೋಷಣೆ ಮಾಡಿದ್ದಾರೆ.

2021ರ ಆಗಸ್ಟ್‌ನಲ್ಲಿ ಅಫ್ಗಾನಿಸ್ತಾನದಲ್ಲಿ ತಾಲಿಬಾನಿಗಳು ಅಧಿಕಾರ ಹಿಡಿದ ಬಳಿಕ ಕಾಬೂಲ್ ರಾಯಭಾರ ಕಚೇರಿಯಲ್ಲಿದ್ದ ಭಾರತದ ರಾಯಭಾರಿ, ಸಿಬ್ಬಂದಿಯನ್ನು ಹಿಂದಕ್ಕೆ ಕರೆಸಿಕೊಳ್ಳಲಾಗಿತ್ತು. ತನ್ನ ರಾಜತಾಂತ್ರಿಕ ಸಂಬಂಧವನ್ನು ಪುನರ್ ಸ್ಥಾಪಿಸುವ ನಿಟ್ಟಿನಲ್ಲಿ ನಂತರ 'ತಾಂತ್ರಿಕ ತಂಡ'ವನ್ನು ನಿಯೋಜಿಸಿತ್ತು.

ಗಡಿಯಾಚೆಗಿನ ಭಯೋತ್ಪಾದನೆಯು ಉಭಯ ರಾಷ್ಟ್ರಗಳಿಗೂ ಕಂಟಕವಾಗಿದ್ದು, ಜಂಟಿ ಸಹಭಾಗಿತ್ವದಲ್ಲಿ ಇದನ್ನು ಮಟ್ಟಹಾಕಬೇಕು ಎಂದು ವಿದೇಶಾಂಗ ಸಚಿವ ಜೈಶಂಕರ್ ಅವರು ಸಭೆಯಲ್ಲಿ ಪ್ರಸ್ತಾಪಿಸಿದರು.

▶6

ಪೋಕ್ಸೊ ಪ್ರಕರಣ: ಬಿಎಸ್‌ವೈ ವಿರುದ್ಧದ ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ



ಯಡಿಯೂರಪ್ಪ

ಬೆಂಗಳೂರು: 'ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆರೋಪಿಯಾಗಿರುವ ಪೋಕ್ಸೊ ಪ್ರಕರಣದಲ್ಲಿ ಅವರ ಪರ ವಕೀಲರು, ಸಂತ್ರಸ್ತೆ ಮತ್ತು ಕೃತ್ಯ ನಡೆದ ಸ್ಥಳದಲ್ಲಿ ಹಾಜರಿದ್ದವರ ಹೇಳಿಕೆಗಳನ್ನು ಮಾತ್ರವೇ ಆಧರಿಸಿ ವಾದ ಮಂಡಿಸಿದ್ದಾರೆ. ಹೀಗಾಗಿ, ಹಾಲಿ ಅರ್ಜಿಯನ್ನು ಪುರಸ್ಕರಿಸುವ ಪ್ರಶ್ನೆ ಉದ್ಭವಿಸದು' ಎಂಬ ಕಾನೂನಾತ್ಮಕ ಅಂಶವನ್ನು ಹೈಕೋರ್ಟ್ ಮೌಖಿಕವಾಗಿ ವ್ಯಕ್ತಪಡಿಸಿದೆ.

'ಬಾಲಕಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನನ್ನ ವಿರುದ್ಧದ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಬೇಕು' ಎಂದು ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ಐ.ಅರುಣ್ ಶುಕ್ರವಾರ ವಿಚಾರಣೆ ಮುಂದುವರಿಸಿದರು.

▶4

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಬನ್ನೇರುಘಟ್ಟ: ‘ಜೂ ಕ್ಲಬ್’ ಆಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಪ್ರಕೃತಿ, ವನ್ಯಜೀವಿಗಳೊಂದಿಗೆ ಸಂಪರ್ಕ ಸಾಧಿಸಲು ಮತ್ತು ವನ್ಯಜೀವಿ ಹಾಗೂ ಪ್ರಕೃತಿಯ ಸಂರಕ್ಷಣೆಗಾಗಿ ಕೆಲಸ ಮಾಡಲು ಯುವ ಮನಸ್ಸುಗಳನ್ನು ಪ್ರೇರೇಪಿಸಲು ಅ.12ರಂದು ಬೆಳಿಗ್ಗೆ 10ಕ್ಕೆ ‘ಜೂ ಕ್ಲಬ್’ ಆಯೋಜಿಸಲಾಗುತ್ತಿದೆ.

ವನಸಿರಿ ಮತ್ತು ವನ್ಯಜೀವಿ ಸಂಕುಲಗಳನ್ನು ಸಂರಕ್ಷಿಸಲು ಯುವ ಮನಸ್ಸನ್ನು ಪ್ರೇರೇಪಿಸುವ ಉದ್ದೇಶದಿಂದ 15 ವಾರಗಳ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರ ವರೆಗೆ ಕಾರ್ಯಕ್ರಮ ನಡೆಯಲಿದೆ.

10ರಿಂದ 18 ವರ್ಷದ ಒಳಗಿನವರು ಭಾಗವಹಿಸಬಹುದು.

ಆಸಕ್ತರು ವೆಬ್‌ಸೈಟ್ https://bannerughattabiopark.org/education.htmlನಲ್ಲಿ ಲಭ್ಯವಿರುವ ಅರ್ಜಿಯ ಮೂಲಕ ನೋಂದಾಯಿಸಿಕೊಳ್ಳಬಹುದು.

ಗರಿಷ್ಠ 60 ವಿದ್ಯಾರ್ಥಿಗಳನ್ನು ಪರಿಗಣಿಸಲಾಗುತ್ತದೆ. ನೋಂದಣಿ ಶುಲ್ಕ ₹1 ಸಾವಿರ ಆಗಿದ್ದು, ಸರ್ಕಾರಿ ಶಾಲಾ ಮಕ್ಕಳಿಗೆ ನೋಂದಣಿ ಶುಲ್ಕ ಇರುವುದಿಲ್ಲ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯ ನಿವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಿಸಿಇ: ಜಾಗತಿಕ ಮಟ್ಟದ ಪಠ್ಯಕ್ರಮ

ನಾಲ್ಕು ವರ್ಷಗಳಲ್ಲಿ ಐಐಟಿ ಹಂತಕ್ಕೆ ತಲುಪುವ ನಿರೀಕ್ಷೆ

• ಎ.ಎಂ.ಸುರೇಶ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯವು (ಯುವಿಸಿಇ) ಐಐಟಿ ಮಾದರಿಯ ಜಾಗತಿಕ ಮಟ್ಟದ ಪಠ್ಯಕ್ರಮವನ್ನು ಈ ವರ್ಷದಿಂದ ಜಾರಿಗೊಳಿಸಿದೆ. ಇದರಿಂದ ಉದ್ಯೋಗಾವಕಾಶಗಳನ್ನು ಪಡೆಯಲು ಮತ್ತು ಉನ್ನತ ಶಿಕ್ಷಣಕ್ಕಾಗಿ ಹೊರ ದೇಶಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

ಯುವಿಸಿಇಯನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರತ್ಯೇಕಗೊಳಿಸಿ, 2023ರಲ್ಲಿ ಸ್ವಾಯತ್ತ ಸಂಸ್ಥೆಯನ್ನಾಗಿ ಘೋಷಿಸಿದ ಬಳಿಕ ಪಠ್ಯಕ್ರಮ ಪರಿಷ್ಕರಣೆಗೆ ಸಮಿತಿ ರಚಿಸಲಾಗಿತ್ತು. ಸಮಿತಿಯು ವಿವಿಧ ಐಐಟಿಗಳು ಹಾಗೂ ಕಂಪನಿಗಳೊಂದಿಗೆ ಸಮಾಲೋಚನೆ ನಡೆಸಿ ಉದ್ಯೋಗಕ್ಕೆ ಪೂರಕವಾದ ಪಠ್ಯಕ್ರಮ ಸಿದ್ಧಪಡಿಸಿದ್ದು, ಅದನ್ನು ಈ ವರ್ಷ ಬಿ.ಟೆಕ್‌ನ ಮೊದಲ ಸೆಮಿಸ್ಟರ್‌ನಲ್ಲಿ ಅಳವಡಿಸಲಾಗಿದೆ.

‘ಕೃತಕಬುದ್ಧಿಮತ್ತೆಗೆ (ಎಐ) ಈಗ ಹೆಚ್ಚಿನ ಬೇಡಿಕೆ ಇರುವ ಕಾರಣ, ಎಲ್ಲ ವಿಭಾಗಗಳ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಒಂದು ವಿಷಯವಾಗಿ ಎಐ ಅನ್ನು



ಬೋಧಿಸಲಾಗುತ್ತಿದೆ. ಮಾರುಕಟ್ಟೆಯಲ್ಲಿನ ಅಗತ್ಯಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು ಎಂಬ ಉದ್ದೇಶದಿಂದ ಕೃತಕಬುದ್ಧಿಮತ್ತೆಗೂ ಒತ್ತು ನೀಡಲಾಗಿದೆ’ ಎಂದು ಪಠ್ಯಕ್ರಮ ಪರಿಷ್ಕರಣೆ ಸಮಿತಿಯ ಅಧ್ಯಕ್ಷ ಪ್ರೊ. ಎಚ್‌.ಆರ್‌.ರಮೇಶ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಯುವಿಸಿಇಯಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಡೇಟಾ ಸೈನ್ಸ್‌ನ ವಿಭಾಗವಿದೆ. ಈ ವಿಭಾಗಕ್ಕೆ ಸೇರದ ವಿದ್ಯಾರ್ಥಿಗಳಿಗೂ ಕೃತಕ ಬುದ್ಧಿಮತ್ತೆಯ ಜ್ಞಾನ ಇರಬೇಕು ಎಂಬ ಉದ್ದೇಶದಿಂದ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯೂನಿಕೇಷನ್, ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್, ಮಾಹಿತಿ ವಿಜ್ಞಾನ ಮತ್ತು ಎಂಜಿನಿಯರಿಂಗ್, ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ವಿದ್ಯಾರ್ಥಿಗಳಿಗೊ ಕೃತಕ ಬುದ್ಧಿಮತ್ತೆಯನ್ನು ಒಂದು ವಿಷಯವಾಗಿ ಈ ವರ್ಷದಿಂದ ಕಲಿಸಲಾಗುತ್ತಿದೆ.

ಮುಖ್ಯಾಂಶಗಳು

- ಸ್ವಾಯತ್ತ ಸಂಸ್ಥೆಯಾದ ಬಳಿಕ ಹಳೆಯ ಪಠ್ಯಕ್ಕೆ ತಿಲಾಂಜಲಿ
- ಕೃತಕ ಬುದ್ಧಿಮತ್ತೆಗೆ ಹೆಚ್ಚಿನ ಒತ್ತು
- ಸಂಶೋಧನೆ, ಉದ್ಯೋಗಾವಕಾಶಕ್ಕೆ ಅನುಕೂಲ

‘ಧಾರವಾಡ ಮತ್ತು ಖರಗ್‌ಪುರ ಐಐಟಿಗೆ ಭೇಟಿ ನೀಡಿ ಅಲ್ಲಿನ ಪ್ರಾಧ್ಯಾಪಕರೊಂದಿಗೆ ಸಮಾಲೋಚನೆ ನಡೆಸಿ, ಅವರ ಸಲಹೆ ಸೂಚನೆಗಳನ್ನು ಪಡೆಯಲಾಗಿದೆ. ಇದಲ್ಲದೆ ಕಂಪನಿಗಳು ಮತ್ತು ಕೈಗಾರಿಕೆಗಳು ಏನನ್ನು ನಿರೀಕ್ಷೆ ಮಾಡುತ್ತವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮ ರೂಪಿಸಲಾಗಿದೆ. ಇದರಿಂದ ಉದ್ಯೋಗ ಪಡೆಯಲು, ಸಂಶೋಧನೆಯಲ್ಲಿ ತೊಡಗಲು ಅನುಕೂಲವಾಗಲಿದೆ’ ಎಂದು ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕಎಸ್.ಎಂ.ದಿಲೀಪ್ ಕುಮಾರ್ ವಿವರಿಸಿದರು.

‘ಯುವಿಸಿಇಯಲ್ಲಿ ಹಳೆಯ ಪಠ್ಯಕ್ರಮವಿದ್ದು, ಇದನ್ನು ಕಲಿತವರಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲ ಎಂಬ ಮಾತುಗಳು ಇದ್ದವು. ಇದನ್ನು ಗಮನದಲ್ಲಿಟ್ಟುಕೊಂಡು ನಿರ್ದೇಶಕರಾದ ಸುಭಾಶಿಷ್ ತ್ರಿಪಾಠಿ ಅವರು ಪಠ್ಯಕ್ರಮ ಬದಲಾವಣೆಗೆ ಸಮಿತಿ ರಚಿಸಿದ್ದರು. ಈಗ ಮೊದಲ ಸೆಮಿಸ್ಟರ್ ಪಠ್ಯ ಬದಲಾಗಿದ್ದು, ಹಂತ ಹಂತವಾಗಿ ಎಲ್ಲ ಸೆಮಿಸ್ಟರ್‌ಗಳ ಪಠ್ಯ ಬದಲಾಗಲಿದೆ. ನಾಲ್ಕು ವರ್ಷಗಳಲ್ಲಿ ಐಐಟಿ ಹಂತಕ್ಕೆ ಯುವಿಸಿಇ ತಲುಪಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಎಂ.ಟೆಕ್ ಪಠ್ಯಪರಿಷ್ಕರಣೆ ಕೆಲಸವೂ ಆರಂಭವಾಗಿದೆ. ಈ ವರ್ಷ ಇಲ್ಲವೆ ಮುಂದಿನ ವರ್ಷದಿಂದ ಇದು ಜಾರಿಗೆ ಬರಲಿದೆ. ಕ್ವಾಂಟಮ್ ಭೌತವಿಜ್ಞಾನ ಪಠ್ಯದಲ್ಲಿ ಸೇರಿದೆ. ಈ ಕ್ಷೇತ್ರದಲ್ಲಿ 10 ಸಾವಿರ ಉದ್ಯೋಗಾವಕಾಶ ಸೃಷ್ಟಿಸುವ ಗುರಿಯನ್ನು ರಾಜ್ಯ ಸರ್ಕಾರ ಹೊಂದಿದ್ದು, ಇದಕ್ಕೆ ಪೂರಕವಾಗಿ ಪಠ್ಯಕ್ರಮ ಅಳವಡಿಸಲಾಗಿದೆ ಎಂದು ವಿವರಿಸಿದರು.

ಕ್ರಿಯೇಟಿವಿಟಿ ಲ್ಯಾಬ್ ಮಂಜೂರು

ವಿದ್ಯಾರ್ಥಿಗಳಲ್ಲಿನ ಆಸಕ್ತಿ, ಕೌಶಲಕ್ಕೆ ತಕ್ಕಂತೆ ಹೊಸ ಹೊಸ ಚಟುವಟಿಕೆಗಳಲ್ಲಿ ತೊಡಗಲು ಕ್ರಿಯೇಟಿವಿಟಿ ಲ್ಯಾಬ್ ಆರಂಭಿಸಲಾಗುತ್ತದೆ. ವಿದ್ಯಾರ್ಥಿಯು ತನ್ನಲ್ಲಿರುವ ಕೌಶಲವನ್ನು ಬಳಸಿ ಹೊಸದಾಗಿ ಯಾವುದಾದರೂ ವಸ್ತುವನ್ನು ತಯಾರಿಸಬಹುದು. ಅದೇ ಕ್ಷೇತ್ರದಲ್ಲಿ ಕೋರ್ಸ್ ಮುಗಿಯುವವರೆಗೂ ಕಾರ್ಯ-ನಿರ್ವಹಿಸಬಹುದು. ಇದಕ್ಕೆ ಅಂಕಗಳನ್ನೂ ನೀಡಲಾಗುತ್ತದೆ. ಸಂಶೋಧನೆಗೆ ಉತ್ತೇಜನ ನೀಡುವುದು ಇದರ ಮುಖ್ಯ ಉದ್ದೇಶ.

ಇದಕ್ಕೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಅನುಮೋದನೆ ನೀಡಿದ್ದು, ಒಂದು ತಿಂಗಳಲ್ಲಿ ಶುರುವಾಗಲಿದೆ. ಇದಕ್ಕಾಗಿ ಹೊಸ ಕಟ್ಟಡವೂ ಸಿದ್ಧವಿದೆ ಎಂದು ದಿಲೀಪ್ ಕುಮಾರ್ ತಿಳಿಸಿದರು.

ಶೇ 87ರಷ್ಟು ಉದ್ಯೋಗಾವಕಾಶ

ಪ್ರಸಕ್ತ ಸಾಲಿನಲ್ಲಿ ಕ್ಯಾಂಪಸ್ ಸಂದರ್ಶನದ ಮೂಲಕ ಶೇ 87ರಷ್ಟು ಮಂದಿ ಉದ್ಯೋಗಾವಕಾಶ ಪಡೆದುಕೊಂಡಿದ್ದಾರೆ. ಕಂಪನಿಗಳು ಕ್ಯಾಂಪಸ್‌ಗೆ ಭೇಟಿ ನೀಡುತ್ತಿದ್ದು, ಅವರಿಗೆ ಸಂದರ್ಶನ ನಡೆಸಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ಪ್ರತ್ಯೇಕ ಸಭಾಂಗಣ ಸಿದ್ಧವಾಗುತ್ತಿದೆ. ಒಂದು ತಿಂಗಳಲ್ಲಿ ಇದರ ನವೀಕರಣ ಕಾರ್ಯ ಪೂರ್ಣಗೊಳ್ಳಲಿದೆ.

ಯುವಿಸಿಇ ಆವರಣದಲ್ಲಿ ₹ 85 ಕೋಟಿ ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಾಣವಾಗುತ್ತಿದೆ. ಇದಲ್ಲದೆ ಜ್ಞಾನ ಭಾರತಿ ಆವರಣದಲ್ಲಿ ಹೊಸ ಕ್ಯಾಂಪಸ್ ನಿರ್ಮಾಣಕ್ಕೆ 52 ಎಕರೆ ಜಾಗ ಮಂಜೂರಾಗಿದೆ. ಅಲ್ಲಿಯೂ ಕಟ್ಟಡ ನಿರ್ಮಾಣವಾದರೆ, ಯುವಿಸಿಇಗೆ ಪೂರ್ಣ ಪ್ರಮಾಣದಲ್ಲಿ ಮೂಲ ಸೌಲಭ್ಯಗಳು ದೊರೆತಂತೆ ಆಗಲಿದೆ ಎಂದು ದಿಲೀಪ್ ಕುಮಾರ್ ಮಾಹಿತಿ ನೀಡಿದರು.

ಮಾರಮ್ಮ ದೇವಿ ಜಾತ್ರೆ ನಾಳೆಯಿಂದ

ಪೀಣ್ಯದಾಸರಹಳ್ಳಿ: ಇತಿಹಾಸ ಪ್ರಸಿದ್ಧ ಬಾಗಲಗುಂಟೆ ಶಕ್ತಿದೇವತೆ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವ ಅಕ್ಟೋಬರ್ 12ರಿಂದ 14ರವರೆಗೆ ವಿಜೃಂಭಣೆಯಿಂದ ಜರುಗಲಿದೆ.

12 ರಂದು ರಾತ್ರಿ 11.30ಕ್ಕೆ ಮಾರಮ್ಮದೇವಿಯ (ಘಟ್ಟಗಡಿಗೆ) ಸೀಡೇದಳ್ಳಿ ಮತ್ತು ತೋಟದಗುಡ್ಡದ ಹಳ್ಳಿಗೆ ಉತ್ಸವ ಹೊರಡಲಿದೆ. ರಾತ್ರಿ 11ಕ್ಕೆ ಮಾರಮ್ಮ ದೇವಿಯ ಅಗ್ನಿಕುಂಡ ಹಚ್ಚುವ ಕಾರ್ಯಕ್ರಮ ನಡೆಯಲಿದೆ.

13ರಂದು ಬೆಳಿಗ್ಗೆ 8 ಗಂಟೆಗೆ ನವಗ್ರಹಗಳಿಗೆ ಬೆಲ್ಲದ ಆರತಿ ಮತ್ತು ಪೂಜೆ ನಡೆಯಲಿದೆ. 14ರಂದು ಬೆಳಗ್ಗೆ 9ಕ್ಕೆ ಗ್ರಾಮದ ಎಲ್ಲಾ ದೇವರಿಗೂ ಮಹಾಮಂಗಳಾರತಿ ನಂತರ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕುಶಲೋಪರಿ



ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರನ್ನು ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಅವರು ಶುಕ್ರವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು

ಜನಮನ ಸೆಳೆದ 'ಆರ್ಟಿಸನ್ಸ್ ಹಾಟ್'

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎಂ.ಜಿ.ರಸ್ತೆಯ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ ಪ್ರದರ್ಶನ
- ಕುಶಲಕರ್ಮಿಗಳ ಕೈಯಲ್ಲಿ ಅರಳಿದ ಕಲಾಕೃತಿಗಳ ಅನಾವರಣ

ಪ್ರಜಾವಾಣಿ | DH Presents ದಿ ಇಂಡಿಯನ್ ಆರ್ಟಿಸನ್ಸ್ ಹಾಟ್ THE INDIAN ARTISANS HAAT

ಬೆಂಗಳೂರು: ಚನ್ನಪಟ್ಟಣದ ಗೊಂಬೆ, ಉತ್ತರಪ್ರದೇಶದ ಕುರ್ಜಾಪಾತ್ರೆ, ಪಶ್ಚಿಮ ಬಂಗಾಳದ ಆಭರಣ, ಆಂಧ್ರದ ಪ್ರಾಚೀನ ಕೆತ್ತನೆ, ರಾಜಸ್ಥಾನದ ಪೀಠೋಪಕರಣ, ಆಗ್ರಾದ ಅಮೃತಶಿಲೆ ಕೆತ್ತನೆ...

ಹೀಗೆ ದೇಶದ ನಾನಾ ರಾಜ್ಯಗಳ ಕುಶಲಕರ್ಮಿಗಳ ಕೈಯಲ್ಲಿ ಅರಳಿದ ಕಲಾಕೃತಿಗಳು, 'ದಿ ಇಂಡಿಯನ್ ಆರ್ಟಿಸನ್ಸ್ ಹಾಟ್' ಶೀರ್ಷಿಕೆಯಡಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ವತಿಯಿಂದ ಎಂ.ಜಿ.ರಸ್ತೆಯ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ ಪ್ರದರ್ಶನಗೊಂಡಿವೆ.

ಪ್ರದರ್ಶನದೊಂದಿಗೆ ಮಾರಾಟವೂ ಇರುವುದರಿಂದ ಕಲಾಪ್ರೇಮಿಗಳಿಗೆ ರೋಮಾಂಚನವನ್ನು ಉಂಟು ಮಾಡಿದೆ. ಕುಶಲಕರ್ಮಿಗಳಿಗೆ ಉತ್ತೇಜನ ದೊರಕಿದೆ. ಸಾಂಸ್ಕೃತಿಕ ಪ್ರದರ್ಶನಗಳು, ವಿವಿಧ ವಾದನಗಳು ಹಬ್ಬದ ವಾತಾವರಣ ನಿರ್ಮಿಸಿದೆ.

ಪರಿಸರ ಸ್ನೇಹಿ ಕರ್ನಾಟಕದ ಟೇಬಲ್ ವೇರ್. ಒಡಿಶಾದ ಬೇವಿನ ಮರದ ಪಾತ್ರೆಗಳು, ಮರದ ಆಟಿಕೆಗಳು, ತಮಿಳುನಾಡಿನ ತಂಜಾವೂರಿನ ವರ್ಣಚಿತ್ರಗಳು, ಮಹಾರಾಷ್ಟ್ರದ ವರ್ಲಿ ಕಲೆ, ಒಡಿಶಾದ ಪಟ್ಟ ಚಿತ್ರ, ಮಧ್ಯಪ್ರದೇಶದ ಭಿಲ್ ಚಿತ್ರಕಲೆ, ಮಹಾರಾಷ್ಟ್ರದ ಗೊಂಡ್ ಚಿತ್ರಕಲೆ, ಜೈಪುರದ ಮುತ್ತುಗಳು, ಕರ್ನಾಟಕದಿಂದ ಲಂಬಾಣಿ ಆಭರಣ, ರಾಜಸ್ಥಾನದ ಲಾತ್ ಬಳೆಗಳು ವಿಶೇಷ ಆಕರ್ಷಣೆಗಳಾಗಿವೆ.

ಪಂಜಾಬಿ ಜೂಥಿ, ಮಣಿಪುರದ ಸೆಣಬಿನ ಚೀಲ, ಕರ್ನಾಟಕದಿಂದ ವಾಟರ್ ರೀಡ್ ಚೀಲ, ಇಳಕಲ್ ಸೀರೆ, ಬಿಹಾರದ ಬಾಗಲ್ಪುರಿ ಸೀರೆ, ಗುಜರಾತ್‌ನ ಕಚ್‌ನ ಅಜರಖ್ ಬಂಧಿನಿ, ಲಖನೌನ ಚಿಕನ್‌ಕರಿ ಎಂಬ್ರಾಯಿಡರಿ, ಮೀರತ್‌ನ ಖಾದಿ, ಬನಾರಸ್ ಸೀರೆ, ಒಡಿಶಾದ ಸಂಭಾಲ್‌ಪುರ ಸೀರೆ, ಪಶ್ಚಿಮ ಬಂಗಾಳದ ಕೈಮಗ್ಗ ಸೀರೆ, ಜಮ್ದಾನಿ, ತೆಲಂಗಾಣದಿಂದ ಇಕ್ಕತ್, ಕಾಶ್ಮೀರದ ಕೈಮಗ್ಗಗಳನ್ನು ನೋಡಲು ಜನರು ಮುಗಿಬಿದ್ದಿದ್ದರು.

ತಿರುಪತಿಯ ಪ್ರಾಚೀನ ಕೆತ್ತನೆಗಳು, ಉತ್ತರ ಪ್ರದೇಶದ ಶರಣ್‌ಪುರ ಪೀಠೋಪಕರಣ, ಮಿರ್ಜಾಪುರದ ಕಾರ್ಪೆಟ್, ದರಿ, ರಗ್ಗು, ಹತ್ತಿ ದರಿಗಳು ಮನ ಸೆಳೆದವು.

ಇದಲ್ಲದೇ ವಿವಿಧ ಆಹಾರ ಪದಾರ್ಥಗಳು, ತಿಂಡಿ ತಿನಿಸುಗಳು ಕೂಡಾ ಇರುವುದರಿಂದ ಹಲವರು ಖರೀದಿಸಿ ಅಲ್ಲೇ ರುಚಿ ಸವಿದರು. ಅನೇಕರು ಮನೆಗೆ ಒಯ್ದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಚಿರಂತನ ಫೌಂಡೇಷನ್‌ನ ವಿಶೇಷ ಮಕ್ಕಳು ವಿಶಿಷ್ಟ ನೃತ್ಯರೂಪಕಗಳ ಮೂಲಕ ಗಮನಸೆಳೆದರು.

ಕೈಮಗ್ಗ, ಹಸ್ತಶಿಲ್ಪ ಮತ್ತು ಪರಂಪರಾತ್ಮಕ ಕಲೆಗಳನ್ನು ಈ ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ದೇಶದ ವಿವಿಧ ಭಾಗಗಳ ಕಲಾವಿದರು ಈ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ. ತಾವು ತಯಾರಿಸಿದ ಕಲಾತ್ಮಕ ಉತ್ಪನ್ನಗಳನ್ನು ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ, ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ. ದೇಶೀಯ ಉತ್ಪನ್ನಗಳನ್ನು ಪ್ರೋತ್ಸಾಹಿಸುವುದು ಹಾಗೂ ಹೊಸ ಪೀಳಿಗೆಗೆ ಸಾಂಪ್ರದಾಯಿಕ ಕಲಾ ಪ್ರಕಾರಗಳನ್ನು ಪರಿಚಯಿಸುವುದು ಈ ಪ್ರದರ್ಶನದ ಆಶಯ ಎಂದು 'ದಿ ಇಂಡಿಯನ್ ಆರ್ಟಿಸನ್ಸ್ ಹಾಟ್' ಸಹ ಸಂಸ್ಥಾಪಕರಾದ ನಾಗರಾಜ್ ಹುಂಡೇಕರ್, ಅಹ್ಮದ್ ಖಾನ್ ‑ತಿಳಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, 'ಡೆಕ್ಕನ್ ಹೆರಾಲ್ಡ್' ಕಾರ್ಯನಿರ್ವಾಹಕ ಸಂಪಾದಕ ಕೆ.ವಿ.ಸುಬ್ರಹ್ಮಣ್ಯ ಭಾಗವಹಿಸಿದ್ದರು.

ವಾರಾಂತ್ಯದ ದಿನಗಳಲ್ಲಿ ಭಾರತೀಯ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಪ್ರದರ್ಶನಗಳಿರಲಿವೆ ಎಂದು ಸಂಘಟಕರು ತಿಳಿಸಿದ್ದಾರೆ.



ನಗರದ ಎಂ.ಜಿ. ರಸ್ತೆಯಲ್ಲಿರುವ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ ಶುಕ್ರವಾರ ಆರಂಭಗೊಂಡಿರುವ 'ಇಂಡಿಯನ್ ಆರ್ಟಿಸನ್ಸ್ ಹಾಟ್' ಪ್ರದರ್ಶನದಲ್ಲಿ ಪೂಜಾ ಗಾಂಧಿ ಕಲಾಕೃತಿಗಳ ವಿವರ ಪಡೆದರು ಪ್ರಜಾವಾಣಿ ಚಿತ್ರಗಳು



'ಇಂಡಿಯನ್ ಆರ್ಟಿಸನ್ಸ್ ಹಾಟ್' ಪ್ರದರ್ಶನವನ್ನು ವೀಕ್ಷಿಸಿದ ಜನರು

19ರವರೆಗೆ ಪ್ರದರ್ಶನ

ದೀಪಾವಳಿ ಪ್ರಯುಕ್ತ ಅ.19ರವರೆಗೆ ಪ್ರದರ್ಶನವನ್ನು ಆಯೋಜಿಸಲಾಗಿದೆ. ಪ್ರತಿದಿನ ಬೆಳಿಗ್ಗೆ 10.30ರಿಂದ ರಾತ್ರಿ 8.30ರವರೆಗೆ ಪ್ರದರ್ಶನ ಮತ್ತು ಮಾರಾಟ ಇರಲಿದ್ದು, ನಾಗರಿಕರು ಇದರ ಪ್ರಯೋಜವನ್ನು ಪಡೆದುಕೊಳ್ಳಬೇಕು ಎಂದು ಆಯೋಜಕರು ತಿಳಿಸಿದ್ದಾರೆ.

'ಮಧ್ಯಮ ವರ್ಗಕ್ಕೆ ತಲುಪಿಸುವ ಕಾರ್ಯ'

'ಭಾರತದ ಕಲೆ, ಸ್ವದೇಶಿ ವಸ್ತುಗಳನ್ನು ಮಧ್ಯಮ ವರ್ಗದ ಜನರಿಗೆ ತಲುಪಿಸುವ ಕೆಲಸವನ್ನು 'ಪ್ರಜಾವಾಣಿ' ಮತ್ತು ಡೆಕ್ಕನ್ ಹೆರಾಲ್ಡ್' ಮಾಡಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶ್ಲಾಘಿಸಿದರು.

'ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಎಲ್ಲ ತರಹದ ಬಟ್ಟೆಗಳು, ಹೊಸ ವಿನ್ಯಾಸಗಳು, ಕೆತ್ತನೆ, ಗೊಂಬೆ, ಕಲಾಕೃತಿಗಳು ಇಲ್ಲಿವೆ. ನಮ್ಮ ರಾಜ್ಯದ ಪಾರಂಪರಿಕ ಕಲಾಕೃತಿ, ಗೊಂಬೆ, ಸೀರೆಗಳಿವೆ. ಬೆಂಗಳೂರಿನಲ್ಲಿ ಮಾಲ್‌ಗಳು ಮಾತ್ರ ಇರುವುದಲ್ಲ. ಈ ರೀತಿಯಲ್ಲಿ ರಸ್ತೆ ಬದಿಯಲ್ಲಿ ಪ್ರದರ್ಶನ, ಮಾರಾಟಗಳಿಗೆ ಅವಕಾಶವಾಗುವ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಆಯೋಜಕರು ಈ ಅವಕಾಶವನ್ನು ಬಳಸಿಕೊಳ್ಳಬೇಕು. ಜನರು ಇಂಥ ಕಡೆಗಳಿಗೆ ಬಂದು ಖರೀದಿಸಿ ಪ್ರೋತ್ಸಾಹಿಸಬೇಕು' ಎಂದು ಮನವಿ ಮಾಡಿದರು.

'ಇಂಥ ಕಾರ್ಯಕ್ರಮಗಳಿಗೆ ಬೆಂಬಲವಾಗಿ ನಾವಿದ್ದೇವೆ ಎಂದು ತಿಳಿಸಲು ನಾನು ಬಂದಿದ್ದೇನೆ' ಎಂದು ತಿಳಿಸಿದರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ. ಹ್ಯಾರಿಸ್ ಕೆಲವು ವಸ್ತುಗಳನ್ನು ಖರೀದಿಸಿ, ಪ್ರದರ್ಶನಕಾರರನ್ನು ಪ್ರೋತ್ಸಾಹಿಸಿದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲಿ: ಪೂಜಾ ಗಾಂಧಿ

'ಪರಿಸರ ಸ್ನೇಹಿ ಮತ್ತು ಸ್ವದೇಶಿ ಉತ್ಪನ್ನಗಳನ್ನು 'ದಿ ಇಂಡಿಯನ್ ಆರ್ಟಿಸನ್ಸ್ ಹಾಟ್' ಪ್ರದರ್ಶಿಸುತ್ತಿದೆ. ಇವು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನಗೊಂಡು ಹೆಸರು ಮಾಡಬೇಕು. ಅಷ್ಟು ಒಳ್ಳೆಯ ವಸ್ತುಗಳು ಇಲ್ಲಿವೆ' ಎಂದು ನಟಿ ಪೂಜಾ ಗಾಂಧಿ ಶ್ಲಾಘಿಸಿದರು.

'ನಮ್ಮ ದೇಶ ಪ್ರಾಚೀನ ಕಲೆ, ಸಂಸ್ಕೃತಿ, ಆಹಾರೋತ್ಪನ್ನಗಳಿಗೆ ಹೆಸರುವಾಸಿಯಾಗಿದೆ. ಅವುಗಳಿಗೆ ಪ್ರೋತ್ಸಾಹ ನೀಡಿದಾಗ ನಮ್ಮ ರಾಜ್ಯ, ದೇಶ ಮುಂದಕ್ಕೆ ಹೋಗಲು ಸಾಧ್ಯ' ಎಂದು ಹೇಳಿದರು.

ಪೂಜಾಗಾಂಧಿ ಅವರು ಸಾಂಪ್ರದಾಯಿಕ ಶೈಲಿಯ ಚಪ್ಪಲಿ ಖರೀದಿಸಿ ಪ್ರದರ್ಶನ ಮತ್ತು ಮಾರಾಟವನ್ನು ಪ್ರೋತ್ಸಾಹಿಸಿದರು.

ಸಂಕ್ಷಿಪ್ತ ಸುದ್ದಿ

ಬಾಲಕಿ ಅತ್ಯಾಚಾರ: ವರದಿ ಕೇಳಿದ ಆಯೋಗ

ಬೆಂಗಳೂರು: ಮೈಸೂರಿನಲ್ಲಿ ಗುರುವಾರ ನಡೆದ ಒಂಬತ್ತು ವರ್ಷದ ಬಾಲಕಿಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಮೈಸೂರು ಜಿಲ್ಲಾಡಳಿತಕ್ಕೆ ಈ ಕುರಿತು ಪತ್ರ ಬರೆದಿರುವ ಆಯೋಗ, ಪ್ರಕರಣದ ಬಗ್ಗೆ ಕೈಗೊಂಡ ಕ್ರಮ ಮತ್ತು ಸಂತ್ರಸ್ತೆಯ ಕುಟುಂಬಕ್ಕೆ ನೀಡಿದ ಸಹಾಯದ ವಿವರಗಳನ್ನು ಏಳು ದಿನಗಳಲ್ಲಿ ಸಲ್ಲಿಸುವಂತೆ ಸೂಚಿಸಿದೆ.

ಪ್ರಕರಣದ ಮರು ತನಿಖೆಗೆ ಆಗ್ರಹಿಸಿ ಮನವಿ

ಬೆಂಗಳೂರು: ಗಿರೀಶ್ ಮಟ್ಟಣ್ಣನವರ್ ಶಾಸಕರ ಭವನದಲ್ಲಿ ಬಾಂಬ್ ಇಟ್ಟಿದ್ದ ಪ್ರಕರಣದ ಮರು ತನಿಖೆ ನಡೆಸುವಂತೆ ಆಗ್ರಹಿಸಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿ, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಚೇರಿ ಹಾಗೂ ಗೃಹ ಕಾರ್ಯದರ್ಶಿಗೆ ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಸಂಬರಗಿ ಮನವಿ ಸಲ್ಲಿಸಿದ್ದಾರೆ.

'ಪ್ರಕರಣವು ನ್ಯಾಯಾಲಯದಲ್ಲಿ ಖುಲಾಸೆಯಾಗಿದೆ. ಆದರೆ, ಇದೀಗ ಆ ಪ್ರಕರಣವನ್ನು ಮತ್ತೆ ಮರು ತನಿಖೆಗೆ ಒಳಪಡಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಯುವತಿ ಮೇಲೆ ಹಲ್ಲೆಗೆ ಯತ್ನ: ಚಾಲಕನ ಸೆರೆ

ಬೆಂಗಳೂರು: ಆಟೊ ಬುಕ್ ಮಾಡಿ ರದ್ದುಪಡಿಸಿದ ವಿಚಾರವಾಗಿ ಯುವತಿಗೆ ಅವಾಚ್ಯ ಶಬ್ದದಿಂದ ನಿಂದಿಸಿ, ಹಲ್ಲೆ ನಡೆಸಲು ಯತ್ನಿಸಿದ್ದ ಚಾಲಕನನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪವನ್ ಬಂಧಿತ ಆರೋಪಿ. ಯುವತಿ ಜೊತೆಗೆ ಚಾಲಕ ಗಲಾಟೆ ಮಾಡಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಅಕ್ಟೋಬರ್ 2ರಂದು ಸಂಜೆ 7.30ರ ಸುಮಾರಿಗೆ ಯುವತಿ ಕ್ಯಾಲಸನಹಳ್ಳಿಯಿಂದ ಬಾಣಸವಾಡಿಗೆ ಹೋಗಲು ಆಟೊ ಬುಕ್ ಮಾಡಿದ್ದರು. ಸಮಯಕ್ಕೆ ಸರಿಯಾಗಿ ಆಟೊ ಬಾರದ ಕಾರಣ ಅದೇ ಮಾರ್ಗದಲ್ಲಿ ಬಂದ ಮತ್ತೊಂದು ಆಟೊವನ್ನು ಹತ್ತಿದ್ದರು. ಮೊದಲು ಬುಕ್ ಮಾಡಿದ್ದ ಆಟೊವನ್ನು ರದ್ದು ಪಡಿಸಿದ್ದರು. ಅದೇ ವೇಳೆಗೆ ಸ್ಥಳಕ್ಕೆ ಬಂದಿದ್ದ ಆಟೊ ಚಾಲಕ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಲು ಯತ್ನಿಸಿದ್ದ ಎನ್ನಲಾಗಿದೆ. ಘಟನೆ ಸಂಬಂಧ ಯುವತಿ ಕೊತ್ತನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಆಟೊ ಚಾಲಕನನ್ನು ಬಂಧಿಸಿದ್ದಾರೆ.

ಬ್ಯಾಂಕ್ ವ್ಯವಸ್ಥಾಪಕ ಅನುಮಾನಾಸ್ಪದ ಸಾವು

ಬೆಂಗಳೂರು: ಬಾರ್ ಅಂಡ್ ರೆಸ್ಟೋರೆಂಟ್‌ಗೆ ಹೋಗಿದ್ದ ಬ್ಯಾಂಕ್ ವ್ಯವಸ್ಥಾಪಕರೊಬ್ಬರು ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಸಾವಿಗೆ ನಿಖರ ಕಾರಣವೇನು ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮಂಡ್ಯ ಜಿಲ್ಲೆ ಮದ್ದೂರು ಮೂಲದ ಉಲ್ಲಾಳದ ನಿವಾಸಿ ಮೇಘರಾಜ್ (31) ಮೃತಪಟ್ಟವರು. ಅವರು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು ಎಂದು ಮೂಲಗಳು ತಿಳಿಸಿವೆ. ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಪೌರ ಕಾರ್ಮಿಕನ ಮೇಲೆ ಹಲ್ಲೆ ಆರೋಪಿಗಳಿಗೆ ಹುಡುಕಾಟ

ಬೆಂಗಳೂರು: ರಸ್ತೆ ಬದಿಯಲ್ಲಿ ಕಸ ಎಸೆಯಬೇಡಿ ಎಂದು ಹೇಳಿದ ಪೌರ ಕಾರ್ಮಿಕನ ಮೇಲೆ ಹಲ್ಲೆ ನಡೆಸಿದ್ದ ಇಬ್ಬರ ಮೇಲೆ ಗೋವಿಂದರಾಜನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀನಿವಾಸ ನಗರದಲ್ಲಿ ಪೌರ ಕಾರ್ಮಿಕರೊಬ್ಬರು ರಸ್ತೆ ಸ್ವಚ್ಛಗೊಳಿಸುತ್ತಿದ್ದರು. ಆ ವೇಳೆಯಲ್ಲಿ ದ್ವಿಚಕ್ರ ವಾಹನದಲ್ಲಿ ಬಂದ ಮಹಿಳೆ ಹಾಗೂ ಪುರುಷ ರಸ್ತೆಬದಿ ಕಸ ಎಸೆದರು. ಸ್ಥಳದಲ್ಲಿದ್ದ ಪೌರ ಕಾರ್ಮಿಕ, 'ಇಲ್ಲಿ ಕಸ ಹಾಕಬಾರದು' ಎಂದು ಬುದ್ಧಿಮಾತು ಹೇಳಿದ್ದರು. ಆಕ್ರೋಶಗೊಂಡ ಅವರು, 'ನೀನು ಸುಮ್ಮನೇ ಕಸ ಗುಡಿಸು. ನಮಗೆ ಬುದ್ಧಿ ಹೇಳಬೇಡ. ನಾನು ಉನ್ನತ ಹುದ್ದೆಯಲ್ಲಿದ್ದೇನೆ. ಕೆಲಸದಿಂದ ತೆಗೆಸುತ್ತೇನೆ' ಎಂದು ಬೆದರಿಸಿದ್ದರು. ಹೆಲ್ಮೆಟ್‌ನಿಂದ ಮೂರು ಬಾರಿ ಹಲ್ಲೆ ನಡೆಸಿದ್ದಾರೆ ಎಂದು ನಾಗೇಂದ್ರ ಆರೋಪಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾಧಕರಿಗೆ ದತ್ತಿ ಪ್ರಶಸ್ತಿ ಪ್ರದಾನ

ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಶಾಲೆಗಳನ್ನು ಉಳಿಸಬೇಕು ಮತ್ತು ಕನ್ನಡ ಅಕ್ಷರ ಭಾಷೆಯಾಗಬೇಕು ಎನ್ನುವ ಎರಡು ಕನಸುಗಳನ್ನು ಹೊತ್ತು ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಬಂದೆ. ಆದರೆ, ಎರಡೂ ಕನಸೇ ಆಗಿ ಬಿಡುವ ಆತಂಕ ಕಾಡುತ್ತಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶುಕ್ರವಾರ ಆಯೋಜಿಸಿದ್ದ ವಿವಿಧ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ದೂರದರ್ಶನದ ನಿರ್ದೇಶಕರಾಗಿದ್ದಾಗ ಸದಾನಂದ ಸುವರ್ಣ ಅವರು ಶಿವರಾಮ ಕಾರಂತರ ಕುರಿತು ರೂಪಿಸಿದ್ದ ಸಾಕ್ಷ್ಯ ಚಿತ್ರಕ್ಕೆ ಪ್ರಾಯೋಜಕರು ದೊರಕದೆ ತಾವು ವೈಯಕ್ತಿಕ ನೆಲೆಯಲ್ಲಿ ಸಹಾಯ ಮಾಡಿದ ಪ್ರಸಂಗವನ್ನು ನೆನಪು ಮಾಡಿಕೊಂಡ ಮಹೇಶ ಜೋಶಿ, 'ಕನ್ನಡಿಗರಲ್ಲಿನ ಅಭಿಮಾನದ ಕೊರತೆ ದೊಡ್ಡ ತೊಡಕಾಗಿದೆ' ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಜವಾಹರಲಾಲ್ ನೆಹರೂ ತಾರಾಲಯದ ನಿರ್ದೇಶಕ ಬಿ.ಆರ್.ಗುರುಪ್ರಸಾದ್, 'ಸಾಹಿತ್ಯಕ್ಕೆ ಬಹುಮುಖಿ ನೆಲೆ ಇದೆ. ಅದು ಕಲಿಕೆಯಾಗಿ, ಚಿಂತನೆಯಾಗಿ, ಅನುಭವ ಕಥನವಾಗಿ ನಮ್ಮ ಅರಿವನ್ನು ವಿಸ್ತರಿಸಲಿದೆ. ಈ ಕ್ಷೇತ್ರದ ಸಾಧಕರನ್ನು ಗುರುತಿಸುವುದು ಬಹಳ ಮುಖ್ಯವಾದ ಕಾರ್ಯ' ಎಂದು ಹೇಳಿದರು.

ಪ್ರಶಸ್ತಿ ಪ್ರದಾನ ಮಾಡಿದ ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್, 'ಕನ್ನಡದ ದುಃಸ್ಥಿತಿಗೆ ನಾವೇ ಕಾರಣಕರ್ತರು. ಭಾಷಾಭಿಮಾನ ಬೆಳೆಸುವ ಮುಖ್ಯ ಕಾರ್ಯಕ್ಕೆ ಎಲ್ಲರೂ ಪರಿಷತ್ತಿನ ಜೊತೆ ಕೈಗೂಡಿಸಬೇಕು' ಎಂದು ಅಭಿಪ್ರಾಯಪಟ್ಟರು.

ದತ್ತಿ ದಾನಿಗಳ ಪರವಾಗಿ ಎ.ಆರ್. ನಾರಾಯಣಘಟ್ಟ ಮತ್ತು ಟಿ.ಎಸ್. ಶೈಲಜಾ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಹಿರಿಯ ಬರಹಗಾರರಾದ ಡಾ.ಕೆ.ಶಿವರಾಮ ಕಾರಂತ ಮತ್ತು ಸಾಲಿ ರಾಮಚಂದ್ರ ರಾಯರ ಜನ್ಮ ದಿನೋತ್ಸವವನ್ನು ಆಚರಿಸಲಾಯಿತು.

ಎ.ಆರ್.ನಾರಾಯಣಘಟ್ಟ ಮತ್ತು ಸರೋಜಮ್ಮ ಗಾಂಧಿ ಪುರಸ್ಕಾರವನ್ನು ರಾಜ್ಯ ಸರ್ವೋದಯ ಮಂಡಲದ ಅಧ್ಯಕ್ಷ ಡಾ.ಎಚ್.ಎನ್.ಸುರೇಶ್ ಅವರಿಗೂ ಪಂಕಜಶ್ರೀ ಪುರಸ್ಕಾರವನ್ನು ಮುಂಬೈನಲ್ಲಿ ನೆಲಸಿರುವ ಕಥೆಗಾರ್ತಿ ಮಿತ್ರಾ ವೆಂಕಟರಾಜು ಅವರಿಗೂ ಟಿ.ಗಿರಿಜಾ ಸಾಹಿತ್ಯ ದತ್ತಿಯನ್ನು ವಿಜ್ಞಾನ ಬರಹಗಾರ ಡಾ.ಬಿ.ಎಸ್.ಶೈಲಜಾ ಅವರಿಗೆ ಪ್ರದಾನ ಮಾಡಲಾಯಿತು.

ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ಎಂ.ಪಟೇಲ್ ಪಾಂಡು ನಿರೂಪಿಸಿದರೆ, ಎಚ್.ಬಿ.ಮದನಗೌಡ ಸ್ವಾಗತಿಸಿದರು. ಗೌರವ ಕೋಶಾಧ್ಯಕ್ಷ ಡಿ.ಆರ್. ವಿಜಯ್‌ಕುಮಾರ್ ವಂದಿಸಿದರು.



ಕನ್ನಡ ಸಾಹಿತ್ಯ ಪರಿಷತ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ದತ್ತಿ ಪ್ರಶಸ್ತಿಗಳನ್ನು ಡಾ.ಎಚ್.ಎನ್. ಸುರೇಶ್, ಮಿತ್ರಾ ವೆಂಕಟರಾಜು, ಬಿ.ಎಸ್.ಶೈಲಜಾ ಅವರಿಗೆ ಪ್ರದಾನ ಮಾಡಲಾಯಿತು. ಮಹೇಶ್ ಜೋಶಿ, ಪಟೇಲ್ ಪಾಂಡು ಹಾಗೂ ಇತರರು ಇದ್ದಾರೆ

ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪ

'ಚುನಾವಣೆಗೆ ವೀರೇಂದ್ರರ ₹300 ಕೋಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಟ್ಟಿಂಗ್ ಹಗರಣದಲ್ಲಿ ಸಿಕ್ಕಿ ಬಿದ್ದಿರುವ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಬಿಹಾರ ಚುನಾವಣೆಗಾಗಿ ಕಾಂಗ್ರೆಸ್ ಹೈಕಮಾಂಡ್‌ಗೆ ₹300 ಕೋಟಿ ಕೊಟ್ಟು ಮಂತ್ರಿ ಸ್ಥಾನಗಿಟ್ಟಿಸಲು ಪ್ರಯತ್ನಿಸಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ.

'ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ರಾಹುಲ್‌ಗಾಂಧಿ ಅವರ ಪಾಲಿಗೆ ಎಟಿಎಂ ಸರ್ಕಾರ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷಿ ಬೇಕಾ' ಎಂದು ಅವರು 'ಎಕ್ಸ್'ನಲ್ಲಿ ಪ್ರಶ್ನಿಸಿದ್ದಾರೆ.


ಆರ್.ಅಶೋಕ

'ವೀರೇಂದ್ರ ಕರ್ಮಕಾಂಡ ನೋಡುತ್ತಿದ್ದರೆ ಇನ್ನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಸಚಿವರು ತಮ್ಮ ಕುರ್ಚಿ ಉಳಿಸಿಕೊಳ್ಳಲು ಇನ್ನಾವ ಪರಿ ಲೂಟಿ ಮಾಡಿ ಹೈಕಮಾಂಡ್‌ಗೆ ಕಪ್ಪ ನೀಡುತ್ತಿರಬಹುದು ನೀವೇ ಊಹಿಸಿಕೊಳ್ಳಿ' ಎಂದು ಹೇಳಿದ್ದಾರೆ.

'ಒಂದು ಕಡೆ ಜನರಿಗೆ ಕ್ಯಾಸಿನೊ, ಜೂಜು, ಬೆಟ್ಟಿಂಗ್ ಆಡಿಸಿ ಬಡವರ ಮನೆ ಹಾಳು ಮಾಡಿ ಅಡ್ಡ ದಾರಿಯಲ್ಲಿ ದುಡ್ಡು ಮಾಡುವುದು. ಆ ಪಾಪದ ಹಣದಲ್ಲಿ ಟಿಕೆಟ್ ಪಡೆದು, ಚುನಾವಣೆ ಎದುರಿಸಿ, ಹೈಕಮಾಂಡ್‌ಗೆ ಕಪ್ಪ ಕೊಟ್ಟು ಮಂತ್ರಿಗಿರಿ ಗಿಟ್ಟಿಸಿಕೊಳ್ಳುವುದು. ಆ ಮೇಲೆ ಮಂತ್ರಿಗಿರಿ ಬಳಸಿಕೊಂಡು ಇನ್ನಷ್ಟು ಲೂಟಿ ಮಾಡುವುದು. ಇದು ಕಾಂಗ್ರೆಸ್ ಸರ್ಕಾರ ಕರ್ನಾಟಕದಲ್ಲಿ ಹೆಣೆದಿರುವ ವಿಷ ವರ್ತುಲ' ಎಂದು ದೂರಿದ್ದಾರೆ.

'ತೆಲಂಗಾಣ ವಿಧಾನಸಭೆ ಚುನಾವಣೆಗೆ, ಲೋಕಸಭಾ ಚುನಾವಣೆಗೆ ರಾಜ್ಯದ ವಾಲ್ಮೀಕಿ ನಿಗಮದ ಹಣ ಸೇರಿ ಸಾವಿರಾರು ಕೋಟಿ ಲಪಟಾಯಿಸಲಾಗಿದೆ. ಈಗ ಬಿಹಾರ ಚುನಾವಣೆಗೆ ಕನ್ನಡಿಗರ ತೆರಿಗೆ ಹಣ ಇನ್ನೆಷ್ಟು ಲೂಟಿ ಆಗುತ್ತದೆಯೋ ಗೊತ್ತಿಲ್ಲ' ಎಂದು ಅವರು ತಿಳಿಸಿದ್ದಾರೆ.


ನಗರದ ಎಂ.ಜಿ ರಸ್ತೆಯ ಗಾಂಧಿ ಪ್ರತಿಮೆ ಬಳಿ ಜನರು ಶುಕ್ರವಾರ ರಾತ್ರಿ ಮಳೆಯಲ್ಲಿ ಸಾಗಿದರು ಚಿತ್ರ: ಎಂ. ಎಸ್. ಮಂಜುನಾಥ್

ನಗರದಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಶುಕ್ರವಾರ ಸಂಜೆ ಬಿರುಸಿನಿಂದ ಮಳೆಯಾಯಿತು.

ಕೆಲವು ದಿನಗಳಿಂದ ಮಳೆಯಾಗುತ್ತಿದ್ದು, ಶುಕ್ರವಾರ ಮೋಡ ಕವಿದ ವಾತಾವರಣ ಇತ್ತು. ಕತ್ತಲಾಗುತ್ತಿದ್ದಂತೆ ಗುಡುಗು ಸಹಿತ ಮಳೆಯಾಯಿತು.

ಹೆಬ್ಬಾಳದಿಂದ ವಿಮಾನ ನಿಲ್ದಾಣದ ಕಡೆಗೆ, ಬೊಮ್ಮನಹಳ್ಳಿಯಿಂದ ರೂಪೇನ ಅಗ್ರಹಾರ, ವೀರಸಂದ್ರ ಜಂಕ್ಷನ್‌ನಿಂದ ಹೊಸೂರು ಕಡೆಗೆ ಸಾಗುವ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಡಕುಂಟಾಯಿತು. ಗೊಟ್ಟಿಗೆರೆಯಲ್ಲಿ 3.4 ಸೆಂ.ಮೀ., ಚೌಡೇಶ್ವರಿ 2.9 ಸೆಂ.ಮೀ., ಕಾಡುಗೋಡಿ 2.6 ಸೆಂ.ಮೀ., ಜಕ್ಕೂರು 2.2 ಸೆಂ.ಮೀ., ಸಿಂಗಸಂದ್ರ 2.2 ಸೆಂ.ಮೀ., ಹಗದೂರು 2.2 ಸೆಂ.ಮೀ., ದೊಡ್ಡನೆಕ್ಕುಂದಿ 1.7ಸೆಂ.ಮೀ., ವಿದ್ಯಾರಣ್ಯಪುರ 1.5 ಸೆಂ.ಮೀ., ಬೆಳ್ಳಂದೂರಿನಲ್ಲಿ 1.3 ಸೆಂ.ಮೀ. ಮಳೆ ದಾಖಲಾಗಿದೆ.

ಪುಣೆ ರೇಸ್

ಎವಾಲ್ಡೊ ಗೆಲ್ಲುವ ನಿರೀಕ್ಷೆ

ಸುರೇಶ್ ಮಹೀಂದ್ರ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎವಾಲ್ಡೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2:45ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮ್ಯಾಜಿಕಲ್ ಸ್ಟಾರ್ 2, ಲಾರ್ಡ್ ಮರ್ಫಿ 1, ಕಾಂಟಿನೆಂಟಲ್ ಡ್ರಿಫ್ಟ್ 4
2ನೇ ರೇಸ್: ದಿ ಮಿಲೇನಿಯಂ ಫೋರ್ಸ್ 3, ಕ್ರಿಸ್ಟೋಫೆಲ್ 6, ಕಿಮಿಕೊ 8
3ನೇ ರೇಸ್: ಎಲೂಸಿವ್ ಆರ್ಟ್ 3, ಸಾವರಿನ್ ಮಾಸ್ಟರ್ 1, ಅಯ್ಯೂರ್ 6
4ನೇ ರೇಸ್: ಆಲ್ ಫಾರ್ ಲವ್ 5, ಫಾಕ್ಸಿ 7, ಡಾನ್ ಜೂಲಿಯೊ 1
5ನೇ ರೇಸ್: ಡೆಡಿಕೇಷನ್ 1, ಲಿಟ್ಲ್ ಜಾನ್ 2, ಜುರಕನ್ 4
6ನೇ ರೇಸ್: ಎವಾಲ್ಡೊ 1, ಕ್ವೀನ್ ಆಫ್ ಕಿಂಗ್ಸ್ 3

ಉತ್ತಮ ಬೆಟ್: ದಿ ಮಿಲೇನಿಯಂ ಫೋರ್ಸ್

ಜಾಕ್‌ಪಾಟ್‌ಗೆ 2,3,4,5,6

ಟ್ರಿಬಲ್ 3,4,5

ಕಂಬಳ ಕಾರ್ಮಿಕರಿಗೂ ಸ್ಮಾರ್ಟ್ ಕಾರ್ಡ್

ಮಂಗಳೂರು: ಅಸಂಘಟಿತ ಕಾರ್ಮಿಕರಿಗೆ ನೀಡುತ್ತಿರುವ ಸ್ಮಾರ್ಟ್ ಕಾರ್ಡ್ ಸೌಲಭ್ಯವನ್ನು ಕಂಬಳದಲ್ಲಿ ತೊಡಗಿಸಿಕೊಂಡಿರುವವರಿಗೂ ವಿತರಿಸಲು ಒಂದು ವಾರದೊಳಗೆ ಕ್ರಮ ಕೈಗೊಳ್ಳಲಾಗುವುದು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ತಿಳಿಸಿದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಿ ಮಾತನಾಡಿದ ಅವರು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರ ಬೇಡಿಕೆಗೆ ಸ್ಪಂದಿಸಿ ಈ ಭರವಸೆ ನೀಡಿದರು.

ಈಗ 101 ವರ್ಗದ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದ್ದು ಕಂಬಳ ಕಾರ್ಮಿಕರನ್ನು ಈ ಯೋಜನೆಯಲ್ಲಿ ಸೇರಿಸಲು ನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗುವುದು ಎಂದು ಅವರು ಹೇಳಿದರು.

ಚಿಟಿಕೆ ಸುದ್ದಿ

ಗುಂಡಿ ಹಾವಳಿ ಸವಾರ ಸಾವು

ಬೆಂಗಳೂರು: ಚಂದಾಪುರ ಬಳಿಯ ಗುಂಜೂರಿನ ಡೀನ್ಸ್ ಅಕಾಡೆಮಿ ಬಳಿ ಶಾಲಾ ವಾಹನ ಹಾಗೂ ದ್ವಿಚಕ್ರ ವಾಹನದ ನಡುವೆ ಶುಕ್ರವಾರ ಸಂಜೆ ಸಂಭವಿಸಿದ ಅಪಘಾತದಲ್ಲಿ ಸವಾರ ಚಿರಂಜೀವಿ (23) ಮೃತಪಟ್ಟಿದ್ದಾರೆ.

ರಸ್ತೆ ಕಾಮಗಾರಿಗಾಗಿ ಗುಂಡಿ ತೆಗೆಯಲಾಗಿತ್ತು. ಗುಂಡಿ ತಪ್ಪಿಸುವಾಗ ಶಾಲಾ ಬಸ್‌ವೊಂದು ನಿಯಂತ್ರಣ ತಪ್ಪಿ ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ರಸ್ತೆಗೆ ಬಿದ್ದಿದ್ದ ಸವಾರ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸ್ಥಳೀಯರ ಆಕ್ರೋಶ: ಅಪಘಾತದ ದೃಶ್ಯವನ್ನು ಸಿವಿಕ್ ಅಸೋಸಿಯೇಷನ್ ಫೋರಂ ಸದಸ್ಯರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿ, ಅದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕಿ ಮಂಜುಳಾ ಲಿಂಬಾವಳಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಖಾತೆಗೆ ಟ್ಯಾಗ್ ಮಾಡಿ ಆಕ್ರೋಶ ಹೊರಹಾಕಿದ್ದಾರೆ. ಈ ಭಾಗದ ರಸ್ತೆಯಲ್ಲಿ ಗುಂಡಿಗಳು ಬಿದ್ದು ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿವೆ. ಕಾಮಗಾರಿಗೆಂದು ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ ಎಂದು ಸದಸ್ಯರು ದೂರಿದ್ದಾರೆ.

ರೌಡಿಶೀಟರ್ ಕೊಲೆ ಆರೋಪಿಗಳ ಬಂಧನ

ಕನಕಪುರ: ಬೆಂಗಳೂರಿನ ರೌಡಿಶೀಟರ್ ಹೆಮ್ಮಿಗೆಪುರ ಚಿರಂಜೀವಿ ಕೊಲೆ ಪ್ರಕರಣವನ್ನು ಭೇದಿಸಿರುವ ತಾಲ್ಲೂಕಿನ ಗ್ರಾಮಾಂತರ ಠಾಣೆ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ಕೊಲೆ ನಡೆದು 24 ಗಂಟೆಗಳಲ್ಲೇ ಆರೋಪಿಗಳನ್ನು ಬಂಧಿಸಲಾಗಿದೆ.

ದೊಡ್ಡ ಕಲ್ಬಾಳ್ ರವಿ (35), ಹೆಬ್ಬಿದಿರು ಮೆಟ್ಟಿಲು ಪ್ರಜ್ವಲ್ (23) ಮತ್ತು ಪವನ್ (24) ಬಂಧಿತರು. ಈ ಮೂವರು ಕ್ಷುಲ್ಲಕ ಕಾರಣಕ್ಕೆ ಮಂಗಳವಾರ ರಾತ್ರಿ ಭದ್ರೆಗೌಡನದೊಡ್ಡಿ ಕೆರೆ ಬಳಿ ರೌಡಿಶೀಟರ್ ಚಿರಂಜೀವಿಯನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ ಆರೋಪ ಎದುರಿಸುತ್ತಿದ್ದಾರೆ.

ಕೊಲೆ ಪ್ರಕರಣವೊಂದರಲ್ಲಿ ಬಂಧನವಾಗಿದ್ದ ಚಿರಂಜೀವಿ 3 ತಿಂಗಳ ಹಿಂದಷ್ಟೇ ಜಾಮೀನು ಪಡೆದು ಭದ್ರೆಗೌಡನದೊಡ್ಡಿ ಅಜ್ಜಿ ಮನೆಯಲ್ಲಿ ಉಳಿದುಕೊಂಡಿದ್ದ. ಆರೋಪಿಗಳು ಮತ್ತು ಚಿರಂಜೀವಿ ಮಧ್ಯೆ ಗಲಾಟೆಯಾಗಿ, ಹೊಡೆದಾಡಿಕೊಂಡಿದ್ದರು. ಆ ಬಳಿಕ ರಾಜೀ ಮಾಡಿಕೊಂಡಿದ್ದರು.

ಮಕ್ಕಳನ್ನು ಕೊಂದು ತಾಯಿ ಆತ್ಮಹತ್ಯೆ

ವಿಚ್ಛೇದನ ಕೊಡುವಂತೆ ಪತಿ ಗಲಾಟೆ: ಬೇಸತ್ತ ಪತ್ನಿಯಿಂದ ಕೃತ್ಯ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಇಬ್ಬರು ಮಕ್ಕಳನ್ನು ಕೊಂದು ತಾಯಿಯೂ ಆತ್ಮಹತ್ಯೆ ಮಾಡಿಕೊಂಡ ಘಟನೆ ಬಾಗಲಗುಂಟೆಯ ಭುವನೇಶ್ವರಿ ನಗರದಲ್ಲಿ ನಡೆದಿದೆ.


ವಿಜಯಲಕ್ಷ್ಮಿ

ನಾಲ್ಕು ವರ್ಷದ ಪುತ್ರಿ ಬೃಂದಾ ಹಾಗೂ ಒಂದೂವರೆ ವರ್ಷದ ಪುತ್ರ ಭುವನ್‌ನನ್ನು ಕೊಂದು ತಾಯಿ ವಿಜಯಲಕ್ಷ್ಮಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಐದು ವರ್ಷದ ಹಿಂದೆ ವಿಜಯಲಕ್ಷ್ಮಿ ಅವರು ರಮೇಶ್ ಜೊತೆ ಮದುವೆ ಯಾಗಿದ್ದರು. ರಮೇಶ್ ಅವರು ಮಾಲ್‌ನಲ್ಲಿ ಕೆಲಸ ಮಾಡುತ್ತಿದ್ದರು.

'ರಮೇಶ್ ಅವರು ಕೆಲಸದ ನಿಮಿತ್ತ ಊರಿಗೆ ಹೋಗಿದ್ದರು. ಇವರ ಜೊತೆ ನೆಲಸಿದ್ದ ರಮೇಶ್ ಅವರ ಚಿಕ್ಕಮ್ಮ ಎಂದಿನಂತೆ ಗುರುವಾರ ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋಗಿದ್ದರು. ಈ ಸಂದರ್ಭದಲ್ಲಿ ಮನೆಯಲ್ಲಿ ಒಬ್ಬರೇ ಇದ್ದ ವಿಜಯಲಕ್ಷ್ಮಿ ತನ್ನ ಇಬ್ಬರು ಮಕ್ಕಳಿಗೆ ವೇಲ್‌ನಿಂದ ಕುತ್ತಿಗೆಗೆ ಬಿಗಿದು ಕೊಂದು, ತಾನೂ ಕೂಡ ಫ್ಯಾನಿಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಜೊತೆಗೆ ವಾಸವಿದ್ದ ರಮೇಶ್ ಅವರ ಚಿಕ್ಕಮ್ಮ ಗುರುವಾರ ಸಂಜೆ ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ ಘಟನೆ ಗೊತ್ತಾಗಿದೆ.

'ಕೌಟುಂಬಿಕ ಸಮಸ್ಯೆಯಿಂದ ಮಕ್ಕಳನ್ನು ಕೊಂದು ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹ ಗಳನ್ನು ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿದೆ. ಯಾವುದೇ ಮರಣಪತ್ರ ಸಿಕ್ಕಿಲ್ಲ' ಎಂದು ಪೊಲೀಸರು ಹೇಳಿದರು.

'ತಾನು ಮತ್ತೊಂದು ಮದುವೆ ಯಾಗಿದ್ದು, ವಿಚ್ಛೇದನ ಕೊಡುವಂತೆ ಪತ್ನಿಗೆ ಪತಿ ರಮೇಶ್ ಬೆದರಿಕೆ ಹಾಕುತ್ತಿದ್ದರು. ಅಲ್ಲದೇ ಬೇರೆ ಮಹಿಳೆಯ ಜತೆಗೆ ವಾಟ್ಸ್‌ಆ್ಯಪ್‌ನಲ್ಲಿ ಚಾಟ್ ನಡೆಸುತ್ತಿದ್ದರು. ಕಳೆದ ತಿಂಗಳು ಊರಿಗೆ ಕರೆದೊಯ್ದು ಸಂಧಾನ ನಡೆಸಿ ಕಳುಹಿಸಲಾಗಿತ್ತು. ಬೆಂಗಳೂರಿಗೆ ಬಂದ ಬಳಿಕ ಮತ್ತೆ ಗಲಾಟೆ ಮಾಡಿಕೊಂಡಿದ್ದಾರೆ. ಗಲಾಟೆಯಿಂದ ಬೇಸತ್ತು ಮಕ್ಕಳನ್ನು ಕೊಂದು ವಿಜಯಲಕ್ಷ್ಮಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಕುಟುಂಬಸ್ಥರು ಆರೋಪ ಮಾಡಿದ್ದಾರೆ. ರಮೇಶ್ ಅವರನ್ನು ವಶಕ್ಕೆ ಪಡೆದುಕೊಂಡು ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರೇಮಿಗಳ ಸಾವಿಗೆ ಗಲಾಟೆ ಕಾರಣ: ಪೊಲೀಸ್ ಶಂಕೆ

ಅಪರಾಧ ಸುದ್ದಿ

ಬೆಂಗಳೂರು: ಯಲಹಂಕ ನ್ಯೂಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಕೂಲ್ ಕಂಫರ್ಟ್ ಲಾಡ್ಜ್‌ನಲ್ಲಿ ಪ್ರೇಮಿ ಆತ್ಮಹತ್ಯೆ ಹಾಗೂ ಉಸಿರುಗಟ್ಟಿ ಪ್ರಿಯತಮೆ ಸಾವು ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಇಬ್ಬರ ಮಧ್ಯೆ ನಡೆದ ಗಲಾಟೆಯೇ ಘಟನೆಗೆ ಕಾರಣವಾಗಿದೆ ಎಂಬುದಾಗಿ ಶಂಕಿಸಿದ್ದಾರೆ.

ಠಾಣಾ ವ್ಯಾಪ್ತಿಯ ಕಿಚನ್ ಸಿಕ್ಸ್ ಫ್ಯಾಮಿಲಿ ರೆಸ್ಟೋರೆಂಟ್ ಕಟ್ಟಡದಲ್ಲಿರುವ ಕೂಲ್ ಕಂಫರ್ಟ್ ಲಾಡ್ಜ್‌ನಲ್ಲಿ ತಂಗಿದ್ದ ಗದಗದ ರಮೇಶ್ ಬಡ್ಡಿವಡ್ಡರ್ (25) ಹಾಗೂ ಹುನಗುಂದದ ಕಾವೇರಿ ಬಡಿಗೇರ್ (22) ಅವರು ಗುರುವಾರ ರಾತ್ರಿ ಶವವಾಗಿ ಪತ್ತೆ ಆಗಿದ್ದರು. ಪ್ರಕರಣದ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ. ಪೆಟ್ರೋಲ್ ಸುರಿದುಕೊಂಡು ರಮೇಶ್ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಕಾವೇರಿ ಅವರು ಶೌಚಾಲಯಕ್ಕೆ ತೆರಳಿ ಅಲ್ಲಿ ಉಸಿರುಗಟ್ಟಿ ಮೃತಪಟ್ಟಿದ್ದರು.

'ಕಾವೇರಿ ಅವರಿಗೆ ಮದುವೆಯಾಗಿ ಮೂವರು ಮಕ್ಕಳಿದ್ದಾರೆ. ದಂಪತಿ ನಡುವೆ ವೈಮನಸ್ಸು ಮೂಡಿ ಕಾವೇರಿ ಬೆಂಗಳೂರಿಗೆ ಬಂದಿದ್ದರು. ಯಲಹಂಕದ ಸ್ಪಾದಲ್ಲಿ ಕೆಲಸ ಮಾಡುತ್ತಿದ್ದರು. ಈ ನಡುವೆ ಗಾರೆ ಕೆಲಸ ಮಾಡುತ್ತಿದ್ದ ರಮೇಶ್ ಅವರ ಪರಿಚಯವಾಗಿತ್ತು. ಇಬ್ಬರೂ ಸಲುಗೆಯಿಂದ ಇದ್ದರು. ಕಳೆದ ಒಂದು ವಾರದಿಂದ ಇಬ್ಬರೂ ಕೂಲ್ ಕಂಫರ್ಟ್ ಲಾಡ್ಜ್‌ನಲ್ಲಿ ವಾಸ್ತವ್ಯ ಮಾಡಿದ್ದರು' ಎಂದು ಮೂಲಗಳು ಹೇಳಿವೆ.

'ಗುರುವಾರ ಮಧ್ಯಾಹ್ನದ ಸಮಯದಲ್ಲಿ ರಮೇಶ್ ಅವರು ಹೊರಗೆ ಹೋಗಿದ್ದರು. ಅದೇ ಸಂದರ್ಭದಲ್ಲಿ ಹುಡುಗನೊಬ್ಬ ಬಂದು ಕಾವೇರಿ ಅವರನ್ನು ಮಾತನಾಡಿಸಿಕೊಂಡು ಹೋಗಿದ್ದ. ಅದನ್ನು ರಮೇಶ್ ಗಮನಿಸಿದ್ದರು. ಕೊಠಡಿಗೆ ಬಂದು ಹುಡುಗನ ಬಗ್ಗೆ ವಿಚಾರಿಸಿದ್ದರು. ಆಗ ಇಬ್ಬರ ಮಧ್ಯೆ ವಾಗ್ವಾದ ನಡೆದಿತ್ತು ಎನ್ನಲಾಗಿದೆ. ಬಳಿಕ ರಮೇಶ್ ಅವರು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದ್ದರು. ಹೊರಗೆ ತೆರಳಿ ಬಾಟಲಿಯಲ್ಲಿ ಪೆಟ್ರೋಲ್ ತಂದು ಬೆಂಕಿ ಹಚ್ಚಿಕೊಂಡಿದ್ದರು. ಬೆಂಕಿಯ ಜ್ವಾಲೆ ಹೆಚ್ಚಾಗಿದ್ದರಿಂದ ಕಾವೇರಿ ಅವರಿಗೆ ಹೊರಗೆ ತೆರಳುವುದಕ್ಕೆ ಸಾಧ್ಯವಾಗದೇ ಕೊಠಡಿಯಲ್ಲಿದ್ದ ಶೌಚಾಲಯಕ್ಕೆ ಹೋಗಿ ಬಾಗಿಲು ಹಾಕಿಕೊಂಡಿದ್ದರು. ಬಳಿಕ ಸ್ಪಾದ ಮಾಲೀಕರಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಅವರು ವಸತಿಗೃಹಕ್ಕೆ ಬರುವಷ್ಟರಲ್ಲಿ ಇಬ್ಬರೂ ಮೃತಪಟ್ಟಿದ್ದರು' ಎಂದು ಮೂಲಗಳು ಹೇಳಿವೆ.

'ಪೊಲೀಸ್ ವಸತಿಗೃಹದಲ್ಲಿ ಸ್ಕೌಟ್ಸ್–ಗೈಡ್ಸ್ ಮುಕ್ತದಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ವಸತಿಗೃಹ ಸಮುಚ್ಚಯದಲ್ಲಿ ಸ್ಕೌಟ್ಸ್–ಗೈಡ್ಸ್ ಮುಕ್ತದಳವನ್ನು ತೆರೆದು, ಅಲ್ಲಿಯ ಮಕ್ಕಳಿಗೆ ಸ್ಕೌಟ್ಸ್–ಗೈಡ್ಸ್ ಶಿಕ್ಷಣ ನೀಡುವ ಮೂಲಕ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸಲು ಕ್ರಮಕೈಗೊಳ್ಳಲಾಗಿದೆ' ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂಸ್ಥೆಯ ಈ ಕ್ರಮಕ್ಕೆ ಪೊಲೀಸ್ ಕಮಿಷನರ್ ಅನುಮತಿ ನೀಡಿ ಆದೇಶ ಹೊರಡಿಸಿದ್ದಾರೆ. ಸಂಸ್ಥೆಯು ಸಮುದಾಯ ಅಭಿವೃದ್ಧಿ ಸೇವಾ ಕಾರ್ಯಗಳನ್ನು ಕೈಗೊಳ್ಳುತ್ತಾ ಬಂದಿದ್ದು, ಪ್ರಸಕ್ತ ಸಾಲಿನಲ್ಲಿ ಹಲವು ಸಾಧನೆಗಳನ್ನು ಮಾಡಿದೆ. ಉನ್ನತ ಶಿಕ್ಷಣ ಇಲಾಖೆಯ ಆಯುಕ್ತರ ಆದೇಶದಂತೆ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಡ್ಡಾಯವಾಗಿ ರೋವರ್‌-ರೇಂಜರ್ ದಳಗಳನ್ನು ಸ್ಥಾಪಿಸಿ, ಕಾರ್ಯಕ್ರಮ ಮತ್ತು ತರಬೇತಿಗಳನ್ನು ಜಾರಿಗೊಳಿಸಲು ಕ್ರಮ ವಹಿಸಲಾಗಿದೆ' ಎಂದು ಹೇಳಿದರು.

'ಕೇಂದ್ರ ಸರ್ಕಾರದ ಯುವ ಆಪ್ತ ಮಿತ್ರ ಯೋಜನೆಯಡಿ, ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಹಯೋಗದಲ್ಲಿ ರಾಜ್ಯದ 11 ಜಿಲ್ಲೆಗಳಲ್ಲಿ 3,650 ರೋವರ್ಸ್–ರೇಂಜರ್ಸ್‌ಗಳಿಗೆ ವಿಪತ್ತು ನಿರ್ವಹಣಾ ತರಬೇತಿ ನೀಡುವ ಗುರಿ ಹೊಂದಲಾಗಿದೆ. ಈಗಾಗಲೇ ದಕ್ಷಿಣ ಕನ್ನಡ, ಉಡುಪಿಯಲ್ಲಿ 650 ರೋವರ್ಸ್–ರೇಂಜರ್ಸ್‌ಗಳಿಗೆ ತರಬೇತಿ ನೀಡಲಾಗಿದೆ. ರಾಯಚೂರು, ಕಲಬುರಗಿ, ಯಾದಗಿರಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಬೆಂಗಳೂರು ನಗರ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ 2026ರ ಮಾರ್ಚ್‌ನೊಳಗೆ ತರಬೇತಿ ಪೂರ್ಣಗೊಳಿಸಲಾಗುವುದು' ಎಂದು ತಿಳಿಸಿದರು.

'ಮಕ್ಕಳು ಹಾಗೂ ಶಿಕ್ಷಕರು ಸಮಾಜಮುಖಿ ಕಾರ್ಯಕ್ರಮ ಮತ್ತು ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತಾಗಲು ಪ್ರಸಕ್ತ ಸಾಲಿನಲ್ಲಿ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

ದರ್ಶನ್‌ಗೆ ಸೌಲಭ್ಯ: ಅ.18ರ ಒಳಗೆ ವರದಿ ಸಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ನಗರ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಖುದ್ದು ಭೇಟಿ ನೀಡಿ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ದರ್ಶನ್ ಅವರಿಗೆ ನೀಡಿರುವ ಸೌಲಭ್ಯಗಳನ್ನು ಪರಿಶೀಲಿಸಿ ವರದಿ ಸಲ್ಲಿಸಬೇಕು ಎಂದು 57ನೇ ಸಿಸಿಎಚ್ ನ್ಯಾಯಾಲಯವು ಆದೇಶಿಸಿದೆ.


ದರ್ಶನ್

ದರ್ಶನ್‌ಗೆ ಜೈಲು ಅಧಿಕಾರಿಗಳು ಕನಿಷ್ಠ ಮೂಲಸೌಲಭ್ಯ ಸಹ ಕಲ್ಪಿಸಿಲ್ಲ ಎಂಬ ಆರೋಪಕ್ಕೆ ಸಂಬಂಧಪಟ್ಟ ಅರ್ಜಿಯನ್ನು ನ್ಯಾಯಾಲಯವು ಅಂಗೀಕರಿಸಿದ್ದು, ಈ ಬಗ್ಗೆ ಖುದ್ದು ಪರಿಶೀಲನೆ ನಡೆಸಿ ಅಕ್ಟೋಬರ್ 18ರ ಒಳಗೆ ವರದಿ ನೀಡುವಂತೆ ಆದೇಶಿಸಿದೆ.

ಕಾರಾಗೃಹದಲ್ಲಿರುವ ದರ್ಶನ್‌ಗೆ ಮೂಲಸೌಲಭ್ಯ ಕಲ್ಪಿಸುವಂತೆ ಜೈಲು ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ವಕೀಲರು ನ್ಯಾಯಾಲಯಕ್ಕೆ ಮೂರನೇ ಬಾರಿ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯದ ಆದೇಶವಿದ್ದರೂ ಜೈಲು ಅಧಿಕಾರಿಗಳು ಕನಿಷ್ಠ ಸೌಕರ್ಯ ಕಲ್ಪಿಸಿಲ್ಲ ಎಂದು ದರ್ಶನ್ ಪರ ವಕೀಲರು ಅರ್ಜಿಯಲ್ಲಿ ಆರೋಪಿಸಿದ್ದಾರೆ.

ದರ್ಶನ್ ಅವರನ್ನು ಇನ್ನೂ ಕ್ವಾರಂಟೈನ್ ಸೆಲ್‌ನಲ್ಲೇ ಇರಿಸಲಾಗಿದೆ. ಅಧಿಕಾರಿಗಳು ಬಿಸಿಲು ಬೀಳದ ಜಾಗದಲ್ಲಿ ವಾಕಿಂಗ್‌ಗೆ ಅವಕಾಶ ಕಲ್ಪಿಸಿದ್ದಾರೆ. ಇದರಿಂದ ದರ್ಶನ್ ಅವರಿಗೆ ಆರೋಗ್ಯ ಸಮಸ್ಯೆಯಾಗಿದೆ. ಈ ಹಿಂದೆ ನ್ಯಾಯಾಲಯ ನೀಡಿದ್ದ ಆದೇಶವನ್ನೂ ಅಧಿಕಾರಿಗಳು ಪಾಲಿಸುತ್ತಿಲ್ಲ. ಹೀಗಾಗಿ, ನ್ಯಾಯಾಧೀಶರೇ ಖುದ್ದು ಜೈಲಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿ ಸತ್ಯಾಸತ್ಯತೆ ತಿಳಿಯಬೇಕು ಎಂದು ದರ್ಶನ್ ಪರ ವಕೀಲರು ಅರ್ಜಿಯಲ್ಲಿ ಕೋರಿದ್ದರು.

ಸಚಿವ ಮಹದೇವಪ್ಪ ಮನೆಗೆ ಮುತ್ತಿಗೆ ಯತ್ನ

ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿಗೆ ವಿಳಂಬ ಆರೋಪ: ಪ್ರತಿಭಟನಕಾರರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿಗೆ ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅವರು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿ ಶುಕ್ರವಾರ ಪ್ರತಿಭಟನೆ ನಡೆಸಿತು. ಬಳಿಕ ಸಚಿವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದರು.

ಸಮಿತಿ ರಾಜ್ಯ ಸಂಚಾಲಕ ಬಸವರಾಜ ಕೌತಾಳ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪ್ರತಿಭಟನಕಾರರು ಸಚಿವ ಮಹದೇವಪ್ಪ ವಿರುದ್ಧ ಘೋಷಣೆಗಳನ್ನು ಕೂಗಿ, ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.


ಸಚಿವ ಎಚ್‌.ಸಿ. ಮಹದೇವಪ್ಪ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿ ಸದಸ್ಯರನ್ನು ಪೊಲೀಸರು ತಡೆದರು ಪ್ರಜಾವಾಣಿ ಚಿತ್ರ

'ಎಚ್‌.ಎನ್‌. ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಗಳನ್ನು ಐದು ಪ್ರವರ್ಗಗಳನ್ನಾಗಿ ಮಾಡಿ ಒಳ ಮೀಸಲಾತಿ ಸಂಬಂಧ ಏಳು ಶಿಫಾರಸುಗಳನ್ನು ಮಾಡಿತ್ತು. ಆದರೆ, ಸರ್ಕಾರ ಮೂರು ಪ್ರವರ್ಗಗಳನ್ನಾಗಿ ವಿಂಗಡಿಸಿ, ಪ್ರವರ್ಗ 'ಎ'ಗೆ ಶೇಕಡ 6, ಪ್ರವರ್ಗ 'ಬಿ'ಗೆ ಶೇ 6 ಹಾಗೂ ಪ್ರವರ್ಗ 'ಸಿ'ಗೆ ಶೇ 5ರಷ್ಟು ಒಳ ಮೀಸಲಾತಿ ಹಂಚಿಕೆ ಮಾಡಿದೆ. ಆದರೆ, ಇದುವರೆಗೂ ಜಾರಿಗೊಳಿಸಿಲ್ಲ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಸಚಿವ ಮಹದೇವಪ್ಪ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್, ಆಯುಕ್ತ ರಾಕೇಶ್ ಕುಮಾರ್ ಅವರು ಸರ್ಕಾರದಿಂದ ಬಂದ ಕಡತಕ್ಕೆ ಒಪ್ಪಿಗೆ ಸೂಚಿಸಲು ಕ್ರಮ ಕೈಗೊಂಡಿಲ್ಲ. ಒಳ ಮೀಸಲಾತಿ ನೇರ ನೇಮಕಾತಿಗೆ ಮಾತ್ರ ಅನ್ವಯಿಸುತ್ತದೆ. ಬಡ್ತಿ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಅನ್ವಯಿಸುವುದಿಲ್ಲ ಎಂದು ದಾರಿ ತಪ್ಪಿಸುತ್ತಿದ್ದಾರೆ. ಸಚಿವ ಸ್ಥಾನಕ್ಕೆ ಮಹದೇವಪ್ಪ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ಬಳಿಕ ಸಚಿವರ ನಿವಾಸಕ್ಕೆ ಮುತ್ತಿಗೆ ಹಾಕಲು ಬಂದ ಪ್ರತಿಭಟನಕಾರರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ತಡೆದರು. ಪ್ರತಿಭಟನಕಾರರು ಮತ್ತು ಪೊಲೀಸರ ನಡುವೆ ವಾಗ್ವಾದ ಉಂಟಾಗಿ, ತಳ್ಳಾಟ, ನೂಕಾಟ ನಡೆಯಿತು.

ಪ್ರತಿಭಟನಕಾರರನ್ನು ವಶಕ್ಕೆ ಪಡೆದು, ಬಸ್‌ನಲ್ಲಿ ನಗರ ಸಶಸ್ತ್ರ ಮೀಸಲು ಮೈದಾನಕ್ಕೆ ಕರೆದೊಯ್ದರು. ಬಳಿಕ ಬಿಡುಗಡೆ ಮಾಡಿದರು.

'ಒಳಮೀಸಲು ಜಾರಿ: ಗೊಂದಲ ಬೇಡ'

'ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೆ ಬದ್ಧವಾಗಿದೆ. ಇದರಲ್ಲಿ ಯಾವುದೇ ಗೊಂದಲ ಬೇಡ. ಕೆಲವರು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮತ್ತು ಅಸ್ತಿತ್ವಕ್ಕಾಗಿ ಈ ರೀತಿ ಮಾಡುತ್ತಿದ್ದಾರೆ' ಎಂದು ಸಚಿವ ಎಚ್‌.ಸಿ.ಮಹದೇವಪ್ಪ ಹೇಳಿದರು.

'ಸುಪ್ರೀಂ ಕೋರ್ಟ್ ತೀರ್ಪು ನೀಡುವ ಮುನ್ನವೇ ಒಳ ಮೀಸಲಾತಿ ಜಾರಿ ಬಗ್ಗೆ ಸಂಪುಟ ಸಭೆಯಲ್ಲಿ ನಿರ್ಣಯಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ನಂತರ ಸುಪ್ರೀಂ ಕೋರ್ಟ್ ಆಯಾ ರಾಜ್ಯಗಳ ವಿವೇಚನೆಗೆ ನೀಡಿತು. ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ಮಾತ್ರ ಒಳಮೀಸಲಾತಿ ಜಾರಿ ಮಾಡಿವೆ. ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗದ ವರದಿಯನ್ನು ಕೆಲ ಮಾರ್ಪಾಡಿನೊಂದಿಗೆ ಅಂಗೀಕರಿಸಿ, ಜಾರಿ ಮಾಡಲು ಒಪ್ಪಿಕೊಂಡಿದ್ದೇವೆ. ನೇಮಕಾತಿ ನಿರ್ಬಂಧ ತೆರವು ಮಾಡಲಾಗಿದೆ. ಬ್ಯಾಕ್ ಲಾಗ್ ಹುದ್ದೆಗಳನ್ನು ಗುರುತಿಸಿ, ಭರ್ತಿ ಮಾಡುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ಸ್ಪಷಪಡಿಸಿದರು.

ಪಾಲಿಕೆ ಆಯುಕ್ತ, ಮೇಯರ್ ವೆಚ್ಚದ ಮಿತಿ ಏರಿಕೆ

ಬಿಡಿಎಯಿಂದ ಯೋಜನಾ ಪ್ರಾಧಿಕಾರದ ಜವಾಬ್ದಾರಿ ಜಿಬಿಎಗೆ ಹಸ್ತಾಂತರ: ಡಿಸಿಎಂ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರ ಪಾಲಿಕೆಗಳ ಆಯುಕ್ತರು, ಮೇಯರ್ ಹಾಗೂ ಸ್ಥಾಯಿ ಸಮಿತಿಗಳ ವೆಚ್ಚ ಮಿತಿಯನ್ನು ಹೆಚ್ಚಿಸಿ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮೊದಲ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಗರ ಪಾಲಿಕೆಯ ವೆಚ್ಚದ ಮಿತಿಯನ್ನು ₹1 ಕೋಟಿಯಿಂದ ₹ 3 ಕೋಟಿಗೆ ಏರಿಸಲಾಗಿದೆ. ಸ್ಥಾಯಿ ಸಮಿತಿ ವೆಚ್ಚದ ಮಿತಿಯನ್ನು ₹3 ಕೋಟಿಯಿಂದ ₹5 ಕೋಟಿಗೆ ಹಾಗೂ ಮೇಯರ್ ವೆಚ್ಚದ ಮಿತಿಯನ್ನು ₹5 ಕೋಟಿಯಿಂದ ₹10 ಕೋಟಿಗೆ ಹೆಚ್ಚಿಸಲಾಗಿದೆ' ಎಂದರು.

'ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ನಗರದ ಯೋಜನಾ ಪ್ರಾಧಿಕಾರದ ಜವಾಬ್ದಾರಿ, ಟಿಡಿಆರ್ ನೀಡುವ ಅಧಿಕಾರವನ್ನು ಜಿಬಿಎಗೆ ನೀಡಲಾಗಿದೆ. ಬಿಡಿಎನ ಈ ಅಧಿಕಾರವನ್ನು ಜಿಬಿಎಗೆ ಹಸ್ತಾಂತರಿಸಲಾಗಿದೆ.

'ಜಿಬಿಎ ಜಾರಿಗೆ ತರುವಲ್ಲಿ ಶ್ರಮಿಸಿದ ಬಿ.ಎಸ್. ಪಾಟೀಲ್, ರವಿಚಂದ್ರನ್, ಸಿದ್ದಯ್ಯ ಅವರನ್ನೊಳಗೊಂಡ ಸಮಿತಿಗೆ ಅಭಿನಂದನೆ ಸಲ್ಲಿಸಲು ತೀರ್ಮಾನಿಸಲಾಗಿದೆ. ಅಲ್ಲದೆ, ಐಎಎಸ್ ಅಧಿಕಾರಿಗಳಾದ ತುಷಾರ್ ಗಿರಿನಾಥ್ ಹಾಗೂ ಮಹೇಶ್ವರ್ ರಾವ್ ಅವರ ತಂಡದ ಪರಿಶ್ರಮಕ್ಕೆ ಅಭಿನಂದನೆ ಸಲ್ಲಿಸಲಾಗುತ್ತದೆ. ರಿಜ್ವಾನ್ ಅರ್ಷದ್ ಅವರ ನೇತೃತ್ವದ ಸಮಿತಿ, ಜಿಬಿಜಿಎ ಆಡಳಿತ ಕಾಯ್ದೆಗೆ ವಿಧಾನಸಭೆ ಹಾಗೂ ಪರಿಷತ್ ಸದಸ್ಯರು ಸಹಕಾರ ನೀಡಿದ್ದು, ಎಲ್ಲಾ ಪಕ್ಷದ ಶಾಸಕರಿಗೆ ಅಭಿನಂದಿಸುವ ನಿರ್ಣಯ ಕೈಗೊಳ್ಳಲಾಗಿದೆ" ಎಂದು ತಿಳಿಸಿದರು.

ಸರ್ಕಾರದ ಶ್ರೀರಕ್ಷೆ: 'ಪಾಲಿಕೆ ಆಡಳಿತ ವ್ಯವಸ್ಥೆಯಲ್ಲಿ ಯಾವುದೇ ಪಕ್ಷ ಗೆದ್ದರೂ ಸರ್ಕಾರದ ಶ್ರೀರಕ್ಷೆ ಸದಾ ಪಾಲಿಕೆ ಮೇಲೆ ಇರಬೇಕು. ಎಲ್ಲಾ ಸಂದರ್ಭಗಳಲ್ಲಿ ಅನುದಾನದ ನೆರವು ಇರಬೇಕು ಎಂದು ಮುಖ್ಯಮಂತ್ರಿಯವರನ್ನು ಜಿಬಿಎ ಅಧ್ಯಕ್ಷರನ್ನಾಗಿ ಮಾಡಿದ್ದೇವೆ' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಹೇಳಿದರು.

'ಎಲ್ಲಾ ಆಸ್ತಿ ಡಿಜಿಟಲೀಕರಣ ಮಾಡಲಾಗುತ್ತಿದ್ದು, ಸುಮಾರು ₹2 ಸಾವಿರ ಕೋಟಿ ಆದಾಯ ಹೆಚ್ಚಳದ ನಿರೀಕ್ಷೆ ಇದೆ. ಬೆಂಗಳೂರಿನಲ್ಲಿ ಈ ವರ್ಷ ₹6,200 ಕೋಟಿ ಆದಾಯ ಬಂದಿದ್ದು, ದೆಹಲಿಯಲ್ಲಿ ಕೇವಲ ₹2 ಸಾವಿರ ಕೋಟಿ ಮಾತ್ರ ಆದಾಯವಿದೆ' ಎಂದರು.

ಅನಿವಾರ್ಯ ಕಾರಣ: ಜಿಬಿಎ ಸದಸ್ಯರೇ ಸಭೆಗೆ ಬಂದಿಲ್ಲ ಎಂದು ಕೇಳಿದಾಗ, 'ಸಚಿವ ಕೃಷ್ಣ ಬೈರೇಗೌಡರು ಹಾಸನದಲ್ಲಿ ಹಾಸನಾಂಬ ದೇವರ ದರ್ಶನ ಕಾರ್ಯಕ್ರಮದ ಉಸ್ತುವಾರಿಯಲ್ಲಿದ್ದಾರೆ. ಬೈರತಿ ಸುರೇಶ್ ಅವರಿಗೆ ಶಸ್ತ್ರಚಿಕಿತ್ಸೆಯಾಗಿದೆ. ಇನ್ನು ಕೆಲವರು ಅನಿವಾರ್ಯ ಕಾರಣದಿಂದ ಬಂದಿಲ್ಲ. ಉಳಿದಂತೆ ವಿರೋಧ ಪಕ್ಷದವರು ಎಲ್ಲರೂ ಗೈರಾಗಿದ್ದಾರೆ' ಎಂದು ತಿಳಿಸಿದರು.

ಜಿಬಿಎ ಸಭೆಗೆ ಹಾಜರಾದವರು: ಸಚಿವರಾದ ರಾಮಲಿಂಗಾ ರೆಡ್ಡಿ, ಕೆ.ಜೆ. ಜಾರ್ಜ್, ಜಮೀರ್ ಅಹ್ಮದ್ ಖಾನ್, ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರೀಸ್, ಶಾಸಕರಾದ ಎಂ. ಕೃಷ್ಣಪ್ಪ, ಎ.ಸಿ. ಶ್ರೀನಿವಾಸ್, ರಿಜ್ವಾನ್ ಅರ್ಷದ್, ಬಿ.ಶಿವಣ್ಣ, ಯತೀಂದ್ರ ಸಿದ್ದರಾಮಯ್ಯ, ಕೆ. ಗೋವಿಂದರಾಜು, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಐದು ಪಾಲಿಕೆಗಳ ಆಯುಕ್ತರಾದ ರಾಜೇಂದ್ರ ಚೋಳನ್, ಜಿ.ಎಸ್. ರಮೇಶ್, ಕೆ.ಎನ್. ರಮೇಶ್, ಪೊಮ್ಮಲ ಸುನೀಲ್ ಕುಮಾರ್, ಡಾ.ಕೆ. ವಿ ರಾಜೇಂದ್ರ, ಬೆಸ್ಕಾಂ, ಬಿಡಿಎ, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

'ಲಾಲ್‌ಬಾಗ್ ಹಾಳು ಮಾಡಿದರೆ ನನ್ನ ತಲೆ ಒಡೆಯುತ್ತಾರೆ'

'ಲಾಲ್‌ಬಾಗ್ ಹಾಳಾಗುವುದಿಲ್ಲ. ಅದನ್ನು ಹಾಳು ಮಾಡಿದರೆ ನನ್ನ ತಲೆ ಒಡೆದು ಹಾಕುತ್ತಾರೆ ಎಂಬುದು ನನಗೆ ಗೊತ್ತಿದೆ. ಸುರಂಗ ರಸ್ತೆ ಒಂದು ಮೂಲೆಯಲ್ಲಿ ಭೂಗರ್ಭದಲ್ಲಿ ಹೋಗುತ್ತದೆ. ಲಾಲ್‌ಬಾಗ್‌ಗೆ ಯಾವುದೇ ತೊಂದರೆಯಾಗುವುದಿಲ್ಲ' ಎಂದು ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

'ಉದ್ಯಾನದ ಒಂದು ಮೂಲೆಯಲ್ಲಿ ಕಲ್ಲು ಬಂಡೆಯಿದ್ದು ಅಲ್ಲಿ ಸುರಂಗ ರಸ್ತೆಗೆ ಪ್ರವೇಶ ಕಲ್ಪಿಸಲು ಯೋಜಿಸಲಾಗಿದೆ. ಆ ಪ್ರದೇಶವನ್ನು ನಾನು ವೀಕ್ಷಣೆ ಮಾಡುತ್ತೇನೆ. ಏನಾದರೂ ತೊಂದರೆ ಗಳು, ಬದಲಾವಣೆಗಳಿದ್ದರೆ ಅದನ್ನು ಮಾಡಿಕೊಳ್ಳೋಣ' ಎಂದರು.


ಜಿಬಿಎ ಸಭೆಯಲ್ಲಿ ಭಾಗವಹಿಸಿದ್ದ ಶಾಸಕರು, ಸಚಿವರು

'ಮುಂಬೈ ಮಾದರಿಯಲ್ಲಿ ಕೊಳೆಗೇರಿ ಪುನಶ್ಚೇತನಕ್ಕೆ ಸಮಿತಿ'

'ಮುಂಬೈ ಮಾದರಿಯಲ್ಲಿ ಕೊಳೆಗೇರಿ ಪ್ರದೇಶಗಳ ಪುನಶ್ಚೇತನಕ್ಕೆ ಸಮಿತಿ ರಚಿಸಬೇಕು' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರು ಜಿಬಿಎ ಅಧಿಕಾರಿಗಳಿಗೆ ಸೂಚಿಸಿದರು.

ಜಿಬಿಎ ಸಭೆಯಲ್ಲಿ ಸಚಿವ ಜಮೀರ್ ಅಹ್ಮದ್ ಅವರು ಬೆಂಗಳೂರಿನಲ್ಲಿ 480 ಕೊಳೆಗೇರಿ ಪ್ರದೇಶಗಳಿದ್ದು, ಅವುಗಳ ಅಭಿವೃದ್ಧಿ ಆಗಬೇಕು ಎಂದು ವಿಷಯ ಪ್ರಸ್ತಾಪಿಸಿದಾಗ, 'ಶಾಂತಿನಗರದಲ್ಲಿ ಈ ಪ್ರಯತ್ನಕ್ಕೆ ಮುಂದಾಗಿದ್ದೆವು. ಅದು ಯಶಸ್ವಿಯಾಗಲಿಲ್ಲ. ಹೀಗಾಗಿ ಜನರು ಈ ವಿಚಾರದಲ್ಲಿ ಹಿಂಜರಿಯುತ್ತಾರೆ. ಅದಕ್ಕಾಗಿ ಈ ಕೊಳೆಗೇರಿ ಪ್ರದೇಶಗಳ ಪುನಶ್ಚೇತನಕ್ಕೆ ಸಮಿತಿ ರಚಿಸಿ' ಎಂದು ತಿಳಿಸಿದರು.

'ನಮ್ಮ ಕ್ಷೇತ್ರದಲ್ಲಿ ಕಸದ ಸಮಸ್ಯೆ ಹೆಚ್ಚಾಗಿದ್ದು ಇದಕ್ಕೆ ಪರಿಹಾರ ಬೇಕು. ಇದನ್ನು ಜಿಬಿಎ ನಿಭಾಯಿಸುವುದೇ ಅಥವಾ ಪಾಲಿಕೆ ನಿಭಾಯಿಸುವುದೇ' ಎಂದು ಶಾಸಕ ಎ.ಸಿ. ಶ್ರೀನಿವಾಸ್ ಅವರು ಕೇಳಿದಾಗ, 'ಕಸ ವಿಲೇವಾರಿ ವಿಚಾರವಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ 33 ಪ್ಯಾಕೇಜ್ ಟೆಂಡರ್ ಕರೆಯಲಾಗುವುದು. ಕಸ ವಿಲೇವಾರಿ ಜವಾಬ್ದಾರಿ ಸ್ಥಳೀಯ ಪಾಲಿಕೆಗಳು ನಿಭಾಯಿಸಲಿವೆ. ಇದರ ಸಮನ್ವಯತೆಯನ್ನು ಜಿಬಿಎ ಮಾಡಲಿದೆ' ಎಂದರು.

ಆನೇಕಲ್ ಶಾಸಕರು ತಮ್ಮ ಪ್ರದೇಶವನ್ನು ಜಿಬಿಎ ವ್ಯಾಪ್ತಿಗೆ ಸೇರಿಸಿಕೊಳ್ಳುವ ಬಗ್ಗೆ ಕೇಳಿದಾಗ, 'ಈಗ ಘೋಷಣೆ ಆಗಿರುವ ಜಿಬಿಎ ವ್ಯಾಪ್ತಿಯಲ್ಲಿ ಮೊದಲು ಚುನಾವಣೆ ಆಗಲಿದೆ. ನಂತರ ಎಲ್ಲೆಲ್ಲಿ ಅಭಿವೃದ್ಧಿ ಆಗಿದೆ ಆ ಜಾಗಗಳನ್ನು ಜಿಬಿಎ ವ್ಯಾಪ್ತಿಗೆ ಸೇರಿಸಲು ಸಮಿತಿ ರಚಿಸಿ ಯಾವ ಪ್ರದೇಶ ಸೇರಿಸಬೇಕು ಎಂದು ತೀರ್ಮಾನ ಮಾಡಲಾಗುವುದು. ಚುನಾವಣೆ ನಂತರ ಈ ಪ್ರಕ್ರಿಯೆಗೆ ಕೈಹಾಕಲಾಗುವುದು' ಎಂದು ಹೇಳಿದರು.

ಪರಿಷತ್ ಸದಸ್ಯ ಗೋವಿಂದರಾಜು ಅವರು, 'ಬೀದಿ ವ್ಯಾಪಾರಿಗಳಿಂದ ಸಂಚಾರ ದಟ್ಟಣೆ ಹೆಚ್ಚಾಗಿದೆ' ಎಂದು ಕೇಳಿದಾಗ, '30 ಸಾವಿರ ಬೀದಿ ವ್ಯಾಪಾರಿಗಳು ನೋಂದಣಿಯಾಗಿದ್ದು, ಅವರಿಗೆ ನಾಲ್ಕು ರೀತಿಯ ವಾಹನ ನೀಡಲು ಸಿದ್ಧತೆ ಮಾಡುತ್ತಿದ್ದೇವೆ' ಎಂದು ತಿಳಿಸಿದರು.

ಶಾಸಕ ರಿಜ್ವಾನ್ ಅರ್ಷದ್ ಅವರು, 'ಅನಾಥ ವಾಹನಗಳ ಸಂಖ್ಯೆ ಹೆಚ್ಚಾಗಿದ್ದು, ಇದರಿಂದ ಸಂಚಾರ ದಟ್ಟಣೆ ಹಾಗೂ ಕಸದ ಸಮಸ್ಯೆ ಹೆಚ್ಚಾಗಿದೆ. ಹೀಗಾಗಿ ನಗರದ ಹೊರಗೆ 10 ಎಕರೆ ಪ್ರದೇಶ ಗುರುತಿಸಿ ಅಲ್ಲಿಗೆ ಈ ವಾಹನಗಳನ್ನು ಸ್ಥಳಾಂತರ ಮಾಡಬೇಕು' ಎಂದರು. 'ಈ ಜಾಗಗಳನ್ನು ಗುರುತಿಸಿ ಅಲ್ಲಿ ಕಾಂಪೌಂಡ್ ಹಾಕಿ ವಾಹನಗಳನ್ನು ಸ್ಥಳಾಂತರಿಸಿ. ಆಗ ವಾಹನಗಳನ್ನು ಬೇರೆಯವರು ಕದಿಯಲು ಆಗುವುದಿಲ್ಲ' ಎಂದು ಶಿವಕುಮಾರ್ ಹೇಳಿದರು.

ಎಲ್ಲೆಲ್ಲಿ ನಗರ ಪಾಲಿಕೆಗಳ ಹೊಸ ಕಟ್ಟಡ

ಕೇಂದ್ರ ನಗರ ಪಾಲಿಕೆ	ಅನೆಕ್ಸ್–3 ಕಟ್ಟಡ, ಜಿಬಿಎ ಆವರಣ
ಪೂರ್ವ ನಗರ ಪಾಲಿಕೆ	ಮಹದೇವಪುರ ಹೊರ ವರ್ತುಲ ರಸ್ತೆ (ಮೆಟ್ರೊ ನಿಲ್ದಾಣದ ಬಳಿ)
ಪಶ್ಚಿಮ ನಗರ ಪಾಲಿಕೆ	ವಿಜಯನಗರ ಬಿಡಿಎ ಸಂಕೀರ್ಣ (1.5 ಎಕರೆ) ಅಥವಾ ಅತಿಗುಪ್ಪೆ (3.5 ಎಕರೆ)
ಉತ್ತರ ನಗರ ಪಾಲಿಕೆ	ಚೊಕ್ಕನಹಳ್ಳಿ ಗ್ರಾಮ, ಸರ್ವೆ ನಂಬರ್ 75/4 (2 ಎಕರೆ)
ದಕ್ಷಿಣ ನಗರ ಪಾಲಿಕೆ	ಬನಶಂಕರಿ ಮೆಟ್ರೊ ನಿಲ್ದಾಣದ ಹತ್ತಿರ (3 ಎಕರೆ ಖಾಲಿ ಜಾಗ)


ಮೊದಲ ಸಭೆಯಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ

ಮೊದಲ ಬಾರಿಗೆ ಸಿ.ಎಂ ನೇತೃತ್ವ

ಬೆಂಗಳೂರು ನಗರದ ಇತಿಹಾಸದಲ್ಲಿ ಮೊದಲ ಬಾರಿಗೆ ಸ್ಥಳೀಯ ಸಂಸ್ಥೆಯ ವಿಷಯ, ಕಾಮಗಾರಿಗಳ ಬಗ್ಗೆ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಶುಕ್ರವಾರ ಸಭೆ ನಡೆಯಿತು.

ಬಿಬಿಎಂಪಿ ಕೌನ್ಸಿಲ್ ಸಭೆ ನಡೆಯುತ್ತಿದ್ದ ಕೆಂಪೇಗೌಡ ಪೌರ ಸಭಾಂಗಣದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾಲಿಕೆಗಳಿಗೆ ಸಂಬಂಧಿಸಿದಂತೆ ಎರಡು ಕಾರ್ಯಸೂಚಿ ಹಾಗೂ 11 ವಿಷಯಗಳ ಬಗ್ಗೆ, ಕಾಮಗಾರಿಗಳ ಬಗ್ಗೆ ಚರ್ಚೆ ನಡೆಸಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯ ನಾಲ್ವರು ಸಂಸದರು, ರಾಜ್ಯಸಭೆ ಸದಸ್ಯರು ಸಭೆಗೆ ಗೈರು ಹಾಜರಾಗಿದ್ದರು.

72
ಜಿಬಿಎ ಒಟ್ಟು ಸದಸ್ಯರು

ಸಭೆಗೆ ಗೈರಾದವರು

- **2** ಕೇಂದ್ರ ಸಚಿವರು
- **8** ಲೋಕಸಭೆ- ರಾಜ್ಯ ಸಭೆ ಸದಸ್ಯರು
- **15** ಬಿಜೆಪಿ ಶಾಸಕರು
- **3** ರಾಜ್ಯದ ಸಚಿವರು
- **7** ವಿಧಾನ ಪರಿಷತ್ ಸದಸ್ಯರು
- **1** ಕಾಂಗ್ರೆಸ್ ಶಾಸಕ

ಬಿ–ಸ್ಮೈಲ್ ಕಾಮಗಾರಿಗಳಿಗೆ ಜಿಬಿಎ ಮುದ್ರೆ

ನಗರದಲ್ಲಿ ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಲು ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತದ (ಬಿ-ಸ್ಮೈಲ್) ಯೋಜನೆಗಳಿಗೆ ಜಿಬಿಎ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಯೋಜನೆಗಳ ವಿವರ

- **₹45,000 ಕೋಟಿ**, ಎರಡು ಸುರಂಗ ರಸ್ತೆ
- **₹18,204 ಕೋಟಿ**, **126.44** ಕಿ.ಮೀ ಉದ್ದದ **13** ಎತ್ತರಿಸಿದ ಕಾರಿಡಾರ್‌ಗಳು
- **₹9,000 ಕೋಟಿ**, **40** ಕಿ.ಮೀ ಉದ್ದದ ಮೆಟ್ರೊ ಸಂಯೋಜಿತ ಡಬ್ಬಲ್ ಡೆಕರ್
- **₹3,000 ಕೋಟಿ**, ರಾಜಕಾಲುವೆಗಳ ಪಕ್ಕದಲ್ಲಿ ಸುಮಾರು **380** ಕಿಮೀ ಉದ್ದ ಬಫರ್ ಸರ್ವಿಸ್ ರಸ್ತೆ
- **₹1,700 ಕೋಟಿ**, **145.86** ಕಿ.ಮೀ ಉದ್ದದ ರಸ್ತೆಗಳಲ್ಲಿ ಸಮಗ್ರ ಅಭಿವೃದ್ಧಿ, ವೈಟ್ ಟಾಪಿಂಗ್
- **₹400 ಕೋಟಿ**, ವಿಶ್ವದರ್ಜೆಯ **20.50** ಕಿ.ಮೀ ಐ.ಟಿ ಕಾರಿಡಾರ್ ಹೊರವರ್ತುಲ ರಸ್ತೆ
- ವಿವಿಧ ಇಲಾಖೆ/ಸಂಸ್ಥೆಗಳೊಂದಿಗೆ ಈಜಿಪುರ ಮೇಲ್ಸೇತುವೆ ಕಾಮಗಾರಿ, ಬೈಯಪ್ಪನಹಳ್ಳಿ ರೋಟರಿ ಕಾಮಗಾರಿ, ಹೈಡೆನ್ಸಿಟಿ ಕಾರಿಡಾರ್ ಕಾಮಗಾರಿಗಳು

ಜಿಬಿಎ ಸಭೆಯಲ್ಲಿ ಅನುಮೋದನೆಯಾದ ವಿಷಯಗಳು

- ಜಿಬಿಎ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅಧಿಕಾರಿಗಳ ಸಮಿತಿ ರಚಿಸಲು ಮುಖ್ಯ ಆಯುಕ್ತರಿಗೆ ಅಧಿಕಾರ
- ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಮಹಾಯೋಜನೆ (ಮಾಸ್ಟರ್ ಪ್ಲಾನ್) ತಯಾರಿಕೆ ಬಿಡಿಎಯಿಂದ ಜಿಬಿಎಗೆ ಹಸ್ತಾಂತರ
- ಜಿಬಿಎಯಿಂದ ಟಿಡಿಆರ್/ಡಿಆರ್‌ಸಿ ಹಾಗೂ ಬಳಕೆ ಪ್ರಮಾಣ ಪತ್ರಗಳ ವಿತರಣೆ
- ಎಲ್ಲಾ ನಗರ ಪಾಲಿಕೆಗಳು ತಮ್ಮ ಕರಡು ವಾರ್ಷಿಕ ಆಯವ್ಯಯವನ್ನು ಜಿಬಿಎ ಪರಿಶೀಲನೆಗೆ ಸಲ್ಲಿಸಬೇಕು. ಜಿಬಿಎ ಮೂಲಕ ಸರ್ಕಾರದ ಅನುಮೋದನೆಗೆ ಕಳುಹಿಸಬೇಕು
- ಬೆಸ್ಕಾಂ, ಜಲಮಂಡಳಿ, ಬಿಎಂಟಿಸಿ, ಬೆಂಗಳೂರು ಸಂಚಾರ ಪೊಲೀಸರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಐದು ನಗರ ಪಾಲಿಕೆಗಳು ಹಾಗೂ 10 ವಲಯಗಳಲ್ಲಿ ಪ್ರತಿಯೊಂದಕ್ಕೂ ಸಂಪರ್ಕ ಬಿಂದು ಅಧಿಕಾರಿಯನ್ನು (ಪಿಒಸಿ) ನೇಮಿಸಬೇಕು
- ಜಿಬಿಎ ಕಾರ್ಯಕಾರಿ ಸಮಿತಿ ಕಾರ್ಯಕಾರಿ ಸಮಿತಿ, ಕೇಂದ್ರ ಸಂಯೋಜನಾ ಸಮಿತಿ ರಚನೆಗೆ ಅನುಮೋದನೆ
- ಐದು ನಗರ ಪಾಲಿಕೆಗಳ ಹೊಸ ಕಟ್ಟಡಗಳ ನಿರ್ಮಾಣ ಹಾಗೂ ತಾತ್ಕಾಲಿಕ ಕಾರ್ಯಾಚರಣೆ ಸ್ಥಳಗಳಿಗೆ ಸಮ್ಮತಿ
- ಜಿಬಿಎ ಮುಖ್ಯ ಆಯುಕ್ತರು ಪ್ರತಿ ವರ್ಷ ಅಗತ್ಯ ಅನುಮೋದನೆ ಮತ್ತು ಅನುದಾನಗಳ ಬಿಡುಗಡೆ ಏಕೀಕೃತ ಬಜೆಟ್ ಅನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಜಿಬಿಎ ವತಿಯಿಂದ ಸರ್ಕಾರದ ಅನುದಾನಗಳನ್ನು ಕಾರ್ಯತಂತ್ರದ ಹೂಡಿಕೆ ಯೋಜನೆಯಲ್ಲಿ (ಎಸ್‌ಐಪಿ) ನಿರ್ವಹಣೆ. ಐದು ನಗರ ಪಾಲಿಕೆಗಳಿಗೆ ₹613.6 ಕೋಟಿ ವಿತರಣೆಗೆ ಅನುಮೋದನೆ
- ಜಿಬಿಎ ಮುಖ್ಯ ಆಯುಕ್ತರು ₹10 ಕೋಟಿವರೆಗಿನ ಯೋಜನೆಗಳಿಗೆ ಅನುಮೋದನೆ ನೀಡಲು ಸಮ್ಮತಿ

ಪಾಪಾ ಜಾನ್ಸ್ ರೆಸ್ಟೋರೆಂಟ್ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಜೆಪಿ ಫುಡ್ಸ್ ಇಂಡಿಯಾ (ಪಿಜೆಪಿ ಇನ್ವೆಸ್ಟ್‌ಮೆಂಟ್ಸ್ ಗ್ರೂಪ್ ಆ್ಯಂಡ್ ಅಂಬ್ರೋಸಿಯಾ ಕ್ಯುಎಸ್‌ಆರ್ ಸಹಭಾಗಿತ್ವದ ಸಂಸ್ಥೆ) ಫ್ರಾಂಚೈಸ್‌ನ ಪಾಪಾ ಜಾನ್ಸ್ ಇಂಡಿಯಾ ಇಂದಿರಾನಗರ, ಹೆಣ್ಣೂರು, ಎಲೆಕ್ಟ್ರಾನಿಕ್ ಸಿಟಿ ಮತ್ತು ಸರ್ಜಾಪುರ ರಸ್ತೆಯಲ್ಲಿ ನಾಲ್ಕು ಹೊಸ ರೆಸ್ಟೋರೆಂಟ್‌ಗಳನ್ನು ಆರಂಭಿಸಿದೆ.

ಈ ಮೂಲಕ ಗ್ರಾಹಕರಿಗೆ ವಿಶೇಷವಾಗಿ ತಯಾರಿಸಿದ ಗೀರೋಸ್ಟ್ ಪಿಜ್ಜಾವನ್ನು ಉಣಬಡಿಸಲಿದೆ. ಚಿಕನ್ ಮತ್ತು ಪನೀರ್ ಬಗೆಯಲ್ಲಿ ಲಭ್ಯವಿದೆ.

ಉದ್ಘಾಟನೆ ವೇಳೆ ಮಾತನಾಡಿದ ಪಿಜೆಪಿ ಇನ್ವೆಸ್ಟ್‌ಮೆಂಟ್ಸ್ ಗ್ರೂಪ್‌ನ ಗ್ರೂಪ್ ಸಿಇಒ ತಪನ್ ವೈದ್ಯ, 'ದೇಶದ ಗ್ರಾಹಕರಿಗೆ ಗುಣ ಮಟ್ಟದ ಖಾದ್ಯಗಳನ್ನು ಒದಗಿಸುತ್ತಿರುವ ತೃಪ್ತಿ ಇದೆ. ಶೀಘ್ರದಲ್ಲೇ ದೇಶದ ವಿವಿಧೆಡೆ ಔಟ್‌ಲೆಟ್‌ಗಳನ್ನು ವಿಸ್ತರಣೆ ಮಾಡಲಾಗುವುದು' ಎಂದರು.

ಮುಖ್ಯ ಹಣಕಾಸು ಅಧಿಕಾರಿ ರವಿ ಥಾನಾವಾಲ, 'ನಗರದಲ್ಲಿ ಮೊದಲ ರೆಸ್ಟೋರೆಂಟ್ ಹಾಗೂ ಗುಣಮಟ್ಟ ನಿಯಂತ್ರಣ ಕೇಂದ್ರ (ಕ್ವಾಲಿಟಿ ಕಂಟ್ರೋಲ್ ಸೆಂಟರ್) ಆರಂಭಿಸಿರುವುದು ದೀರ್ಘಾವಧಿಯ ಬೆಳವಣಿಗೆಗೆ ಬಲವಾದ ಅಡಿಪಾಯಕ್ಕೆ ಸಾಕ್ಷಿಯಾಗಿದೆ. ಗುಣಮಟ್ಟ ಸೇವೆ ಒದಗಿಸುವುದನ್ನು ಖಚಿತಪಡಿಸುತ್ತೇವೆ' ಎಂದರು. ಕ್ಯುಎಸ್‌ಆರ್‌ನ ಅಧ್ಯಕ್ಷ ವಿಶ್ ನಾರಾಯಣ್ ಹಾಜರಿದ್ದರು.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಐಎಎಸ್ ಅಧಿಕಾರಿ ಸಮೀರ್ ಶುಕ್ಲಾ ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಅವರಿಗೆ, ದೆಹಲಿಯಲ್ಲಿನ ಕರ್ನಾಟಕ ಭವನದ ಕಾರ್ಯದರ್ಶಿ (ಸಮನ್ವಯ) ಹುದ್ದೆಯ ಹೆಚ್ಚುವರಿ ಹೊಣೆಯನ್ನೂ ನೀಡಲಾಗಿದೆ.

ಹುದ್ದೆ ನಿರೀಕ್ಷೆಯಲ್ಲಿದ್ದ ರೋಹಿಣಿ ಸಿಂಧೂರಿ ಅವರನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್ಎಂಇ ಮತ್ತು ಗಣಿ) ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಕೇರಳ: ಸರ್ಕಾರಿ, ಅನುದಾನಿತ ಶಾಲೆಗಳಲ್ಲಿ ಮಲಯಾಳಂ ಕಡ್ಡಾಯ

ಕಾಸರಗೋಡು: ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಒಂದರಿಂದ ಹತ್ತನೇ ತರಗತಿವರೆಗೆ ಮಲಯಾಳಂ ಕಡ್ಡಾಯಗೊಳಿಸುವ ವಿಧೇಯಕಕ್ಕೆ ಕೇರಳ ವಿಧಾನಸಭೆ ಶುಕ್ರವಾರ ಒಪ್ಪಿಗೆ ನೀಡಿದೆ.

ಹೊರರಾಜ್ಯಗಳಲ್ಲಿ ಕಲಿತು ಕೇರಳದಲ್ಲಿ 9 ಮತ್ತು 10ನೇ ತರಗತಿಗೆ ಸೇರುವ ವಿದ್ಯಾರ್ಥಿಗಳಿಗೆ ಮಲಯಾಳಂ ಕಲಿಕೆ ಕಡ್ಡಾಯವಲ್ಲ ಎಂದು ತಿಳಿಸಲಾಗಿದೆ. ಕಾನೂನು ಸಚಿವ ಪಿ.ರಾಜೀವನ್ ಈ ಮಸೂದೆಯನ್ನು ಮಂಡಿಸಿದ್ದರು.

ಕಾಸರಗೋಡು ಜಿಲ್ಲೆಯ ಕನ್ನಡ ಭಾಷಾ ಅಲ್ಪಸಂಖ್ಯಾತರ ಬಗ್ಗೆ ವಿಧೇಯಕದಲ್ಲಿ ಪ್ರಸ್ತಾಪಿಸಿಲ್ಲ. ಇದರಿಂದ ಭಾಷಾ ಅಲ್ಪಸಂಖ್ಯಾತರಿಗೆ ಆತಂಕ ಉಂಟಾಗಿದೆ ಎಂದು ಕನ್ನಡಪರ ಸಂಘಟನೆಗಳ ಮುಖಂಡರು ತಿಳಿಸಿದ್ದಾರೆ.

ಜಿಬಿಎ ವಿರುದ್ಧ ಕಾನೂನು ಹೋರಾಟ: ಆರ್.ಅಶೋಕ

ಒಂದನೇ ಪುಟದಿಂದ...

'ಇದು ಬೆಂಗಳೂರು ಜನಪ್ರತಿನಿಧಿಗಳ ಕತ್ತು ಹಿಸುಕುವ ಮತ್ತು ಕಾನೂನು ಬಾಹಿರ ಕ್ರಮವಾಗಿದೆ. ಇದು ಸಂವಿಧಾನ ವಿರೋಧಿ ನಡೆಯಾಗಿರುವುದರಿಂದ, ಇಂತಹ ಸಭೆಗೆ ಹೋಗಲು ಸಾಧ್ಯವಿಲ್ಲ' ಎಂದು ಹೇಳಿದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದಾಗಿ ಎಲ್ಲ ಐದು ಮಹಾನಗರಪಾಲಿಕೆಗಳು ನೆಗೆದು ಬಿದ್ದುಹೋಗಿವೆ. ಎಲ್ಲ ಅಧಿಕಾರಗಳನ್ನು ಕೇವಲ ಮುಖ್ಯಮಂತ್ರಿಯವರಿಗೆ ನೀಡಲಾಗಿದೆ. ಕೌನ್ಸಿಲ್‌ಗಳಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಇದು ಸಂವಿಧಾನ ವಿರೋಧವಾಗಿರುವುದರಿಂದ ಸಭೆಯನ್ನು ಬಹಿಷ್ಕಾರ ಮಾಡಿದ್ದೇವೆ' ಎಂದರು.

ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ಸೃಷ್ಟಿಸಿರುವ ಜಿಬಿಎ ಸಂಪೂರ್ಣವಾಗಿ ಸ್ಥಳೀಯ ಸಂಸ್ಥೆಗಳ ಅಧಿಕಾರ ಕಿತ್ತುಕೊಳ್ಳುವ ಪ್ರಾಧಿಕಾರವಾಗಿದೆ ಎಂದು ದೂರಿದರು.

ಬಿಬಿಎಂಪಿ ಅಡಿಯಲ್ಲಿ ಚುನಾವಣೆ ಮಾಡಿದ್ದರೆ ಗೆಲ್ಲುವುದಿಲ್ಲ ಎಂಬ ಕಾರಣಕ್ಕೆ ಜಿಬಿಎ ಮಾಡಿದ್ದಾರೆ. ಐದು ಪಾಲಿಕೆಗಳಲ್ಲಿ ಕನಿಷ್ಠ ಒಂದೆರಡಾದರೂ ಗೆಲ್ಲಬೇಕು ಎಂಬುದೇ ಅವರ ಉದ್ದೇಶ ಎಂದರು.

ನಗರದಲ್ಲಿ ಇಂದು

ವಿಶ್ವ ಹಾಸ್ಪೈಸ್ ಮತ್ತು ಉಪಶಾಮಕ ಆರೈಕೆ ದಿನದ ಪ್ರಯುಕ್ತ ವಾಕಥಾನ್: ಅತಿಥಿ: ಡಾ.ನವೀನ್ ಟಿ., ಲೋಕೇಶ್ ಜಗಲಾಸರ, ಆಯೋಜನೆ ಹಾಗೂ ಸ್ಥಳ: ಕಿದ್ವಾಯಿ ಸ್ಮಾರಕ ಗಂಧಿ ಸಂಸ್ಥೆ, ಬೆಳಿಗ್ಗೆ 7
ಸ್ತ್ರೀರೋಗ ಕ್ಯಾನ್ಸರ್ ತಜ್ಞರ ಸಮ್ಮೇಳನ: ಆಯೋಜನೆ: ಸ್ತ್ರೀರೋಗ ಕ್ಯಾನ್ಸರ್ ತಜ್ಞರ ಸಂಘ, ಸ್ಥಳ: ಕಿದ್ವಾಯಿ ಸ್ಮಾರಕ ಗಂಧಿ ಸಂಸ್ಥೆ, ಬೆಳಿಗ್ಗೆ 9ರಿಂದ

ಹರಿದಾಸ ಸ್ಮರಣೆ: ದಾಸರ ಪದ ಗಾಯನ ಸ್ಪರ್ಧೆ, ಅತಿಥಿ: ಆರ್.ಕೆ. ಪದ್ಮನಾಭ, ಆಯೋಜನೆ: ಅಜ್ಜನ ಮನೆ ಕಲಾ ಪ್ರಪಂಚ, ಸ್ಥಳ: ಜಯರಾಮ ಸೇವಾಮಂಡಳಿ, ಜಯನಗರ, ಬೆಳಿಗ್ಗೆ 9.15

'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಅಪಾಯಗಳು' ವಿಚಾರಸಂಕಿರಣ: ವಿಚಾರ ಮಂಡನೆ: ಶಂಕರ್ ಶರ್ಮಾ, ನಿರ್ಮಲಾ ಗೌಡ, ಉಪಸ್ಥಿತಿ: ಎನ್. ಸಂತೋಷ್ ಹೆಗ್ಡೆ, ವಿ. ಗೋಪಾಲಗೌಡ, ಶಿವರುದ್ರ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಎ.ಟಿ. ರಾಮಸ್ವಾಮಿ, ಮರಿಸ್ವಾಮಿ ಎಸ್., ಇಂದೂಧರ ಹೊನ್ನಾಪುರ, ಸುನಂದಾ ಜಯರಾಂ, ಆಯೋಜನೆ: ಪರಿಸರಕ್ಕಾಗಿ ನಾವು, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10


ಭರತನಾಟ್ಯ, ಉಪನ್ಯಾಸ, ಸನ್ಮಾನ: ಭರತನಾಟ್ಯ: ಅನುರಾಧಾ ಹೆಗಡೆ, ಕೀರ್ತನಾ ಹೆಗಡೆ, 'ಕಫ, ಕೆಮ್ಮು ಯಾಕೆ? ಹೇಗೆ?' ವಿಷಯದ ಬಗ್ಗೆ: ಡಾ. ದೀಪಾ ವಿ., ಉಪಸ್ಥಿತಿ: ನಾಗರಾಜ ಇಳೆಗುಂಡಿ, ಆಯೋಜನೆ ಹಾಗೂ ಸ್ಥಳ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ರಮೇಶ್ ಬಿ., ಬಿ.ಎಂ. ದೇವರಾಜಪ್ಪ, ಎನ್.ಸಿ. ಇಂದಿರಾ, ಸಂತೋಷ್ ಡಿ., ರಾಜೇಶ್ ಇ.ಬಿ., ಆಯೋಜನೆ ಹಾಗೂ ಸ್ಥಳ: ಕಾವೇರಿ ಬಿ.ಇಡಿ. ಕಾಲೇಜು, ಸಹಕಾರನಗರ, ಬೆಳಿಗ್ಗೆ 10

'ಶಿಕ್ಷಣ ಮತ್ತು ಸುಸ್ಥಿರತೆ' ವಿಚಾರಸಂಕಿರಣ: ಉದ್ಘಾಟನೆ: ಪ್ರಭು ಜಿ., ಅಧ್ಯಕ್ಷತೆ: ಅರ್ಜುನ್ ಮೆಂಡಾ, ಅತಿಥಿ: ಭೀಮಣ್ಣ ನಾಯ್ಕ್, ಉಪಸ್ಥಿತಿ: ಚತ್ರು ಮೆಂಡಾ, ನೀತು ಮೆಂಡಾ, ಮನಮೋಹನ್ ಲಾಲ್ವಾನಿ, ಮೋಹನ್ ಭಾಸ್ಕರ್ ಹೆಗಡೆ, ಆಯೋಜನೆ: ಮೆಂಡಾ ಫೌಂಡೇಷನ್, ಸೆಲ್ಕೊ ಸೋಲಾರ್, ಸ್ಥಳ: ಕ್ಯಾಪಿಟಲ್ ಹೋಟೆಲ್, ರಾಜಭವನ ರಸ್ತೆ, ಬೆಳಿಗ್ಗೆ 10.30

ರಾಜ್ಯಮಟ್ಟದ ಕೃಷಿ ಪ್ರಶಸ್ತಿಗಳ ಪ್ರದಾನ ಸಮಾರಂಭ: ಉದ್ಘಾಟನೆ: ಶಂಕರ್ ಬಿದರಿ, ಅತಿಥಿಗಳು: ಎನ್. ಸಿ.ಮುನಿಯಪ್ಪ, ಎಸ್.ವಿ.ಸುರೇಶ, ಅಧ್ಯಕ್ಷತೆ: ಎಚ್.ಎಲ್.ಹರೀಶ್, ಆಯೋಜನೆ ಹಾಗೂ ಸ್ಥಳ: ಅಲುಮ್ನಿ ಅಸೋಸಿಯೇಷನ್, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಳಿಗ್ಗೆ 10.30

ಹಂಪನಾ @90: ಹಂಪ ನಾಗರಾಜಯ್ಯ ಸಾಹಿತ್ಯ ಅವಲೋಕನ: ಎಸ್.ಜಿ. ಸಿದ್ಧರಾಮಯ್ಯ, ಜಿ.ಎನ್. ಮೋಹನ್, ಪ್ರತಿಭಾ ನಂದಕುಮಾರ್, ಎಂ.ಎಸ್. ಆಶಾದೇವಿ, ಜೋಗಿ, ಅಗ್ರಹಾರ ಕೃಷ್ಣಮೂರ್ತಿ, ಆರತಿ ಎಚ್.ಎನ್., ಶುಭ ಹಾರೈಕೆ: ಸಿದ್ದರಾಮಯ್ಯ, ಉಪಸ್ಥಿತಿ: ಹಂಪ ನಾಗರಾಜಯ್ಯ, ವೂಡೇ ಪಿ. ಕೃಷ್ಣ, ವೀರಕಪುತ್ರ ಶ್ರೀನಿವಾಸ, ಆಯೋಜನೆ: ವೀರಲೋಕ, ಸ್ಥಳ: ಗಾಂಧಿಭವನ, ಕುಮಾರ ಕೃಪಾ ರಸ್ತೆ, ಸಂಜೆ 5


ಹಂಪ ನಾಗರಾಜಯ್ಯ

'ಥಟ್ ಅಂತ ಹೇಳಿ' 5 ಸಾವಿರ ಸಂಚಿಕೆಯ ವಿಶೇಷ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಈಶ್ವರ್ ಖಂಡ್ರೆ, ಎಸ್.ವಿ. ಸುರೇಶ್, ಶಶಿಕಾಂತ ಎಸ್. ಉಡಿಕೇರಿ, ರೇವತಿ ಕಾಮತ್, ಆಯೋಜನೆ: ದೂರದರ್ಶನ ಚಂದನ ವಾಹಿನಿ, ಸ್ಥಳ: ಕೃಷಿ ವಿಶ್ವವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಳಿಗ್ಗೆ 10.30

ಗುರುವಂದನಾ ಸಮಾರಂಭ: ಅತಿಥಿಗಳು: ಗುರುರಾಜ್ ಎಸ್. ದಾವಣಗೆರೆ, ಮಂಜೇಗೌಡ, ಅಧ್ಯಕ್ಷತೆ: ಲಕ್ಷ್ಮೀಪ್ರಸನ್ನ ಎಚ್.ಆರ್., ಆಯೋಜನೆ ಹಾಗೂ ಸ್ಥಳ: ವಿದ್ಯಾ ಸೌಂದರ್ಯ ಪದವಿಪೂರ್ವ ಕಾಲೇಜು, ಪೀಣ್ಯ, ಬೆಳಿಗ್ಗೆ 11

'ಜ್ಞಾನಭಾರತಿ-1' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಎಚ್.ಎನ್. ಸುಬ್ರಮಣ್ಯ, ಅತಿಥಿಗಳು: ವಿ. ವೆಂಕಟಶಿವಾ ರೆಡ್ಡಿ, ಬೈರಮಂಗಲ ರಾಮೇಗೌಡ, ಪುಸ್ತಕ ಪರಿಚಯ: ಅರವಿಂದ್, ಆಯೋಜನೆ: ಜೆ.ಸಿ. ನಾರಾಯಣಪ್ಪ ಕುಟುಂಬ, ಕದಂಬ ಪ್ರಕಾಶನ, ಸ್ಥಳ: ಡಾ.ಎಚ್. ನರಸಿಂಹಯ್ಯ ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

'ಗ್ರೇಟರ್ ಬೆಂಗಳೂರು ಆಡಳಿತ (ಜಿಬಿಎ) ಕಾಯ್ದೆ ಬೆಂಗಳೂರಿಗೆ ಫಲ ನೀಡಬಹುದೇ?' ವಿಷಯದ ಬಗ್ಗೆ ಚರ್ಚೆ: ರವಿಚಂದರ್ ವಿ., ತೇಜಸ್ವಿ ಸೂರ್ಯ, ರಿಜ್ವಾನ್ ಅರ್ಷದ್, ಶ್ರೀಕಾಂತ್ ವಿಶ್ವನಾಥನ್, ಆಯೋಜನೆ: ಜನಾಗ್ರಹ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11

ಭಾರತೀಯ ಸಂಗೀತ ಉತ್ಸವ: ಅತಿಥಿ: ಸುಶೀಲಾ ಮೆಹ್ತಾ, ಎ.ಎನ್. ಯಲ್ಲಪ್ಪ ರೆಡ್ಡಿ, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್ತು, ರಾಜರಾಜೇಶ್ವರಿ ಕಲಾನಿಕೇತನ, ಬೆಂಗಳೂರು ಪರಿಸರ ಟ್ರಸ್ಟ್, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4

ಎಂ.ಎ. ರಾಮಾನುಜ ಅಯ್ಯಂಗಾರ್ ದತ್ತಿ ಉಪನ್ಯಾಸ: 'ನಾ.ಕಸ್ತೂರಿ ಅವರ ಸಾಹಿತ್ಯ' ವಿಷಯದ ಬಗ್ಗೆ: ಎಚ್.ಎಸ್. ಸತ್ಯನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಎರಡು ನಾಟಕಗಳ ಪ್ರದರ್ಶನ: ಸಂಜೆ 5ಕ್ಕೆ 'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ, ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಸಂಜೆ 7.30ಕ್ಕೆ **'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ, ರಚನೆ:** ರಾಜೇಂದ್ರ ಕಾರಂತ್, ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಡಾ.ಸಿ. ಅಶ್ವತ್ಥ ಕಲಾ ಭವನ, ಎನ್. ಆರ್. ಕಾಲೊನಿ

'ಬೇಗ್ ಬಾರೋ ಅಳಿಯ' ಹಾಸ್ಯ ನಾಟಕ: ರಚನೆ: ಎಂ.ಎಸ್. ನರಸಿಂಹಮೂರ್ತಿ, ನಿರ್ದೇಶನ: ಹನು ರಾಮಸಂಜೀವ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ನಾಣಿ ಅಂಗಳ, ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ 2ನೇ ಹಂತ, ಸಂಜೆ 5.15 ಮತ್ತು 7.30

'ವಿಸ್ಪರ್ಸ್ ಆಫ್ ದಿ ಸೋಲ್' ಏಕವ್ಯಕ್ತಿ ಕಲಾ ಪ್ರದರ್ಶನ: ಸಯೀದಾ ಅಲಿ, ಅತಿಥಿಗಳು: ಎಸ್.ಜಿ. ವಾಸುದೇವ್, ನಳಿನಿ ಮಾಳವೀಯ, ಆಯೋಜನೆ: ಆರ್ಟಿಲ್ಲ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 5.30

'ಕರಕುಶಲ ಶೈಲಿಯಿಂದ ಕೈಗಾರಿಕಾ ಶೈಲಿವರೆಗೆ: ಸಿಂಧೂ-ಸರಸ್ವತಿ ನಾಗರಿಕತೆಯ ಸೆರಾಮಿಕ್ ತಂತ್ರಜ್ಞಾನದ ಆಯಾಮಗಳು' ವಿಷಯದ ಬಗ್ಗೆ ಉಪನ್ಯಾಸ: ಕೆ. ಕೃಷ್ಣನ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 6

ಸಂಸ್ಥಾಪನಾ ದಿನಾಚರಣೆ: ಸಂಗೀತ ಚಿಕಿತ್ಸೆ ಕುರಿತು ಪ್ರಾತ್ಯಕ್ಷಿಕೆ-ನಿರೂಪಣೆ ಸಹಿತ ಯುಗಳ ಗಾಯನ: ಡಾ. ಜಯಲಕ್ಷ್ಮಿ ಎಚ್.ಕೆ., ಡಾ. ರೇಖಾ ಶ್ರೀರಾಮಚಂದ್ರಮೂರ್ತಿ, ಪಿಟೀಲು: ಪಿ.ಎಸ್. ಉಷಾ, ಮೃದಂಗ: ಅನಿರುದ್ಧ ವಾಸುದೇವ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6

ಜಯಪ್ರಕಾಶ್ ನಾರಾಯಣ ಅವರ ಜನ್ಮ ದಿನದ ಅಂಗವಾಗಿ 'ಜೆ. ಪಿ. ಪ್ರಶಸ್ತಿ' ಪ್ರದಾನ: ಬರಗೂರು ರಾಮಚಂದ್ರಪ್ಪ, ಉದ್ಘಾಟನೆ: ಟಿ.ಎನ್. ಸೀತಾರಾಮ್, ಅಧ್ಯಕ್ಷತೆ: ಬಿ.ಆರ್. ಪಾಟೀಲ, ಪ್ರಶಸ್ತಿ ಪುರಸ್ಕೃತರು: ವೈ.ಎಸ್.ವಿ. ದತ್ತ, ಉಪಸ್ಥಿತಿ: ಬಿ.ಎಲ್. ಶಂಕರ್, ಮೋಹನ್ ಕೊಂಡಜ್ಜಿ, ಆಯೋಜನೆ: ಭಾರತ ಯಾತ್ರಾ ಕೇಂದ್ರ, ಲೋಕನಾಯಕ ಜೆ.ಪಿ. ವಿಚಾರ ವೇದಿಕೆ, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 5.30


ವೈ.ಎಸ್.ವಿ. ದತ್ತ

ಹರಿನಾಮ ಸಂಕೀರ್ತನೆ: ರಾಮರಕ್ಷಿತ್ ಮತ್ತು ಸಂಗಡಿಗರು, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ಅಮೃತನಗರ, ಬ್ಯಾಟರಾಯನಪುರ, ಸಂಜೆ 6

ಊಂಜಲ್ ಸಂಗೀತೋತ್ಸವ: ಗಾಯನ: ಸಹನಾ ವಾದಿರಾಜ್, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಎಂ.ಕೆ. ವಾಸವಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

ದಾಸವಾಣಿ: ವಿಠಲ್ ಎಸ್.ಎಸ್., ಆಯೋಜನೆ ಹಾಗೂ ಸ್ಥಳ: ವೆಂಕಟೇಶ್ವರ ದೇವಸ್ಥಾನ, ಬಿಇಎಂಎಲ್ ಬಡಾವಣೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕಂಡಕಂಡಲ್ಲಿ ಕಸ ಚೆಲ್ಲಾಪಿಲ್ಲಿ



ನಗರದ ವಿಶ್ವೇಶ್ವರಯ್ಯ ಲೇಔಟ್‌ನ ದೊಡ್ಡಬಸ್ತಿ ಮುಖ್ಯರಸ್ತೆಯಲ್ಲಿ ವಿಲೇವಾರಿಯಾಗದೆ ಬಿದ್ದಿರುವ ಕಸದ ರಾಶಿ

ಪ್ರಜಾವಾಣಿ ಚಿತ್ರಗಳು


ಸೊನ್ನೇನಹಳ್ಳಿ ಬಳಿ ಕಸದ ರಾಶಿ ರಸ್ತೆಯನ್ನು ಆವರಿಸಿಕೊಂಡಿದೆ


ವಿವೇಕನಗರದ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿನ ಕಸದ ರಾಶಿ


ಆಸ್ಟಿನ್ ಟೌನ್ ಮುಖ್ಯ ರಸ್ತೆಯಲ್ಲಿ ವಿಲೇವಾರಿಯಾಗದ ಕಸದ ರಾಶಿ

ರಸ್ತೆಯಲ್ಲಿ ಕಸ ಕಂಡರೆ ಫೋಟೊ ಕಳುಹಿಸಿ

ನಗರದ ರಸ್ತೆಗಳ ಬದಿಯಲ್ಲಿ, ಪಾದಚಾರಿ ಮಾರ್ಗದಲ್ಲಿ ತ್ಯಾಜ್ಯದ ರಾಶಿ ಕಂಡು ಬಂದರೆ ಅವುಗಳ ಫೋಟೊ ತೆಗೆದು 'ಪ್ರಜಾವಾಣಿ'ಗೆ ಕಳುಹಿಸಿ. ವಾಟ್ಸ್‌ಆ್ಯಪ್ **9606038256**

ಲಕ್ಕವಳ್ಳಿ ಜಲಾಶಯಕ್ಕೆ ಹರಿಯಲಿದ್ದಾಳೆ ತುಂಗೆ

ಹದಿನೈದು ವರ್ಷದ ಬಳಿಕ ಸಾಕಾರ
ಮೇ ತಿಂಗಳಲ್ಲಿ ಟ್ರಯಲ್ ರನ್

• ವೆಂಕಟೇಶ ಜಿ.ಎಚ್

ಶಿವಮೊಗ್ಗ: ಭದ್ರಾ ಮೇಲ್ದಂಡೆ ಯೋಜನೆ ಅಡಿ ಗಾಜನೂರಿನ ತುಂಗಾ ಜಲಾಶಯದಿಂದ ನಾಲೆಯ ಮೂಲಕ ಲಕ್ಕವಳ್ಳಿಯ ಭದ್ರಾ ಜಲಾಶಯಕ್ಕೆ 17.4 ಟಿಎಂಸಿ ಅಡಿ ನೀರು ಹರಿಸುವ ಯೋಜನೆಯ ಕಾಮಗಾರಿ ಅಂತಿಮ ಹಂತ ತಲುಪಿದೆ. ಬೇಸಿಗೆಯಲ್ಲಿ ಪ್ರಾಯೋಗಿಕವಾಗಿ ನೀರು ಹರಿಸುವ (ಟ್ರಯಲ್ ರನ್) ವಿಶ್ವೇಶ್ವರಯ್ಯ ಜಲ ನಿಗಮ (ವಿಜೆಎನ್‌ಎಲ್) ಸಿದ್ಧತೆ ನಡೆಸಿದೆ.

ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲ್ಲೂಕಿನ ಮುತ್ತಿನಕೊಪ್ಪ ಬಳಿ ತುಂಗಾ ಜಲಾಶಯದ ಹಿನ್ನೀರನ್ನು ಆರಂಭದಲ್ಲಿ ಗುರುತ್ವ ಬಲ, ನಂತರ ಪಂಪ್ ಮಾಡಿ ನಾಲೆಗೆ ಹರಿಸಿ, ಅಲ್ಲಿಂದ 11.2 ಕಿ.ಮೀ. ಅಂತರದ ನೆಲದಡ್ಡಿಗೆ ಕೊಂಡೊಯ್ದು, ಗುರುತ್ವ ಕಾಲುವೆಯ ಮೂಲಕ ಭದ್ರಾ ಜಲಾಶಯಕ್ಕೆ ಹರಿಸಲಾಗುತ್ತದೆ. ಇದಕ್ಕಾಗಿ ಕೆ.ಕಣಬೂರು, ಸಾತಕುಳಿ ಬಳಿ ಪಂಪ್‌ಹೌಸ್ ನಿರ್ಮಿಸಲಾಗಿದೆ.

> ಪ್ರಾಯೋಗಿಕವಾಗಿ ನೀರು ಹರಿಸಲು ಬಾಕಿ ಉಳಿದಿರುವ ಕಾಮಗಾರಿಗಳಿಂದ ತೊಂದರೆ ಇಲ್ಲ. ಮೇ ತಿಂಗಳಲ್ಲಿ ಟ್ರಯಲ್ ರನ್‌ಗೆ ಯೋಜಿಸಲಾಗಿದೆ
> **ಎಚ್.ಎನ್.ಗೋವರ್ಧನ್**
> ವಿಜೆಎನ್‌ಎಲ್ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್

'ಕಣಬೂರು ಪಂಪ್‌ಹೌಸ್ ಪೂರ್ಣಗೊಂಡಿದೆ. ಸಾತಕುಳಿಯಲ್ಲಿ ಕಾಮಗಾರಿ ಅಂತಿಮ ಹಂತದಲ್ಲಿದೆ. ಪಂಪ್ ಅಳವಡಿಕೆ, ವಿದ್ಯುತ್ ಟವರ್ ಹಾಕುವ ಕೆಲಸವೂ ಮುಗಿದಿದೆ. ಈಗ ಪಂಪ್‌ಹೌಸ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅರಣ್ಯ ಇಲಾಖೆಯಿಂದ ಅನುಮತಿ ಹಾಗೂ ರೈಲ್ವೆ ಲೈನ್‌ನಲ್ಲಿ ಒಂದು ಪೈಪ್ ಅಳವಡಿಕೆ ಕಾರ್ಯ ಮಾತ್ರ ಬಾಕಿ ಉಳಿದಿದೆ' ಎಂದು ವಿಜೆಎನ್‌ಎಲ್ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಚ್.ಎನ್.ಗೋವರ್ಧನ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

15 ವರ್ಷಗಳ ಅವಧಿ: ಪ್ರತಿ ವರ್ಷ ಜೂನ್‌ನಿಂದ ಅಕ್ಟೋಬರ್‌ವರೆಗೆ ತುಂಗಾ ಹಿನ್ನೀರಿನಿಂದ ಭದ್ರಾ ಜಲಾಶಯಕ್ಕೆ ನೀರು ಹರಿಸುವ ಯೋಜನೆಗೆ, ₹ 324 ಕೋಟಿ ವೆಚ್ಚದ ಈ ಕಾಮಗಾರಿಗೆ 2008ರಲ್ಲಿ ಟೆಂಡರ್ ಕರೆಯಲಾಗಿತ್ತು. 2010ರಲ್ಲಿ ಕೆಲಸ ಆರಂಭವಾಗಿದೆ. ನಿಗದಿಯಂತೆ 2011ರಲ್ಲೇ ಕೆಲಸ ಮುಗಿಯಬೇಕಿತ್ತು. ಅರಣ್ಯ ಪ್ರದೇಶದಲ್ಲಿ ಕಾಮಗಾರಿಗೆ ಅನುಮತಿ, ಹಣ ಬಿಡುಗಡೆ ವಿಳಂಬದ ಕಾರಣ ಆಗಿಲ್ಲ. ಜೂನ್ 2020ರ ನಂತರ ಕಾಮಗಾರಿ ವೇಗ ಪಡೆದಿದ್ದು, ಈಗ 15 ವರ್ಷಗಳ ನಂತರ ಯೋಜನೆ ಅಂತಿಮ ಹಂತ ತಲುಪಿದೆ.

ಭದ್ರಾ ಮೇಲ್ದಂಡೆ ಯೋಜನೆ ಜಾರಿ ಭಾಗವಾಗಿ 2019ರಿಂದ ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಸಾಗರಕ್ಕೆ ಭದ್ರಾ ಜಲಾಶಯದಿಂದ ಬೇಸಿಗೆಯಲ್ಲಿ ಮೂರು ಟಿಎಂಸಿ ಅಡಿ ನೀರು ಹರಿಸಲಾಗುತ್ತಿದೆ.



ಗಾಜನೂರಿನ ತುಂಗಾ ಜಲಾಶಯದಿಂದ ಭದ್ರಾ ಮೇಲ್ದಂಡೆ ಯೋಜನೆಗೆ ನೀರು ಕೊಂಡೊಯ್ಯಲು ಕೆ.ಕಣಬೂರು ಬಳಿ ನಿರ್ಮಿಸಿರುವ ಇಂಟೇಕ್ ಕೆನಾಲ್

ತುಂಗೆಯ ಪಾಲೇ ಅಧಿಕ!

ಭದ್ರಾ ಮೇಲ್ದಂಡೆ ಯೋಜನೆಯಡಿ ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ತುಮಕೂರು ಜಿಲ್ಲೆಗಳ ಬಯಲುಸೀಮೆಯ 2,25,515 ಹೆಕ್ಟೇರ್ ಪ್ರದೇಶಕ್ಕೆ ಕಾಲುವೆ, ಕೆರೆ ತುಂಬಿಸುವ ಹನಿ ನೀರಾವರಿ ಮೂಲಕ 29.9 ಟಿಎಂಸಿ ಅಡಿ ನೀರು ಹರಿಸಲಾಗುತ್ತದೆ.

ಅದಕ್ಕೆ ಭದ್ರಾ ನದಿಯಿಂದ 12.5 ಟಿಎಂಸಿ ಅಡಿ ಹಾಗೂ ತುಂಗಾದಿಂದ 17.4 ಟಿಎಂಸಿ ಅಡಿ ನೀರು ಹಂಚಿಕೆ ಮಾಡಲಾಗಿದೆ. ಹೀಗಾಗಿ ಭದ್ರಾ ಮೇಲ್ದಂಡೆ ಆದರೂ ಯೋಜನೆಗೆ ತುಂಗಾ ನದಿಯ ನೀರಿನ ಪಾಲು ಹೆಚ್ಚಿದೆ.

ಸುದ್ದಿ 2 ನಿಮಿಷ

ಸಮೀಕ್ಷೆಯಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಹಿನ್ನಡೆ: ವಿಜಯೇಂದ್ರ

ಬೆಂಗಳೂರು: ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯಿಂದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿಯುವಂತಾಗಿದ್ದು, ಶಿಕ್ಷಕರು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಸರ್ಕಾರ ಪೂರ್ವ ತಯಾರಿ ಇಲ್ಲದೆ ತರಾತುರಿಯಲ್ಲಿ ಸಮೀಕ್ಷೆ ನಡೆಸುತ್ತಿದೆ. ಇದರಿಂದ ಗ್ರಾಮೀಣ ಸರ್ಕಾರಿ ಶಾಲೆಗಳ ವ್ಯವಸ್ಥೆಯಲ್ಲೇ ಏರುಪೇರಾಗಿದೆ. ಶಿಕ್ಷಕರಿಗಂತೂ ಕಿರುಕುಳ ನೀಡಿ ಸಮೀಕ್ಷೆ ಕಾರ್ಯದಲ್ಲಿ ತೊಡಗಿಸಲಾಗಿದೆ ಎಂದು ದೂರಿದರು.

ರಜೆಗಳನ್ನು ವಿಸ್ತರಿಸುವುದರಿಂದ ಪಾಠ ನಿಂತು ಹೋಗಿದೆ. ವಿದ್ಯಾರ್ಥಿಗಳಿಗೆ ಪ್ರತಿಯೊಂದು ದಿನವೂ ಮುಖ್ಯ. ಸಮೀಕ್ಷೆಯಲ್ಲಿ ತೊಡಗಿರುವ ಶಿಕ್ಷಕರು ಇನ್ನಿಲ್ಲದ ಸಮಸ್ಯೆ ಎದುರಿಸುತ್ತಿದ್ದಾರೆ. ಅವರ ಕಷ್ಟ ಆಲಿಸುವ ವ್ಯವಧಾನ ಸರ್ಕಾರಕ್ಕೆ ಇಲ್ಲವಾಗಿದೆ ಎಂದು ವಿಜಯೇಂದ್ರ ಹೇಳಿದರು.

ಈ ಸರ್ಕಾರದಲ್ಲಿ ಎಲ್ಲವೂ ಗೊಂದಲಮಯವಾಗಿದೆ. ಮೊದಲೇ ರೈತರು ಸಂಕಷ್ಟದಲ್ಲಿದ್ದಾರೆ. ಕಲ್ಯಾಣ ಕರ್ನಾಟಕ ಪ್ರದೇಶ ಮಳೆ ಮತ್ತು ಪ್ರವಾಹದಿಂದ ತತ್ತರಿಸಿದೆ. ಕೃಷಿ ಸಚಿವರು ಅಲ್ಲಿಗೆ ಭೇಟಿ ನೀಡಿ, ಪರಿಸ್ಥಿತಿಯನ್ನು ಅವಲೋಕಿಸಿಲ್ಲ. ಕೃಷಿ ಸಚಿವರಿಗೆ ಅಲ್ಲಿಗೆ ಹೋಗಲು ಪುರುಸೊತ್ತು ಇಲ್ಲವೆಂದಾದರೆ ಸಚಿವರಾಗಿ ಏಕೆ ಇರಬೇಕು. ರೈತರಿಗೆ ಸ್ಪಂದಿಸದೇ ಇದ್ದರೆ ಈ ಸಚಿವರು ರೈತರ ಪಾಲಿಗೆ ಬದುಕಿದ್ದೂ ಸತ್ತಂತೆ ಎಂದು ಕಿಡಿಕಾರಿದರು.



'ಬಿಜೆಪಿ ನಿಯೋಗ ಕಲ್ಯಾಣ ಕರ್ನಾಟಕಕ್ಕೆ ಹೋಗಿರದಿದ್ದರೆ, ಸಿ.ಎಂ ಬೆಂಗಳೂರಿನಲ್ಲೇ ಕುಳಿತು ಅವಲೋಕನ ಮಾಡುತ್ತಿದ್ದರು. ನಾವು ಎರಡು ತಂಡಗಳಲ್ಲಿ ಬೀದರ್, ಕಲಬುರಗಿ, ರಾಯಚೂರು ಪ್ರವಾಸ ಮಾಡಿ, ರೈತರ ಸಂಕಷ್ಟಕ್ಕೆ ಸ್ಪಂದಿಸಿದೆವು. 10 ದಿನದಲ್ಲಿ ಪರಿಹಾರದ ಮೊತ್ತ ಪಾವತಿಸುವುದಾಗಿ ಸಚಿವ ಕೃಷ್ಣಬೈರೇಗೌಡ ಹೇಳಿದ್ದಾರೆ. ರೈತರು ಇನ್ನೆಷ್ಟು ದಿನ ಕಾಯಬೇಕು' ಎಂದು ಪ್ರಶ್ನಿಸಿದರು.

ರಾಜ್ಯೋತ್ಸವ ಪ್ರಶಸ್ತಿ: ತಜ್ಞರ ಸಲಹಾ ಸಮಿತಿ ರಚನೆ

ಬೆಂಗಳೂರು: ಈ ಸಾಲಿನ 'ರಾಜ್ಯೋತ್ಸವ ಪ್ರಶಸ್ತಿ'ಗೆ ವಿವಿಧ ಕ್ಷೇತ್ರಗಳ ಸಾಧಕರ ಆಯ್ಕೆಗೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆಯಲ್ಲಿ ಒಟ್ಟು 64 ಮಂದಿ ಒಳಗೊಂಡ ಸಲಹಾ ಸಮಿತಿಯನ್ನು ರಚಿಸಲಾಗಿದೆ.

ಈ ಸಮಿತಿಯು ಸಾಹಿತ್ಯ, ವೈದ್ಯಕೀಯ, ಕೃಷಿ, ಸಮಾಜಸೇವೆ, ಚಲನಚಿತ್ರ, ಕ್ರೀಡೆ ಸೇರಿ ವಿವಿಧ ಕ್ಷೇತ್ರಗಳ ತಜ್ಞರನ್ನು ಒಳಗೊಂಡಿದೆ. ವಿವಿಧ ಅಕಾಡೆಮಿ ಹಾಗೂ ಪ್ರಾಧಿಕಾರಗಳ ಪ್ರತಿನಿಧಿಗಳು ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಈ ವರ್ಷ 70 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಈ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಪ್ರಕ್ರಿಯೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೈಬಿಟ್ಟಿದೆ. ಸಲಹಾ ಸಮಿತಿಯೇ ವಿವಿಧ ಕ್ಷೇತ್ರಗಳಲ್ಲಿ ಸಾಧಕರನ್ನು ಮಾಡುತ್ತದೆ. ಪ್ರಶಸ್ತಿಯು ತಲಾ ₹ 5 ಲಕ್ಷ ನಗದು ಹಾಗೂ 25 ಗ್ರಾಂ. ಚಿನ್ನದ ಪದಕ ಒಳಗೊಂಡಿರಲಿದೆ.

ಚಿಟಿಕೆ ಸುದ್ದಿ

ಶಾಂತಕುಮಾರಿ, ಆರ್.ಗಣೇಶ್‌ಗೆ 'ಅ.ನ.ಕೃ ಪ್ರಶಸ್ತಿ'



ಶಾಂತಕುಮಾರಿ



ಗಣೇಶ್

ಬೆಂಗಳೂರು: ಅನಕೃ ಪ್ರತಿಷ್ಠಾನ ನೀಡುವ 'ಅನಕೃ ಪ್ರಶಸ್ತಿ'ಗೆ ಲೇಖಕಿ ಎಲ್.ವಿ. ಶಾಂತಕುಮಾರಿ ಹಾಗೂ ವಿದ್ವಾಂಸ ಆರ್. ಗಣೇಶ್ ಆಯ್ಕೆಯಾಗಿದ್ದಾರೆ.

2024 ಮತ್ತು 2025ನೇ ಸಾಲಿನ ಪ್ರಶಸ್ತಿಯನ್ನು ಪ್ರತಿಷ್ಠಾನ ಪ್ರಕಟಿಸಿದೆ. ಈ ಪ್ರಶಸ್ತಿಯು ತಲಾ ₹50 ಸಾವಿರ ನಗದು ಒಳಗೊಂಡಿದೆ.

ನ.9ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ನೀಲಿ ಧ್ವಜಕ್ಕೆ ಬೆಂಕಿ, ಪ್ರತಿಭಟನೆ

ಬೀದರ್: ಜಿಲ್ಲೆಯ ಹುಲಸೂರ ತಾಲ್ಲೂಕಿನ ಗಡಿರಾಯಪಳ್ಳಿಯಲ್ಲಿ ಗುರುವಾರ ತಡರಾತ್ರಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರ ಬಳಿಯಿದ್ದ ನೀಲಿ ಧ್ವಜಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಇದನ್ನು ಖಂಡಿಸಿ ವಿವಿಧ ದಲಿತ ಸಂಘಟನೆಗಳ ಕಾರ್ಯಕರ್ತರು ಶುಕ್ರವಾರ ಗ್ರಾಮದಲ್ಲಿ ಪ್ರತಿಭಟಿಸಿದರು.

ಕಿಡಿಗೇಡಿಗಳ ಬಂಧನಕ್ಕೆ ಒತ್ತಾಯಿಸಿದರು. ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಬಂದು, ಕಠಿಣ ಕ್ರಮದ ಭರವಸೆ ನೀಡಿದ ನಂತರ ಪ್ರತಿಭಟನೆ ಕೈಬಿಟ್ಟರು. ಭಾರತೀಯ ದಲಿತ ಪ್ಯಾಂಥರ್, ದಸಂಸ, ದಲಿತ ಸೇನಾ, ಗ್ರಾಮ ಕ್ರಾಂತಿ ಸೇನೆ, ಭೀಮ್ ಆರ್ಮಿ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಭರತ್ ಕುಮ್ಡೇಲುಗೆ ನ್ಯಾಯಾಂಗ ಬಂಧನ

ಮಂಗಳೂರು: ಬಂಟ್ವಾಳದಲ್ಲಿ 2017ನೇ ಸಾಲಿನಲ್ಲಿ ನಡೆದಿದ್ದ ಎಸ್‌ಡಿಪಿಐ ಕಾರ್ಯಕರ್ತ ಕಲಾಯಿ ಅಶ್ರಫ್ ಕೊಲೆ ಪ್ರಕರಣದ ಆರೋಪಿ, ವಿಎಚ್‌ಪಿ ಮುಖಂಡ ಭರತ್ ಕುಮ್ಡೇಲು ಶುಕ್ರವಾರ ನ್ಯಾಯಾಲಯಕ್ಕೆ ಹಾಜರಾಗಿದ್ದು, ಕೋರ್ಟ್ ಇದೇ 25ರ ವರೆಗೆ ನ್ಯಾಯಾಂಗ ಬಂಧನ ವಿಧಿಸಿದೆ.



ಭರತ್ ಕುಮ್ಡೇಲು

'ಈ ಪ್ರಕರಣದಲ್ಲಿ ಕೋರ್ಟ್‌ಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ. 'ಈತನ ವಿರುದ್ಧ ಬಂಟ್ವಾಳ ಠಾಣೆಯಲ್ಲಿ 13, ಪುತ್ತೂರು ಮತ್ತು ಉಪ್ಪಿನಂಗಡಿ ಠಾಣೆಗಳಲ್ಲಿ ತಲಾ ಒಂದು ಪ್ರಕರಣಗಳಿವೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕೊಳತ್ತಮಜಲು ನಿವಾಸಿ ಅಬ್ದುಲ್ ರಹಿಮಾನ್ ಅವರನ್ನು ಬಂಟ್ವಾಳ ತಾಲ್ಲೂಕಿನ ಕುರಿಯಾಳ ಗ್ರಾಮದ ಇರಾಕೋಡಿಯಲ್ಲಿ ಇದೇ ವರ್ಷ ಮೇ 27ರಂದು ಹತ್ಯೆ ಮಾಡಲಾಗಿದ್ದು, ಈ ಪ್ರಕರಣಲ್ಲೂ ಭರತ್ ಕುಮ್ಡೇಲು ಆರೋಪಿ.

ರಿಯಾಜ್‌ಗೆ ಜಾಮೀನು

ಉಡುಪಿ: ದ್ವೇಷ ಭಾಷಣ ಪ್ರಕರಣದಲ್ಲಿ ಜಾಮೀನು ಷರತ್ತು ಉಲ್ಲಂಘಿಸಿದ ಆರೋಪದಲ್ಲಿ ಎಸ್‌ಡಿಪಿಐ ಮುಖಂಡ ರಿಯಾಜ್ ಕಡಂಬುಗೆ ಉಡುಪಿ ಕೋರ್ಟ್ ಗುರುವಾರ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿತ್ತು. ಶುಕ್ರವಾರ ಅವರಿಗೆ ನ್ಯಾಯಾಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.



ರಿಯಾಜ್

ರಿಯಾಜ್ ವಿರುದ್ಧ ಉಡುಪಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಜಾಮೀನು ಪಡೆದಿದ್ದರು. ಜಾಮೀನು ಷರತ್ತು ಉಲ್ಲಂಘಿಸಿದ ಕಾರಣ ಮತ್ತೆ ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು.

ಕೇಂದ್ರ ಅರಣ್ಯ ಸಚಿವಾಲಯಕ್ಕೆ ಮತ್ತೆ ಪ್ರಸ್ತಾವ ಸಲ್ಲಿಸಿದ ಕರ್ನಾಟಕ ಸರ್ಕಾರ

ಎತ್ತಿನಹೊಳೆಗೆ 432 ಎಕರೆ ಅರಣ್ಯ ಬಳಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಎತ್ತಿನಹೊಳೆ ಯೋಜನೆಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ 432 ಎಕರೆ ಅರಣ್ಯ ಬಳಕೆಗೆ ತಾತ್ವಿಕ ಅನುಮೋದನೆ ನೀಡುವಂತೆ ಕೋರಿ ಕರ್ನಾಟಕ ಸರ್ಕಾರವು ಕೇಂದ್ರ ಅರಣ್ಯ ಸಚಿವಾಲಯಕ್ಕೆ ಮತ್ತೆ ಪ್ರಸ್ತಾವ ಸಲ್ಲಿಸಿದೆ.

ಹಾಸನ, ತುಮಕೂರು ಜಿಲ್ಲೆಗಳಲ್ಲಿ ಗುರುತ್ವಾಕರ್ಷಣೆ ಕಾಲುವೆ ನಿರ್ಮಿಸಲು ತುಮಕೂರಿನ ಬೆಣ್ಣೆಹಳ್ಳದ ಕಾವಲ್, ಕಂಚಿಗಾನಹಳ್ಳಿ ಹಾಗೂ ಹಾಸನದ ಐದಹಳ್ಳಿ ಕಾವಲ್, ಕುಮರಿಹಳ್ಳಿ ಗ್ರಾಮದ ಅರಣ್ಯ ಭೂಮಿ ಬಳಸಲು ಒಪ್ಪಿಗೆ ಕೊಡಬೇಕು ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಅರಣ್ಯ ಸಚಿವಾಲಯದ ಕಾರ್ಯದರ್ಶಿಗೆ ಅಕ್ಟೋಬರ್ 8ರಂದು ಪ್ರಸ್ತಾವ ಸಲ್ಲಿಸಿದ್ದಾರೆ.

432 ಎಕರೆ ಅರಣ್ಯ ಬಳಕೆಗೆ ಒಪ್ಪಿಗೆ ಕೋರಿ ರಾಜ್ಯ ಸರ್ಕಾರ ಈ ಹಿಂದೆ ಪ್ರಸ್ತಾವ ಸಲ್ಲಿಸಿತ್ತು. ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ವ್ಯಾಪಕ ಪ್ರಮಾಣದಲ್ಲಿ ನಿಯಮ ಉಲ್ಲಂಘನೆ ಆಗಿದೆ ಎಂಬ ಕಾರಣ ನೀಡಿ ಕೇಂದ್ರ ಅರಣ್ಯ ಸಲಹಾ ಸಮಿತಿ ಅನುಮೋದನೆ ಕೊಟ್ಟಿರಲಿಲ್ಲ. ನಿಯಮ ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಹಾಗೂ ದಂಡ ವಿಧಿಸಬೇಕು ಎಂದು ತಾಕೀತು ಮಾಡಿತ್ತು. ಇದರಿಂದಾಗಿ, ಎತ್ತಿನಹೊಳೆ ಕಾಮಗಾರಿ ಸ್ಥಗಿತವಾಗಿತ್ತು.

ಆ ಬಳಿಕ ಹಾಸನ ಹಾಗೂ ತುಮಕೂರು ಜಿಲ್ಲೆಗಳ ಡಿಸಿಎಫ್‌ಗಳು ಸೆಪ್ಟೆಂಬರ್‌ನಲ್ಲಿ ಯೋಜನಾ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. 'ನಿಯಮ ಉಲ್ಲಂಘಿಸಿದವರ ವಿರುದ್ಧ 2019ರಲ್ಲೇ ಎಫ್‌ಐಆರ್ ದಾಖಲಿಸಲಾಗಿದೆ. ಬಯಲುಸೀಮೆ ಜಿಲ್ಲೆಗಳ ನೀರಿನ ದಾಹ ಇಂಗಿಸಲು ಈ ಯೋಜನೆ ಅಗತ್ಯ' ಎಂದು ಶಿಫಾರಸು ಮಾಡಿದ್ದರು.

'ತುಮಕೂರು ಜಿಲ್ಲೆಯ ಮಾರಶೆಟ್ಟಿಹಳ್ಳಿ ಮೀಸಲು ಅರಣ್ಯದಲ್ಲಿ ಕಾಲುವೆ ನಿರ್ಮಿಸಲಾಗುತ್ತಿದೆ. ಇದರಿಂದ ಕಾಡಿಗೆ ಭಾರಿ ಹಾನಿಯಾಗುತ್ತದೆ. ಇದನ್ನು ತಪ್ಪಿಸಲು ನೆಲದಡಿ ಕಾಲುವೆ ನಿರ್ಮಿಸಬೇಕು' ಎಂದು ಸಲಹಾ ಸಮಿತಿ ಸೂಚಿಸಿತ್ತು.

'ಕಾಲುವೆ ನಿರ್ಮಾಣಕ್ಕಾಗಿ 7,500 ಮರಗಳನ್ನು ಕಡಿಯಲು ಉದ್ದೇಶಿಸಲಾಗಿತ್ತು. ಇದೀಗ, ಈ ಭಾಗದಲ್ಲಿ ಕಾಲುವೆಯ ವಿನ್ಯಾಸ ಬದಲಿಸಲಾಗಿದೆ. 4,043 ಮರಗಳನ್ನಷ್ಟೇ ಕಡಿಯಲಾಗುತ್ತದೆ' ಎಂದು ತುಮಕೂರು ಡಿಸಿಎಫ್ ತಮ್ಮ ವರದಿಯಲ್ಲಿ ತಿಳಿಸಿದ್ದರು. 'ಈ ಅರಣ್ಯದಲ್ಲಿ ಭೂಗತ ಕಾಲುವೆ ನಿರ್ಮಾಣ ಕಾರ್ಯಸಾಧುವಲ್ಲ. ಇದರಿಂದಾಗಿ, ಭೂಕುಸಿತದಂತಹ ಸಮಸ್ಯೆಗಳು ಸೃಷ್ಟಿಯಾಗಬಹುದು. ವಿನ್ಯಾಸ ಬದಲಿಸಿದ್ದರಿಂದ ರಾಜ್ಯ ಸರ್ಕಾರಕ್ಕೆ ₹170 ಕೋಟಿ ಹೆಚ್ಚುವರಿ ಹೊರೆ ಆಗಲಿದೆ' ಎಂದು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

'ಕಂದಾಯ ದಾಖಲೆಗಳ ಆಧಾರದಲ್ಲಿ ರೈತರ ಸ್ವಾಧೀನದಲ್ಲಿದ್ದ ಜಾಗಗಳಲ್ಲಿ ಕಾಲುವೆ ನಿರ್ಮಾಣ ಕಾಮಗಾರಿ ನಡೆಸಲಾಗಿತ್ತು. ಈ ಪ್ರದೇಶವು ಅರಣ್ಯ ಭೂಮಿ ಎಂಬುದು ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳಿಗೆ ಗೊತ್ತಿರಲಿಲ್ಲ. ಇದು ಉದ್ದೇಶಪೂರ್ವಕ ಉಲ್ಲಂಘನೆ ಅಲ್ಲ. ಇದಕ್ಕಾಗಿ ಯಾವುದೇ ವ್ಯಕ್ತಿ ಅಥವಾ ಇಲಾಖೆಯನ್ನು ಹೊಣೆಗಾರರನ್ನಾಗಿ ಮಾಡಬಾರದು' ಎಂದು ಎಸಿಎಸ್ ಅವರು ಪ್ರಸ್ತಾವದಲ್ಲಿ ವಿನಂತಿಸಿದ್ದಾರೆ.

ಮೇಕೆದಾಟು ಯೋಜನೆ: ದೀಪಾವಳಿ ನಂತರ ವಿಚಾರಣೆ

ಪ್ರಸ್ತಾವಿತ ಮೇಕೆದಾಟು ಯೋಜನೆ ಕುರಿತ ಅರ್ಜಿಯ ವಿಚಾರಣೆಯನ್ನು ದೀಪಾವಳಿ ನಂತರ ನಡೆಸುವುದಾಗಿ ಸುಪ್ರೀಂ ಕೋರ್ಟ್ ಶುಕ್ರವಾರ ತಿಳಿಸಿತು.

ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ ಮಾಡಿದ ಮನವಿಯ ಮೇರೆಗೆ ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರ ಪೀಠವು ಕರ್ನಾಟಕದ ಅರ್ಜಿಯನ್ನು ಪರಿಗಣಿಸಲು ನಿರ್ಧರಿಸಿತು.

'ವಿಳಂಬವಾದಷ್ಟು ಯೋಜನಾ ವೆಚ್ಚದಲ್ಲಿ ಗಮನಾರ್ಹ ಏರಿಕೆ ಆಗಲಿದೆ. ಹೀಗಾಗಿ, ತುರ್ತಾಗಿ ಅರ್ಜಿ ವಿಚಾರಣೆ ನಡೆಸಬೇಕು' ಎಂದು ನಿಶಾಂತ್ ಪಾಟೀಲ ವಾದಿಸಿದರು.

'ಈ ಪ್ರಕರಣ ಸೆಪ್ಟೆಂಬರ್ 14ಕ್ಕೆ ವಿಚಾರಣೆ ಬರಬೇಕಿತ್ತು. ಆದರೆ, ಈವರೆಗೂ ವಿಚಾರಣೆಗೆ ಪಟ್ಟಿಯಾಗಿಲ್ಲ' ಎಂದರು.

708 ಹುದ್ದೆಗಳ ನೇಮಕಾತಿಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ಕಾರ್ಖಾನೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ರಾಜೀವ್ ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯ ಸೇರಿದಂತೆ ಎಂಟು ಸರ್ಕಾರಿ ಸಂಸ್ಥೆಗಳಲ್ಲಿ ಖಾಲಿ ಇರುವ 708 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಕೃಷಿ ಮಾರಾಟ ಇಲಾಖೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ತಾಂತ್ರಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಖಾಲಿ ಹುದ್ದೆಗಳಿಗೆ ಸ್ಪರ್ಧಾ ಪರೀಕ್ಷೆ ಮೂಲಕ ನೇಮಕ ಮಾಡಲಾಗುತ್ತಿದೆ. ಅ.9ರಿಂದ ನ.11ರವರೆಗೆ ಅರ್ಜಿ ಸಲ್ಲಿಸಬಹುದು. ಒಎಂಆರ್ ಆಧಾರಿತ ಪರೀಕ್ಷೆ, ಋಣಾತ್ಮಕ ಮೌಲ್ಯಮಾಪನ ಅಳವಡಿಸಲಾಗಿದ್ದು, ಪ್ರತಿ ತಪ್ಪು ಉತ್ತರಕ್ಕೆ ನಾಲ್ಕನೇ ಒಂದರಷ್ಟು (1/4) ಅಂಕ ಕಡಿತ ಮಾಡಲಾಗುತ್ತದೆ. ಒಂದೇ ಪಠ್ಯಕ್ರಮ ಇರುವ ವಿವಿಧ ಇಲಾಖೆಗಳ ಹುದ್ದೆಗಳಿಗೆ ಒಂದೇ ಪರೀಕ್ಷೆ ನಡೆಸಲಾಗುತ್ತದೆ.

ಕಲ್ಯಾಣ ಕರ್ನಾಟಕಕ್ಕೆ 321, ಮೂಲ ವೃಂದದ 387 ಹುದ್ದೆಗಳನ್ನು ಮೀಸಲಿಡಲಾಗಿದ್ದು, ಒಳ ಮೀಸಲಾತಿಯೂ ಅನ್ವಯವಾಗಲಿದೆ. ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಅರ್ಜಿಯಲ್ಲೇ ತಮ್ಮ ಗುಂಪು ನಮೂದಿಸಬೇಕು. ವಿವರಗಳಿಗೆ http://cetonline.Karnataka.gov.in/kea/ ಭೇಟಿ ನೀಡಬೇಕು ಎಂದು ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾಹಿತಿ ನೀಡಿದ್ದಾರೆ.

ಶೇಂಗಾ ಆವಕ...

ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ



ದಾವಣಗೆರೆಯಲ್ಲಿ ಶೇಂಗಾ ಆವಕ ಆರಂಭವಾಗಿದ್ದು, ರೈತರು ಮಾರಾಟಕ್ಕೆಂದು ಇಲ್ಲಿನ ಎಪಿಎಂಸಿ ಮಾರುಕಟ್ಟೆಗೆ ತಂದಿದ್ದ ಶೇಂಗಾವನ್ನು ಕಾರ್ಮಿಕರು ಶುಕ್ರವಾರ ಒಣಗಿಸಿ ಚೀಲಕ್ಕೆ ತುಂಬಿದರು

'ಎಐಸಿಸಿ ಕಚೇರಿ ಆವರಣದಲ್ಲಿ ಇಂದಿನಿಂದ ಧರಣಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ ಒಳಮೀಸಲಾತಿ ನೀಡುವ ಸಂದರ್ಭದಲ್ಲಿ ಅಲೆಮಾರಿಗಳಿಗೆ ಆಗಿರುವ ಅನ್ಯಾಯ ಖಂಡಿಸಿ ಎಐಸಿಸಿ ಕಚೇರಿ ಆವರಣದಲ್ಲಿ ಶನಿವಾರದಿಂದ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು' ಎಂದು ಕರ್ನಾಟಕ ಅಸ್ಪ್ರಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ತಿಳಿಸಿದೆ.

ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪದಾಧಿಕಾರಿಗಳು, 'ರಾಜ್ಯದ ಕಾಂಗ್ರೆಸ್ ಸರ್ಕಾರ ನಮಗೆ ಅನ್ಯಾಯ ಮಾಡಿದೆ. ಕೊನೆಯ ಭರವಸೆಯಾಗಿ ದೆಹಲಿಯ ಕದ ತಟ್ಟಲು ಬಂದಿದ್ದೇವೆ. 10 ದಿನಗಳಿಂದ ತಾಳ್ಮೆಯಿಂದ ಕಾಯುತ್ತಾ ಇದ್ದೇವೆ. ನಮ್ಮ ಹಕ್ಕಾದ ಶೇ 1ರಷ್ಟು ಮೀಸಲಾತಿ ಪಡೆಯದೆ ಮರಳುವುದಿಲ್ಲ ಎಂದು ಪಣ ತೊಟ್ಟಿದ್ದೇವೆ' ಎಂದರು.

'ನಮ್ಮ ಜನರಿಗೆ ಇಲ್ಲಿಯವರೆಗೆ ಸ್ವಾತಂತ್ರ್ಯ ಸಿಕ್ಕಿಲ್ಲ. ಹೆಚ್ಚಿನ ಜನರು ಪ್ಲಾಸ್ಟಿಕ್ ಶೀಟುಗಳಡಿ ವಾಸಿಸುತ್ತಿದ್ದೇವೆ. ನಮ್ಮ ಸಮುದಾಯದಲ್ಲಿ ಒಬ್ಬ ಉನ್ನತ ಅಧಿಕಾರಿ ಇಲ್ಲ. ಒಬ್ಬ ರಾಜಕೀಯ ಪ್ರತಿನಿಧಿಯೂ ಇಲ್ಲ. ಕೃಷಿ ಮಾಡಲು ಭೂಮಿ ಇಲ್ಲ, ವ್ಯಾಪಾರ ಮಾಡಲು ಬಂಡವಾಳ ಇಲ್ಲ. ಬಣ್ಣ ಕಟ್ಟಿ ಭಿಕ್ಷೆಗಾಗಿ ಊರೂರು ಅಲೆಯುತ್ತೇವೆ' ಎಂದು ಅವರು ಹೇಳಿದರು.

'ಮೈಸೂರು ದಸರಾದ ಸಂದರ್ಭದಲ್ಲಿ ಬಲೂನು ಮಾಡಲು ಕಲಬುರಗಿಯಿಂದ ಬಂದಿದ್ದ ಅಲೆಮಾರಿ ಕುಟುಂಬದ ಒಂಬತ್ತು ವರ್ಷದ ಬಾಲಕಿಯ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ. ಇಂತಹ ಘಟನೆಗಳು ನಿರಂತರವಾಗಿ ನಡೆಯುತ್ತಿವೆ. ಪೊಲೀಸರು ಆರೋಪಿಯನ್ನು ಹಿಡಿದಿದ್ದಾರೆ. ಆದರೆ, ಅಪರಾಧಿ ಯಾರು? ಆ ಕುಡುಕ ಮಾತ್ರವಾ? ಅಥವಾ ನಮ್ಮನ್ನು ಇಂದಿಗೂ ಬೀದಿಗಳಲ್ಲೇ ಉಳಿಸಿರುವ ಈ ವ್ಯವಸ್ಥೆಯಾ? ಈ ಸಮಾಜವಾ?' ಎಂದು ಅವರು ಪ್ರಶ್ನಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಾಮಾಜಿಕ ಕಾರ್ಯಕರ್ತ ನೂರ್ ಶ್ರೀಧರ್, ಪದಾಧಿಕಾರಿಗಳಾದ ಮಂಜುನಾಥ ದಾಯತ್ಕರ್, ಬಸವರಾಜ ನಾರಾಯಣ್ಕರ್, ಮಂಡ್ಯ ರಾಜಣ್ಣ, ಸಂದೀಪ್ ಕುಮಾರ್, ಶರಣಪ್ಪ ತುಮ್ಮರ್‌ಗುದ್ದಿ, ಕರಿಯಪ್ಪ ಗುಡಿಮನಿ ಇದ್ದರು.

'ಗಂಟು' ಸುಲಿಗೆಗೆ ಮುಂಬೈ ನಂಟು

ಒಂದನೇ ಪುಟದಿಂದ...

ಮುಂಬೈ ಹೆಸರು ಪ್ರಸ್ತಾಪಿಸಿಯೇ ಹೆಚ್ಚಿನ ವಂಚಕರು ಹಣ ಸುಲಿಗೆ ಮಾಡುತ್ತಿದ್ದಾರೆ. ಇದೇ ರೀತಿ ವಂಚಕರ ಬಲೆಗೆ ಬಿದ್ದು ನಗರದ 33 ವರ್ಷದ ಮಹಿಳೆ ಹಣ ಕಳೆದುಕೊಂಡಿದ್ದಾರೆ.

ಮಾರತ್‌ಹಳ್ಳಿಯ ಶ್ರೇಯಾ ಅವರನ್ನು ಸೈಬರ್ ವಂಚಕರು ಬೆದರಿಸಿ ₹3.62 ಕೋಟಿ ಸುಲಿಗೆ ಮಾಡಿದ್ದಾರೆ. ಶ್ರೇಯಾಗೆ ಆಗಸ್ಟ್‌ನಲ್ಲಿ ಕರೆ ಮಾಡಿದ್ದ ವಂಚಕರು, ನಿರಂತರವಾಗಿ ಬೆದರಿಸಿ ಸುಲಿಗೆ ಮಾಡಿದ್ದಾರೆ. ಕೊನೆ ಹಂತದಲ್ಲಿ, ತಾವು ವಂಚನೆಗೆ ಒಳಗಾಗಿರುವುದು ಶ್ರೇಯಾಗೆ ಗೊತ್ತಾಗಿದ್ದು, ಅ.3ರಂದು ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಗೆ ಅವರು ದೂರು ನೀಡಿದ್ದಾರೆ. ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶ್ರೇಯಾ ಅವರಿಗೆ ಅಪರಿಚಿತ ಮೊಬೈಲ್ ಸಂಖ್ಯೆಯಿಂದ ಕರೆಯೊಂದು ಬಂದಿತ್ತು. ಕರೆ ಮಾಡಿದ್ದ ವ್ಯಕ್ತಿ, ತಾನು ಮುಂಬೈ ಪೊಲೀಸ್ ವಿಶಾಲ್ ಎಂಬುದಾಗಿ ಪರಿಚಯಿಸಿಕೊಂಡಿದ್ದ. ತಮ್ಮ ದಾಖಲೆಗಳು ಹಾಗೂ ಹೆಸರು ಬಳಸಿಕೊಂಡು ಅಕ್ರಮವಾಗಿ ಹಣ ವರ್ಗಾವಣೆ ಆಗುತ್ತಿದೆ. ತಮ್ಮ ಕರೆಯನ್ನು ಹಿರಿಯ ಅಧಿಕಾರಿಗಳಿಗೆ ವರ್ಗಾವಣೆ ಮಾಡಲಾಗುವುದು ಎಂದು ಬೆದರಿಸಿದ್ದ. ಸ್ವಲ್ಪ ಸಮಯದ ಬಳಿಕ ವಿಡಿಯೊ ಕರೆ ಮಾಡಿದ್ದ ಮತ್ತೊಬ್ಬ ವಂಚಕ, 'ಮುಂಬೈ ಸೈಬರ್ ಕ್ರೈಂ ಪೊಲೀಸ್ ಅಧಿಕಾರಿ' ಎಂದು ಹೇಳಿಕೊಂಡಿದ್ದ. ತಮ್ಮ ಬ್ಯಾಂಕ್ ಖಾತೆ ಪರಿಶೀಲನೆ ನಡೆಸಬೇಕಿದೆ. ಖಾತೆಯಲ್ಲಿದ್ದ ಹಣ ವರ್ಗಾವಣೆ ಮಾಡಬೇಕು. ಇಲ್ಲದಿದ್ದರೆ ಅರೆಸ್ಟ್ ಮಾಡಲಾಗುವುದು ಎಂಬುದಾಗಿ ಬೆದರಿಸಿದ್ದ' ಎಂದು ಸೈಬರ್ ಪೊಲೀಸರು ಹೇಳಿದರು.

43 ಖಾತೆಗೆ ಹಣ ವರ್ಗ: 'ಆತಂಕಗೊಂಡಿದ್ದ ಶ್ರೇಯಾ ಅವರು ವಂಚಕರು ಹೇಳಿದಂತೆಯೇ ಕೇಳಿದ್ದರು. ಸೈಬರ್ ವಂಚಕರು ತಿಳಿಸಿದ್ದ 43 ಖಾತೆಗಳಿಗೆ ತಮ್ಮ ಮೂರು ಬ್ಯಾಂಕ್ ಖಾತೆಗಳಿಂದ ₹3.62 ಕೋಟಿಯನ್ನು ವರ್ಗಾವಣೆ ಮಾಡಿದ್ದರು' ಎಂದು ಮೂಲಗಳು ಹೇಳಿವೆ.

ಸೈಬರ್ ವಂಚನೆಗೆ ಒಳಗಾಗಿ ಹಣ ಕಳೆದುಕೊಂಡವರು ಗಾಬರಿಗೊಂಡು ಸಮಯ ವ್ಯರ್ಥ ಮಾಡದೇ 'ಗೋಲ್ಡನ್ ಅವರ್'ನಲ್ಲಿ ಸಹಾಯವಾಣಿ 1930ಕ್ಕೆ ಕರೆ ಮಾಡಿ ದೂರು ದಾಖಲಿಸಬೇಕು. ಅಥವಾ ಸಮೀಪದ ಠಾಣೆಗೆ ತೆರಳಿ ತ್ವರಿತವಾಗಿ ದೂರು ದಾಖಲಿಸಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ.

8 ಎಕರೆ ಭೂಮಿ, ವಿಮೆ ಹಣಕ್ಕಾಗಿ ಹತ್ಯೆ

ಹಾವೇರಿ: ವಾರಸುದಾರರಿಲ್ಲದೇ ಒಂಟಿಯಾಗಿ ವಾಸವಿದ್ದ ಬಸವರಾಜ ಬೊಮ್ಮಪ್ಪ ಪುಟ್ಟಣ್ಣನವರ (38) ಎಂಬುವರನ್ನು ಹತ್ಯೆ ಮಾಡಿ, ಅವರ ಹೆಸರಿನಲ್ಲಿದ್ದ 8 ಎಕರೆ ಜಮೀನು ಮತ್ತು ₹10 ಲಕ್ಷ ವಿಮೆ ಹಣ ದೋಚಲು ಮುಂದಾಗಿದ್ದ ನಾಲ್ವರನ್ನು ರಟ್ಟೀಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಟ್ಟೀಹಳ್ಳಿ ನಿವಾಸಿ ಬಸವರಾಜ ಪುಟ್ಟಣ್ಣನವರ ಮೃತದೇಹ ಸೆ. 27ರಂದು ಅಪಘಾತವಾದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಅಪಘಾತವೆಂದು ತಿಳಿದು ದೂರದ ಸಂಬಂಧಿಯೊಬ್ಬರು ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡಾಗ, ಆಸ್ತಿ ಹಾಗೂ ವಿಮೆ ಹಣಕ್ಕಾಗಿ ಕೊಲೆ ನಡೆದಿರುವ ಸಂಗತಿ ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋದಾ ಒಂಟಗೋಡಿ ತಿಳಿಸಿದರು.

'ರಟ್ಟೀಹಳ್ಳಿಯ ರಾಘವೇಂದ್ರ ಈರಪ್ಪ ಮಾಳಗೊಂಡರ, ಸಿದ್ದನಗೌಡ ಮಂಜಪ್ಪ ಹಲಗೇರಿ, ಕಡೂರಿನ ಲೋಕೇಶ ರಾಜಪ್ಪ ಬೆಟ್ಟಣ್ಣನವರ, ದಾವಣಗೆರೆ ಜಿಲ್ಲೆಯ ಬಾಡಕಂದಗಲ್ಲು ನಿವಾಸಿ ಪ್ರವೀಣ ಅವರನ್ನು ಬಂಧಿಸಲಾಗಿದೆ ಎಂದರು.

ಯೂಟ್ಯೂಬರ್ ರಾಘವೇಂದ್ರ, ಬಸವರಾಜ ಆಸ್ತಿ ಬಗ್ಗೆ ಮಾಹಿತಿ ತಿಳಿದುಕೊಂಡಿದ್ದ. ಸಂಬಂಧಿಯೂ ಆಗಿದ್ದ ಸಿದ್ದು, ಬಸವರಾಜ ಆಸ್ತಿ ದೋಚಲು ಹಲವು ವರ್ಷಗಳಿಂದ ಸಂಚು ರೂಪಿಸುತ್ತಿದ್ದರು. ಇಬ್ಬರೂ ಸೇರಿಕೊಂಡು, ಪ್ರವೀಣ ಹಾಗೂ ಲೋಕೇಶ ಜೊತೆಗೂಡಿ ಈ ಹತ್ಯೆ ಮಾಡಿರುವುದು ಗೊತ್ತಾಗಿದೆ' ಎಂದು ತಿಳಿಸಿದರು.

'ಬಸವರಾಜ ಅವರನ್ನು ರಟ್ಟೀಹಳ್ಳಿ ಅಂಚೆ ಕಚೇರಿಗೆ ಕರೆದೊಯ್ದಿದ್ದ ಆರೋಪಿಗಳು, ₹10 ಲಕ್ಷ ಕ್ಲೇಮ್ ಮೊತ್ತದ ಅಪಘಾತ ವಿಮೆ ಮಾಡಿಸಿದ್ದರು. ಅದಕ್ಕೆ ಯೂಟ್ಯೂಬರ್ ರಾಘವೇಂದ್ರನೇ ನಾಮಿನಿ ಆಗಿದ್ದ. ಆ ಸುಳಿವಿನಿಂದ ಆರೋಪಿಗಳು ಸಿಕ್ಕಿಬಿದ್ದರು' ಎಂದರು.

'₹10 ಲಕ್ಷ ವಿಮೆ ಹಣ ಬಂದ ನಂತರ, ಪರಸ್ಪರ ಹಂಚಿಕೊಳ್ಳಲು ಯೋಚಿಸಿದ್ದರು' ಎಂದು ಎಸ್‌ಪಿ ಹೇಳಿದರು.

ಬಿಎಸ್‌ವೈ ವಿರುದ್ಧದ ವಿಚಾರಣೆ ಮುಂದಕ್ಕೆ

ಒಂದನೇ ಪುಟದಿಂದ...

'ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯ ಸಂಜ್ಞೇಯ ಅಪರಾಧ ಎಂದು ಪರಿಗಣನೆಗೆ ತೆಗೆದುಕೊಂಡಿರುವುದನ್ನು ಎರಡನೇ ಬಾರಿಗೆ ಪ್ರಶ್ನಿಸಿ ಮೊದಲ ಆರೋಪಿ ಯಡಿಯೂರಪ್ಪ ಮತ್ತಿತರರು ಸಲ್ಲಿಸಿರುವ ಈ ಅರ್ಜಿಗಳನ್ನು ಪುರಸ್ಕರಿಸುವ ಅಗತ್ಯ ಕಾಣದು' ಎಂದು ನ್ಯಾಯಪೀಠ ನುಡಿಯಿತು.

ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್ ಮತ್ತು ಯಡಿಯೂರಪ್ಪ ಪರ ಹೈಕೋರ್ಟ್ ವಕೀಲೆ ಸ್ವಾಮಿನಿ ಗಣೇಶ ಮೋಹನಂಬಾಳ್ ವಾದ ಮಂಡಿಸಿದರು. ಇದೇ 23ಕ್ಕೆ ವಿಚಾರಣೆ ಮುಂದೂಡಲಾಗಿದೆ.

ಅವಧಿ ಪೂರ್ಣ ಅಧಿಕಾರ ಚಲಾವಣೆ ಕೋರಿದ ಅರ್ಜಿಗಳು

ಸ್ಥಳೀಯ ಸಂಸ್ಥೆ: ಆಡಳಿತಾಧಿಕಾರಿ ನೇಮಕ ಬೇಡ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಕೋಲಾರ ಜಿಲ್ಲೆಯ ಮುಳಬಾಗಿಲು ಹಾಗೂ ಚಿಕ್ಕಬಳ್ಳಾಪುರ ನಗರಸಭೆಗಳು, ಹಾಸನ ಜಿಲ್ಲೆಯ ಹೊಳೆನರಸೀಪುರ, ಮಂಡ್ಯ ಜಿಲ್ಲೆಯ ಮಳವಳ್ಳಿ ಪುರಸಭೆಗಳ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಳ್ಳುವ ತನಕ ಈ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಕ ಮಾಡಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಅರ್ಜಿದಾರ ಚುನಾಯಿತ ಸದಸ್ಯರು ಸಲ್ಲಿಸಿರುವ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಆರ್.ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿ, 'ಅರ್ಜಿದಾರ ಚುನಾಯಿತ ಸದಸ್ಯರ ಅವಧಿ ಮುಗಿಯುವ ತನಕ ಅಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಬಾರದು' ಎಂದು ಆದೇಶಿಸಿತು.

ಪ್ರಕರಣದ ಪ್ರತಿವಾದಿಗಳಾದ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿ, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಆಯಾ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು ಹಾಗೂ ಮುಖ್ಯಾಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು.

ಅಂತೆಯೇ, 'ಅರ್ಜಿಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಿ' ಎಂದು ಸರ್ಕಾರಕ್ಕೆ ನಿರ್ದೇಶಿಸಿತು.

ಅಕ್ರಮ ಮಸೀದಿ ನಿರ್ಮಾಣ ಆರೋಪ-ಕ್ರಮಕ್ಕೆ ಆದೇಶ: 'ತುಮಕೂರು ಜಿಲ್ಲೆ ಗುಬ್ಬಿ ಪಟ್ಟಣದಲ್ಲಿ ಬಡಾವಣೆಯ ಮಧ್ಯದಲ್ಲಿ ಅನಧಿಕೃತವಾಗಿ ಮಸೀದಿ ನಿರ್ಮಾಣ ಮಾಡಲಾಗುತ್ತಿದೆ ಎಂದು ಆಕ್ಷೇಪಣೆಗೆ ಸಂಬಂಧಿಸಿದಂತೆ ಸೂಕ್ತ ಪರಿಶೀಲನೆ ನಡೆಸಿ ನಿಯಮ ಉಲ್ಲಂಘನೆಯಾಗಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಮಸೀದಿಯನ್ನು ಅಕ್ರಮವಾಗಿ ನಿರ್ಮಾಣ ಮಾಡಲಾಗುತ್ತಿದೆ' ಎಂದು ಆಕ್ಷೇಪಿಸಿ ಗುಬ್ಬಿ ಪಟ್ಟಣದ ನಿವಾಸಿಗಳಾದ ಬಿ.ಲೋಕೇಶ್ ಸೇರಿದಂತೆ ಒಟ್ಟು 12 ಜನ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಕೆಲ ಕಾಲ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ನಿಯಮ ಉಲ್ಲಂಘಿಸಿದ್ದರೆ ಕ್ರಮ ಕೈಗೊಳ್ಳಿ' ಎಂದು ಪ್ರತಿವಾದಿಯಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಸ್ಥಳೀಯ ಆಡಳಿತಕ್ಕೆ ಸೂಚಿಸಿ ಅರ್ಜಿ ವಿಲೇವಾರಿ ಮಾಡಿದೆ.

ಅರ್ಜಿಯಲ್ಲಿ ಏನಿತ್ತು?: 'ನಾವು ಆದಿ ದ್ರಾವಿಡ ಸಮುದಾಯಕ್ಕೆ ಸೇರಿದವರಾಗಿದ್ದು ಗುಬ್ಬಿ ಪಟ್ಟಣದ ಬಂಗೋಲ್‌ಪಾಳ್ಯದಲ್ಲಿ ಸರ್ಕಾರ ನಮಗೆ 2 ಎಕರೆ ಕೊಡಮಾಡಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಆದಿ ದ್ರಾವಿಡ ಸಮುದಾಯದ ಜನರು 1968 ರಿಂದಲೂ ವಾಸ ಮಾಡುತ್ತಿದ್ದಾರೆ. ಈ ಪ್ರದೇಶದಲ್ಲಿ ಈಗ ಅನುಮತಿ ಇಲ್ಲದೆ ಜಾಮಿಯಾ ಮಸೀದಿ ಸಮಿತಿ ವತಿಯಿಂದ ಅಕ್ರಮವಾಗಿ ಮಸೀದಿ ನಿರ್ಮಾಣ ಮಾಡಲಾಗುತ್ತಿದ್ದು ಇದನ್ನು ತಡೆಯಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಧರ್ಮಸ್ಥಳ: ಷಡ್ಯಂತ್ರ ಆರೋಪ-ನೋಟಿಸ್

'ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ಅದರ ಧರ್ಮಾಧಿಕಾರಿ ವಿರುದ್ಧ ವ್ಯವಸ್ಥಿತ ಷಡ್ಯಂತ್ರ ರೂಪಿಸಿ ಕ್ಷೇತ್ರದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅಪಪ್ರಚಾರ ಮಾಡುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ಟಿ.ಜಯಂತ್ ಹಾಗೂ ಎಂ.ಡಿ.ಸಮೀರ್ ಮತ್ತಿತರರ ಚಲನವಲನ, ಚಟುವಟಿಕೆಗಳು, ಹಣಕಾಸಿನ ಮೂಲ ಮತ್ತು ಅವರ ಸಂಪರ್ಕ ಜಾಲಗಳ ಬಗ್ಗೆ ಸಮಗ್ರ ತನಿಖೆ ನಡೆಸಲು ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಗೃಹ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ಶ್ರೀ ಕ್ಷೇತ್ರ ಧರ್ಮಸ್ಥಳ ದೇವಾಲಯ' ಭಕ್ತರಾದ ಬೆಂಗಳೂರಿನ ತೇಜಸ್ ಎ. ಗೌಡ, ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಉಜಿರೆ ನಿವಾಸಿ ಭಾಸ್ಕರ್ ಬಡೆಕೊಟ್ಟು, ಧರ್ಮಸ್ಥಳ ನಿವಾಸಿಗಳಾದ ಸುರೇಂದ್ರ ಪ್ರಭು ಹಾಗೂ ಧನಕೀರ್ತಿ ಅರಿಗ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ವಿಶೇಷ ತನಿಖಾ ತಂಡ (ಎಸ್.ಐ.ಟಿ), ಆದಾಯ ತೆರಿಗೆಯ ಮಂಗಳೂರು ಕೇಂದ್ರ ವಲಯದ ಅಧಿಕಾರಿ, ಜಾರಿ ನಿರ್ದೇಶನಾಲಯದ (ಇ.ಡಿ) ಮಂಗಳೂರು ಉಪ ವಲಯ ಕಚೇರಿಯ ನಿರ್ದೇಶಕ ಸೇರಿದಂತೆ ಇತರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು.

'ಎಸ್‌ಐಟಿ ಹಾಗೂ ಇತರ ಸಕ್ಷಮ ಪ್ರಾಧಿಕಾರಗಳಿಗೆ ನಾವು ಸಲ್ಲಿಸಿರುವ ಮನವಿ ಮತ್ತು ದೂರುಗಳನ್ನು ಪರಿಗಣಿಸಲು ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ನಾಲೆ ಒಡೆದು ಅಪಾರ ಬೆಳೆ ಹಾನಿ

ಶ್ರೀರಂಗಪಟ್ಟಣದ ಸಿಡಿಎಸ್ ನಾಲೆ
ರಾಜ್ಯದ ಹಲವೆಡೆ ಮಳೆ, ಕೆರೆಗಳು ಕೋಡಿ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಹಾಗೂ ಮಂಡ್ಯ ಜಿಲ್ಲೆಯಲ್ಲಿ ಗುರುವಾರ ರಾತ್ರಿಯಿಂದ ಶುಕ್ರವಾರ ಬೆಳಿಗ್ಗೆಯವರೆಗೂ ಗುಡುಗು ಸಹಿತ ಜೋರು ಮಳೆ ಬಿದ್ದಿತು.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ದರಸಗುಪ್ಪೆ ಬಳಿ ಚಿಕ್ಕದೇವ-ರಾಯಸಾಗರ (ಸಿಡಿಎಸ್) ನಾಲೆಯ ಏರಿ ಒಡೆದಿದೆ.

ನಾಲೆಯ 21ನೇ ಮೈಲಿ ಬಳಿ 15 ಅಡಿಗಳಷ್ಟು ಒಡೆದಿದ್ದು, ಕೃಷಿ ಭೂಮಿಗೆ ನೀರು ನುಗ್ಗಿದೆ. ನಾಲೆ ಪಕ್ಕದ ಕೃಷಿ ಭೂಮಿ ಬೆಳೆ ಸಹಿತ ಕೊಚ್ಚಿಹೋಗಿದೆ. ಅಡಿಕೆ, ತೆಂಗು, ಕಬ್ಬು, ಭತ್ತದ ಬೆಳೆ ಜಲಾವೃತವಾಗಿದ್ದು, ಕೆಲವೆಡೆ ಬೆಳೆಗಳ ಮೇಲೆ ಮಣ್ಣು ಸಂಗ್ರಹವಾಗಿದೆ. ಇದರಿಂದ ಕೃಷಿಕರು ಕಂಗಾಲಾಗಿದ್ದಾರೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಚಿಕ್ಕಪಾಳ್ಯ ಗ್ರಾಮದಲ್ಲಿ ಮನೆಯ ಗೋಡೆ ಕುಸಿದಿದೆ. ಗ್ರಾಮದ ಪುನೀತ್ ಕುಮಾರ ಅವರ ಮನೆಯ ಗೋಡೆ 25 ಅಡಿಗಳಷ್ಟು ಕುಸಿದು ಬಿದ್ದಿದೆ. ಮಲಗಿದ್ದ ಪುನೀತ್ ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರಾಗಿದ್ದಾರೆ.

ಅನುಕೂಲ: ಮೈಸೂರು ತಾಲ್ಲೂಕಿನ ಜಯಪುರ ಹೋಬಳಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಉತ್ತಮ ಮಳೆ ಆಗಿದ್ದು, ರಾಗಿ, ತೊಗರಿ, ಅವರೆ, ಹುರುಳಿ ಮೊದಲಾದ ಬೆಳೆಗಳಿಗೆ ಅನುಕೂಲವಾಗಿದೆ.

ಹುಣಸೂರು ತಾಲ್ಲೂಕಿನಲ್ಲಿ ಹೊಡಿಜೆ ಕಟ್ಟೆ, ಮೋದೂರು ಕೆರೆ, ನಾಗನಹಳ್ಳಿ ಕೆರೆ ಮತ್ತು ಹಿರಿಕದಯಾ-ತನಗಳ್ಳಿ ಭಾಗದಲ್ಲಿ 50 ಎಕರೆಗೂ ಜಾಸ್ತಿ ಭತ್ತದ ಬೆಳೆ ಕೊಚ್ಚಿ ಹೋಗಿದೆ.

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನಲ್ಲಿ ಗುರುವಾರ ರಾತ್ರಿ ಸುರಿದ ಜೋರು ಮಳೆಯು, ಒಣಗುತ್ತಿದ್ದ ಬೆಳೆಗಳಿಗೆ ಜೀವಸೆಲೆ ಒದಗಿಸಿದೆ.

4 ಮನೆ ಜಖಂ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನಲ್ಲಿ ಗುರುವಾರ ಮಧ್ಯರಾತ್ರಿ ಬಿರುಸಿನಿಂದ ಮಳೆ ಸುರಿದಿದ್ದು, ಚೆನ್ನಾಪುರ ತಾಂಡಾದಲ್ಲಿ ಸಾಕಿಬಾಯಿ, ಬೆಂಡಿಗೆರೆ ಸಣ್ಣತಾಂಡಾದಲ್ಲಿ ಲಕ್ಷ್ಮಿಬಾಯಿ, ಗೋಣೆಪ್ಪ, ಮುತ್ತಿಗಿಯಲ್ಲಿ ಕಾಳಪ್ಪ ಅವರ ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಪುಣಬಗಟ್ಟ ಗ್ರಾಮದಲ್ಲಿ ಕೆರೆ ಕೋಡಿ ಬಿದ್ದು ರಸ್ತೆಗೆ ನೀರು ನುಗ್ಗಿದೆ, ಪುಣ್ಯದಕಟ್ಟೆ ಮೂಲಕ ವ್ಯಾಪಕ ಪ್ರಮಾಣದಲ್ಲಿ ನೀರು ಹರಿಯುತ್ತಿದೆ.

2021ರ ಜುಲೈ 18ರಂದು ಉಚ್ಚಂಗಿದುರ್ಗದಲ್ಲಿ ರಾಜ್ಯದಲ್ಲಿಯೇ ಅತೀ ಹೆಚ್ಚು (27 ಸೆಂ.ಮೀ.) ಮಳೆ ಸುರಿದಿತ್ತು. 4 ವರ್ಷದ ಬಳಿಕ ಮತ್ತೊಂದು ಗರಿಷ್ಠ ಪ್ರಮಾಣದ ಮಳೆ (13 ಸೆಂ.ಮೀ.) ಗುರುವಾರ ರಾತ್ರಿ ಸುರಿದಿದೆ ಎಂದು ತಹಶೀಲ್ದಾರ ಬಿ.ವಿ.ಗಿರೀಶ್ ಬಾಬು ತಿಳಿಸಿದ್ದಾರೆ.


ಶ್ರೀರಂಗಪಟ್ಟಣ ತಾಲ್ಲೂಕಿನ ದರಸಗುಪ್ಪೆ ಬಳಿ ಸಿಡಿಎಸ್ ನಾಲೆಯ ಏರಿ ಒಡೆದಿದೆ

ಮನೆಗಳಿಗೆ ನೀರು, ಬೆಳೆ ಜಲಾವೃತ

ದಾವಣಗೆರೆ: ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ ಹಾಗೂ ಹರಿಹರ ತಾಲ್ಲೂಕುಗಳಲ್ಲಿ ಶುಕ್ರವಾರ ಬೆಳಗಿನ ಜಾವ ಭಾರಿ ಮಳೆ ಸುರಿಯಿತು.

ಚನ್ನಗಿರಿ ತಾಲ್ಲೂಕಿನ ಹಲವೆಡೆ ಬೆಳಿಗ್ಗೆ 9ರವರೆಗೂ ಧಾರಾಕಾರ ಸುರಿಯಿತು. ತಾಲ್ಲೂಕಿನಲ್ಲಿ 8ಕ್ಕೂ ಹೆಚ್ಚು ಗ್ರಾಮಗಳ ಕೆರೆಗಳು ಕೋಡಿ ಬಿದ್ದಿವೆ. ವಡ್ಡಿನಕೆರೆಗೆ ನೀರು ಹರಿಸುವ ನಾಲೆ ಒಡೆದಿದ್ದರಿಂದ ಅಕ್ಕಪಕ್ಕದ ಜಮೀನುಗಳಿಗೆ ಹಾಗೂ ನೀರು ನುಗ್ಗಿ 8 ಮನೆಗಳಿಗೆ ಹಾನಿಯಾಗಿದೆ.

ದಾವಣಗೆರೆ ತಾಲ್ಲೂಕಿನ ಆವರಗೆರೆ ಗ್ರಾಮದಲ್ಲಿ 8 ಮನೆಗಳಿಗೆ ನೀರು ನುಗ್ಗಿದೆ. ಸಂಗ್ರಹಿಸಿದ್ದ ದವಸ ಧಾನ್ಯಗಳು ನೀರು ಪಾಲಾದವು.

ಚಿತ್ರದುರ್ಗ ವರದಿ: ಚಿತ್ರದುರ್ಗ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ಹೊಸದುರ್ಗ ತಾಲ್ಲೂಕಿನ ಉಪ್ಪಹಳ್ಳ ಕೆರೆಗೆ ಕೋಡಿ ಬಿದ್ದಿದ್ದು, ಸಣ್ಣ ಹೀರಪ್ಪನಹಳ್ಳ ಮೈದುಂಬಿ ಹರಿಯುತ್ತಿದೆ. ಇದರಿಂದಾಗಿ ಮತ್ತೋಡು ಹಾಗೂ ಚಿಕ್ಕತೇಕಲವಟ್ಟಿ ಮಾರ್ಗದ ಸಂಪರ್ಕ ಕಡಿತಗೊಂಡಿತ್ತು.


ಚಿಕ್ಕಮಗಳೂರು ತಾಲ್ಲೂಕಿನ ಮಾಚೇನಹಳ್ಳಿ ಬಳಿ ಅಡಿಕೆ ತೋಟ ಜಲಾವೃತ

ಚಿಕ್ಕಮಗಳೂರು: ಹೊಲಗದ್ದೆಗಳಿಗೆ ನೀರು

ಚಿಕ್ಕಮಗಳೂರು: ಜಿಲ್ಲೆಯ ಹಲವೆಡೆ ಶುಕ್ರವಾರ ಬೆಳಗಿನ ಜಾವ ಧಾರಾಕಾರ ಮಳೆಯಾಗಿದ್ದು, ಜಮೀನು ಜಲಾವೃತವಾಗಿವೆ. ಚಿಕ್ಕಮಗಳೂರು, ಆಲ್ದೂರು, ನರಸಿಂಹರಾಜಪುರ, ಕಡೂರು, ತರೀಕೆರೆ ಸುತ್ತಮುತ್ತ ಮಳೆ ಸುರಿಯಿತು. ಬೆಳಗಿನ ಜಾವ ಗುಡುಗು ಸಹಿತ ಆರಂಭವಾದ ಮಳೆ 6 ಗಂಟೆ ತನಕ ಸುರಿಯಿತು.


ಬೆಳವಾಡಿ, ಕುರುಬರಹಳ್ಳಿ, ನರಸೀಪುರ, ಮಾಚೇನಹಳ್ಳಿ ಸುತ್ತಮುತ್ತ ಮಳೆಗೆ ಹೊಲಗದ್ದೆಗಳಲ್ಲಿ ಪ್ರವಾಹದಂತೆ ನೀರು ತುಂಬಿಕೊಂಡಿತ್ತು. ಅಡಿಕೆ ಮತ್ತು ತೆಂಗಿನ ತೋಟಗಳು ಜಲಾವೃತಗೊಂಡಿದ್ದರೆ, ಕೆಲ ರೈತರು ಹೊಲದಲ್ಲಿ ಹಾಕಿದ್ದ ಈರುಳ್ಳಿ ರಾಶಿ ಕೂಡ ನೀರಿನಲ್ಲಿ ತೇಲಿ ಹೋಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.38	9,975	5,609
ಹಾರಂಗಿ	2,859	2,857.72	884	1,600
ಕಬಿನಿ	2,284.00	2,282.87	2,239	1,415
ಹೇಮಾವತಿ	2,922	2,916.90	8,304	6,610
ಲಿಂಗನಮಕ್ಕಿ	1,819	1,816.15	6,973	6,801
ಸೂಪಾ (ಮೀ)	564	559.28	1,454.56	4,680.33
ಮಾಣಿ	595	594.03	583	640
ತುಂಗಭದ್ರಾ	1,633	1,625.89	6,564	10,250
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2175	2,174.83	2,007	2,336
ಭದ್ರಾ *	186	184.1	4,084	4,084
ಆಲಮಟ್ಟಿ (ಮೀ)	519.6	519.60	20,992	20,992
ನಾರಾಯಣಪುರ (ಮೀ)	492.25	492.24	15,000	7,530

* ನೆಲಮಟ್ಟದಿಂದ

ಅಂಬಿಗರ ಚೌಡಯ್ಯ ಮೂರ್ತಿ ಭಗ್ನ


ಕಲಬುರಗಿ ಜಿಲ್ಲೆಯ ಶಹಾಬಾದ್ ತಾಲ್ಲೂಕಿನ ಮುತಗಾದಲ್ಲಿ ಚೌಡಯ್ಯ ಪ್ರತಿಮೆ ವಿರೂಪಗೊಂಡಿದೆ

ಪ್ರಜಾವಾಣಿ ವಾರ್ತೆ

ಶಹಾಬಾದ್ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮುತಗಾ ಗ್ರಾಮದಲ್ಲಿ ಅಂಬಿಗರ ಚೌಡಯ್ಯ ಪ್ರತಿಮೆಯನ್ನು ದುಷ್ಕರ್ಮಿಗಳು ಗುರುವಾರ ರಾತ್ರಿ ಭಗ್ನಗೊಳಿಸಿದ್ದಾರೆ.

ಅಂಬಿಗರ ಚೌಡಯ್ಯ ಭವನದ ಬಳಿ ಮಾರ್ಬಲ್‌ನಲ್ಲಿ ಕೆತ್ತಿದ್ದ ಮೂರ್ತಿ ಪ್ರತಿಷ್ಠಾಪಿಸಲಾಗಿತ್ತು. ದುಷ್ಕರ್ಮಿಗಳು ಆ ಮೂರ್ತಿಯ ಎಡಗೈ ತುಂಡರಿಸಿ, ಬಲಗೈ ಬೆರಳು ವಿರೂಪಗೊಳಿಸಿದ್ದಾರೆ. ಜೊತೆಗೆ ಮುಖಕ್ಕೆ ಕೆಸರು ಎರಚಿದ್ದಾರೆ.

ಈ ಕುರಿತು ಗ್ರಾಮದ ಮುಖಂಡ ಬಸವರಾಜ ಜಿರಕಲ್ ನೀಡಿದ ದೂರಿನನ್ವಯ ಶಹಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದುಷ್ಕೃತ್ಯ ಎಸೆಗಿದವರ ಬಂಧನಕ್ಕೆ ಆಗ್ರಹಿಸಿ ಶುಕ್ರವಾರ ಕೋಲಿ–ಕಬ್ಬಲಿಗೆ ಸಮುದಾಯದ ಜನರು, ದಿಢೀರ್ ಪ್ರತಿಭಟನೆ ನಡೆಸಿದರು. ಭಂಕೂರ ಕ್ರಾಸ್ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ತಡೆದು, ಟೈರ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

‘ಇದು,ಹೇಯ ಕೃತ್ಯ. ನಮ್ಮ ಭವ್ಯ ಪರಂಪರೆಗೆ ಮಾಡಿದ ಅಪಮಾನ. ಇದನ್ನು ಸರ್ಕಾರ ಸಹಿಸುವುದಿಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದ್ದಾರೆ.

‘ಸೈಬರ್ ವಂಚಕ’ನ ಬಂಧನ

₹ 150 ಕೋಟಿ ವಂಚನೆ, ಖಾತೆಯಲ್ಲಿತ್ತು ₹18 ಕೋಟಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸೈಯದ್ ಅಫ್ಘಾತ್ ಪಾಷ (28) ಬಂಧಿತ
- ಸಿ.ಸಿ.ಟಿ.ವಿ ಅಳವಡಿಕೆ ಕೆಲಸ ಮಾಡುತ್ತಿದ್ದ

ದಾವಣಗೆರೆ: ಇಲ್ಲಿನ ಸೈಬರ್ ಅಪರಾಧ ಠಾಣೆ ಪೊಲೀಸರು ಆನ್‌ಲೈನ್ ವಂಚನೆ ಪ್ರಕರಣದಲ್ಲಿ ಅಂತರರಾಜ್ಯ ಆರೋಪಿ-ಯೊಬ್ಬನನ್ನು ಬಂಧಿಸಿದ್ದಾರೆ. ಆರೋಪಿ ನೂರಾರು ಕೋಟಿ ವಂಚಿಸಿದ್ದಾನೆ ಎನ್ನಲಾಗಿದ್ದು, ಈತನ ಬ್ಯಾಂಕ್ ಖಾತೆಯಲ್ಲಿ ₹ 18 ಕೋಟಿ ಇರುವುದು ಪತ್ತೆಯಾಗಿದೆ.

ಹಾಸನ ಜಿಲ್ಲೆಯ ಬೇಲೂರಿನ ಶಾಂತಿನಗರ ನಿವಾಸಿ ಸೈಯದ್ ಅಫ್ಘಾತ್ ಪಾಷ (28) ಬಂಧಿತ. ಪ್ರಕರಣದ ಮೊದಲ ಆರೋಪಿ ಹೈದರಾಬಾದ್‌ನ ಉಬೇದ್ ತಲೆಮರೆಸಿಕೊಂಡಿದ್ದಾನೆ. ಸೈಯ್ಯದ್ ಅಫ್ಘಾತ್ ಸಿ.ಸಿ.ಟಿ.ವಿ ಅಳವಡಿಸುವ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ದಾವಣಗೆರೆಯ ನಿಟುವಳ್ಳಿ ನಿವಾಸಿ, ಕಟ್ಟಡ ನಿರ್ಮಾಣ ವಲಯದ ಉದ್ಯಮಿ ಪ್ರಮೋದ್ ಎಚ್.ಎಚ್. ಅವರ ಬ್ಯಾಂಕ್ ಖಾತೆಯಲ್ಲಿದ್ದ ₹ 52.60 ಲಕ್ಷ ಹಣವನ್ನು ಆರೋಪಿಗಳು ನೆಟ್ ಬ್ಯಾಂಕಿಂಗ್ ಮೂಲಕ ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದರು. ಖಾತೆಯು ಬ್ಲಾಕ್ ಆಗಿದ್ದನ್ನು ಬ್ಯಾಂಕ್‌ನಲ್ಲಿ ವಿಚಾರಿಸಿದಾಗ ಆನ್‌ಲೈನ್ ಮೂಲಕ ವಂಚನೆ ನಡೆದಿರುವುದು ಗೊತ್ತಾಗಿತ್ತು.

ಈ ಬಗ್ಗೆ ಪ್ರಮೋದ್ ಅವರು ನೀಡಿದ ದೂರು ಆಧರಿಸಿ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖ-ಲಿಸಲಾಗಿತ್ತು.

127 ಪ್ರಕರಣ: ಆರೋಪಿಗಳಾದ ಸೈಯದ್ ಅಫ್ಘಾತ್ ಹಾಗೂ ಉಬೇದ್ ವಿರುದ್ಧ ದೇಶದ ವಿವಿಧ ಪೊಲೀಸ್ ಠಾಣೆಗಳಲ್ಲಿ 127 ಪ್ರಕರಣಗಳು ದಾಖಲಾಗಿರುವುದು ತನಿಖೆ ವೇಳೆ ಗೊತ್ತಾಗಿದೆ.

ಜುಲೈ 27 ರಿಂದ ಆಗಸ್ಟ್ 19ರ ವರೆಗೆ ಆರೋಪಿಗಳು ಬೇರೆಯವರ ಬ್ಯಾಂಕ್ ಖಾತೆಗಳಿಂದ ₹ 150 ಕೋಟಿ ಹಣವನ್ನು ತಮ್ಮ ಖಾತೆಗೆ ಆನ್‌ಲೈನ್ ಮೂಲಕ ವರ್ಗಾಯಿಸಿಕೊಂಡು ವಂಚನೆ ಎಸಗಿದ್ದಾರೆ. ಈ ಪೈಕಿ ₹ 132 ಕೋಟಿ ಹಣವನ್ನು ವಿತ್ ಡ್ರಾ ಮಾಡಿಕೊಂಡಿದ್ದಾರೆ.

ಖಾತೆಯಲ್ಲಿ ಉಳಿದಿದ್ದ ₹18 ಕೋಟಿ ಹಣವನ್ನು ಪೊಲೀಸರು ಬ್ಯಾಂಕ್ ಖಾತೆಗಳಲ್ಲಿಯೇ ತಟಸ್ಥಗೊಳಿಸಿದ್ದಾರೆ.

‘₹ 18 ಕೋಟಿ ಪೈಕಿ ಕೋರ್ಟ್ ಆದೇಶದಂತೆ ದೂರುದಾರ ಪ್ರಮೋದ್ ಅವರಿಗೆ ₹ 52.60 ಲಕ್ಷ ಕೊಡಿಸಲಾಗಿದೆ. ಆರೋಪಿಗಳ ಬಗ್ಗೆ ದೇಶದ ವಿವಿಧ ಠಾಣೆಗಳಿಗೆ ಮಾಹಿತಿ ನೀಡಲಾಗಿದೆ. ಜಮ್ಮು ಕಾಶ್ಮೀರ ಹಾಗೂ ಉತ್ತರ ಪ್ರದೇಶ, ಆಂಧ್ರಪ್ರದೇಶ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳ ಸೈಬರ್ ಠಾಣೆಗಳಲ್ಲಿ ಇವರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

‘ಇದೇ ಮೊದಲ ಬಾರಿ ಆರೋಪಿ ಸಿಕ್ಕಿಬಿದ್ದಿದ್ದು,ಕೋರ್ಟ್‌ಗೆ ಹಾಜರು ಪಡಿಸಲಾಗಿತ್ತು. ಕೋರ್ಟ್ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ’ ಎಂದು ಸೈಬರ್ ಅಪರಾಧ ಠಾಣೆ ಡಿವೈಎಸ್‌ಪಿ ಬಂಕಾಳಿ ನಾಗಪ್ಪ ತಿಳಿಸಿದರು.

ಇನ್‌ಸ್ಪೆಕ್ಟರ್ ವಸಂತ್, ಸಿಬ್ಬಂದಿ ಅಶೋಕ, ಸುರೇಶ್, ಮುತ್ತುರಾಜ್, ನಿಜಲಿಂಗಪ್ಪ, ಅಂಜಿನಪ್ಪ ಕಾರ್ಯಾಚರಣೆ ನಡೆಸಿದ್ದರು.

ಗಾಯಗೊಂಡಿದ್ದ ನಾಲ್ವರು ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಇಲ್ಲಿನ ಭೀಮೇನಹಳ್ಳಿಯ ಕೈಗಾರಿಕಾ ಪ್ರದೇಶದ ಕಾರ್ಮಿಕರ ಶೆಡ್‌ನಲ್ಲಿ ಅಡುಗೆ ಅನಿಲ ಸೋರಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಪಶ್ಚಿಮ ಬಂಗಾಳ ರಾಜ್ಯದ ಏಳು ಕಾರ್ಮಿಕರ ಪೈಕಿ ನಾಲ್ವರು ಶುಕ್ರವಾರ ಮೃತಪಟ್ಟಿದ್ದಾರೆ.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾರ್ಮಿಕರಾದ ಜಾವೆದ್ ಅಲಿ, ಶಫಿಜುಲ್ ಶೇಕ್, ಮನ್ರುಲ್ ಶೇಕ್ ಹಾಗೂ ಜಿಯಾಬುರ್ ಶೇಕ್ ಮೃತರು. ತಜ್ಬುಲ್ ಶೇಕ್, ಹಸನ್ ಮಲಿಕ್, ನೂರ್ ಜಮಲ್ ಸ್ಥಿತಿ ಗಂಭೀರವಾಗಿದ್ದು, ಇದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

ಮಲಗಿದ್ದಾಗ ಘಟನೆ: ಕಟ್ಟಡ ನಿರ್ಮಾಣ ಕಾರ್ಮಿಕರಾದ ಕಾರ್ಮಿಕರು, ಹತ್ತಿರದ ತಾತ್ಕಾಲಿಕ ಶೆಡ್‌ನಲ್ಲಿ ತಂಗಿದ್ದರು. ಅ.6ರಂದು ರಾತ್ರಿ ಶೆಡ್‌ನಲ್ಲೇ ಅಡುಗೆ ಮಾಡಿದ್ದು, ಸಿಲಿಂಡರ್ ಸರಿಯಾಗಿ ಬಂದ್ ಮಾಡಿರಲಿಲ್ಲ. ಇದರಿಂದ ಅನಿಲ ಸೋರಿತ್ತು. ನಸುಕಿನ 2 ಗಂಟೆಗೆ ಕಾರ್ಮಿಕನೊಬ್ಬ, ಬೀಡಿ ಸೇದಲು ಬೆಂಕಿ ಕಡ್ಡಿ ಗೀರುತ್ತಿದ್ದಂತೆ ಬೆಂಕಿ ವ್ಯಾಪಿಸಿ ಅವಘಡ ಸಂಭವಿಸಿತ್ತು.

ಘಟನೆಗೆ ಸಂಬಂಧಿಸಿದಂತೆ ಬಿಡದಿ ಠಾಣೆಯಲ್ಲಿ ಕಾರ್ಮಿಕರ ಕಂಟ್ರ್ಯಾಕ್ಟರ್ ಹಸನ್ ಮಲಿಕ್, ಎಲಿಗೆನ್ಸ್ ಲೇಔಟ್ ಮಾಲೀಕ, ಜಮೀನಿನ ಮಾಲೀಕ ಹಾಗೂ ಶೆಡ್ ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದೆ.


ಅರಕಲಗೂಡಿನ ಡಾ.ಕೋಮಲ್‌ಕುಮಾರ್ ಅವರು ಇದ್ದ ವಿಜ್ಞಾನಿಗಳ ತಂಡದ ಸಾಧನೆ

ಎಎಂಎಲ್‌ಗೆ ಹೊಸ ಚಿಕಿತ್ಸೆ ಪತ್ತೆ

ಪ್ರಜಾವಾಣಿ ವಾರ್ತೆ

ಅರಕಲಗೂಡು (ಹಾಸನ ಜಿಲ್ಲೆ): ಗಂಭೀರ ಸ್ವರೂಪದ ರಕ್ತದ ಕ್ಯಾನ್ಸರ್ ‘ಅಕ್ಯೂಟ್ ಮೈಲಾಯ್ಡ್ ಲೂಕೆಮಿಯಾಗೆ (ಎಎಂಎಲ್) ಹೊಸ ಚಿಕಿತ್ಸಾ ವಿಧಾನವನ್ನು ತಜ್ಞರ ತಂಡ ಕಂಡುಹಿಡಿದಿದೆ.

ಪಟ್ಟಣದ ವಿಜ್ಞಾನಿ ಹಾಗೂ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಹಾಯಕ ಪ್ರಾಧ್ಯಾಪಕ ಡಾ.ಕೋಮಲ್ ಕುಮಾರ್ ಜವರಪ್ಪ ಅವರನ್ನು ಒಳಗೊಂಡಿದ್ದ ಅಂತರರಾಷ್ಟ್ರೀಯ ಸಂಶೋಧನಾ ತಂಡ ಈ ನಿಟ್ಟಿನಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ.


ಡಾ.ಕೋಮಲ್ ಕುಮಾರ್

‘ಫಿನ್‌ಲ್ಯಾಂಡ್, ಸ್ವಿಟ್ಜರ್‌ಲೆಂಡ್‌ನ ವಿಜ್ಞಾನಿಗಳಿಂದ ನಡೆಸಲಾದ ಸಂಶೋಧನೆಯಲ್ಲಿ, ‘ಎಂಐಕೆ 665’ ಮತ್ತು ‘ವೆನೆಟೋಕ್ಲ್ಯಾಕ್ಸ್’ ಔಷಧಗಳ ಸಂಯೋಜನೆಯು ಎಎಂಎಲ್ ರೋಗಿಗಳಿಗೆ ಚಿಕಿತ್ಸೆಗೆ ಒಳಪಡಿಸಲು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ’ ಎಂದು ಕಂಡುಬಂದಿದೆ.

‘ಎಎಂಎಲ್ ಚಿಕಿತ್ಸೆಯ ಅಡೆತಡೆ ಎಂದರೆ ರೋಗಿಗಳು ಸರಿಯಾಗಿ ಸ್ಪಂದಿಸದಿರುವುದು. ಈಗಿನ ಸಂಶೋಧನೆಯಲ್ಲಿ, ಚಿಕಿತ್ಸೆ ಪರಿಣಾಮಕಾರಿಯಾಗದ ರೋಗಿಗಳಲ್ಲಿ ಎಬಿಸಿಬಿ1 ಎಂಬ ವಂಶವಾಹಿ ಮಟ್ಟ, ಬಿಸಿಎಲ್–ಎಕ್ಸ್‌ಎಲ್ ಎಂಬ ಪ್ರೋಟಿನ್ ಸಿಗ್ನಲ್ ಅಧಿಕವಾಗಿ ಕಂಡುಬಂದಿದೆ. ಈ ಹೊಸ ಔಷಧ ಸಂಯೋಜನೆ ರೋಗ ನಿರ್ವಹಣೆಗೆ ಆಶಾಕಿರಣವಾ-ಗಿದೆ’ ಎಂದು ಕೋಮಲ್‌ಕುಮಾರ್ ತಿಳಿಸಿದರು.

ರಕ್ತದ ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ಇದು ಮುಖ್ಯ ಸಾಧನೆಯಾಗಿದೆ. ಈ ಕುರಿತ ಸಂಶೋಧನಾ ಲೇಖನ ನೆದರ್‌ಲೆಂಡ್‌ನ ವೈಜ್ಞಾನಿಕ ಜರ್ನಲ್ ‘ಮಾಲಿಕ್ಯುಲರ್ ಆಂಕಾಲಜಿ’ಯಲ್ಲಿ ಪ್ರಕಟವಾಗಿದೆ.



ರಿಷಬ್ ಶೆಟ್ಟಿ

₹509 ಕೋಟಿ ಬಾಚಿದ 'ಕಾಂತಾರ'

ಇದೇ 2ರಂದು ತೆರೆಕಂಡಿರುವ, ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ: ಒಂದು ದಂತಕಥೆ, ಚಾಪ್ಟರ್–1' ಸಿನಿಮಾ ಮೊದಲ ವಾರದಲ್ಲಿ ವಿಶ್ವದಾದ್ಯಂತ ₹509.25 ಕೋಟಿ ಗಳಿಸಿದೆ ಎಂದು ಸಾಮಾಜಿಕ ಮಾಧ್ಯಮಗಳ ಮುಖಾಂತರ ಹೊಂಬಾಳೆ ಫಿಲ್ಮ್ಸ್ ಅಧಿಕೃತವಾಗಿ ತಿಳಿಸಿದೆ.

2022ರ 'ಕಾಂತಾರ'ದ ಯಶಸ್ಸಿನ ನಂತರ ಇದೇ ಸಿನಿಮಾದ ಪ್ರೀಕ್ವೆಲ್ ಇದೀಗ ಹೊಂಬಾಳೆಯ ಹಿಟ್ ಪಟ್ಟಿಗೆ ಸೇರ್ಪಡೆಯಾಗಿದೆ. ಈ ಹಿಂದೆ ವಿಶ್ವದ 10 ಸಾವಿರಕ್ಕೂ ಅಧಿಕ ಪರದೆಗಳಲ್ಲಿ ತೆರೆಕಂಡಿದ್ದ ಹೊಂಬಾಳೆ ನಿರ್ಮಾಣದ 'ಕೆ.ಜಿ.ಎಫ್ ಚಾಪ್ಟರ್–2' ಭಾರತದಲ್ಲಿ ಮೊದಲ ದಿನವೇ ₹134.5 ಕೋಟಿ ಬಾಚಿತ್ತು.

ದೇಶದಾದ್ಯಂತ ಏಳು ಸಾವಿರಕ್ಕೂ ಅಧಿಕ ತೆರೆಗಳಲ್ಲಿ ಬಿಡುಗಡೆಯಾಗಿದ್ದ 'ಕಾಂತಾರ ಚಾಪ್ಟರ್ 1' ಸಿನಿಮಾ ಉತ್ತರ ಅಮೆರಿಕದಲ್ಲೇ ಸುಮಾರು ₹26 ಕೋಟಿಗೂ ಅಧಿಕ ಹಣ ಗಳಿಸಿದೆ. ಬಿಡುಗಡೆಯಾದ ದಿನವೇ ಈ ಸಿನಿಮಾದ 12 ಲಕ್ಷಕ್ಕೂ ಅಧಿಕ ಟಿಕೆಟ್‌ಗಳು ಮಾರಾಟವಾಗಿದ್ದವು. ಸಿನಿಮಾ ಬಿಡುಗಡೆಯಾಗಿ ವಾರ ಉರುಳಿದ್ದರೂ ಸಿನಿಮಾ ಪ್ರೇಕ್ಷಕರನ್ನು ಸೆಳೆಯುತ್ತಲೇ ಇದೆ. ಶುಕ್ರವಾರ(ಅ.10) ಬುಕ್‌ಮೈಶೋನಲ್ಲಿ ಪ್ರತಿ ಗಂಟೆಗೆ ಸುಮಾರು 30 ಸಾವಿರ ಟಿಕೆಟ್‌ಗಳ ಮಾರಾಟ ಕಂಡುಬಂತು. ಬೆಂಗಳೂರಿನಲ್ಲಿ ನೂರಕ್ಕೂ ಅಧಿಕ ಏಕಪರದೆ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ 'ಕಾಂತಾರ' ಸಿನಿಮಾ ಪ್ರದರ್ಶನ ಮುಂದುವರಿದಿದೆ.

ಎಐನಲ್ಲಿ ಪುನೀತ್

ಈಗಾಗಲೇ 'ಅಯ್ಯನ ಮನೆ', 'ಶೋಧ' ವೆಬ್‌ಸರಣಿಗಳ ಮೂಲಕ ಸದ್ದು ಮಾಡಿರುವ ಜೀ5ನ ಮತ್ತೊಂದು ಕನ್ನಡ ವೆಬ್‌ಸರಣಿ ಪ್ರೇಕ್ಷಕರೆದುರಿಗೆ ಬರಲು ದಿನಾಂಕ ನಿಗದಿಯಾಗಿದೆ. ಅ.31ರಿಂದ 'ಮಾರಿಗಲ್ಲು' ಸರಣಿ ಸ್ಟ್ರೀಮ್ ಆಗಲಿದ್ದು, ವಿಶೇಷವೆಂದರೆ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಎಐ ಮೂಲಕ ಇಲ್ಲಿ ಜೀವತಳೆದಿದ್ದಾರೆ.

'ಪಿಆರ್‌ಕೆ ಪ್ರೊಡಕ್ಷನ್ಸ್' ಸಹಯೋಗದಲ್ಲಿ 'ಮಾರಿಗಲ್ಲು' ವೆಬ್‌ಸರಣಿ ನಿರ್ಮಾಣವಾಗಿದೆ. ಕನ್ನಡದ ಮೊತ್ತಮೊದಲ ರಾಜಮನೆತನವಾದ ಕದಂಬರ ರಾಜ ಮಯೂರವರ್ಮನಾಗಿ ಪುನೀತ್ ಇಲ್ಲಿ ಕಾಣಿಸಿಕೊಂಡಿದ್ದಾರೆ. 'ಕದಂಬರ ಸಿರಿ ಸಂಪತ್ತು ಹುಡುಕಿದರೆ ಮತ್ತೆ ಸಿಗಬಹುದೇ' ಎನ್ನುವ ಪ್ರಶ್ನೆಯನ್ನೆತ್ತುತ್ತಾ ಈ ಸರಣಿಯ ಟೀಸರ್ ಬಿಡುಗಡೆಯಾಗಿದೆ. ನಟ ಧನಂಜಯ ನಿರೂಪಣೆ ಈ ಟೀಸರ್‌ಗಿದೆ. 4ನೇ ಶತಮಾನದ ಕದಂಬರ ಆಳ್ವಿಕೆಯ ಕಾಲದ ಕಥೆ ಇದರಲ್ಲಿ ಇರಲಿದೆ. ಕದಂಬರ ಕಾಲದ ನಿಧಿ ಹುಡುಕಲು ಹೊರಟ ಶಿರಸಿಯ ಹುಡುಗರ ಕಥೆಯನ್ನು ಇಲ್ಲಿ ಹೆಣೆಯಲಾಗಿದೆ. ಅಲ್ಲದೆ ಶಿರಸಿಯ ಪ್ರಖ್ಯಾತ ಬೇಡರ ವೇಷವನ್ನು ಈ ಸರಣಿಯಲ್ಲಿ ಕಾಣಬಹುದು.

'ಮಾರಿಗಲ್ಲು' ವೆಬ್‌ಸರಣಿಯಲ್ಲಿ ನಟರಾದ ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ ಮತ್ತು ಪ್ರವೀಣ್ ತೇಜ್ ನಟಿಸಿದ್ದಾರೆ. ಎ.ಎಸ್.ಸೂರಜ್, ಪ್ರಶಾಂತ್ ಸಿದ್ದಿ ಮತ್ತು ನಿನಾದ ಹೃತ್ಸಾ ತಾರಾಬಳಗದಲ್ಲಿದ್ದಾರೆ. ಈ ವೆಬ್‌ಸರಣಿಯನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ನಿರ್ಮಿಸಿದ್ದು, ದೇವರಾಜ್ ಪೂಜಾರಿ ಬರೆದು ನಿರ್ದೇಶಿಸಿದ್ದಾರೆ. ಎಸ್.ಕೆ.ರಾವ್ ಛಾಯಾಚಿತ್ರಗ್ರಹಣ, ಎಲ್.ವಿ. ಮುತ್ತು ಮತ್ತು ಎಲ್.ವಿ. ಗಣೇಶ್ ಸಂಗೀತ ನಿರ್ದೇಶನ ಸರಣಿಗಿದೆ.

'ಈ ಸರಣಿ ಅಪ್ಪು ಅವರ ಕನಸುಗಳಲ್ಲಿ ಒಂದನ್ನು ಪ್ರತಿಬಿಂಬಿಸುತ್ತದೆ. ಪುನೀತ್ ಯಾವಾಗಲೂ ನಮ್ಮ ಕಥೆಗಳನ್ನು ವೆಬ್‌ಸರಣಿ ಮೂಲಕ ಹೇಳಲು ಬಯಸುತ್ತಿದ್ದರು. ಈ ಕಥೆಗಳು ನಮ್ಮ ನೆಲದಲ್ಲಿ ಬೇರೂರಿದ್ದರೂ ಭಾವನೆಯಲ್ಲಿ ಅವು ಸಾರ್ವತ್ರಿಕ' ಎನ್ನುತ್ತಾರೆ ಅಶ್ವಿನಿ ಪುನೀತ್ ರಾಜ್‌ಕುಮಾರ್.



ಪುನೀತ್ ರಾಜ್‌ಕುಮಾರ್

'ಕನಕರಾಜ'ನಾದ ಅನೂಪ್ ರೇವಣ್ಣ



ನಿಮಿಶಾ

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಭಿಮಾನಿಯೊಬ್ಬರ ಕುರಿತಾದ ಕಥೆಯನ್ನು ಹೊಂದಿರುವ 'ಕನಕರಾಜ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ವಿ.ಎಂ.ರಾಜು, ನೀಲ್ ಕೆಂಗಾಪುರ ನಿರ್ದೇಶನದ ಚಿತ್ರಕ್ಕೆ ವಿ.ನಾಗೇಂದ್ರ ಪ್ರಸಾದ್ ಕಥೆ, ಚಿತ್ರಕಥೆ, ಸಂಗೀತ, ಸಂಭಾಷಣೆಯಿದೆ. ಚಿತ್ರದ ಮೊದಲ ದೃಶ್ಯಕ್ಕೆ ಸಚಿವ ಎಚ್.ಎಂ.ರೇವಣ್ಣ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಭಿಮಾನಿ 'ಕನಕರಾಜ'ನಾಗಿ ಅನೂಪ್ ರೇವಣ್ಣ ಕಾಣಿಸಿಕೊಳ್ಳುತ್ತಿದ್ದಾರೆ. ನಿಮಿಶಾ ಚಿತ್ರದ ನಾಯಕಿ. 'ಯುವಕರು ರಾಜಕಾರಣಕ್ಕೆ ಬರಬೇಕೆಂದು ರಾಜಕಾರಣಿಗಳು ಆಗಾಗ ಹೇಳುತ್ತಿರುತ್ತಾರೆ. ಅದೇ ಕಥೆಯನ್ನು ಹೊಂದಿರುವ ಚಿತ್ರವಿದು. ಚಿತ್ರದ ನಾಯಕ ಮುಖ್ಯಮಂತ್ರಿಗಳ ಅಭಿಮಾನಿಯಾಗಿರುತ್ತಾನೆ. ಅವರಂತೆ ತಾನೂ ಬೆಳೆಯಬೇಕೆಂದು ಹಂಬಲಿಸುತ್ತಾನೆ. ರಾಜಕಾರಣಕ್ಕೆ ಬರಲು ಏನೆಲ್ಲ ಮಾಡುತ್ತಾನೆ, ಹೇಗೆ ಹೋರಾಟ ನಡೆಸುತ್ತಾನೆಂಬುದು ಚಿತ್ರಕಥೆ ಎಂದರು ವಿ.ನಾಗೇಂದ್ರ ಪ್ರಸಾದ್.

ಸಿದ್ದರಾಮಯ್ಯನವರ ಆಪ್ತವಲಯದಲ್ಲಿ ಗುರುತಿಸಿಕೊಂಡಿರುವ ಸನತ್‌ಕುಮಾರ್ ಚಿತ್ರದ ನಿರ್ಮಾಪಕ.

'ಎಚ್.ಎಂ.ರೇವಣ್ಣ ಪುತ್ರ ಅನೂಪ್ ರೇವಣ್ಣ ಈ ಪಾತ್ರಕ್ಕೆ ಸೂಕ್ತ ಎಂದು ಆಯ್ಕೆ ಮಾಡಿದ್ದೇವೆ. ಅವರ ರಕ್ತದಲ್ಲಿಯೇ ರಾಜಕಾರಣವಿದೆ. ಮುಖ್ಯಮಂತ್ರಿಗಳ ಪಾತ್ರವೂ ಬರುತ್ತದೆ. ಆದರೆ ಹೆಸರು ಬೇರೆ ಇರುತ್ತದೆ. ಬಹಳ ಬೇಗ ಚಿತ್ರವನ್ನು ಸಿದ್ಧಪಡಿಸಿ ತೆರೆಗೆ ತರುತ್ತೇವೆ' ಎಂದರು ಸನತ್‌ಕುಮಾರ್.

'ಕಂದೀಲು' ತೆರೆಗೆ ಬರಲು ಸಿದ್ಧ




ಚಿತ್ರತಂಡ

ಈಗಾಗಲೇ ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು, ಪ್ರಶಸ್ತಿ ಪಡೆದುಕೊಂಡಿರುವ 'ಕಂದೀಲು' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಯಶೋದಾ ಕೊಟ್ಟುಕತ್ತಿರ ನಿರ್ದೇಶನದ ಈ ಚಿತ್ರಕ್ಕೆ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಕೂಡ ಲಭಿಸಿದೆ.

'ಏಳೆಂಟು ವರ್ಷಗಳಿಂದ ಚಿತ್ರರಂಗದಲ್ಲಿ ಗುರುತಿಸಿಕೊಂಡು ಎರಡು ಕೊಡವ, ಎರಡು ಕನ್ನಡ ಸಿನಿಮಾಗಳನ್ನು ನಿರ್ಮಾಣ ಮಾಡಿದ್ದೇನೆ. ಸುಮನ್ ನಗರ್‌ಕರ್ ನಟನೆಯ 'ರಂಗಪ್ರವೇಶ' ಚಿತ್ರದ ಮೂಲಕ ನಿರ್ದೇಶಕಿಯಾಗಿ ಪರಿಚಯವಾದೆ. ಪ್ರೇಮಾ ಕಾರಂತ್, ಕವಿತಾ ಲಂಕೇಶ್ ನಂತರ ರಾಷ್ಟ್ರ ಪ್ರಶಸ್ತಿ ಪಡೆದ ನಿರ್ದೇಶಕಿ ಅಂತ ಹೇಳಿಕೊಳ್ಳಲು ಖುಷಿಯಾಗುತ್ತದೆ. 'ಆಯ್ದ ಹೆಣ' ಎನ್ನುವ ಕಥೆ ಆಧರಿಸಿದ ಚಿತ್ರವಿದು. 2008ರಲ್ಲಿ ನಡೆದ ಸತ್ಯ ಘಟನೆ ಆಧಾರಿತವಾಗಿದೆ. ಅಂದಿನ ಕೇಂದ್ರ ಸಚಿವೆ ಸುಷ್ಮಾ ಸ್ವರಾಜ್ ಭಾರತ ಮೂಲದವರೊಬ್ಬರ ಹೆಣವನ್ನು ವಿದೇಶದಿಂದ ತರಿಸಿಕೊಡಲು ಸಹಾಯ ಮಾಡಿದ್ದರು. ಆದರೂ ಹೆಣ ತಲುಪುವುದು ವಿಳಂಬವಾಗಿತ್ತು. ಅಂತಹ ಸಮಯದಲ್ಲಿ ಮನೆಯ ಪರಿಸ್ಥಿತಿ, ಧಾರ್ಮಿಕ ಹಾಗೂ ರಾಜಕೀಯ ಸ್ಥಿತಿಗಳು ಹೇಗೆ ಇರುತ್ತವೆ ಎಂಬುದೇ ಚಿತ್ರಕಥೆ' ಎಂದರು ನಿರ್ದೇಶಕಿ.

ಪ್ರಕಾಶ್ ಕಾರ್ಯಪ್ಪ ಬಂಡವಾಳ ಹೂಡಿದ್ದಾರೆ. ನಾಗೇಶ್ ಎನ್. ಸಂಭಾಷಣೆ ಜೊತೆಗೆ ಸಂಕಲನವನ್ನೂ ನಿಭಾಯಿಸಿದ್ದಾರೆ. ಸುರೇಶ್ ಸಂಗೀತ, ಪಿ.ವಿ.ಆರ್.ಸ್ವಾಮಿ ಛಾಯಾಚಿತ್ರಗ್ರಹಣವಿದೆ. ಪ್ರಭಾಕರ ಬ. ಕುಂದರ, ವನಿತಾ ರಾಜೇಶ್, ಖುಷಿ ಕಾವೇರಮ್ಮ ಮುಂತಾದವರು ಚಿತ್ರದಲ್ಲಿದ್ದಾರೆ. ಮುಂದಿನ ತಿಂಗಳು ಚಿತ್ರವನ್ನು ತೆರೆಗೆ ತರಲು ತಂಡ ಆಲೋಚಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,181
ಇಂದಿನ ಅಂತ್ಯ:	25,285
ದಿನದ ಗರಿಷ್ಠ:	25,330
	103

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹560
12 ಕ್ಕೆ	₹75
ಮೈಸೂರು: 100 ಕ್ಕೆ	₹570

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹248-636
ದ್ವಿತಳಿ (ಬಿ.ವಿ)	₹465-786

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹165

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1600
ಮಧ್ಯಮ	₹700-1200
ಸಣ್ಣ	₹200-500

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29500
ಎಸಿ	₹15150
ಆರ್‌ಪಿ	₹20000
ಆರ್‌ಸಿ	₹11300

ಅಡಿಕೆ ಧಾರಣೆ

ಕುಮಟಾ	
ಚಾಲಿ	38699-45899
ಚಿಪ್ಪು	27569-34009
ಕೋಕ	9099-27089
ಫ್ಯಾಕ್ಟರಿ	7019-26929
ಹಳೆಚಾಲಿ	40999-45899
ಶಿವಮೊಗ್ಗ	
ಬೆಟ್ಟೆ	62069-70899
ಗೊರಬಲು	19011-44444
ಹೊಸತು	54099-65611
ರಾಶಿ	52169-65699
ಸರಕು	60009-98096
ಸಿದ್ದಾಪುರ	
ಬಿಳಿಗೋಟು	25699-34199
ಚಾಲಿ	37319-45029
ಕೋಕ	20699-30189
ಕೆಂಪುಗೋಟು	22619-35399
ರಾಶಿ	47699-61199
ತಟ್ಟಿಬೆಟ್ಟೆ	36000-52699
ಶಿರಸಿ	
ಬೆಟ್ಟೆ	42210-54099
ಬಿಳಿಗೋಟು	26899-37301
ಚಾಲಿ	40159-46536
ಕೆಂಪುಗೋಟು	30599-38719
ರಾಶಿ	52698-58498
ಪುತ್ತೂರು	
ಕೋಕ	15000-28500
ಹೊಸತು	26000-35000

ಮುಂಬೈ ಧಾರಣೆ (ಶೇಂಗಾ)

10-10-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1400 (1380)
ಒಂದು ವಾರದ ಡೆಲಿವರಿ	1395 (1375)
ಪಾಮ್ ವಾರದ ಡೆಲಿವರಿ	1298 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1410)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,20,700 (1,22,100)
ಬೆಳ್ಳಿ ಕೆ.ಜಿಗೆ	1,65,500 (1,62,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1390 (1370)
ಸೋಯಾ (ರಿಫೈನ್ಡ್)	₹1290 (1290)
ಸೂರ್ಯಕಾಂತಿ (ರಿಫೈನ್ಡ್)	₹1460 (1460)
ಪಾಮೋಲಿನ್	₹1300 (1290)

ಈಕ್ವಿಟಿ ಎಂ.ಎಫ್: ಹೂಡಿಕೆ ಇಳಿಕೆ

ಜಾಗತಿಕ ಅನಿಶ್ಚಿತತೆಯಿಂದ ತಗ್ಗಿದ ಒಳಹರಿವು: ಎಎಂಎಫ್‌ಐ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತಿಂಗಳಿನಲ್ಲಿ ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳಲ್ಲಿ (ಎಂ.ಎಫ್) ಹೂಡಿಕೆ ಪ್ರಮಾಣ ಶೇ 9ರಷ್ಟು ಇಳಿಕೆಯಾಗಿದ್ದು, ₹30,421 ಕೋಟಿ ಹೂಡಿಕೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಶುಕ್ರವಾರ ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಅನಿಶ್ಚಿತತೆ ಮತ್ತು ಷೇರು ಮಾರುಕಟ್ಟೆಯ ಏರಿಳಿತದಿಂದಾಗಿ ಹೂಡಿಕೆದಾರರು ಎಚ್ಚರಿಕೆ ನಡೆ ಅನುಸರಿಸುತ್ತಿದ್ದಾರೆ. ಹೀಗಾಗಿ ಒಳಹರಿವು ಮಂದಗೊಂಡಿದೆ ಎಂದು ಹೇಳಿದೆ.



ಆಗಸ್ಟ್ ತಿಂಗಳಿನಲ್ಲಿ ಒಳಹರಿವು ₹33,430 ಕೋಟಿಯಷ್ಟಿದ್ದರೆ, ಜುಲೈನಲ್ಲಿ ₹42,702 ಕೋಟಿ ಇತ್ತು. ಸತತ ಎರಡನೇ ತಿಂಗಳು ಹೂಡಿಕೆ ಪ್ರಮಾಣ ಇಳಿಕೆಯಾಗಿದೆ.

ಫ್ಲೆಕ್ಸಿ ಕ್ಯಾಪ್ ಫಂಡ್‌ಗಳಲ್ಲಿ ₹7,029 ಕೋಟಿ ಒಳಹರಿವಾಗಿದೆ. ಮಿಡ್‌ಕ್ಯಾಪ್ ₹5,085 ಕೋಟಿ, ಸ್ಮಾಲ್‌ಕ್ಯಾಪ್‌ಗಳಲ್ಲಿ ₹4,363 ಕೋಟಿ ಮತ್ತು ಲಾರ್ಜ್ ಕ್ಯಾಪ್ ಫಂಡ್‌ಗಳಲ್ಲಿ ₹2,319 ಕೋಟಿ ಹೂಡಿಕೆಯಾಗಿದೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳಲ್ಲಿ (ಎಸ್‌ಐಪಿ) ಸೆಪ್ಟೆಂಬರ್‌ನಲ್ಲಿ ₹29,361 ಕೋಟಿ ಹೂಡಿಕೆಯಾಗಿದೆ. ಆಗಸ್ಟ್‌ನಲ್ಲಿ ₹28,265 ಕೋಟಿ ಹೂಡಿಕೆಯಾಗಿತ್ತು.

ಚಿನ್ನದಲ್ಲಿ ಹೂಡಿಕೆ ಹೆಚ್ಚಳ: ಚಿನ್ನದ ಇಟಿಎಫ್‌ನಲ್ಲಿ ಆಗಸ್ಟ್ ತಿಂಗಳಿನಲ್ಲಿ ₹2,190 ಕೋಟಿ ಹೂಡಿಕೆ ಆಗಿತ್ತು. ಸೆಪ್ಟೆಂಬರ್‌ನಲ್ಲಿ ₹8,363 ಕೋಟಿಗೆ ಹೆಚ್ಚಳವಾಗಿದೆ. ಇದು ಈ ಆರ್ಥಿಕ ವರ್ಷದಲ್ಲಿ ಗರಿಷ್ಠ ಹೂಡಿಕೆಯಾದ ತಿಂಗಳು ಇದಾಗಿದೆ.

ಜಾಗತಿಕ ಅನಿಶ್ಚಿತತೆಯಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದರಿಂದ ಒಳಹರಿವು ಏರಿಕೆಯಾಗಿದೆ. ಚಿನ್ನದ ಇಟಿಎಫ್‌ನ ಒಟ್ಟು ಸಂಪತ್ತಿನ ಗಾತ್ರ ₹90 ಸಾವಿರ ಕೋಟಿ ದಾಟಿದೆ ಎಂದು ತಿಳಿಸಿದೆ.

ಒಟ್ಟಾರೆ ಉದ್ಯಮದ ಸಂಪತ್ತಿನ ನಿರ್ವಹಣಾ ಮೌಲ್ಯ ಸೆಪ್ಟೆಂಬರ್‌ನಲ್ಲಿ ₹75.61 ಲಕ್ಷ ಕೋಟಿಯಷ್ಟಿದೆ.

ರಿಯಲ್ ಎಸ್ಟೇಟ್: ಹೂಡಿಕೆ ಹೆಚ್ಚಳ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ರಿಯಲ್ ಎಸ್ಟೇಟ್ ವಲಯದಲ್ಲಿ ಈಕ್ವಿಟಿ ಹೂಡಿಕೆ ಪ್ರಮಾಣ ಶೇ 48ರಷ್ಟು ಹೆಚ್ಚಳವಾಗಿದ್ದು, ₹33,700 ಕೋಟಿಯಷ್ಟಾಗಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ಸಿಬಿಆರ್‌ಇ ತಿಳಿಸಿದೆ.

ಕಟ್ಟಡಗಳ ನಿರ್ಮಾಣದಾರರು ಮತ್ತು ಹೂಡಿಕೆದಾರರು ನಿರ್ಮಾಣ ಯೋಜನೆಗಳಲ್ಲಿ ಈ ಹಣವನ್ನು ಹೂಡಿಕೆ ಮಾಡಿದ್ದಾರೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಹೂಡಿಕೆ ಪ್ರಮಾಣ ₹23 ಸಾವಿರ ಕೋಟಿಯಷ್ಟಿತ್ತು ಎಂದು ತಿಳಿಸಿದೆ.

ಪ್ರಸಕ್ತ ಕ್ಯಾಲೆಂಡರ್ ವರ್ಷದ ಮೊದಲ 9 ತಿಂಗಳಿನಲ್ಲಿ ಈಕ್ವಿಟಿ ಹೂಡಿಕೆಯ ಪ್ರಮಾಣ ಶೇ 14ರಷ್ಟು ಹೆಚ್ಚಳವಾಗಿದ್ದು, ₹90,475 ಕೋಟಿಯಷ್ಟಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹78,880 ಕೋಟಿಯಷ್ಟು ಒಳಹರಿವಾಗಿತ್ತು ಎಂದು ತಿಳಿಸಿದೆ.

ಪಿಎಸ್‌ಬಿ: ಉನ್ನತ ಹುದ್ದೆಗೆ ಖಾಸಗಿ ಅಭ್ಯರ್ಥಿಗೆ ಅವಕಾಶ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ ಸೇರಿದಂತೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ (ಪಿಎಸ್‌ಬಿ) ಆಡಳಿತ ಮಂಡಳಿಯ ಉನ್ನತ ಹುದ್ದೆಗೆ ಖಾಸಗಿ ವಲಯದ ಹಣಕಾಸು ಸಂಸ್ಥೆಗಳ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಸರ್ಕಾರ ಮುಂದಾಗಿದೆ.

ಪ್ರಸ್ತುತ ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ (ಎಸ್‌ಬಿಐ) ನಾಲ್ಕು ವ್ಯವಸ್ಥಾಪಕ ನಿರ್ದೇಶಕ ಹುದ್ದೆಗಳಿವೆ. ಈ ಪೈಕಿ ಒಂದು ಹುದ್ದೆಗೆ ಖಾಸಗಿ ವಲಯದ ಅಭ್ಯರ್ಥಿಯನ್ನು ನೇಮಿಸಿಕೊಳ್ಳಲಿದೆ.

ಇಲ್ಲಿಯವರೆಗೆ, ಬ್ಯಾಂಕ್‌ನ ಎಲ್ಲಾ ವ್ಯವಸ್ಥಾಪಕ ನಿರ್ದೇಶಕ ಮತ್ತು ಅಧ್ಯಕ್ಷ ಸ್ಥಾನಗಳನ್ನು ಆಂತರಿಕವಾಗಿಯೇ ತುಂಬಿಕೊಳ್ಳಲಾಗುತ್ತಿತ್ತು.

ನೇಮಕಾತಿ ಕುರಿತ ಸಂಪುಟ ಸಮಿತಿಯ (ಎಸಿಸಿ) ಪರಿಷ್ಕೃತ ನೇಮಕಾತಿ ಮಾರ್ಗಸೂಚಿಗಳ ಪ್ರಕಾರ, ಎಸ್‌ಬಿಐ ಹೊರತುಪಡಿಸಿ 11 ಸರ್ಕಾರಿ ವಲಯದ ಬ್ಯಾಂಕ್‌ಗಳ ಒಂದು ಕಾರ್ಯನಿರ್ವಾಹಕ ನಿರ್ದೇಶಕ (ಇ.ಡಿ) ಸ್ಥಾನಕ್ಕೆ ಖಾಸಗಿ ವಲಯದಿಂದ ಆಯ್ಕೆ ಮಾಡಿಕೊಳ್ಳಲು ಸಹ ಅನುಮತಿ ನೀಡಿದೆ.

ವಿರೋಧ: ಸರ್ಕಾರಿ ವಲಯದ ಬ್ಯಾಂಕ್‌ಗಳಲ್ಲಿ ಉನ್ನತ ಹುದ್ದೆಗಳನ್ನು ಖಾಸಗಿ ವಲಯದ ಅಭ್ಯರ್ಥಿಗಳಿಗೆ ತೆರೆದಿಡುವ ಸರ್ಕಾರದ ನಿರ್ಧಾರದ ವಿರುದ್ಧ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆ (ಯುಎಫ್‌ಬಿಯು) ತೀವ್ರ ವಿರೋಧ ವ್ಯಕ್ತಪಡಿಸಿದೆ.

ಈ ಕ್ರಮವು ರಾಷ್ಟ್ರೀಯ ಸಂಸ್ಥೆಗಳ ಮೇಲಿನ ದಾಳಿ ಮತ್ತು ಖಾಸಗೀಕರಣಕ್ಕೆ ಸಮನಾಗಿದೆ ಎಂದು ಹೇಳಿದೆ.

ಕಾಯ್ದೆಗಳಿಗೆ ಯಾವುದೇ ತಿದ್ದುಪಡಿ ಮಾಡದೆ ಈ ಮಾರ್ಗಸೂಚಿ ಹೊರಡಿಸಲಾಗಿದೆ. ಇದು ಸಾಂವಿಧಾನಿಕ ಉಲ್ಲಂಘನೆಯಾಗಿದೆ. ಹೀಗಾಗಿ, ಪರಿಷ್ಕೃತ ಮಾರ್ಗಸೂಚಿಗಳನ್ನು ಸಮಗ್ರ ಪರಿಶೀಲನೆಯವರೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿದೆ.

ಟ್ರಂಪ್ ಪ್ರಯತ್ನ ಹೊಗಳಿದ ಪುಟಿನ್

ಮಾಸ್ಕೊ(ಎಪಿ): 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಗದೇ ಹೋದರೂ, ವಿಶ್ವದಲ್ಲಿ ಶಾಂತಿ ಸ್ಥಾಪನೆಗೆ ಅವರು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ' ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಶುಕ್ರವಾರ ಹೇಳಿದ್ದಾರೆ.

'ವೆನೆಜುವೆಲಾದ ಮಾರಿಯಾ ಕೊರಿನಾ ಮಚಾದೊ ಅವರಿಗೆ ನೊಬೆಲ್ ಪ್ರಶಸ್ತಿ ನೀಡುವ ಮೂಲಕ ಟ್ರಂಪ್ ಅವರಿಗೆ ಅನ್ಯಾಯ ಮಾಡಿದಂತಾಗಿದೆ ಎಂದು ನೀವು ಭಾವಿಸುವಿರಾ' ಎಂಬ ಪತ್ರಕರ್ತರ ಪ್ರಶ್ನೆಗೆ, ಪುಟಿನ್ ಈ ಪ್ರತಿಕ್ರಿಯೆ ನೀಡಿದ್ದಾರೆ.

'ಟ್ರಂಪ್ ಅವರು ಹಲವಾರು ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತಿದ್ದಾರೆ. ಗಾಜಾ ಶಾಂತಿ ಒಪ್ಪಂದ ಅಂದುಕೊಂಡಂತೆ ಜಾರಿಯಾದಲ್ಲಿ, ಅದು ಐತಿಹಾಸಿಕ ಸಾಧನೆಯಾಗಲಿದೆ' ಎಂದೂ ಹೇಳಿದ್ದಾರೆ.

'ಚಿನ್ನದ ಸಾಲ ಮಾರುಕಟ್ಟೆ ಗಾತ್ರ ₹15 ಲಕ್ಷ ಕೋಟಿ ನಿರೀಕ್ಷೆ'

ನವದೆಹಲಿ (ಪಿಟಿಐ): 'ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಚಿನ್ನದ ಸಾಲ ಮಾರುಕಟ್ಟೆಯ ಗಾತ್ರ ₹15 ಲಕ್ಷ ಕೋಟಿಯಷ್ಟಾಗುವ ನಿರೀಕ್ಷೆ ಇದೆ' ಎಂದು ರೇಟಿಂಗ್ ಸಂಸ್ಥೆ ಐಸಿಆರ್‌ಎ ಅಂದಾಜಿಸಿದೆ.

ಚಿನ್ನದ ದರದ ಏರಿಕೆಯಿಂದ, ಮಾರುಕಟ್ಟೆಯ ಗಾತ್ರ ಗರಿಷ್ಠ ಮಟ್ಟ ತಲುಪಿದೆ. ಎನ್‌ಬಿಎಫ್‌ಸಿಗಿಂತಲೂ ಬ್ಯಾಂಕ್‌ಗಳು ತ್ವರಿತವಾಗಿ ಬೆಳವಣಿಗೆ ಕಾಣುತ್ತಿವೆ ಎಂದು ಹೇಳಿದೆ.

2026–27ರ ಆರ್ಥಿಕ ವರ್ಷದಲ್ಲಿ ಚಿನ್ನದ ಸಾಲ ಮಾರುಕಟ್ಟೆಯ ಗಾತ್ರವು ₹18 ಲಕ್ಷ ಕೋಟಿ ಆಗಲಿದ್ದು, ಮಾರುಕಟ್ಟೆ ಗಾತ್ರವು ತ್ವರಿತವಾಗಿ ವಿಸ್ತಾರವಾಗಲಿದೆ ಎಂದು ಸಹ ಅಂದಾಜಿಸಿದೆ.

ಚಿನ್ನದ ಮೇಲಿನ ಸಾಲ ನೀಡಿಕೆಯಲ್ಲಿ ಬ್ಯಾಂಕ್‌ಗಳು ಮಾರುಕಟ್ಟೆಯಲ್ಲಿ ತಮ್ಮ ಪಾಲನ್ನು ಶೇ 82ಕ್ಕೆ ಹೆಚ್ಚಿಸಿಕೊಂಡಿವೆ. 2019–20ರಿಂದ 2024–25ರವರೆಗೆ ಚಿನ್ನದ ಸಾಲದ ಸಂಪತ್ತಿನ ನಿರ್ವಹಣಾ ಮೌಲ್ಯವು ವಾರ್ಷಿಕ ಶೇ 26ರಷ್ಟು ಬೆಳವಣಿಗೆ ಸಾಧಿಸಿದೆ. ಬ್ಯಾಂಕೇತರ



ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ಶೇ 20ರಷ್ಟು ಪ್ರಗತಿ ಕಂಡಿವೆ.

ಕಳೆದ ವರ್ಷದ ಮಾರ್ಚ್ ಅಂತ್ಯದ ವೇಳೆಗೆ ಉದ್ಯಮದ ಒಟ್ಟಾರೆ ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹11.8 ಲಕ್ಷ ಕೋಟಿಯಷ್ಟಾಗಿತ್ತು.

ಬ್ಯಾಂಕ್‌ಗಳಲ್ಲಿ ಚಿನ್ನದ ಆಭರಣಗಳ ಮೇಲೆ ವೈಯಕ್ತಿಕ ಸಾಲ ಪಡೆಯುವವರ ಪ್ರಮಾಣ ಶೇ 18ಕ್ಕೆ ಏರಿಕೆಯಾಗಿದ್ದರೆ, ಕೃಷಿ ಉದ್ದೇಶಕ್ಕೆ ಸಾಲ ಪಡೆಯುವವರ ಪ್ರಮಾಣ ಶೇ 70ರಿಂದ ಶೇ 63ಕ್ಕೆ ಇಳಿದಿದೆ.

ಜೂನ್ ಅಂತ್ಯದ ವೇಳೆಗೆ ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಸಂಪತ್ತಿನ ನಿರ್ವಹಣಾ ಮೌಲ್ಯವು ಅಂದಾಜು ₹2.4 ಲಕ್ಷ ಕೋಟಿಯಷ್ಟಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 41ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಬೆಳ್ಳಿ ₹8,500 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಬೆಳ್ಳಿ ದರ ಕೆ.ಜಿಗೆ ₹8,500 ಏರಿಕೆಯಾಗಿ, ₹1,71,500ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹600 ಕಡಿಮೆಯಾಗಿ, ₹1.26 ಲಕ್ಷ ಆಗಿದೆ. ಆಭರಣ ಚಿನ್ನದ ಬೆಲೆ (ಶೇ 99.5ರಷ್ಟು ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹1,25,400 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿಸಿದೆ. ಹೀಗಾಗಿ, ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಬೆಳ್ಳಿ ಖರೀದಿಗೆ ಮುಂದಾಗಿದ್ದಾರೆ. ಜೊತೆಗೆ ಪೂರೈಕೆಯಲ್ಲಿನ ಕೊರತೆಯಿಂದ ಬೆಳ್ಳಿ ದರ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಟಾಟಾ ಸನ್ಸ್ ಷೇರುಪೇಟೆಯಲ್ಲಿ ನೋಂದಾಯಿಸಲು ಮಿಸ್ತ್ರಿ ಕರೆ

ನವದೆಹಲಿ (ಪಿಟಿಐ): ಟಾಟಾ ಸನ್ಸ್ ಸಂಸ್ಥೆಯಲ್ಲಿ ಪಾರದರ್ಶಕತೆ ತರಲು ಅದನ್ನು ಷೇರುಪೇಟೆಯಲ್ಲಿ ನೋಂದಣಿ ಮಾಡಬೇಕು ಎಂದು ಎಸ್.ಪಿ ಸಮೂಹದ ಮುಖ್ಯಸ್ಥ ಶಾಪೂರ್ಜಿ ಪಲ್ಲೊಂಜಿ ಮಿಸ್ತ್ರಿ ಶುಕ್ರವಾರ ಕರೆ ನೀಡಿದ್ದಾರೆ.

ಟಾಟಾ ಸಂಸ್ಥೆಯ ಮೇಲೆ ನಿಯಂತ್ರಣ ಹೊಂದಿರುವ ಟಾಟಾ ಟ್ರಸ್ಟ್ಸ್‌ನ ಟ್ರಸ್ಟಿಗಳ ನಡುವೆ ಸಂಘರ್ಷ ಏರ್ಪಟ್ಟಿರುವಾಗಲೇ ಪಲ್ಲೊಂಜಿ ಅವರು ಹೀಗೆ ಹೇಳಿದ್ದಾರೆ.

ಟಾಟಾ ಸನ್ಸ್ ಕಂಪನಿಯನ್ನು ಷೇರುಪೇಟೆಯಲ್ಲಿ ನೋಂದಾಯಿಸಬೇಕು ಎಂದು ಆರ್‌ಬಿಐ ನೀಡಿರುವ ಗಡುವನ್ನು ಗಂಭೀರವಾಗಿ ಮತ್ತು ಗೌರವಯುತವಾಗಿ ಕಾಣಬೇಕು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಷೇರುಪೇಟೆಯಲ್ಲಿ ಟಾಟಾ ಸನ್ಸ್ ಅನ್ನು ನೋಂದಾಯಿಸಲು ಶಾಪೂರ್ಜಿ ಪಲ್ಲೊಂಜಿ ಸಮೂಹವು ನಿರಂತರವಾಗಿ ಸಲಹೆ ನೀಡುತ್ತಿದೆ. ಈ ಸಂಸ್ಥೆಯನ್ನು ಷೇರುಪೇಟೆಯಲ್ಲಿ ನೋಂದಾಯಿಸುವುದರಿಂದ ಪಾರದರ್ಶಕತೆಯನ್ನು ಎತ್ತಿ ಹಿಡಿದಂತಾಗುತ್ತದೆ. ಅಷ್ಟೇ ಅಲ್ಲದೆ, ಎಲ್ಲಾ ಪಾಲುದಾರರು, ಉದ್ಯೋಗಿಗಳು, ಹೂಡಿಕೆದಾರರು ಮತ್ತು ಭಾರತದ ಜನರ ನಂಬಿಕೆಯೂ ಬಲಗೊಳ್ಳುತ್ತದೆ ಎಂದು ಹೇಳಿದ್ದಾರೆ.

ಶಾಪೂರ್ಜಿ ಪಲ್ಲೊಂಜಿ ಕುಟುಂಬವು ಟಾಟಾ ಸನ್ಸ್‌ನಲ್ಲಿ ಶೇಕಡ 18.37ರಷ್ಟು ಷೇರು ಪಾಲು ಹೊಂದಿದೆ. ಟಾಟಾ ಸಮೂಹದ ಕಂಪನಿಗಳ ಮಾಲೀಕತ್ವ ಹೊಂದಿರುವ ಟಾಟಾ ಸನ್ಸ್‌ನಲ್ಲಿ ಶೇಕಡ 66ರಷ್ಟು ಪಾಲು ಹೊಂದಿದೆ.

ಪಾಕ್: 30 ಟಿಟಿಪಿ ಉಗ್ರರ ಹತ್ಯೆ

ಪೇಶಾವರ(ಪಿಟಿಐ): ವಾಯುವ್ಯ ಭಾಗದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಒರಕ್‌ಝೈ ಜಿಲ್ಲೆಯಲ್ಲಿ ಈ ವಾರ ನಡೆಸಿದ ಸರಣಿ 'ಪ್ರತೀಕಾರ ಕಾರ್ಯಾಚರಣೆ'ಗಳಲ್ಲಿ ತೆಹ್ರೀಕ್–ಎ–ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಸಂಘಟನೆಯ 30 ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನ ಸೇನೆ ಶುಕ್ರವಾರ ಹೇಳಿದೆ.

ಲೆಫ್ಟಿನೆಂಟ್ ಕರ್ನಲ್ ಹಾಗೂ ಮೇಜರ್ ಸೇರಿ 11 ಯೋಧರನ್ನು ಇತ್ತೀಚೆಗೆ ಟಿಟಿಪಿ ಉಗ್ರರು ಹತ್ಯೆಗೈದಿದ್ದರು. ಇದಕ್ಕೆ ಪ್ರತೀಕಾರವಾಗಿ ಸೇನೆಯು ಈ ಕಾರ್ಯಾಚರಣೆಗಳನ್ನು ಕೈಗೊಂಡಿತ್ತು.

ಜಿಲ್ಲೆಯಲ್ಲಿ ಅಕ್ಟೋಬರ್ 7ರಂದು ಉಗ್ರರು ದಾಳಿ ನಡೆಸಿದ್ದರು.

ಅಫ್ಗಾನಿಸ್ತಾನದಲ್ಲಿ ರಾಯಭಾರಿ ಕಚೇರಿ ಆರಂಭಕ್ಕೆ ತೀರ್ಮಾನ

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ಅಮೀರ್ ಖಾನ್ ಮುತ್ತಾಕಿ, 'ಭಾರತದ ಹಿತಾಸಕ್ತಿಯನ್ನು ಕಾಪಾಡಲು ಅಫ್ಗಾನಿಸ್ತಾನ ಬದ್ಧವಾಗಿದೆ. ನಮ್ಮ ನೆಲವನ್ನು ಭಾರತದ ವಿರುದ್ಧದ ಉಗ್ರ ಚಟುವಟಿಕೆಗೆ ಬಳಸಲು ಅವಕಾಶ ನೀಡುವುದಿಲ್ಲ' ಎಂದು ಹೇಳಿದರು.

'ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಹಾಗೂ ಸಿರಿಯಾ (ಐಎಸ್‌ಐಎಸ್) ಭಯೋತ್ಪಾದಕ ಸಂಘಟನೆಯೂ ಅಫ್ಗಾನಿಸ್ತಾನಕ್ಕೆ ಬಹುದೊಡ್ಡ ಸವಾಲಾಗಿದ್ದು, ಇದರ ವಿರುದ್ಧ ಕಾಬೂಲ್ ಮುಂಚೂಣಿಯಲ್ಲಿ ನಿಂತು ಹೋರಾಟ ನಡೆಸುತ್ತಿದೆ' ಎಂದರು.

ಅಭಿವೃದ್ಧಿಗೆ ಕೈ ಜೋಡಿಸಲು ಬದ್ಧ: 'ಭಾರತ ಹಾಗೂ ಅಫ್ಗಾನಿಸ್ತಾನ ನಡುವಿನ ಸ್ನೇಹ ದೃಢೀಕರಣ ಹಾಗೂ ಸಂಬಂಧಗಳ ಮುಂದುವರಿಕೆಗೆ ನಿಮ್ಮ ಭೇಟಿಯು ಮಹತ್ವದ ಹೆಜ್ಜೆಯಾಗಿದೆ. ನೆರೆ ರಾಷ್ಟ್ರವಾಗಿ, ಅಫ್ಗಾನಿಸ್ತಾನದ ಹಿತೈಷಿಯಾಗಿ ಅಲ್ಲಿನ ಅಭಿವೃದ್ಧಿ ಹಾಗೂ ಬೆಳವಣಿಗೆಯ ಕುರಿತು ಭಾರತವು ತೀವ್ರ ಆಸಕ್ತಿ ಹೊಂದಿದೆ' ಎಂದು ಸಚಿವ ಜೈಶಂಕರ್ ಅವರು ಮುತ್ತಾಕಿ ಅವರಿಗೆ ತಿಳಿಸಿದರು.

'ಅಫ್ಗಾನಿಸ್ತಾನದಲ್ಲಿ ಭಾರತ ಕೈಗೊಂಡಿರುವ ಯೋಜನೆಗಳನ್ನು ಮುಂದುವರಿಸಲಾಗುವುದು. ಹೊಸತಾಗಿ ಆರು ಯೋಜನೆಗಳನ್ನು ಸದ್ಯದಲ್ಲಿಯೇ ಘೋಷಣೆ ಮಾಡಲಾಗುವುದು. ಅಫ್ಗಾನಿಸ್ತಾನದ ಸಾರ್ವಭೌಮತೆ, ಪ್ರಾದೇಶಿಕ ಸಮಗ್ರತೆ ಹಾಗೂ ಸ್ವಾತಂತ್ರ್ಯದ ರಕ್ಷಣೆ ನಿಟ್ಟಿನಲ್ಲಿ ಭಾರತ ಪೂರ್ಣ ಬದ್ಧತೆ ವ್ಯಕ್ತಪಡಿಸಲಿದೆ' ಎಂದು ವೇಳೆ ಭರವಸೆ ನೀಡಿದರು.



ನವದೆಹಲಿಯಲ್ಲಿ ಶುಕ್ರವಾರ ಭೇಟಿಯಾದ ಭಾರತದ ವಿದೇಶಾಂಗ ಸಚಿವ ಜೈಶಂಕರ್ ಅವರು ಅಫ್ಗಾನಿಸ್ತಾನದ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಅವರ ಹಸ್ತಲಾಘವ ಮಾಡಿದರು —ಪಿಟಿಐ ಚಿತ್ರ

ಕದನ ವಿರಾಮ: ಗಾಜಾದ ಕೆಲವು ಸ್ಥಳಗಳಿಂದ ಸೇನೆ ವಾಪಸ್ ಕರೆಸಿದ ಇಸ್ರೇಲ್

ಮನೆಗೆ ಮರಳುತ್ತಿರುವ ಪ್ಯಾಲೆಸ್ಟೀನಿಯರು

ನುಸ್ರತ್ (ಎಎಫ್‌ಪಿ/ರಾಯಿಟರ್ಸ್): ಕದನ ವಿರಾಮ ಘೋಷಣೆಯಾದ ಬಳಿಕ ಗಾಜಾಪಟ್ಟಿಯ ಕೆಲವು ಸ್ಥಳಗಳಿಂದ ಇಸ್ರೇಲ್‌ನ ಸೇನಾ ಪಡೆಗಳು ಶುಕ್ರವಾರ ಮರಳಲಾರಂಭಿಸಿದವು.

ಸೇನಾ ಸಿಬ್ಬಂದಿ ಗಾಜಾದಿಂದ ಹೊರಡುತ್ತಿದ್ದಂತೆ, ಯುದ್ಧ ಆರಂಭವಾದಾಗಿನಿಂದಲೂ ಆತಂಕದಿಂದ ತಮ್ಮ ನೆಲೆ ತೊರೆದು ವಲಸೆ ಹೋಗಿದ್ದ ಅಸಂಖ್ಯಾತ ಪ್ಯಾಲೆಸ್ಟೀನಿಯನ್ನರು ಮನೆಗಳಿಗೆ ಮರಳಿದರು.

ಕದನ ವಿರಾಮ ಒಪ್ಪಂದ ಜಾರಿಗಾಗಿ ಹಾಗೂ ಒತ್ತೆಯಾಳುಗಳನ್ನು ಹಿಂದಿರುಗಿಸುವ ಸಿದ್ಧತೆಗಾಗಿ ತನ್ನ ಪಡೆಗಳು ಗುಂಡಿನ ದಾಳಿಯನ್ನು ನಿಲ್ಲಿಸಿವೆ ಎಂದು ಇಸ್ರೇಲ್ ಸೇನೆ ಘೋಷಿಸಿದೆ.

'ಇಸ್ರೇಲ್ ಪಡೆಗಳು ಮತ್ತು ಶಸ್ತ್ರಸಜ್ಜಿತ ವಾಹನಗಳು ಗಾಜಾ ಹಾಗೂ ಖಾನ್ ಯೂನಿಸ್ ನಗರಗಳಿಂದ ಹೊರಹೋಗುತ್ತಿದ್ದು, ಪ್ಯಾಲೆಸ್ಟೀನಿಯನ್ನರು ಮನೆಗಳಿಗೆ ಮರಳಲು ಬಯಸುತ್ತಿದ್ದಾರೆ' ಎಂದು ಗಾಜಾದ ನಾಗರಿಕ ರಕ್ಷಣಾ ಪಡೆ ತಿಳಿಸಿದೆ.



ಗಾಜಾದ ವಿವಿಧ ಸ್ಥಳಗಳಲ್ಲಿ ಆಶ್ರಯ ಪಡೆದಿದ್ದ ಪ್ಯಾಲೆಸ್ಟೀನಿಯನ್ನರು ಹಮಾಸ್– ಇಸ್ರೇಲ್ ನಡುವೆ ಕದನ ವಿರಾಮ ಏರ್ಪಟ್ಟಿದ್ದರಿಂದ ಶುಕ್ರವಾರ ತಮ್ಮ ಮನೆಗಳತ್ತ ಹೆಜ್ಜೆ ಹಾಕಿದರು ಎಎಫ್‌ಪಿ ಚಿತ್ರ

'ಹಮಾಸ್ ಶಸ್ತ್ರ ತ್ಯಜಿಸುವವರೆಗೆ ಸೇನೆ ಠಿಕಾಣಿ'

ಟೆಲ್ ಅವಿವ್: ಕದನ ವಿರಾಮ ಜಾರಿಗೊಂಡಿದ್ದರೂ, ಹಮಾಸ್ ಬಂಡುಕೋರರು ಸಂಪೂರ್ಣವಾಗಿ ಶಸ್ತ್ರತ್ಯಾಗ ಮಾಡುವವರೆಗೆ ಇಸ್ರೇಲ್ ಪಡೆಗಳು ಗಾಜಾದಲ್ಲಿ ಇರಲಿವೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

'ಹಮಾಸ್ ಒತ್ತೆಯಾಳಾಗಿ ಇರಿಸಿಕೊಂಡಿರುವವರ ಪೈಕಿ 20 ಜನರು ಜೀವಂತವಾಗಿದ್ದು, 28 ಮಂದಿ ಮೃತಪಟ್ಟಿದ್ದಾರೆ. ಬರುವ ದಿನಗಳಲ್ಲಿ ಎಲ್ಲ ಒತ್ತೆಯಾಳುಗಳು ಮರಳುವರು' ಎಂದೂ ಹೇಳಿದ್ದಾರೆ.

ಪ್ರಮುಖ ಅಂಶಗಳು

- ಐರೋಪ್ಯ ಒಕ್ಕೂಟ, ಪ್ಯಾಲೆಸ್ಟೀನಿಯನ್ ಪ್ರಾಧಿಕಾರ, ವಿಶ್ವಸಂಸ್ಥೆಯ ಮಾನವೀಯ ನೆರವು ಸಂಸ್ಥೆ ಸೇರಿ ಹಲವು ಸಂಘಟನೆಗಳು ಪ್ಯಾಲೆಸ್ಟೀನಿಯನ್ನರಿಗೆ ನೆರವು ನೀಡಲು ಸಜ್ಜಾಗಿ ನಿಂತಿವೆ
- ಮಕ್ಕಳು, ಮಹಿಳೆಯರು ಗೃಹ ಬಳಕೆ ಹಾಗೂ ಇತರ ವಸ್ತುಗಳಿರುವ ಚೀಲಗಳನ್ನು ಹೊತ್ತು ತಮ್ಮ ಮನೆಗಳತ್ತ ಹೆಜ್ಜೆ ಹಾಕುತ್ತಿದ್ದಾರೆ
- ಗಾಜಾ ದಕ್ಷಿಣದಿಂದ ಉತ್ತರ ಭಾಗಕ್ಕೆ ಪ್ರಮುಖ ರಸ್ತೆಗಳ ಮೂಲಕ ಸಾಗಲು ಅನುವು ಮಾಡಿಕೊಡುವುದಾಗಿ ಇಸ್ರೇಲ್ ಸೇನೆ ಹೇಳಿದೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಗುರುತು ಪರಿಶೀಲನೆಗೆ ವ್ಯವಸ್ಥೆ

ಬಿಹಾರ: ಬುರ್ಖಾ ಧರಿಸಿ ಬರುವ ಮತದಾರರ 'ಗೌರವಯುತ' ಪರಿಶೀಲನೆ

ನವದೆಹಲಿ (ಪಿಟಿಐ): ಬಿಹಾರ ವಿಧಾನಸಭಾ ಚುನಾವಣೆ ವೇಳೆ ಬುರ್ಖಾ ಅಥವಾ ಪರ್ದಾ ಧರಿಸಿ ಮತದಾನ ಕೇಂದ್ರಗಳಿಗೆ ಬರುವ ಮತದಾರರ ಗುರುತನ್ನು 'ಗೌರವಯುತ' ರೀತಿಯಲ್ಲಿ ಪರಿಶೀಲಿಸಲು ವಿಶೇಷ ವ್ಯವಸ್ಥೆಗಳನ್ನು ಮಾಡಲಾಗುವುದು ಎಂದು ಕೇಂದ್ರ ಚುನಾವಣಾ ಆಯೋಗ ಶುಕ್ರವಾರ ತಿಳಿಸಿದೆ.

ಬುರ್ಖಾಧಾರಿ ಮತದಾರರ ಗುರುತನ್ನು ಪರಿಶೀಲಿಸಲು ಬಿಹಾರದ ಎಲ್ಲಾ ಮತಗಟ್ಟೆಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಜರಿರುತ್ತಾರೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಬಿಹಾರ ಚುನಾವಣೆಯ ವೇಳಾಪಟ್ಟಿ ಪ್ರಕಟಿಸುವ ಸಂದರ್ಭದಲ್ಲಿ ಹೇಳಿದ್ದರು.

ಬುರ್ಖಾ ಧರಿಸಿದ ಮಹಿಳೆಯರ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದ ಅವರು, ಮತಗಟ್ಟೆಗಳಲ್ಲಿ ಗುರುತಿನ ಪರಿಶೀಲನೆಯ ಬಗ್ಗೆ ಚುನಾವಣಾ ಆಯೋಗದ ಸ್ಪಷ್ಟ ಮಾರ್ಗಸೂಚಿಗಳಿದ್ದು, ಅವುಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುವುದು. ಮಹಿಳೆಯರ ಗೋಪ್ಯತೆಯನ್ನು ಖಾತರಿಪಡಿಸಲಾಗುವುದು. ಮಹಿಳಾ ಅಧಿಕಾರಿಗಳ ಸಮ್ಮುಖದಲ್ಲಿ ಗುರುತು ಪರಿಶೀಲನೆ ನಡೆಯಲಿದೆ ಎಂದಿದ್ದರು.

90,712 ಅಂಗನವಾಡಿ ಕಾರ್ಯಕರ್ತೆಯರನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗುವುದು ಎಂದು ಆಯೋಗ ತಿಳಿಸಿದೆ. 'ಮತಗಟ್ಟೆಗಳಿಗೆ ಬುರ್ಖಾ ಧರಿಸಿ ಬರುವ ಮಹಿಳಾ ಮತದಾರರ ಚಹರೆಯನ್ನು ಅವರ ಮತದಾರರ ಚೀಟಿಯಲ್ಲಿನ ಭಾವಚಿತ್ರದ ಜತೆಗೆ ಸರಿಯಾಗಿ ಪರಿಶೀಲಿಸಬೇಕು' ಎಂದು ಬಿಜೆಪಿ ಬಿಹಾರ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಜೈಸ್ವಾಲ್ ಈಚೆಗೆ ಒತ್ತಾಯಿಸಿದ್ದರು.

ಬಿಹಾರ ವಿಧಾನಸಭೆಯ 243 ಸ್ಥಾನಗಳಿಗೆ ಎರಡು ಹಂತಗಳಲ್ಲಿ (ನ.6 ಮತ್ತು 11) ಮತದಾನ ನಡೆಯಲಿದೆ. ಮತ ಎಣಿಕೆ ನ. 14ರಂದು ನಡೆಯಲಿದೆ.

ಸಂತೋಷ್ ಕುಶ್ವಾಹ ಆರ್‌ಜೆಡಿಗೆ

ಪಟ್ನಾ (ಪಿಟಿಐ): ಜೆಡಿಯು ನಾಯಕ, ಮಾಜಿ ಸಂಸದರೂ ಆಗಿರುವ ಸಂತೋಷ್ ಕುಶ್ವಾಹ ಅವರು ಬಿಹಾರ ವಿಧಾನಸಭಾ ಚುನಾವಣೆಗೆ ಮುನ್ನ ಆರ್‌ಜೆಡಿ ಸೇರಿದ್ದಾರೆ. ಮಾಜಿ ಶಾಸಕ ರಾಹುಲ್ ಶರ್ಮಾ ಅವರೂ ಜೆಡಿಯು ತೊರೆದು ಆರ್‌ಜೆಡಿ ಸೇರಿದರು. ಪಕ್ಷದ ನಾಯಕ ತೇಜಸ್ವಿ ಯಾದವ್ ಅವರ ಸಮ್ಮುಖದಲ್ಲಿ ಶುಕ್ರವಾರ ಇಬ್ಬರೂ ಆರ್‌ಜೆಡಿಗೆ ಸೇರ್ಪಡೆಯಾದರು.

ಕುಶ್ವಾಹ ಅವರು ಪೂರ್ಣಿಯಾ ಲೋಕಸಭಾ ಕ್ಷೇತ್ರದಿಂದ ಜೆಡಿಯು ಟಿಕೆಟ್‌ನಿಂದ ಸ್ಪರ್ಧಿಸಿ ಸತತ ಎರಡು ಸಲ (2014 ಮತ್ತು 2019) ಗೆದ್ದಿದ್ದರು. ಆದರೆ ಕಳೆದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಪಪ್ಪು ಯಾದವ್ ಎದುರು ಸೋತಿದ್ದರು.

ಲೋಕ ಜನಶಕ್ತಿ ಪಾರ್ಟಿ ನಾಯಕ ಅಜಯ್ ಕುಶ್ವಾಹ ಮತ್ತು ಬಾಂಕಾ ಕ್ಷೇತ್ರದ ಸಂಸದ ಗಿರಿಧಾರಿ ಪ್ರಸಾದ್ ಯಾದವ್ ಅವರ ಪುತ್ರ ಚಾಣಕ್ಯ ಪ್ರಸಾದ್ ರಂಜನ್ ಕೂಡಾ ಆರ್‌ಜೆಡಿ ಸೇರ್ಪಡೆಯಾದರು. ಕುಶ್ವಾಹ ಮತ್ತು ಭೂಮಿಹಾರ್ ಸಮುದಾಯಗಳ ಬೆಂಬಲ ಪಡೆಯುವ ತಂತ್ರದ ಭಾಗವಾಗಿ ಆರ್‌ಜೆಡಿಯು ಈ ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಂಡಿದೆ ಎಂದು ವಿಶ್ಲೇಷಿಸಲಾಗಿದೆ.

ತಾಂತ್ರಿಕ ದೋಷವಲ್ಲ: ಏರ್ ಇಂಡಿಯಾ

ಮುಂಬೈ (ಪಿಟಿಐ): 'ಅಕ್ಟೋಬರ್ 4ರಂದು ಏರ್ ಇಂಡಿಯಾ 787 ಡ್ರೀಮ್‌ಲೈನರ್ ವಿಮಾನದಲ್ಲಿ ರ‍್ಯಾಮ್ ಏರ್‌ಟರ್ಬೈನ್ (ಆರ್‌ಎಟಿ) ಶನಿವಾರ ಅನಿರೀಕ್ಷಿತವಾಗಿ ತೆರೆದುಕೊಳ್ಳಲು ವ್ಯವಸ್ಥೆಯಲ್ಲಿನ ದೋಷವಾಗಲೀ ಅಥವಾ ಪೈಲಟ್ ಕಾರಣವಲ್ಲ' ಎಂದು ಏರ್ ಇಂಡಿಯಾ ಸಂಸ್ಥೆಯು ನಡೆಸಿದ ಪ್ರಾಥಮಿಕ ತನಿಖೆಯಲ್ಲಿ ತೀರ್ಮಾನಕ್ಕೆ ಬರಲಾಗಿದೆ.

ಅಮೃತಸರದಿಂದ ಬರ್ಮಿಂಗ್‌ಹ್ಯಾಮ್‌ಗೆ ಹೊರಟಿದ್ದ ವಿಮಾನದಲ್ಲಿ ಸ್ವಯಂಚಾಲಿತವಾಗಿ ಆರ್‌ಎಟಿ ತೆರೆದುಕೊಂಡಿತ್ತು. ಬಳಿಕ ವಿಮಾನವು ಸುರಕ್ಷಿತವಾಗಿ ಭೂಸ್ಪರ್ಶ ಮಾಡಿತ್ತು. 500 ಅಡಿ ಎತ್ತರದಲ್ಲಿ ಘಟನೆ ನಡೆದಿದೆ ಎಂದು ಭಾರತೀಯ ಪೈಲಟ್‌ಗಳ ಫೆಡರೇಷನ್ ತಿಳಿಸಿತ್ತು.

'ರ‍್ಯಾಮ್ ಏರ್‌ಟರ್ಬೈನ್ (ಆರ್‌ಎಟಿ) ಶನಿವಾರ ಅನಿರೀಕ್ಷಿತವಾಗಿ ತೆರೆದುಕೊಳ್ಳಲು ವ್ಯವಸ್ಥೆಯಲ್ಲಿನ ದೋಷವಲ್ಲ, ಪೈಲಟ್ ಕಾರಣವಲ್ಲ' ಎಂದು ಏರ್ ಇಂಡಿಯಾ ಸಂಸ್ಥೆಯು ನಡೆಸಿದ ಪ್ರಾಥಮಿಕ ತನಿಖೆಯಲ್ಲಿ ತೀರ್ಮಾನಕ್ಕೆ ಬರಲಾಗಿದೆ.

ಕೆಮ್ಮಿನ ಸಿರಪ್: ಪಿಐಎಲ್ ವಜಾ

ನವದೆಹಲಿ (ಪಿಟಿಐ): ಕೆಮ್ಮಿನ 'ಕಲುಷಿತ' ಸಿರಪ್ ಸೇವಿಸಿ ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಮಕ್ಕಳು ಮೃತಪಟ್ಟ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿ ಉಜ್ಜಲ್ ಭುಯಾನ್, ಕೆ. ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠವು, ವಕೀಲ ವಿಶಾಲ್ ತಿವಾರಿ ಸಲ್ಲಿಸಿದ್ದ ಪಿಐಎಲ್ ವಜಾಗೊಳಿಸುವ ಮುನ್ನ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ವಾದವನ್ನು ಆಲಿಸಿತು. ಸಾಲಿಸಿಟರ್ ಜನರಲ್ ಪಿಐಎಲ್‌ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಸದ್ಯ ಈ ಪ್ರಕರಣದಲ್ಲಿ ಮಧ್ಯಪ್ರದೇಶ, ತಮಿಳುನಾಡು ಅಥವಾ ಇತರೆ ರಾಜ್ಯವನ್ನು ಪ್ರತಿನಿಧಿಸಿ ನಾನು ಕೋರ್ಟ್‌ಗೆ ಬಂದಿಲ್ಲ. ಆದರೆ, 'ಕಲುಷಿತ' ಸಿರಪ್ ವಿಷಯದಲ್ಲಿ ಈಗಾಗಲೇ ಈ ರಾಜ್ಯಗಳು ತೆಗೆದುಕೊಂಡಿರುವ ಕ್ರಮಗಳನ್ನು ದುರ್ಬಲಗೊಳಿಸುವುದು ಸರಿಯಲ್ಲ. ಅಲ್ಲಿ ಕಾನೂನು ಜಾರಿ ವಿಧಾನಗಳು ಸಮರ್ಪಕವಾಗಿದೆ' ಎಂದು ಸಾಲಿಸಿಟರ್ ಜನರಲ್ ನ್ಯಾಯಪೀಠಕ್ಕೆ ಅರುಹಿದರು.

ಆರಂಭದಲ್ಲಿ ನೋಟಿಸ್ ಜಾರಿಗೊಳಿಸುವ ಬಗ್ಗೆ ಪೀಠ ಅಭಿಪ್ರಾಯ ವ್ಯಕ್ತಪಡಿಸಿತಾದರೂ, ಸಾಲಿಸಿಟರ್ ಜನರಲ್ ಆಕ್ಷೇಪದ ನಂತರ, ಪಿಐಎಲ್ ತಿರಸ್ಕರಿಸಿರುವುದಾಗಿ ಪ್ರಕಟಿಸಿತು. 'ಅರ್ಜಿದಾರರು ದಿನಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿ ಓದಿ, ಕೋರ್ಟ್‌ಗೆ ಧಾವಿಸಿದ್ದಾರೆ' ಎಂದು ನ್ಯಾಯಪೀಠ ಹೇಳಿತು.

'ಸಿಬಿಐ ತನಿಖೆಯ ಜತೆಗೆ ಔಷಧ ಸುರಕ್ಷತಾ ಕಾರ್ಯವಿಧಾನಗಳಲ್ಲಿ ವ್ಯವಸ್ಥಿತ ಬದಲಾವಣೆ' ತರುವಂತೆಯೂ ಅರ್ಜಿದಾರರು ಕೋರಿದರು. ಅರ್ಜಿದಾರರನ್ನು ಉದ್ದೇಶಿಸಿ, 'ನೀವು ಇದುವರೆಗೆ ಸುಪ್ರೀಂಕೋರ್ಟ್‌ನಲ್ಲಿ ಇಂತಹ ಎಷ್ಟು ಪಿಐಎಲ್ ಸಲ್ಲಿಸಿದ್ದೀರಾ' ಎಂದು ನ್ಯಾಯಪೀಠ ಪ್ರಶ್ನಿಸಿತು. ಇದಕ್ಕೆ ವಕೀಲ ತಿವಾರಿ, '8ರಿಂದ 10' ಎಂದು ಉತ್ತರಿಸಿದರು. ತಕ್ಷಣವೇ ನ್ಯಾಯಪೀಠ, 'ಪಿಐಎಲ್ ವಜಾಗೊಳಿಸಲಾಗಿದೆ' ಎಂದು ಪ್ರಕಟಿಸಿತು.

ವಾಪಸ್ ಪಡೆಯಲು ಆಗ್ರಹ

ಮುಂಬೈ (ಪಿಟಿಐ): 'ಕೋಲ್ಡ್ರಿಫ್' ಸೇರಿದಂತೆ ಅಪಾಯಕಾರಿ ಮತ್ತು ಅಸುರಕ್ಷಿತ ಕೆಮ್ಮಿನ ಸಿರಪ್‌ಗಳನ್ನು ಮಾರುಕಟ್ಟೆಯಿಂದ ವಾಪಸ್ ಪಡೆಯುವಂತೆ ಮುಂಬೈನ ಗ್ರಾಹಕ ಪಂಚಾಯಿತಿಯು (ಎಂಜಿಪಿ) ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರವನ್ನು (ಸಿಸಿಪಿಎ) ಆಗ್ರಹಿಸಿದೆ.

ಕೆಮ್ಮಿನ ಕಲುಷಿತ ಸಿರಪ್‌ನಲ್ಲಿರುವ ಡಿ–ಎಥಿಲೀನ್ ಗ್ಲೈಕಾಲ್‌ನಿಂದ (ಡಿಇಜಿ) ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಮಕ್ಕಳ ಸಾವು ಸಂಭವಿಸಿದೆ. ಸ್ರೇಸಾನ್ ಫಾರ್ಮಾಸ್ಯುಟಿಕಲ್ಸ್ ತಯಾರಿಸುವ 'ಕೋಲ್ಡ್ರಿಫ್' ಅನ್ನು ಈಗಾಗಲೇ ಹಲವು ರಾಜ್ಯಗಳಲ್ಲಿ ನಿಷೇಧಿಸಲಾಗಿದೆ. 'ಸಿಸಿಪಿಎ' ಈ ವಿಷಯದಲ್ಲಿ ತುರ್ತಾಗಿ ಮಧ್ಯಪ್ರವೇಶ ಮಾಡಬೇಕು, ಕೆಮ್ಮಿನ ಕಲುಷಿತ ಸಿರಪ್‌ಗಳನ್ನು ಮಾರುಕಟ್ಟೆಯಿಂದ ವಾಪಸ್ ಪಡೆಯಬೇಕು ಎಂದು ಎಂಜಿಪಿ ಆಗ್ರಹಿಸಿದೆ.

ಕೇಂದ್ರದ ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ದೇಶದಾದ್ಯಂತ ಜೈಲುಗಳಲ್ಲಿರುವ ಸುಮಾರು 4.5 ಲಕ್ಷ ವಿಚಾರಣಾಧೀನ ಕೈದಿಗಳಿಗೆ ಮತದಾನದ ಹಕ್ಕನ್ನು ನೀಡುವಂತೆ ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗದ ಪ್ರತಿಕ್ರಿಯೆ ಕೇಳಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ.ವಿನೋದ್ ಚಂದ್ರನ್ ಅವರ ಪೀಠವು ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರ ವಾದವನ್ನು ಆಲಿಸಿತು. ಪಂಜಾಬ್‌ನ ಪಟಿಯಾಲ ನಿವಾಸಿ ಸುನಿತಾ ಶರ್ಮಾ ಅರ್ಜಿ ಸಲ್ಲಿಸಿದ್ದಾರೆ.

ಹಂತ ಹಂತವಾಗಿ ಎಸ್‌ಐಆರ್

ನವದೆಹಲಿ (ಪಿಟಿಐ): ಕೇಂದ್ರ ಚುನಾವಣಾ ಆಯೋಗವು ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಹಂತ ಹಂತವಾಗಿ ನಡೆಸಲು ಸಿದ್ಧತೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂದಿನ ವರ್ಷ ವಿಧಾನಸಭಾ ಚುನಾವಣೆ ನಡೆಯಲಿರುವ ರಾಜ್ಯಗಳ ಮೂಲಕ ಈ ಪ್ರಕ್ರಿಯೆಯನ್ನು ಆರಂಭಿಸುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ 2026ರಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಮೊದಲ ಹಂತದಲ್ಲಿ ಈ ಐದು ಕಡೆಗಳಲ್ಲಿ ಅಲ್ಲದೆ ಇತರ ಕೆಲವು ರಾಜ್ಯಗಳಲ್ಲೂ ಎಸ್‌ಐಆರ್ ನಡೆಯಲಿದೆ.

ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಸೆಪ್ಟೆಂಬರ್ 30ರಂದು ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ. ಪಟ್ಟಿಯಲ್ಲಿ 7.42 ಕೋಟಿ ಮತದಾರರ ಹೆಸರು ಇದೆ.

ಎಸ್‌ಐಆರ್ ಕುರಿತು ವಿವಿಧ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳೊಂದಿಗೆ ಆಯೋಗದ ಹಿರಿಯ ಅಧಿಕಾರಿಗಳು ಈಚೆಗೆ ಮಹತ್ವದ ಸಭೆ ನಡೆಸಿದ್ದರು. ಎಸ್‌ಐಆರ್ ಪ್ರಕ್ರಿಯೆಗೆ ಸೆಪ್ಟೆಂಬರ್ 30ರೊಳಗೆ ಸಜ್ಜಾಗುವಂತೆ ಚುನಾವಣಾ ಆಯೋಗವು ವಿವಿಧ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಕೇಳಿಕೊಂಡಿತ್ತು.

'ಚುನಾವಣೆ ನಡೆಯುವಲ್ಲಿ ಸದ್ಯಕ್ಕಿಲ್ಲ'

ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಡೆಯುತ್ತಿರುವ ಅಥವಾ ಶೀಘ್ರದಲ್ಲೇ ನಡೆಯಲಿರುವ ರಾಜ್ಯಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಸದ್ಯ ಕೈಗೊಳ್ಳುವುದಿಲ್ಲ ಎಂದು ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾರ್ಥನೆ

ಎಎಫ್‌ಪಿ ಚಿತ್ರ



ಸೂಫಿ ಸಂತ ಶೇಖ್ ಅಬ್ದುಲ್ ಖಾದಿರ್ ಜೀಲಾನಿ ಪುಣ್ಯಸ್ಮರಣೆ ಅಂಗವಾಗಿ ಶ್ರೀನಗರದಲ್ಲಿ ಮುಸ್ಲಿಂ ಮಹಿಳೆಯರು ಶುಕ್ರವಾರ ಪ್ರಾರ್ಥನೆ ಸಲ್ಲಿಸಿದರು

'ಸಹಕಾರ ಮಾರ್ಗ ಚಿಂತನೆ'

ಮುಂಬೈ (ಪಿಟಿಐ): ಭಾರತ ಹಾಗೂ ಬ್ರಿಟನ್ ನಡುವೆ ರಕ್ಷಣಾ ವ್ಯವಹಾರಗಳ ಸಹಕಾರ ವೃದ್ಧಿಪಡಿಸುವ ಮಾರ್ಗಗಳ ಕುರಿತು ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಹಾಗೂ ಬ್ರಿಟನ್‌ನ ರಕ್ಷಣಾ ಖಾತೆ ರಾಜ್ಯ ಸಚಿವ ವೆರ್ನ್ ಕೊಕರ್ ಶುಕ್ರವಾರ ವಿಸ್ತೃತ ಚರ್ಚೆ ನಡೆಸಿದರು.

ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹಾಗೂ ಪ್ರಧಾನಿ ನರೇಂದ್ರ ಮೋದಿ ನಡುವೆ ಮುಂಬೈನಲ್ಲಿ ಸಶಸ್ತ್ರ ಪಡೆಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ವಿಸ್ತೃತ ಚರ್ಚೆ ನಡೆಸಿದ ಮರುದಿನವೇ ಈ ಸಭೆಯೂ ನಡೆದಿದೆ.

'ಬ್ರಿಟನ್‌ನ ರಾಜ ವೇಲ್ಸ್ ನೇತೃತ್ವದ ಸಿಎಸ್‌ಜಿ ಭಾರತದ ಪಶ್ಚಿಮ ಕರಾವಳಿಯಲ್ಲಿ ಭಾರತೀಯ ನೌಕಾಪಡೆಯ ಜೊತೆಗೆ ದ್ವಿಪಕ್ಷೀಯ ಕಡಲಾಭ್ಯಾಸ ಕೊಂಕಣ್–25 ಯಶಸ್ವಿಯಾಗಿ ಪೂರ್ಣಗೊಳಿಸಿದೆ' ಎಂದು ಸಂಜಯ್ ಸೇಠ್ ತಿಳಿಸಿದರು.

'ಸದ್ಯ ಈ ಪಡೆಯು ಮುಂಬೈ ಹಾಗೂ ಗೋವಾದಲ್ಲಿ ಸಮುದ್ರ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದೆ. ಇಂತಹ ಕಾರ್ಯಾಚರಣಾ ಸಂವಹನಗಳು ಪರಸ್ಪರ ತಿಳಿವಳಿಕೆ ಹೆಚ್ಚಿಸಿ, ಎರಡು ನೌಕಾಪಡೆಗಳ ಕಾರ್ಯಸಾಧ್ಯತೆಗೆ ಗಮನಾರ್ಹ ಕೊಡುಗೆ ನೀಡುತ್ತವೆ' ಎಂದು ತಿಳಿಸಿದರು.

ಆದೇಶ ಕಾಯ್ದಿರಿಸಿದ ಸುಪ್ರೀಂ

ನವದೆಹಲಿ (ಪಿಟಿಐ): ಕರೂರು ಕಾಲ್ತುಳಿತ ಪ್ರಕರಣದಲ್ಲಿ ಎಸ್‌ಐಟಿ ರಚನೆಗೆ ಮದ್ರಾಸ್ ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ, ನಟ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ಸಲ್ಲಿಸಿದ್ದ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಆದೇಶವನ್ನು ಕಾಯ್ದಿರಿಸಿದೆ.

ಟಿವಿಕೆ ಪಕ್ಷ ಸೆಪ್ಟೆಂಬರ್ 27ರಂದು ಕರೂರಿನಲ್ಲಿ ರ‍್ಯಾಲಿ ನಡೆಸಿದ್ದ ವೇಳೆ ಕಾಲ್ತುಳಿತ ಸಂಭವಿಸಿತ್ತು. ಘಟನೆಯಲ್ಲಿ 41 ಮಂದಿ ಮೃತಪಟ್ಟಿದ್ದರು.

ಶುಕ್ರವಾರ ಅರ್ಜಿಯ ವಿಚಾರಣೆ ನಡೆಸಿದ ಜೆ.ಕೆ ಮಹೇಶ್ವರಿ ಮತ್ತು ಎನ್. ವಿ. ಅಂಜಾರಿಯಾ ಅವರ ಪೀಠವು, ತಮಿಳುನಾಡು ಸರ್ಕಾರ ಮತ್ತು ಟಿವಿಕೆ ಪಕ್ಷದ ಪರವಾಗಿ ಹಾಜರಾದ ವಕೀಲರ ವಾದವನ್ನು ಆಲಿಸಿತು.

ಮದ್ರಾಸ್ ಹೈಕೋರ್ಟ್ ನೀಡಿದ ಎಸ್‌ಐಟಿ ರಚನೆ ಆದೇಶವನ್ನು ಪ್ರಶ್ನಿಸಿದ ಪೀಠ, 'ಈ ವಿಷಯದಲ್ಲಿ ಹೈಕೋರ್ಟ್ ಹೇಗೆ ಮುಂದುವರಿಯಿತು ಎನ್ನುವುದೇ ನಮಗೆ ಅರ್ಥವಾಗುತ್ತಿಲ್ಲ' ಎಂದು ಆಶ್ಚರ್ಯ ವ್ಯಕ್ತಪಡಿಸಿತು.

ಟಿವಿಕೆ ಪರವಾಗಿ ಹಾಜರಾದ ವಕೀಲ ಗೋಪಾಲ ಸುಬ್ರಮಣಿಯಂ ಅವರು, ರಾಜಕೀಯ ಪಕ್ಷದ ರ‍್ಯಾಲಿಗೆ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ರಚಿಸುವಂತೆ ಮನವಿ ಸಲ್ಲಿಸಿದರು.

ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ತನಿಖೆ ನಡೆಸಬೇಕೆಂದು ಟಿವಿಕೆ ಆಗ್ರಹಿಸಿದೆ. ಎಸ್‌ಐಟಿಯಲ್ಲಿ ತಮಿಳುನಾಡಿನ ಪೊಲೀಸ್ ಅಧಿಕಾರಿಗಳು ಮಾತ್ರ ಇದ್ದಾರೆ. ಇವರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದೆ.

'ಕ್ರಿಮಿನಲ್ ಪ್ರಕರಣ ದಾಖಲಿಸಿ'

ಕೊಚ್ಚಿ (ಪಿಟಿಐ): ಶಬರಿಮಲೆ ಅಯ್ಯಪ್ಪ ದೇವಸ್ಥಾನದ ದ್ವಾರಪಾಲಕ ಮೂರ್ತಿಗಳ ಕವಚದಲ್ಲಿನ ಚಿನ್ನದ ಕಳವು ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಕೇರಳ ಹೈಕೋರ್ಟ್ ರಾಜ್ಯ ಪೊಲೀಸ್ ಇಲಾಖೆಗೆ ಶುಕ್ರವಾರ ಸೂಚಿಸಿದೆ.

'ಇದುವರೆಗಿನ ತನಿಖೆಯನ್ನು ಗಮನಿಸಿದಾಗ, ದ್ವಾರಪಾಲಕ ಮೂರ್ತಿಗಳ ಕವಚದ ಚಿನ್ನ ಲೇಪನ ಕಾರ್ಯದಲ್ಲಿ ಚಿನ್ನದ ದುರುಪಯೋಗ ಆಗಿರುವುದು ಕಂಡುಬಂದಿದೆ' ಎಂದು ನ್ಯಾಯಮೂರ್ತಿಗಳಾದ ರಾಜ ವಿಜಯರಾಘವನ್ ವಿ ಮತ್ತು ಕೆ.ವಿ ಜಯಕುಮಾರ್ ಅವರ ಪೀಠವು ಅಭಿಪ್ರಾಯಪಟ್ಟಿತು.

'ಈ ಪ್ರಕರಣದಲ್ಲಿ ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಿ, 6 ವಾರಗಳಲ್ಲಿ ಸಮಗ್ರ ವರದಿ ಸಲ್ಲಿಸುವಂತೆ ಹಾಗೂ ಪ್ರತಿ ವಾರವೂ ತನಿಖೆಯ ಸ್ಥಿತಿಗತಿಯನ್ನು ಕೋರ್ಟ್‌ಗೆ ತಿಳಿಸುವಂತೆ ಎಸ್‌ಐಟಿ ಮುಖ್ಯಸ್ಥ ಎಡಿಜಿಪಿ ಎಚ್. ವೆಂಕಟೇಶ್ ಅವರಿಗೆ ನ್ಯಾಯಪೀಠ ಸೂಚಿಸಿತು.

ಲೋಪ: ಚಿನ್ನ ಕಳುವು 'ಗಂಭೀರ ಲೋಪ' ಎಂದು ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಮಾಜಿ ಅಧ್ಯಕ್ಷ ಎ. ಪದ್ಮಕುಮಾರ್ ಹೇಳಿದ್ದಾರೆ. 'ಒಂದು ವೇಳೆ ದೇವಸ್ಥಾನದ ಸಿಬ್ಬಂದಿ, ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದರೆ ಖಂಡಿತ ಶಿಕ್ಷೆಯಾಗಬೇಕು. ನನ್ನಿಂದಲೂ ಏನಾದರೂ ಲೋಪ ಆಗಿದ್ದರೆ, ಕಾನೂನು ಕ್ರಮ ಎದುರಿಸಲು ಸಿದ್ಧನಿದ್ದೇನೆ' ಎಂದು ಹೇಳಿದ್ದಾರೆ.

ನಿರ್ಬಂಧ ತೆರವು

ಲೇಹ್ (ಪಿಟಿಐ): ಮೊಬೈಲ್ ಇಂಟರ್‌ನೆಟ್ ಬಳಕೆಯ ಮೇಲೆ ಹೇರಲಾಗಿದ್ದ ನಿರ್ಬಂಧವನ್ನು ಲೇಹ್ ಜಿಲ್ಲಾಡಳಿತ ಶುಕ್ರವಾರ ತೆರವುಗೊಳಿಸಿದೆ.

ಜಾಲತಾಣಗಳ ಮೂಲಕ ಸುಳ್ಳು ಸುದ್ದಿ ಹರಡಿದರೆ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದರೆ ಕಠಿಣ ಕಾನೂನು ಕ್ರಮಗಳನ್ನು ಎದುರಿಸಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಎಚ್ಚರಿಕೆ ನೀಡಿದ್ದಾರೆ.

ನಿರ್ಬಂಧವು ಮುಂದಿನ ಎರಡು ತಿಂಗಳು ಜಾರಿಯಲ್ಲಿ ಇರಲಿದೆ. ವಾಟ್ಸ್‌ಆ್ಯಪ್ ಗುಂಪುಗಳ ಅಡ್ಮಿನ್‌ಗಳು ಸುಳ್ಳು ಸುದ್ದಿ ತಮ್ಮ ಗುಂಪುಗಳ ಮೂಲಕ ಹರಡದಂತೆ ತಡೆಯಬೇಕು. ಇಂತಹ ಸಂದೇಶ ಕಂಡುಬಂದರೆ ತಕ್ಷಣ ಅಳಿಸಿ ಹಾಕಬೇಕು. ಇದಕ್ಕಾಗಿ ಗುಂಪುಗಳಲ್ಲಿ 'ಅಡ್ಮಿನ್ ಓನ್ಲಿ' ಆಯ್ಕೆಯನ್ನು ಸಕ್ರಿಯಗೊಳಿಸಿ ಇಟ್ಟುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ರೊಮಿಲ್ ಸಿಂಗ್ ಡಂಕ್ ಆದೇಶದಲ್ಲಿ ತಿಳಿಸಿದ್ದಾರೆ.

27ರಿಂದ 'ಚಾಲೆಂಜ್' ಬ್ಯಾಡ್ಮಿಂಟನ್ ಟೂರ್ನಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಚೀಫ್ ಮಿನಿಸ್ಟರ್ಸ್ ಮಂಗಳೂರು' ಇಂಡಿಯಾ ಇಂಟರ್ ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿ ಅ.27ರಿಂದ ನ.2ರ ವರೆಗೆ ನಗರದ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್, ಭಾರತ ಬ್ಯಾಡ್ಮಿಂಟನ್ ಸಂಸ್ಥೆ, ರಾಜ್ಯದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಸಹಯೋಗದಲ್ಲಿ ನಡೆಯುವ ಟೂರ್ನಿಯಲ್ಲಿ 12 ದೇಶಗಳ ಆಟಗಾರರು ಪಾಲ್ಗೊಳ್ಳಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು' ಎಂದರು.

ಟೂರ್ನಿಗೆ ಒಟ್ಟು ₹2.5 ಕೋಟಿ ವೆಚ್ಚವಾಗಲಿದ್ದು, ರಾಜ್ಯ ಸರ್ಕಾರ ₹1 ಕೋಟಿ ನೆರವು ನೀಡಿದೆ ಎಂದು ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಸಂಸ್ಥೆಯ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ ತಿಳಿಸಿದರು.



ಕೂಪರ್ ಕಾನೊಲಿ

'ರೋಹಿತ್–ಕೊಹ್ಲಿ ಜೊತೆಗೆ ಆಡಲು ಕಾತರಿಸುತ್ತಿರುವೆ'

ಮೆಲ್ಬರ್ನ್ (ಪಿಟಿಐ): ವಿಶ್ವದರ್ಜೆಯ ಆಟಗಾರರಾದ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಅವರೊಂದಿಗೆ ಮೈದಾನದಲ್ಲಿ ಆಡಲು ಕಾತರದಿಂದ ಕಾಯುತ್ತಿದ್ದೇನೆ ಎಂದು ಆಸ್ಟ್ರೇಲಿಯಾದ ಉದಯೋನ್ಮುಖ ಆಟಗಾರ ಕೂಪರ್ ಕಾನೊಲಿ ಹೇಳಿದ್ದಾರೆ.

'ರೋಹಿತ್ ಹಾಗೂ ಕೊಹ್ಲಿ ಅವರ ಜೊತೆ ಈ ಹಿಂದೆಯೂ ಆಡಿದ್ದೇನೆ. ಆದರೆ, ಅವರೊಂದಿಗೆ ಕೊನೆಯ ಬಾರಿಗೆ ಮೈದಾನ ಹಂಚಿಕೊಳ್ಳುವುದು ಗೌರವದ ವಿಷಯ ಎಂದೇ ಭಾವಿಸಿರುವೆ' ಎಂದು ಕಾನೊಲಿ ಅವರು 'ದಿ ವೆಸ್ಟ್ ಆಸ್ಟ್ರೇಲಿಯಾ' ಪತ್ರಿಕೆಯ ಸಂದರ್ಶನದಲ್ಲಿ ಹೇಳಿದ್ದಾರೆ.

'ಈ ಸರಣಿಯ ಪ್ರಮುಖ ಆಕರ್ಷಣೆಯೇ ಈ ಇಬ್ಬರು ಆಟಗಾರರು. ಅವರ ಆಟ ಕಣ್ತುಂಬಿಕೊಳ್ಳಲು ಬಹಳಷ್ಟು ಅಭಿಮಾನಿಗಳು ಕ್ರೀಡಾಂಗಣದಲ್ಲಿ ಜಮಾಯಿಸಲಿದ್ದಾರೆ' ಎಂದು ಅವರು ಹೇಳಿದ್ದಾರೆ.

ಟಿ20 ಮತ್ತು ಟೆಸ್ಟ್ ಮಾದರಿಗೆ ವಿದಾಯ ಹೇಳಿರುವ ರೋಹಿತ್ ಮತ್ತು ಕೊಹ್ಲಿ ಅವರು ಆಸ್ಟ್ರೇಲಿಯಾ ಎದುರು ಇದೇ 19ರಂದು ಆರಂಭವಾಗುವ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ದೆಹಲಿಯಲ್ಲಿ ಯಶಸ್ವಿ ಜೈಸ್ವಾಲ್ ದರ್ಬಾರ್

ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್: ಮೊದಲ ದಿನವೇ ದೊಡ್ಡ ಮೊತ್ತ ಪೇರಿಸಿದ ಭಾರತ

• ಸಿಡ್ನಿ ಕಿರಣ್

ಮುಖ್ಯಾಂಶಗಳು

- ಇನಿಂಗ್ಸ್‌ಗೆ ಉತ್ತಮ ಆರಂಭ ನೀಡಿದ ಯಶಸ್ವಿ–ರಾಹುಲ್
- ಸ್ವಲ್ಪ ಅಂತರದಲ್ಲಿ ಶತಕ ಕೈತಪ್ಪಿಸಿಕೊಂಡ ಸಾಯಿ ಸುದರ್ಶನ್
- ನಾಯಕತ್ವ ವಹಿಸಿಕೊಂಡ ನಂತರ ಮೊದಲ ಸಲ ಟಾಸ್ ಜಯಿಸಿದ ಗಿಲ್

ನವದೆಹಲಿ: ಭಾರತದ ಬ್ಯಾಟರ್‌ಗಳಿಗೆಂದೇ ಸಿದ್ಧಗೊಂಡಿದ್ದ 'ವೇದಿಕೆ'ಯ ಮೇಲೆ ಯಶಸ್ವಿ ಜೈಸ್ವಾಲ್ ಮತ್ತು ಸಾಯಿ ಸುದರ್ಶನ್ ಸೊಗಸಾದ ಬ್ಯಾಟಿಂಗ್ ಪ್ರದರ್ಶಿಸಿದರು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ಬೆಳಿಗ್ಗೆ ಆತಿಥೇಯ ತಂಡದ ನಾಯಕ ಶುಭಮನ್ ಗಿಲ್ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ನಾಯಕರಾದ ನಂತರ ಇದೇ ಮೊದಲ ಬಾರಿ ಅವರು ಟಾಸ್ ಜಯಿಸಿದರು. ಕಳೆದ ಆರು ಪಂದ್ಯಗಳಲ್ಲಿಯೂ ಸೋತಿದ್ದರು. 'ಭವಿಷ್ಯದ ತಾರೆ'ಗಳಾದ ಯಶಸ್ವಿ (ಅಜೇಯ 173; 253ಎಸೆತ, 4X22) ಮತ್ತು ಸಾಯಿ (87; 165ಎ, 4X12) ಅವರ ಚೆಂದದ ಬ್ಯಾಟಿಂಗ್‌ನಿಂದ ಆತಿಥೇಯ ತಂಡವು ಮೊದಲ ದಿನದಾಟದ ಮುಕ್ತಾಯಕ್ಕೆ 90 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 318 ರನ್ ಗಳಿಸಿತು.

ವಿಂಡೀಸ್ ಬೌಲರ್‌ಗಳು ದಿನದ ಮೊದಲ ಒಂದು ಗಂಟೆಯ ಆಟದಲ್ಲಿ ಪರಿಣಾಮಕಾರಿಯಾಗಿ ಕಂಡರು. ವೇಗಿಗಳಾದ ಜೈಡನ್ ಸೀಲ್ಸ್ ಮತ್ತು ಆ್ಯಂಡರ್ಸನ್ ಫಿಲಿಪ್ ಅವರು ಶಿಸ್ತುಬದ್ಧವಾಗಿ ಲೈನ್ ಮತ್ತು ಲೆಂಗ್ತ್ ನಿರ್ವಹಿಸಿದರು. ಆರಂಭಿಕ ಬ್ಯಾಟರ್‌ಗಳಾದ ಯಶಸ್ವಿ ಮತ್ತು ಕೆ.ಎಲ್. ರಾಹುಲ್ ಅವರು ಕೆಲವು ಬಾರಿ ಬೀಟ್ ಕೂಡ ಆದರು. ಇಬ್ಬರೂ ಬೌಲರ್‌ಗಳ ಉತ್ತಮ ಎಸೆತಗಳಿಗೆ ಬ್ಯಾಟರ್‌ಗಳು ತಲೆಬಾಗಿ ಆಡಿದರು.

ನಿಧಾನವಾಗಿ ಆಟಕ್ಕೆ ಕುದುರಿಕೊಂಡ ರಾಹುಲ್ (38; 54ಎ, 4X5, 6X1) ಬ್ಯಾಟ್ ಬೀಸತೊಡಗಿದರು. ಅವರ ಆಟದಲ್ಲಿ ತುಂಬು ಆತ್ಮವಿಶ್ವಾಸವಿತ್ತು. ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ಅವರು ಪೂರ್ಣ ಲಯದಲ್ಲಿದ್ದರು. ಆದರೆ, 18ನೇ ಓವರ್‌ನಲ್ಲಿ ಜೊಮೆಲ್ ವಾರಿಕನ್ ಎಸೆತದಲ್ಲಿ ವಿಕೆಟ್‌ಕೀಪರ್ ಟೆವಿನ್ ಇಮ್ಲಾಚ್ ಮಾಡಿದ ಸ್ಟಂಪಿಂಗ್‌ಗೆ ರಾಹುಲ್ ಇನಿಂಗ್ಸ್‌ಗೆ ತೆರೆಬಿತ್ತು.

ಇದರ ನಂತರ ಜೈಸ್ವಾಲ್ ಮತ್ತು ಸಾಯಿ ಇನಿಂಗ್ಸ್ ಕಟ್ಟುವ ಹೊಣೆ ಹೊತ್ತುಕೊಂಡರು. ನಿರಾತಂಕ ಮನಸ್ಥಿತಿಯ ಆಟವಾಡಿದರು. ಈಚೆಗೆ ಇಂಗ್ಲೆಂಡ್ ಪ್ರವಾಸದಲ್ಲಿ ತೋರಿದ್ದ ಮಾದರಿಯ ಆಟವೇ ಇಲ್ಲಿಯೂ ಅವರಿಂದ ಹೊರಹೊಮ್ಮಿತು. ದೊಡ್ಡ ಹೊಡೆತಗಳಿಗಿಂತ ತಾಳ್ಮೆಯ ಆಟಕ್ಕೆ ಹೆಚ್ಚು ಒತ್ತುಕೊಟ್ಟರು. ಕಟ್ಸ್, ಪಂಚ್ ಮತ್ತು ಡ್ರೈವ್‌ಗಳನ್ನು ಲೀಲಾಜಾಲವಾಗಿ ಪ್ರಯೋಗಿಸಿದರು. ಶಾಸ್ತ್ರಬದ್ಧ ಬ್ಯಾಟಿಂಗ್ ಅವರಿಗೆ ರನ್‌ಗಳನ್ನು ತಂದುಕೊಟ್ಟವು.

ಚಹಾ ವಿರಾಮಕ್ಕೂ ಮುನ್ನ ಶತಕ ಪೂರ್ಣಗೊಳಿಸಿದ ಎಡಗೈ ಬ್ಯಾಟರ್ ಯಶಸ್ವಿ ದಾಖಲೆಯ ಪುಟ ಸೇರಿದರು. 24 ವರ್ಷ ವಯಸ್ಸಿನೊಳಗೇ ಏಳು ಟೆಸ್ಟ್ ಶತಕಗಳನ್ನು ದಾಖಲಿಸಿದ ದಾಖಲೆಯನ್ನು ತಮ್ಮದಾಗಿಸಿಕೊಂಡರು. ಈ ಸಾಧನೆ ಮಾಡಿದ ನಾಲ್ಕನೇ ಬ್ಯಾಟರ್ ಅವರಾದರು.

ಇನ್ನೊಂದೆಡೆ ಎಡಗೈ ಬ್ಯಾಟರ್, 23 ವರ್ಷದ ಸಾಯಿ ತುಸು ಒತ್ತಡದಲ್ಲಿದ್ದರು. ಮೂರನೇ ಕ್ರಮಾಂಕದ ಸ್ಥಾನವನ್ನು ತುಂಬಲು ಇದುವರೆಗೆ ಲಭಿಸಿದ ಅವಕಾಶಗಳಲ್ಲಿ ಅವರು ಹೆಚ್ಚು ರನ್ ಗಳಿಸಿರಲಿಲ್ಲ. ಆದ್ದರಿಂದ ಈ ಪಂದ್ಯವು ಅವರಿಗೆ ಮಹತ್ವದ್ದಾಗಿತ್ತು. ಆಯ್ಕೆಗಾರರ ವಿಶ್ವಾಸ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅವರು ಬಹುತೇಕ ಸಫಲರಾದರು.

ಸಾಯಿ 58 ರನ್ ಗಳಿಸಿದ್ದ ಸಂದರ್ಭದಲ್ಲಿ ಜೊಮೆಲ್ ವಾರಿಕನ್ ಅವರು ಮಿಡ್‌ವಿಕೆಟ್‌ನಲ್ಲಿ ಸುಲಭ ಕ್ಯಾಚ್ ಕೈಚೆಲ್ಲಿದರು. ಇದರಿಂದಾಗಿ ತಮಿಳುನಾಡು ಬ್ಯಾಟರ್ ಸಾಯಿ, ಟೆಸ್ಟ್ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ಗಳಿಸುವ ಭರವಸೆ ಮೂಡಿಸಿದ್ದರು. ಆದರೆ ವಾರಿಕನ್ ತಮ್ಮ ತಪ್ಪು ತಿದ್ದಿಕೊಂಡರು. ಸಾಯಿ ಸುದರ್ಶನ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಸಾಯಿ ನಿರಾಶೆಯಿಂದ ಮರಳಿದರು.

ಯಶಸ್ವಿಯೊಂದಿಗೆ ಸೇರಿದ ಗಿಲ್ (ಬ್ಯಾಟಿಂಗ್ 20; 68ಎ) ಕೂಡ ಉತ್ತಮ ಲಯದಲ್ಲಿದ್ದಂತೆ ಕಾಣುತ್ತಿದ್ದಾರೆ. ಅವರಿಬ್ಬರೂ ಶನಿವಾರಕ್ಕೆ ತಮ್ಮ ಆಟ ಕಾಯ್ದಿಟ್ಟುಕೊಂಡಿದ್ದಾರೆ.



ಭಾರತ ತಂಡದ ಸಾಯಿ ಸುದರ್ಶನ್ (ಬಲ) ಅರ್ಧಶತಕ ಗಳಿಸಿ ಸಂಭ್ರಮಿಸಿದರು. ಯಶಸ್ವಿ ಜೈಸ್ವಾಲ್ ಇದ್ದಾರೆ ಪಿಟಿಐ ಚಿತ್ರ

ಏಳು ಶತಕ: ಯಶಸ್ವಿ ದಾಖಲೆ

ಮುಂಬೈನ ಯಶಸ್ವಿ ಜೈಸ್ವಾಲ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಏಳನೇ ಶತಕ ಹೊಡೆದು ದಾಖಲೆಯ ಪುಟ ಸೇರಿದರು. 24 ವರ್ಷ ವಯಸ್ಸಿನೊಳಗೆ ಏಳು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಶತಕಗಳನ್ನು ದಾಖಲಿಸಿದ ವಿಶ್ವದ ನಾಲ್ಕನೇ ಬ್ಯಾಟರ್ ಅವರಾದರು.

ಆಸ್ಟ್ರೇಲಿಯಾದ ದಂತಕಥೆ ಡಾನ್ ಬ್ರಾಡ್ಮನ್ (12), ಭಾರತದ ದಿಗ್ಗಜ ಸಚಿನ್ ತೆಂಡೂಲ್ಕರ್ (11) ಮತ್ತು ವೆಸ್ಟ್ ಇಂಡೀಸ್‌ನ ಸರ್. ಗ್ಯಾರ್‌ಫೀಲ್ಡ್ ಸೊಬರ್ಸ್ (9) ಅವರ ನಂತರದ ಸ್ಥಾನ ಯಶಸ್ವಿ ಗಳಿಸಿದ್ದಾರೆ. ಪಾಕಿಸ್ತಾನದ ಜಾವೇದ್ ಮಿಯಾಂದಾದ್, ದಕ್ಷಿಣ ಆಫ್ರಿಕಾದ ಗ್ರೇಮ್ ಸ್ಮಿತ್, ಇಂಗ್ಲೆಂಡ್‌ನ ಅಲಸ್ಟೇರ್ ಕುಕ್ ಮತ್ತು ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಕೂಡ ತಲಾ ಏಳು ಶತಕ ಗಳಿಸಿದ್ದರು.

ಮುಂಬರುವ ಡಿಸೆಂಬರ್ 28ರಂದು ಯಶಸ್ವಿ 24 ವರ್ಷ ಪೂರೈಸುವರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್:

ಭಾರತ 90 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 318 (ಮೊದಲ ದಿನದಾಟದ ಅಂತ್ಯಕ್ಕೆ)

ಯಶಸ್ವಿ ಔಟಾಗದೇ 173 (4x22)

ರಾಹುಲ್ ಸ್ಟಂಪ್ ಇಮ್ಲಾಚ್ ಬಿ ವಾರಿಕನ್ 38 (4x5, 6x1)


ಸಾಯಿ ಎಲ್‌ಬಿಡಬ್ಲ್ಯು ಬಿ ವಾರಿಕನ್ 87 (4x12)

ಗಿಲ್ ಔಟಾಗದೇ 20 (4x3)

ವಿಕೆಟ್ ಪತನ: 1–58 (ಕೆ.ಎಲ್.ರಾಹುಲ್, 17.3), 2–251(ಸಾಯಿ ಸುದರ್ಶನ್, 68.3)

ಬೌಲಿಂಗ್: ಜೇಡನ್ ಸೀಲ್ಸ್ 16–1–59–0, ಆ್ಯಂಡರ್ಸನ್ ಫಿಲಿಪ್ 13–2–44–0, ಜಸ್ಟಿನ್ ಗ್ರೀವ್ಸ್ 8–1–26–0, ಖಾರಿ ಪಿಯರ್ 20–1–74–0, ಜೋಮೆಲ್ ವಾರಿಕನ್ 20–3–60–2, ರಾಸ್ಟನ್ ಚೇಸ್ 13–0–55–0.

'ಅನುಮತಿಯಿಲ್ಲದೇ ಏಷ್ಯಾ ಕಪ್ ಕೊಡಬೇಡಿ'



ಮೊಹಸಿನ್ ನಕ್ವಿ

ಲಾಹೋರ್ (ಪಿಟಿಐ): ದುಬೈನಲ್ಲಿರುವ ಏಷ್ಯಾ ಕ್ರಿಕೆಟ್ ಕೌನ್ಸಿಲ್ ಕಚೇರಿಯಲ್ಲಿ ಇಡಲಾಗಿರುವ ಏಷ್ಯಾ ಕಪ್ ಟ್ರೋಫಿಯನ್ನು ತಮ್ಮ ಅನುಮತಿ ಇಲ್ಲದೇ ಯಾರಿಗೂ ಹಸ್ತಾಂತರಿಸಬಾರದು ಎಂದು ಅಧ್ಯಕ್ಷ ಮೊಹಸಿನ್ ನಕ್ವಿ ಆದೇಶಿಸಿದ್ದಾರೆ.

ಈಚೆಗೆ ದುಬೈನಲ್ಲಿ ಏಷ್ಯಾ ಕಪ್ ಟೂರ್ನಿ ನಡೆದಿತ್ತು. ಫೈನಲ್‌ನಲ್ಲಿ ಪಾಕಿಸ್ತಾನ ಎದುರು ಭಾರತ ತಂಡ ಜಯಿಸಿತ್ತು. ಆದರೆ ಟ್ರೋಫಿಯನ್ನು ನಕ್ವಿ ಅವರಿಂದ ಸ್ವೀಕರಿಸಲು ಭಾರತ ತಂಡ ನಿರಾಕರಿಸಿತ್ತು. ಪಾಕಿಸ್ತಾನದ ಸಚಿವರೂ ಆಗಿರುವ ನಕ್ವಿ ಅವರು 'ಭಾರತ ವಿರೋಧಿ' ನಿಲುವು ತಳೆದಿದ್ದಾರೆ ಎಂದು ಆರೋಪಿಸಿದ್ದ ಸೂರ್ಯಕುಮಾರ್ ಯಾದವ್ ಬಳಗವು ಟ್ರೋಫಿ ಪಡೆಯಲು ನಿರಾಕರಿಸಿತ್ತು. ಆಗ ಪ್ರಶಸ್ತಿ ಪ್ರದಾನ ಸಮಾರಂಭದಿಂದ ಹೊರನಡೆದಿದ್ದ ನಕ್ವಿ, ಟ್ರೋಫಿಯನ್ನೂ ತಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದರು.

'ಟ್ರೋಫಿ ಈಗಲೂ ದುಬೈನಲ್ಲಿರುವ ಎಸಿಸಿ ಕಚೇರಿಯಲ್ಲಿದೆ. ಆದರೆ ತಮ್ಮ ಅನುಮತಿ ಇಲ್ಲದೇ ಯಾರಿಗೂ ಹಸ್ತಾಂತರ ಮಾಡುವಂತಿಲ್ಲವೆಂದು ನಕ್ವಿ ಅವರು ಆದೇಶ ನೀಡಿದ್ದಾರೆ. ಅವರು ಅನುಮತಿ ನೀಡಿದರೆ ಅಥವಾ ಖುದ್ದಾಗಿ ಹಾಜರಿದ್ದರೆ ಮಾತ್ರ ಟ್ರೋಫಿ ನೀಡಬಹುದೆಂದು ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಭಾರತ ತಂಡ ಅಥವಾ ಬಿಸಿಸಿಐಗೆ ತಾವೇ ಖುದ್ದಾಗಿ ಟ್ರೋಫಿಯನ್ನು ಹಸ್ತಾಂತರಿಸುವುದಾಗಿ ನಕ್ವಿ ಸ್ಪಷ್ಟಪಡಿಸಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಜಯದ ಖಾತೆ ತೆರೆದ ಕಿವೀಸ್ ವನಿತೆಯರು

ಬ್ರೂಕ್, ಸೋಫಿ ಜತೆಯಾಟಕ್ಕೆ ಜಯ

ಗುವಾಹಟಿ (ಪಿಟಿಐ): ಬ್ರೂಕ್ ಹ್ಯಾಲಿಡೇ ಮತ್ತು ಸೋಫಿ ಡಿವೈನ್ ಅವರ ಶತಕದ ಜೊತೆಯಾಟದ ಬಲದಿಂದ ನ್ಯೂಜಿಲೆಂಡ್ ತಂಡವು ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಬಾಂಗ್ಲಾದೇಶ ಎದುರು 100 ರನ್‌ಗಳಿಂದ ಜಯಿಸಿತು. ಕಿವೀಸ್ ಬೌಲರ್‌ಗಳ ಸಂಘಟಿತ ಹೋರಾಟ ಕಳೆಗಟ್ಟಿತು.

ಬರ್ಸಾಪಾರಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕಿವೀಸ್ ತಂಡವು ಬ್ಯಾಟಿಂಗ್ ಮಾಡಿತು. ಆದರೆ ಉತ್ತಮ ಆರಂಭ ಲಭಿಸಲಿಲ್ಲ. ರಬಿಯಾ ಖಾನ್ ಅವರ ಉತ್ತಮ ಬೌಲಿಂಗ್‌ನಿಂದಾಗಿ ನ್ಯೂಜಿಲೆಂಡ್ ತಂಡವು ಕೇವಲ 38 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ನಾಯಕಿ ಸೋಫಿ ಡಿವೈನ್ (63; 85ಎ, 4X2, 6X2) ಮತ್ತು ಬ್ರೂಕ್ ಹ್ಯಾಲಿಡೇ (69; 104ಎ, 4X5, 6X1) ಮೂರನೇ ವಿಕೆಟ್ ಜೊತೆಯಾಟದಲ್ಲಿ 112 ರನ್ ಸೇರಿಸಿದರು. ಅದರಿಂದಾಗಿ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 227 ರನ್ ಗಳಿಸಿತು.

ಅದಕ್ಕುತ್ತರವಾಗಿ ಬಾಂಗ್ಲಾತಂಡವು 39.5 ಓವರ್‌ಗಳಲ್ಲಿ 127 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಜೆಸ್ ಕೆರ್ (21ಕ್ಕೆ3) ಮತ್ತು ಲಿಯಾ ತಹುಹು (22ಕ್ಕೆ3) ಅವರ ಅಮೋಘ ಬೌಲಿಂಗ್‌ನಿಂದಾಗಿ ಬಾಂಗ್ಲಾ ಕುಸಿಯಿತು. ರೋಸ್‌ಮೆರಿ ಮೈರ್ ಕೂಡ ಎರಡು ವಿಕೆಟ್ ಗಳಿಸಿದರು.



ನ್ಯೂಜಿಲೆಂಡ್ ತಂಡದ ಬ್ರೂಕ್ ಹ್ಯಾಲಿಡೇ ಎಎಫ್‌ಪಿ ಚಿತ್ರ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಟೂರ್ನಿಯಲ್ಲಿ ಕಿವೀಸ್ ಬಳಗಕ್ಕೆ ಇದು ಮೊದಲ ಗೆಲುವು. ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಎದುರು ತಂಡವು ಸೋತಿತ್ತು. ಬಾಂಗ್ಲಾ ತಂಡಕ್ಕೆ ಇದು ಎರಡನೇ ಸೋಲು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 9ಕ್ಕೆ227 (ಸೂಝಿ ಬೇಟ್ಸ್ 29, ಸೋಫಿ ಡಿವೈನ್ 63, ಬ್ರೂಕ್ ಹ್ಯಾಲಿಡೇ 69, ಮ್ಯಾಡಿ ಗ್ರೀನ್ 25, ರಬಿಯಾ ಖಾನ್ 30ಕ್ಕೆ3) ಬಾಂಗ್ಲಾದೇಶ: 39.5 ಓವರ್‌ಗಳಲ್ಲಿ 127 (ಫಾಹಿಮಾ ಖಾತೂನ್ 34, ರಬಿಯಾ ಖಾನ್ 25, ರೋಸ್‌ಮೆರಿ ಮೈರ್ 20ಕ್ಕೆ2, ಜೆಸ್ ಕೆರ್ 21ಕ್ಕೆ3, ಲಿಯಾ ತಹುಹು 22ಕ್ಕೆ3) ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ 100 ರನ್ ಜಯ. ಪಂದ್ಯದ ಆಟಗಾರ್ತಿ: ಬ್ರೂಕ್ ಹ್ಯಾಲಿಡೇ.

ಇಂದಿನ ಪಂದ್ಯ

ಇಂಗ್ಲೆಂಡ್–ಶ್ರೀಲಂಕಾ

ಪಂದ್ಯ ಆರಂಭ: ಮಧ್ಯಾಹ್ನ 3

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್

ಚಾರಿತ್ರಿಕ ಕಂಚು ಜಯಿಸಿದ ಭಾರತ

ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಮಿಶ್ರ ತಂಡ ಚಾಂಪಿಯನ್‌ಷಿಪ್

ಗುವಾಹಟಿ (ಪಿಟಿಐ): ಆತಿಥೇಯ ಭಾರತ ತಂಡವು ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಮಿಶ್ರ ತಂಡ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ ಶುಕ್ರವಾರ ಹಾಲಿ ಚಾಂಪಿಯನ್ ಇಂಡೊನೇಷ್ಯಾ ವಿರುದ್ಧ ಸೋತ ನಂತರ ಚಾರಿತ್ರಿಕ ಕಂಚಿನ ಪದಕದೊಂದಿಗೆ ಅಭಿಯಾನ ಮುಗಿಸಿತು.

ಭಾರತ ತಂಡವು ಗುರುವಾರ ಕ್ವಾರ್ಟರ್ ಫೈನಲ್‌ನಲ್ಲಿ ಮಾಜಿ ಚಾಂಪಿಯನ್ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿ ಮಿಶ್ರ ತಂಡ ಸ್ಪರ್ಧೆಯಲ್ಲಿ ಐತಿಹಾಸಿಕ ಮೊದಲ ಪದಕ ಖಚಿತಪಡಿಸಿಕೊಂಡಿತ್ತು. ನಾಲ್ಕರ ಘಟ್ಟದ ಪಂದ್ಯದಲ್ಲಿ 35-45, 21-45ರಿಂದ ಪ್ರಬಲ ಇಂಡೊನೇಷ್ಯಾ ತಂಡಕ್ಕೆ ಮಣಿಯಿತು.

ಮತ್ತೊಂದು ಸೆಮಿಫೈನಲ್‌ನಲ್ಲಿ 14 ಬಾರಿಯ ಚಾಂಪಿಯನ್ ಚೀನಾ ಮತ್ತು ಜಪಾನ್ ಸೆಣಸಲಿದ್ದು, ವಿಜೇತ ತಂಡವನ್ನು ಇಂಡೊನೇಷ್ಯಾ ಶನಿವಾರ ಫೈನಲ್‌ನಲ್ಲಿ ಎದುರಿಸಲಿದೆ.

ಕೊರಿಯಾವನ್ನು ಸೋಲಿಸಿದ್ದ ಭಾರತ ತಂಡದಲ್ಲಿ ಒಂದು ಬದಲಾವಣೆ ಮಾಡಲಾಗಿತ್ತು. ಮಿಶ್ರ ಡಬಲ್ಸ್‌ನಲ್ಲಿ ಅನಾಯಾ ಬಿಷ್ಟ್ ಬದಲಿಗೆ ವಿಶಾಖ ಟೊಪ್ಪೊ ಅವರಿಗೆ ಅವಕಾಶ ನೀಡಲಾಗಿತ್ತು.

ಸ್ಪರ್ಧೆಯಲ್ಲಿ ಅಂಕಗಳು ರಿಲೆ ಮಾದರಿಯಲ್ಲಿ ಇರುತ್ತದೆ. ಒಂದು ಗೇಮ್‌ನಲ್ಲಿ ಐದು ಸುತ್ತುಗಳಿದ್ದು, ತಲಾ 9 ರಂತೆ ಒಟ್ಟು 45 ಅಂಕ ನಿಗದಿ ಮಾಡಲಾಗಿದೆ. ಪುರುಷರ ಡಬಲ್ಸ್, ಮಹಿಳೆಯರ ಸಿಂಗಲ್ಸ್, ಪುರುಷರ ಸಿಂಗಲ್ಸ್, ಮಿಶ್ರ ಡಬಲ್ಸ್ ಮತ್ತು ಮಹಿಳೆಯರ ಡಬಲ್ಸ್ ಹೀಗೆ ಐದು ಸುತ್ತುಗಳ ಸ್ಪರ್ಧೆ ನಡೆಯುತ್ತದೆ.

ಮೊದಲ ಗೇಮ್‌ನ ಆರಂಭಿಕ ಸುತ್ತಿನಲ್ಲಿ ಭಾರ್ಗವ್ ರಾಮ್ ಅರಿಗೆಲಾ ಮತ್ತು ವಿಶ್ವತೇಜ್ ಗೊಬ್ಬೂರು ಅವರು ಪುರುಷರ ಡಬಲ್ಸ್‌ನಲ್ಲಿ 9–6 ಅಂಕಗಳೊಂದಿಗೆ ಭಾರತಕ್ಕೆ ಉತ್ತಮ ಆರಂಭ ನೀಡಿದ್ದರು. ಆದರೆ, ಅದೇ ಮುನ್ನಡೆಯನ್ನು ಕಾಯ್ದುಕೊಳ್ಳಲು ಉಳಿದ ಆಟಗಾರರಿಗೆ ಸಾಧ್ಯವಾಗಲಿಲ್ಲ. ಅಂತಿಮವಾಗಿ 10 ಅಂಕಗಳ ಅಂತರದಿಂದ ಇಂಡೊನೇಷ್ಯಾ ತಂಡ ಮೊದಲ ಸೆಟ್‌ನಲ್ಲಿ ಮೇಲುಗೈ ಸಾಧಿಸಿತು.

ಎರಡನೇ ಗೇಮ್‌ನಲ್ಲಿ ಭಾರತ ಆಟಗಾರರು ಆರಂಭದಲ್ಲೇ ಎಡವಿದರು. ಪುರುಷರ ಡಬಲ್ಸ್‌ನಲ್ಲಿ ಅರಿಗೆಲಾ ಮತ್ತು ಗೊಬ್ಬೂರು ಜೋಡಿಯು ಮೊದಲ ಸುತ್ತಿನಲ್ಲಿ 2–9 ಹಿನ್ನಡೆ ಅನುಭವಿಸಿತು. ಯಾವುದೇ ಹಂತದಲ್ಲಿ ತಂಡವು ಚೇತರಿಕೆ ಕಾಣದೆ 24 ಅಂಕಗಳ ಅಂತರದಿಂದ ಸೋಲೊಪ್ಪಿಕೊಂಡಿತು.

ಸೋಮವಾರದಿಂದ ಆರಂಭವಾಗಲಿರುವ ವೈಯಕ್ತಿಕ ಚಾಂಪಿಯನ್‌ಷಿಪ್‌ಗೆ ಭಾರತ ಆಟಗಾರರು ತಯಾರಿ ನಡೆಸುತ್ತಿದ್ದಾರೆ.



ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಮಿಶ್ರ ತಂಡ ವಿಭಾಗದಲ್ಲಿ ಗುರುವಾರ ಕೊರಿಯಾ ತಂಡವನ್ನು ಕ್ವಾರ್ಟರ್‌ಫೈನಲ್‌ನಲ್ಲಿ ಸೋಲಿಸಿದ ಭಾರತದ ತಂಡದವರು ಸಂಭ್ರಮಿಸಿದ್ದು ಹೀಗೆ....

ಪ್ರೊ ಕಬಡ್ಡಿ ಲೀಗ್: ಗುಜರಾತ್ ಜೈಂಟ್ಸ್‌ಗೆ 9ನೇ ಸೋಲು

ಅಕ್ಷಿತ್ ಮಿಂಚು: ಡೆಲ್ಲಿಗೆ 12ನೇ ಜಯ

ಚೆನ್ನೈ (ಪಿಟಿಐ): ಅಕ್ಷಿತ್ ಧುಲ್ ಅವರ ಅಮೋಘ ರೇಡಿಂಗ್ ಬಲದಿಂದ ದಬಂಗ್ ಡೆಲ್ಲಿ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಶುಕ್ರವಾರ ಆರು ಅಂಕಗಳಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 39–33ರಿಂದ ಡೆಲ್ಲಿ ತಂಡ ಜಯ ಗಳಿಸಿತು. ಗುರುವಾರ ಒಂದು ಅಂಕಗಳಿಂದ (36–37) ಬೆಂಗಾಲ್ ವಾರಿಯರ್ಸ್‌ಗೆ ಸೋತಿದ್ದ ದಬಂಗ್ ತಂಡವು ಮತ್ತೆ ಗೆಲುವಿನ ಹಳಿಗೆ ಮರಳಿತು.

ಡೆಲ್ಲಿ ತಂಡಕ್ಕೆ 14 ಪಂದ್ಯಗಳಲ್ಲಿ ಇದು 12ನೇ ಜಯವಾಗಿದೆ. ಒಟ್ಟು 24 ಅಂಕಗಳೊಂದಿಗೆ ಲೀಗ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿತು. ಗುಜರಾತ್ ತಂಡಕ್ಕೆ 13 ಪಂದ್ಯಗಳಲ್ಲಿ ಇದೇ 9ನೇ ಸೋಲಾಗಿದೆ. ಒಟ್ಟು 8 ಅಂಕಗಳೊಂದಿಗೆ 10ನೇ ಸ್ಥಾನದಲ್ಲಿದೆ.

ಗಾಯಾಳಾಗಿರುವ ನಾಯಕ ಅಶು ಮಲಿಕ್ ಅವರ ಅನುಪಸ್ಥಿತಿಯಲ್ಲಿ ಕಣಕ್ಕಿಳಿದ ಡೆಲ್ಲಿ ತಂಡವು ಅಕ್ಷಿತ್ ಅವರ ಮಿಂಚಿನ ರೇಡಿಂಗ್‌ನಿಂದಾಗಿ ಮೊದಲಾರ್ಧದಲ್ಲಿ 21–14ರ ಮುನ್ನಡೆ ಗಳಿಸಿತು. ಆದರೆ, ಉತ್ತರಾರ್ಧದಲ್ಲಿ ಜೈಂಟ್ಸ್ ತಂಡವು ಪ್ರತಿರೋಧ ತೋರಿ 1 (19–18) ಅಂಕಗಳ ಮುನ್ನಡೆ ಪಡೆಯಿತು. ಪ್ರಥಮಾರ್ಧದ ಮುನ್ನಡೆಯಿಂದಾಗಿ ಡೆಲ್ಲಿ ತಂಡ ಮೇಲುಗೈ ಸಾಧಿಸಿತು.

ಅಕ್ಷಿತ್ ಅವರು 8 ಟಚ್ ಪಾಯಿಂಟ್ಸ್ ಮತ್ತು 4 ಬೋನಸ್ ಸೇರಿದಂತೆ ಒಟ್ಟು 12 ಅಂಕ ಗಳಿಸಿದರು. ಅವರಿಗೆ ರೇಡಿಂಗ್‌ನಲ್ಲಿ ಅಜಿಂಕ್ಯ ಪವಾರ್ (5) ಸಾಥ್ ನೀಡಿದರು. ಜೈಂಟ್ಸ್ ಪರ ಹಿಮಾಂಶು ಸಿಂಗ್ (11) 'ಸೂಪರ್ ಟೆನ್' ಸಾಧನೆ ಮೆರೆದರು. ಮೊಹಮ್ಮದ್ ರೆಜಾ ಶಾಡ್ಲೊಯಿ ಮತ್ತು ಹಿಮಾಂಶು 'ಹೈಫೈ' ಗಳಿಸಿದರು.

ಯು ಮುಂಬಾಗೆ ಗೆಲುವು: ದಿನದ ಮತ್ತೊಂದು ಪಂದ್ಯದಲ್ಲಿ ಸಂದೀಪ್ ಕುಮಾರ್ (13) ಮತ್ತು ಅಜಿತ್ ಚವ್ಹಾಣ್ (12) ಅವರ ರೇಡಿಂಗ್ ನೆರವಿನಿಂದ ಯು ಮುಂಬಾ ತಂಡವು 48–29ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಬೆಂಗಾಲ್ ತಂಡದ ನಾಯಕ ದೇವಾಂಕ್ ಈ ಪಂದ್ಯದಲ್ಲೂ 'ಸೂಪರ್ ಟೆನ್' ಸಾಧನೆ ಮೆರೆದರು. ಅವರು ಹಾಲಿ ಆವೃತ್ತಿಯಲ್ಲಿ 'ದ್ವಿಶತಕ' (200 ಅಂಕ) ದಾಖಲಿಸಿದರು. ಈ ಮೂಲಕ ಕಡಿಮೆ ಪಂದ್ಯಗಳಲ್ಲಿ (12) ಈ ಸಾಧನೆ ಮಾಡಿದರು. ಅಲ್ಲದೆ, ಪಿಕೆಎಲ್‌ನಲ್ಲಿ ವೇಗದ 500 ಅಂಕ (43 ಪಂದ್ಯ) ಗಳಿಸಿದರು.

ನವದೆಹಲಿಯಲ್ಲಿ ಫೈನಲ್ ಪಂದ್ಯ

ನವದೆಹಲಿ (ಪಿಟಿಐ): ಪ್ರೊ ಕಬಡ್ಡಿ ಲೀಗ್‌ನ ಹಾಲಿ ಆವೃತ್ತಿಯ ಪ್ಲೇ ಆಫ್ ಮತ್ತು ಫೈನಲ್ ಪಂದ್ಯಗಳು ನವದೆಹಲಿಯ ತ್ಯಾಗರಾಜ್ ಕ್ರೀಡಾಂಗಣದಲ್ಲಿ ನಡೆಯಲಿವೆ.

12ನೇ ಆವೃತ್ತಿಯಲ್ಲಿ 'ದೆಹಲಿ ಲೆಗ್'ನ ಪಂದ್ಯಗಳು ಶನಿವಾರ ಆರಂಭವಾಗಲಿದೆ. ಇದೇ 23ರವರೆಗೆ ಲೀಗ್ ಹಂತದ ಪಂದ್ಯಗಳು ನಡೆಯಲಿವೆ. 25ರಿಂದ ಪ್ಲೇ ಇನ್ ಮತ್ತು ಪ್ಲೇ ಆಫ್ ಹಂತದ ಸೆಣಸಾಟ ನಡೆಯಲಿವೆ.

ಆತಿಥೇಯ ತಂಡವಾದ ದಬಂಗ್ ಡೆಲ್ಲಿ ಕೆ.ಸಿ ತಂಡವು ಲೀಗ್ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದು, ಈಗಾಗಲೇ ಪ್ಲೇ ಆಫ್‌ಗೆ ಸ್ಥಾನವನ್ನು ಕಾಯ್ದಿರಿಸಿದೆ. ಉಳಿದ ಏಳು ಸ್ಥಾನಗಳಿಗೆ ಇತರ ತಂಡಗಳಿಂದ ತೀವ್ರ ಪೈಪೋಟಿಯಿದೆ.

ಲೀಗ್ ಪಟ್ಟಿಯಲ್ಲಿ ಐದರಿಂದ ಎಂಟನೇ ಸ್ಥಾನ ಪಡೆದ ತಂಡಗಳು ಪ್ಲೇ ಇನ್ ಹಂತದಲ್ಲಿ ಪೈಪೋಟಿ ನಡೆಸಿ ಗೆದ್ದ ಎರಡು ತಂಡಗಳು ಪ್ಲೇಆಫ್‌ಗೆ ಅರ್ಹತೆ ಪಡೆಯಲಿವೆ. ಇದೇ 26 ರಿಂದ 29ರವರೆಗೆ ಪ್ಲೇ ಆಫ್ ಪಂದ್ಯಗಳು ಹಾಗೂ 31ರಂದು ಫೈನಲ್ ಪಂದ್ಯ ನಡೆಯಲಿದೆ.

ಚೆಸ್: ಯು.ಡಿ.ಆಕಾಂಕ್ಷ್‌ಗೆ ಎರಡನೇ ಸ್ಥಾನ

ನಿವಾನ್ ರಾಘವೇಂದ್ರ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ನಿವಾನ್ ರಾಘವೇಂದ್ರ ಅವರು ಇಲ್ಲಿ ಮುಕ್ತಾಯಗೊಂಡ 'ರೋಟರಿ ಬೃಂದಾವನ 16 ವರ್ಷದೊಳಗಿನವರ ಮುಕ್ತ ರೇಟಿಂಗ್ ಚೆಸ್ ಟೂರ್ನಿ'ಯಲ್ಲಿ ಪ್ರಶಸ್ತಿ ಜಯಿಸಿದರು.

8ನೇ ಸುತ್ತಿನ ಅಂತ್ಯಕ್ಕೆ ಮಂಗಳೂರಿನ ಯು.ಡಿ.ಆಕಾಂಕ್ಷ್ ಹಾಗೂ ಮೈಸೂರಿನ ಎಸ್.ವಿಶ್ವಜಿತ್ ಅವರೊಂದಿಗೆ ತಲಾ 7 ಅಂಕದೊಂದಿಗೆ ನಿವಾನ್ ಜಂಟಿ ಅಗ್ರಸ್ಥಾನ ಪಡೆದಿದ್ದರೂ, ಟೈಬ್ರೇಕರ್ ಆಧಾರದಲ್ಲಿ ಸ್ಥಾನ ನಿರ್ಧರಿಸಲಾಯಿತು. ನಿವಾನ್ ₹40ಸಾವಿರದೊಂದಿಗೆ ಪ್ರಥಮ ಸ್ಥಾನ ಪಡೆದರು. ಯು.ಡಿ. ಆಕಾಂಕ್ಷ್ 2ನೇ (₹30 ಸಾವಿರ) ಹಾಗೂ ಎಸ್.ವಿಶ್ವಜಿತ್ 3ನೇ (₹20 ಸಾವಿರ) ಸ್ಥಾನ ಗಳಿಸಿದರು.

ಮಂಗಳೂರಿನ ಆರುಷ್ ಭಟ್ 4ನೇ (₹15ಸಾವಿರ), ಪಿ.ಅಭಿನವ 5ನೇ (₹10ಸಾವಿರ), ಗಹನ್ ಗಣಪತಿ 6ನೇ (₹9ಸಾವಿರ) ಉಡುಪಿಯ ಬಿ.ಪಿ.ಉತ್ಸವ 7ನೇ (₹8ಸಾವಿರ), ಮಂಡ್ಯದ ಎಂ.ಎಸ್.ಜಾಹ್ನವಿ 8ನೇ (₹7ಸಾವಿರ), ವಿ.ಎನ್. ಅಥರ್ವ 9ನೇ (₹6ಸಾವಿರ) ಹಾಗೂ ಮೈಸೂರಿನ ಸಾತ್ವಿಕ್ ವಿಶ್ವನಾಥ್ 10ನೇ (₹ 5ಸಾವಿರ) ಸ್ಥಾನ ಪಡೆದರು. 30 ಸ್ಪರ್ಧಿಗಳಿಗೆ ಒಟ್ಟು ₹2 ಲಕ್ಷ ಮೊತ್ತದ ಬಹುಮಾನ ವಿತರಿಸಲಾಯಿತು.



ಪ್ರಶಸ್ತಿ ಜಯಿಸಿದ ನಿವಾನ್ ರಾಘವೇಂದ್ರ (ಮಧ್ಯ), ಯು.ಡಿ. ಆಕಾಂಕ್ಷ್ ಹಾಗೂ ಎಸ್.ವಿಶ್ವಜಿತ್

ಅಥ್ಲೆಟಿಕ್ಸ್: ಕರ್ನಾಟಕದ ವೈಷ್ಣವಿಗೆ ಚಿನ್ನ

ಬೆಂಗಳೂರು: ಕರ್ನಾಟಕದ ವೈಷ್ಣವಿ ರಾವಲ್ ಅವರು ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಸೋಮವಾರ ನಡೆದ 40ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 20 ವರ್ಷದೊಳಗಿನ ಮಹಿಳೆಯರ 1500 ಮೀಟರ್ ಓಟದಲ್ಲಿ ಚಿನ್ನದ ಪದಕ ಗೆದ್ದರು.

ವೈಷ್ಣವಿ ಅವರು ಫೈನಲ್ ಸ್ಪರ್ಧೆಯಲ್ಲಿ 4 ನಿಮಿಷ 29.19 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಮಧ್ಯಪ್ರದೇಶದ ರಾಧಾ ಯಾದವ್ (4:29.19) ಮತ್ತು ರಾಜಸ್ಥಾನದ ಮಂಜು ಚೌಧರಿ (4:30.93) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

18 ವರ್ಷದೊಳಗಿನ ಪುರುಷರ 100 ಮೀಟರ್ ಓಟದಲ್ಲಿ ಕರ್ನಾಟಕದ ಚಿರಂತ್ ಪಿ. ಮತ್ತು ಸವಿನ್ ತಿಂಗಳಾಯ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಪಡೆದರು.



ಚಿರಂತ್ ಪಿ.



ಹಿಮಾಂಶು

10.71 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ಚಿರಂತ್ ಅವರು ಕೂದಲೆಳೆಯ ಅಂತರದಲ್ಲಿ ಚಿನ್ನ ತಪ್ಪಿಸಿಕೊಂಡರು. ಅದೇ ಸಮಯದಲ್ಲಿ ಗುರಿ ತಲುಪಿದ್ದ ಮಹಾರಾಷ್ಟ್ರದ ಆದಿತ್ಯ ಫೈಸಲ್, ಫೋಟೊ ಫಿನಿಷ್‌ನಲ್ಲಿ ಚಿನ್ನ ತಮ್ಮದಾಗಿಸಿಕೊಂಡರು. ಸವಿನ್ 10.81 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು.

14 ವರ್ಷದೊಳಗಿನ ಟ್ರಯಥ್ಲಾನ್‌ನಲ್ಲಿ ಕರ್ನಾಟಕದ ಅದ್ವಿಕಾ ಕೆ.ಪಿ. (2739 ಅಂಕ) ಕಂಚಿನ ಪದಕ ಗೆದ್ದರು. ತಮಿಳುನಾಡಿನ ಆರತಿ ಎಸ್.ಕೆ (3147) ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರೆ, ಹರಿಯಾಣದ ಅನುಷ್ಕಾ (2768) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಹಿಮಾಂಶು ದಾಖಲೆ: ಏಷ್ಯನ್ ಯೂತ್ ಚಾಂಪಿಯನ್ ಹಿಮಾಂಶು ಜಾಖಡ್ ಅವರು ಪುರುಷರ 18 ವರ್ಷದೊಳಗಿನವರ ವಿಭಾಗದ ಜಾವೆಲಿನ್ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದು, 20 ವರ್ಷದೊಳಗಿನ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದರು.

ಹಿಮಾಂಶು ಅವರು ಅರ್ಹತಾ ಸುತ್ತಿನಲ್ಲಿ 700 ಗ್ರಾಂ ತೂಕದ ಜಾವೆಲಿನ್ ಅನ್ನು 79.96 ಮೀಟರ್ ದೂರಕ್ಕೆ ಎಸೆದರು. ಈ ಮೂಲಕ 2014ರಲ್ಲಿ ವಿಜಯವಾಡದಲ್ಲಿ ಜಾವೆಲಿನ್ ತಾರೆ ನೀರಜ್ ಚೋಪ್ರಾ ಮಾಡಿದ್ದ (76.50 ಮೀ) ದಾಖಲೆಯನ್ನು ಮುರಿದರು.


LG
ಪೈ ಇಂಟರ್‌ನ್ಯಾಶನಲ್
Celebrating Trust Across Generations
Generations change, the celebrations continue with
LG – India's Most Trusted Brand*
CELEBRATION OFFERS
Up to 26%* Cashback (On Select Debit/Credit Cards) Max. up to ₹50000 (On Select Models)
Fixed EMI ₹ 888* Onwards (On Select Models)
LG BEST Care Ask for AMC* *Annual Maintenance Contract
ಮೆಗಾ ಫೆಸ್ಟಿವಲ್ ಸೇಲ್
ಗೆಲ್ಲಿರಿ 25 ದರ್ಜಿಗಳು ಕಾರುಗಳು*
ಗೆಲ್ಲಿರಿ 17 ಕೋಟಿ ಪೈ ಲಾಯಲ್ಟಿ ಪಾಯಿಂಟ್ಸ್*
LG OLED evo AI
3 YEAR WARRANTY | UP TO 26% CASHBACK Max. up to ₹26000 | FIXED EMI STARTING FROM ₹2999*
RANGE STARTS FROM : ₹109990*
LG QNED evo AI
MiniLED
3 YEAR WARRANTY | UP TO 10% CASHBACK Max. up to ₹10000 | FIXED EMI STARTING FROM ₹1999*
RANGE STARTS FROM : ₹45990*
LG NanoCell AI
3 YEAR WARRANTY | UP TO 10% CASHBACK Max. up to ₹10000 | UP TO 30% OFF ON LG SOUNDBAR (With Select 4K TVs)
RANGE STARTS FROM : ₹36990*
LG UHD AI
3 YEAR WARRANTY | UP TO 10% CASHBACK Max. up to ₹7500 | FIXED EMI STARTING FROM ₹1999*
RANGE STARTS FROM : ₹31990*
SOUND BAR
Dolby Atmos
World's 1st CENTRE UP-FIRING SPEAKER
NO DRILLING REQUIRED
UP TO 5% CASHBACK Max. up to ₹2500 (On Select Models) | FIXED EMI STARTING FROM ₹ 999*
RANGE STARTS FROM : ₹11799*
SIDE-BY-SIDE REFRIGERATOR
FREE* MINI REFRIGERATOR worth up to ₹13999* & ₹11999* (On Select Side-by-Side Refrigerators)
FIXED EMI STARTING FROM ₹2999*
RANGE STARTS FROM : ₹71990*
TOP FREEZER REFRIGERATOR
BOTTOM FREEZER REFRIGERATOR
FIXED EMI STARTING FROM ₹1499*
RANGE STARTS FROM : ₹23990*
SINGLE DOOR REFRIGERATOR
Smart Inverter Compressor
FIXED EMI STARTING FROM ₹999*
RANGE STARTS FROM : ₹12990*
FRONT LOAD WASHING MACHINE
DD MOTOR
FIXED EMI STARTING FROM ₹1999*
RANGE STARTS FROM : ₹29990*
TOP LOAD WASHING MACHINE
DD MOTOR
AI DD
TurboWash
FIXED EMI STARTING FROM ₹1499*
RANGE STARTS FROM : ₹18990*
DISHWASHER
INVERTER DIRECT DRIVE MOTOR
FIXED EMI STARTING FROM ₹2999* (On Select Models)
RANGE STARTS FROM : ₹46900*
AIR CONDITIONERS
New 2025 SERIES
10% RETURN AVAILABLE AS CASHBACK up to ₹4000*
FREE STANDARD INSTALLATION on Split ACs
FIXED EMI STARTING FROM @ ₹1999* (Offer on 5 Star/Hot and Cold ACs)
RANGE STARTS FROM : ₹36990*
YOUR HOME CHEF Wi-Fi ENABLED MICROWAVE OVEN
40* SCAN TO COOK MENU
CHARCOAL Lighting Heater
FREE GLASS BOWL SET (On Select Convection Models)
FIXED EMI STARTING FROM ₹1499*
RANGE STARTS FROM : ₹7990*
AMERICAN EXPRESS
AXIS BANK
BOBCARD
DBS
FEDERAL BANK
HDFC BANK
ICICI Bank
IDFC FIRST Bank
J&K Bank
SBI card
Pai INTERNATIONAL
PRODUCT & SERVICE RELATED ENQUIRIES +91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY FOR REFRIGERATORS, WASHING MACHINES, LED TV'S
24 HOURS DELIVERY CHALLENGE*
GET 100% ADDITIONAL LUCKY DRAW COUPON* IF NOT DELIVERED WITHIN 24 HOURS (Within City Limits)
WE ARE CELEBRATING 220+ OUTLETS
STORE LOCATOR
*Terms and Conditions Apply. For more information please visit www.lg.com

ಜೂನಿಯರ್ ಅಥ್ಲೆಟಿಕ್ಸ್: ಕರ್ನಾಟಕಕ್ಕೆ ನಾಲ್ಕು ಪದಕ

ಬೆಂಗಳೂರು: ಕರ್ನಾಟಕದ ವೈಷ್ಣವಿ ರಾವಲ್ ಅವರು ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 40ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 20 ವರ್ಷದೊಳಗಿನ ಮಹಿಳೆಯರ 1500 ಮೀಟರ್ ಓಟದಲ್ಲಿ ಚಿನ್ನದ ಪದಕ ಗೆದ್ದರು.

ವೈಷ್ಣವಿ ಅವರು ಫೈನಲ್ ಸ್ಪರ್ಧೆಯಲ್ಲಿ 4 ನಿಮಿಷ 29.19 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಮಧ್ಯ ಪ್ರದೇಶದ ರಾಧಾ ಯಾದವ್ (4:29.19) ಮತ್ತು ರಾಜಸ್ಥಾನದ ಮಂಜು ಚೌಧರಿ (4:30.93) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.


ಚಿರಂತ್ ಪಿ.

18 ವರ್ಷದೊಳಗಿನ ಪುರುಷರ 100 ಮೀ. ಓಟದಲ್ಲಿ ರಾಜ್ಯದ ಚಿರಂತ್ ಪಿ. ಮತ್ತು ಸವಿನ್ ತಿಂಗಳಾಯ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು. 10.71 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ಚಿರಂತ್ ಅವರು ಕೂದಲೆಳೆಯ ಅಂತರದಲ್ಲಿ ಚಿನ್ನ ತಪ್ಪಿಸಿಕೊಂಡರು. ಅದೇ ಸಮಯದಲ್ಲಿ ಗುರಿ ತಲುಪಿದ್ದ ಮಹಾರಾಷ್ಟ್ರದ ಆದಿತ್ಯ ಫೈಸಲ್, ಫೋಟೊ ಫಿನಿಷ್‌ನಲ್ಲಿ ಚಿನ್ನ ಗೆದ್ದರು.

14 ವರ್ಷದೊಳಗಿನ ಟ್ರಯಥ್ಲಾನ್‌ನಲ್ಲಿ ಕರ್ನಾಟಕದ ಅದ್ವಿಕಾ ಕೆ.ಪಿ. (2739 ಅಂಕ) ಕಂಚಿನ ಪದಕ ಗೆದ್ದರು.

ಹಿಮಾಂಶು ದಾಖಲೆ: ಹರಿಯಾಣದ ಹಿಮಾಂಶು ಜಾಖಡ್ ಅವರು ಪುರುಷರ 18 ವರ್ಷದೊಳಗಿನವರ ವಿಭಾಗದ ಜಾವೆಲಿನ್ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದು, 20 ವರ್ಷದೊಳಗಿನ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದರು. ಹಿಮಾಂಶು ಅರ್ಹತಾ ಸುತ್ತಿನಲ್ಲಿ 700 ಗ್ರಾಂ ತೂಕದ ಜಾವೆಲಿನ್ ಅನ್ನು 79.96 ಮೀಟರ್ ದೂರಕ್ಕೆ ಎಸೆದರು. ಈ ಮೂಲಕ 2014ರಲ್ಲಿ ವಿಜಯವಾಡದಲ್ಲಿ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಮಾಡಿದ್ದ (76.50 ಮೀ) ದಾಖಲೆ ಮುರಿದರು.

ಫೆನೆಸ್ತಾ ಓಪನ್ ಫೈನಲ್‌ಗೆ ಪದ್ಮಾ

ನವದೆಹಲಿ (ಪಿಟಿಐ): ಕರ್ನಾಟಕದ ಉದಯೋನ್ಮುಖ ಆಟಗಾರ್ತಿ ಪದ್ಮಾ ರಮೇಶ್‌ಕುಮಾರ್ ಅವರು



ಫೆನೆಸ್ತಾ ಓಪನ್ ರಾಷ್ಟ್ರೀಯ ಟೆನಿಸ್ ಚಾಂಪಿಯನ್‌ಷಿಪ್‌ನ 14 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಶುಕ್ರವಾರ ಫೈನಲ್ ತಲುಪಿದರು.

ಅಗ್ರ ಶ್ರೇಯಾಂಕದ ಪದ್ಮಾ ಅವರು ನಾಲ್ಕರ ಘಟ್ಟದ ಪಂದ್ಯದಲ್ಲಿ 6–1, 6–3ರಿಂದ ದೀಪ್ತಿ ವೆಂಕಟೇಶನ್ ಅವರನ್ನು ಸುಲಭವಾಗಿ ಮಣಿಸಿದರು.

ಪ್ರಶಸ್ತಿ ಸುತ್ತಿನಲ್ಲಿ ಪದ್ಮಾ ಅವರು ಎರಡನೇ ಶ್ರೇಯಾಂಕದ ಜೆನ್ಸಿ ಕನಬಾರ್ ವಿರುದ್ಧ ಸೆಣಸಲಿದ್ದಾರೆ.

ಆದರೆ, 16 ವರ್ಷದೊಳಗಿನ ಬಾಲಕಿಯರ ಸೆಮಿಫೈನಲ್‌ನಲ್ಲಿ ರಾಜ್ಯದ ಸ್ನಿಗ್ಧಾ ಕಾಂತಾ ಅವರು 3–6, 1–6ರಿಂದ ಅಗ್ರಶ್ರೇಯಾಂಕದ ಪಾರ್ಥಸಾರಥಿ ಅರುಣ್ ಎದುರು ಸೋತು ಟೂರ್ನಿಯಿಂದ ನಿರ್ಗಮಿಸಿದರು.

ಪ್ರಶಸ್ತಿ ಸುತ್ತಿಗೆ ಕಶ್ವಿ

ಬೆಂಗಳೂರು: ಕರ್ನಾಟಕದ ಕಶ್ವಿ



ವೆಂಕಟ್ ಕೋಣಂಕಿ ಅವರು ಜೈಪುರದಲ್ಲಿ ನಡೆಯುತ್ತಿರುವ ಎಐಟಿಎ 12 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕಿಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದಾರೆ.

ಬೆಂಗಳೂರಿನ 9 ವರ್ಷ ವಯಸ್ಸಿನ ಈ ಆಟಗಾರ್ತಿ, ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ 7–6(4), 6–0ಯಿಂದ ಕರ್ನಾಟಕದವರೇ ಆದ ಅನೀಷಾ ಮರಿಯನ್ ಕಾರ್ನೆಲಿಯೊ ಅವರನ್ನು ಮಣಿಸಿದರು.

ಕಶ್ವಿ ಅವರು ಶನಿವಾರ ನಡೆಯಲಿರುವ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಪಶ್ಚಿಮ ಬಂಗಾಳದ ಪ್ರಿಯಾಂಶಿ ಚಟರ್ಜಿ ಅವರ ಸವಾಲನ್ನು ಎದುರಿಸಲಿದ್ದಾರೆ. ಪ್ರಿಯಾಂಶಿ ಅವರು ನಾಲ್ಕರ ಘಟ್ಟದಲ್ಲಿ 6–2, 7–6(2)ರಿಂದ ಕರ್ನಾಟಕದ ರೂಹಿ ಸಿಂಗ್ ವಿರುದ್ಧ ಜಯಿಸಿದ್ದರು.

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕರಕುಶಲ ಕಾರ್ಯಾಗಾರ



ದೀಪಾವಳಿ ಹಬ್ಬದ ಅಂಗವಾಗಿ ಪಶ್ಚಿಮ ಬಂಗಾಳದಲ್ಲಿ ನಡೆದ ಕರಕುಶಲ ಕಾರ್ಯಾಗಾರದಲ್ಲಿ ಮಣ್ಣಿನ ಮೂರ್ತಿಯೊಂದನ್ನು ಪ್ರದರ್ಶಿಸಿದ ಬಾಲಕಿ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

'ಸ್ಪಾಂಜ್ ಐರನ್' ದೂಳು, ತಪ್ಪದ ಗೋಳು 2

ಹಸಿರು ಪಟಾಕಿಗಷ್ಟೇ ಅವಕಾಶ

'ಪರಿಸರಸ್ನೇಹಿ ದೀಪಾವಳಿ ಹಬ್ಬ– 2025 'ಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿ ಕಟ್ಟಪ್ಪಣೆ

• ಆರ್. ಮಂಜುನಾಥ್

ಬೆಂಗಳೂರು: ರಾಜ್ಯದಾದ್ಯಂತ 'ಪರಿಸರಸ್ನೇಹಿ ದೀಪಾವಳಿ' ಆಚರಣೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸಿದ್ದು, ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ ನೀಡಬೇಕು ಎಂದು ಜಿಲ್ಲಾಧಿಕಾರಿಗಳು, ಪೊಲೀಸರಿಗೆ ತಾಕೀತು ಮಾಡಿದೆ.

ನಿಷೇಧಿಸಿರುವ ಪಟಾಕಿಗಳನ್ನು ಮಾರಾಟ ಮಾಡುವವರು, ದಾಸ್ತಾನು ಹೊಂದಿರುವವರ ವಿರುದ್ಧ ಪರಿಸರ ಕಾಯ್ದೆಯಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಲಾಗಿದೆ. ಅಲ್ಲದೆ, ಶಬ್ದ ಮಾಲಿನ್ಯವನ್ನು ನಿಯಂತ್ರಿಸಲು 2004ರಲ್ಲಿ ಪ್ರತಿ ಜಿಲ್ಲೆಯಲ್ಲೂ ಸ್ಥಾಪನೆಯಾಗಿರುವ 'ಜಿಲ್ಲಾ ಪರಿಸರ ಸಂರಕ್ಷಣೆ ಪ್ರಾಧಿಕಾರ'ಕ್ಕೆ ಜವಾಬ್ದಾರಿ ವಹಿಸಲಾಗಿದೆ.

ರಾಸಾಯನಿಕ ಹೊಂದಿರುವ ಪಟಾಕಿಗಳ ಬಳಕೆಯಿಂದ ವಾತಾವರಣದಲ್ಲಿ ರಾಸಾಯನಿಕ ಬಿಡುಗಡೆಯಾಗಿ ವಾಯು ಮಾಲಿನ್ಯ ವಾಗುತ್ತದೆ. ಪಟಾಕಿಗಳನ್ನು ಅಸುರಕ್ಷಿತ ಸ್ಥಳಗಳಲ್ಲಿ ಸಂಗ್ರಹಿಸಿ, ಅವುಗಳು ಸ್ಫೋಟಗೊಂಡು ಅನೇಕ ಜನರ ಪ್ರಾಣಹಾನಿ/ ಆರೋಗ್ಯಕ್ಕೆ ತೊಂದರೆಯಾಗಿದೆ. ಹಬ್ಬದ ಸಮಯದ ವಾಯು ಮಾದರಿಗಳಲ್ಲಿ ವಾಯು ಮಾಲಿನ್ಯ ವಿಪರೀತವಾಗಿರುವುದು ಕಂಡುಬಂದಿದೆ. ಇದನ್ನೆಲ್ಲ ಗಮನಿಸಿ ಸುಪ್ರೀಂ ಕೋರ್ಟ್ ಮಾಲಿನ್ಯ ತಡೆಗಟ್ಟಲು ತೀರ್ಪು ನೀಡಿರುತ್ತದೆ. ಅದರಂತೆ, ಸರ್ಕಾರವೂ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅವುಗಳನ್ನು ಪರಿಣಾಮ ಕಾರಿಯಾಗಿ ವಿವಿಧ ಇಲಾಖೆಗಳು, ಪ್ರಾಧಿಕಾರಗಳು ಜಾರಿಗೆ ತರಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ. 2

> **ನಮ್ಮದು ನಿಯಂತ್ರಣ ಮಂಡಳಿ, ಏನು ಮಾಡಬಹುದು ಎಂದು ಹೇಳಬಹುದು. ಆಯಾ ಸ್ಥಳೀಯ ಆಡಳಿತ, ಪೊಲೀಸರು ಅದನ್ನು ಅನುಷ್ಠಾನಕ್ಕೆ ತರಬೇಕು**
> **ಪಿ.ಎಂ. ನರೇಂದ್ರಸ್ವಾಮಿ,** ಅಧ್ಯಕ್ಷ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಆದೇಶ ಕಾಯ್ದಿರಿಸಿದ ಸುಪ್ರೀಂ ಕೋರ್ಟ್



ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿ ವ್ಯಾಪ್ತಿಯಲ್ಲಿ ಹಸಿರು ಪಟಾಕಿಗಳ ತಯಾರಿಕೆ ಮತ್ತು ಮಾರಾಟಕ್ಕೆ ಅನುಮತಿ ನೀಡುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿ ಕುರಿತಂತೆ ಶುಕ್ರವಾರ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ತನ್ನ ಆದೇಶ ಕಾಯ್ದಿರಿಸಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ.ವಿನೋದ್ ಚಂದ್ರನ್ ಅವರು ಇದ್ದ ಪೀಠವು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಇತರರ ವಾದ ಆಲಿಸಿತು.

ದೀಪಾವಳಿ, ಗುರುಪರ್ವ ಮತ್ತು ಕ್ರಿಸ್‌ಮಸ್ ಹಬ್ಬಗಳ ವೇಳೆ ದೆಹಲಿಯಲ್ಲಿ ಹಸಿರು ಪಟಾಕಿಗಳನ್ನು ಸಿಡಿಸಲು ಸಮಯದ ನಿರ್ಬಂಧ ಇಲ್ಲದೇ ಅನುಮತಿ ನೀಡಬೇಕು ಎಂದು ಸರ್ಕಾರಗಳ ಪರ ವಕೀಲರು ಸುಪ್ರೀಂಕೋರ್ಟ್‌ನಲ್ಲಿ ವಾದ ಮಂಡಿಸಿದರು.

ಹೆಚ್ಚುತ್ತಿರುವ ಪರಿಸರ ಮಾಲಿನ್ಯದ ಕಾರಣಕ್ಕಾಗಿ ದೆಹಲಿಯಲ್ಲಿ ಪಟಾಕಿ ಮಾರಾಟ ಮತ್ತು ಸಿಡಿಸುವುದನ್ನು ನಿಷೇಧಿಸಿ ಸುಪ್ರೀಂಕೋರ್ಟ್ ಇತ್ತೀಚೆಗೆ ಆದೇಶ ಹೊರಡಿಸಿತ್ತು.



ನಿಷೇಧಕ್ಕೆ ಸುತ್ತೋಲೆ: ಲಿಂಗರಾಜು

ನಗರ ಪಾಲಿಕೆಗಳು, ಸ್ಥಳೀಯ ಸಂಸ್ಥೆಗಳ ಆಯುಕ್ತರು, ಜಿಲ್ಲಾಧಿಕಾರಿಗಳು, ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ಆಯುಕ್ತರು, ಸಾರಿಗೆ ಆಯುಕ್ತರು, ಶಿಕ್ಷಣ, ವಾಣಿಜ್ಯ, ಪಶು ಸಂಗೋಪನೆ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು, ಅಗ್ನಿಶಾಮಕ ಮಹಾ ನಿರ್ದೇಶಕರಿಗೆ ನಿಷೇಧಿತ ಪಟಾಕಿಗಳ ಉತ್ಪಾದನೆ, ಸಂಗ್ರಹ ಮತ್ತು ಮಾರಾಟವನ್ನು ನಿಷೇಧಿಸಲು ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಕ್ಟೋಬರ್ ಮೊದಲ ವಾರದಲ್ಲೇ ಸುತ್ತೋಲೆ ಕಳುಹಿಸಲಾಗಿದೆ. ಉಲ್ಲಂಘಿಸಿದವರ ವಿರುದ್ಧ ಕಾನೂನು ಪ್ರಕಾರ ಮೊಕದ್ದಮೆ ದಾಖಲಿಸಲೂ ತಿಳಿಸಲಾಗಿದೆ ಎಂದು ಮಂಡಳಿಯ ಸದಸ್ಯ ಕಾರ್ಯದರ್ಶಿ ಲಿಂಗರಾಜು ತಿಳಿಸಿದರು.

ಈ ಸುತ್ತೋಲೆ ಪ್ರತಿಯನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ರಾಜ್ಯಮಟ್ಟದ ಸಮಿತಿ ಅಧ್ಯಕ್ಷ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರಿಗೂ ಕಳಹಿಸಲಾಗಿದೆ ಎಂದರು.

ಯಶಸ್ವಿ ಶತಕ ಸೊಬಗು



ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭವಾದ ವೆಸ್ಟ್ ಇಂಡೀಸ್ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಭಾರತದ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಶತಕ ಗಳಿಸಿ ಸಂಭ್ರಮಿಸಿದರು

4 : ಯಶಸ್ವಿ ಟೆಸ್ಟ್ ಕ್ರಿಕೆಟ್‌ನಲ್ಲಿ 7 ಶತಕಗಳನ್ನು ಗಳಿಸಿದರು. 24 ವರ್ಷ ವಯಸ್ಸಿನೊಳಗೇ ಈ ಸಾಧನೆ ಮಾಡಿದ ವಿಶ್ವದ ನಾಲ್ಕನೇ ಬ್ಯಾಟರ್ ಎನಿಸಿದರು

193 : ಯಶಸ್ವಿ ಮತ್ತು ಸಾಯಿ ಸುದರ್ಶನ್ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ ಪೇರಿಸಿದ ರನ್‌ಗಳು

ಸ್ಕೋರ್
2 ವಿಕೆಟ್‌ಗಳಿಗೆ **318**
(**90** ಓವರ್‌ಗಳಲ್ಲಿ)

ರನ್: **173*** | ಎಸೆತ: **253** | ಬೌಂಡರಿ: **22**

ಮಾರಿಯಾಗೆ ನೊಬೆಲ್ ಶಾಂತಿ ಪುರಸ್ಕಾರ

ಓಸ್ಲೊ (ಎಎಫ್‌ಪಿ/ರಾಯಿಟರ್ಸ್): ವೆನೆಜುವೆಲಾದ ವಿರೋಧಪಕ್ಷದ ನಾಯಕಿ ಮತ್ತು ಪ್ರಜಾಪ್ರಭುತ್ವ ಪರ ಹೋರಾಟಗಾರ್ತಿ ಮಾರಿಯಾ ಕೊರಿನಾ ಮಚಾದೊ ಅವರಿಗೆ ಪ್ರಸಕ್ತ ಸಾಲಿನ ನೊಬೆಲ್ ಶಾಂತಿ ಪುರಸ್ಕಾರ ಒಲಿದಿದೆ.

'ವೆನೆಜುವೆಲಾದ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪ್ರಚುರಪಡಿಸಲು ಮತ್ತು ಸರ್ವಾಧಿಕಾರದಿಂದ ಪ್ರಜಾಪ್ರಭುತ್ವದೆಡೆಗೆ ಶಾಂತಿಯುತವಾಗಿ ದೇಶವನ್ನು ಕೊಂಡೊಯ್ಯಲು ನಡೆಸಿದ ಹೋರಾಟಗಳಿಗಾಗಿ ಮಾರಿಯಾ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಲಾಗುತ್ತಿದೆ' ಎಂದು ನಾರ್ವೆಯ ನೊಬೆಲ್ ಸಮಿತಿಯ ಅಧ್ಯಕ್ಷ ಜಾರ್ಗೆನ್ ವಾಟ್ನೆ ಫ್ರಿಡ್‌ನೆಸ್ ಅವರು ಹೇಳಿದ್ದಾರೆ.

'ನಿರಂಕುಶ ಆಡಳಿತದಿಂದಾಗಿ ಮಾನವೀಯತೆಯ ಅಧಃಪತನ ಮತ್ತು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ವೆನೆಜುವೆಲಾದಲ್ಲಿ ಸಮರ್ಥ ವಿರೋಧ ಪಕ್ಷವಾಗಿ ಮಾರಿಯಾ ಕಾರ್ಯನಿರ್ವಹಿಸಿದ್ದಾರೆ. ಜೀವ ಬೆದರಿಕೆಗಳು ಇದ್ದರೂ ದೇಶಕ್ಕಾಗಿ ದೃಢವಾಗಿ ನಿಂತಿದ್ದಾರೆ. ದೌರ್ಜನ್ಯದ ವಿರುದ್ಧ ನಾಗರಿಕರು ತೋರುವ ಧೈರ್ಯಕ್ಕೆ ಅವರು ಅದ್ಭುತ ಉದಾಹರಣೆಯಾಗಿದ್ದಾರೆ' ಎಂದು ಫ್ರಿಡ್‌ನೆಸ್ ಹೇಳಿದ್ದಾರೆ.

ಪ್ರಶಸ್ತಿಯು ಚಿನ್ನದ ಪದಕ, ಪ್ರಶಸ್ತಿಪತ್ರ ಹಾಗೂ 1.2 ಮಿಲಿಯನ್ ಡಾಲರ್ (ಅಂದಾಜು ₹10 ಕೋಟಿ) ಒಳಗೊಂಡಿದ್ದು, ಓಸ್ಲೊದಲ್ಲಿ ಡಿಸೆಂಬರ್ 10ರಂದು ಪ್ರದಾನ ಮಾಡಲಾಗುತ್ತದೆ.

ತಮಗೆ ನೊಬೆಲ್ ಪ್ರಶಸ್ತಿ ಲಭಿಸಿದ್ದಕ್ಕೆ ಪ್ರತಿಕ್ರಿಯಿಸಿರುವ ಅವರು, 'ನಾನು ಇದಕ್ಕೆ ಅರ್ಹಳಲ್ಲ. ನಮ್ಮ ದೇಶದ ಜನರಿಗೆ ಸಂದ ಗೌರವವಿದು' ಎಂದಿದ್ದಾರೆ. 2

> **ಶಾಂತಿಯುತ ಹೋರಾಟದ ಮೂಲಕ ವೆನೆಜುವೆಲಾದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುವ ಕಾರ್ಯ ನಿಲ್ಲುವುದಿಲ್ಲ. ಈ ಹೋರಾಟದಲ್ಲಿ ನಮಗೆ ಗೆಲುವು ಖಚಿತ**
> **ಮಾರಿಯಾ ಕೊರಿನಾ ಮಚಾದೊ,** ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆ



ಟ್ರಂಪ್‌ಗೆ ನಿರಾಸೆ

ವಾಷಿಂಗ್ಟನ್ (ಎಪಿ): 'ಈ ಬಾರಿಯ ನೊಬೆಲ್ ಶಾಂತಿ ಪ್ರಶಸ್ತಿ ತಮ್ಮನ್ನು ಆಯ್ಕೆ ಮಾಡಬೇಕು, ಹಲವಾರು ಯುದ್ಧಗಳನ್ನು ನಿಲ್ಲಿಸಿದ್ದರಿಂದ ನಾನು ಈ ಪ್ರಶಸ್ತಿಗೆ ಅರ್ಹ' ಎಂದೇ ಹೇಳುತ್ತಾ ಬಂದಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಒತ್ತಾಸೆ ಶುಕ್ರವಾರ ಈಡೇರಲಿಲ್ಲ ಈ ಪ್ರಶಸ್ತಿಯನ್ನು ಟ್ರಂಪ್ ಅವರಿಗೆ ನೀಡಬೇಕು ಎಂದು ರಿಪಬ್ಲಿಕನ್ ಪಕ್ಷದ ನಾಯಕರು ಕೂಡ ಒತ್ತಾಯಿಸುತ್ತಾ ಬಂದಿದ್ದರು. 'ಆಪರೇಷನ್ ಸಿಂಧೂರ ವೇಳೆ, ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧವನ್ನು ನಾನು ನಿಲ್ಲಿಸಿದ್ದೆ' ಎಂದು ಹಲವು ಬಾರಿ ಟ್ರಂಪ್ ಹೇಳಿಕೊಂಡಿದ್ದರು. 2

> **ನೊಬೆಲ್ ಸಮಿತಿಗೆ ಶಾಂತಿ ಸ್ಥಾಪನೆಗಿಂತ ರಾಜಕೀಯವೇ ಮುಖ್ಯವಾಗಿರುವುದು ಸಾಬೀತಾಗಿದೆ. ಆದಾಗ್ಯೂ ಟ್ರಂಪ್ ಅವರು ಯುದ್ಧಗಳನ್ನು ನಿಲ್ಲಿಸುವುದು, ಜನರ ಪ್ರಾಣ ಉಳಿಸುವುದನ್ನು ಮುಂದುವರಿಸುವರು**
> **ಸ್ಟೀವನ್ ಚೆವುಂಗ್,** ಶ್ವೇತಭವನ ವಕ್ತಾರ

'ಆಯುಷ್ಮಾನ್'ಗೆ ಎಪಿಎಲ್ ಕುಟುಂಬ ನಿರಾಸಕ್ತಿ

• ವರುಣ ಹೆಗಡೆ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಿಂದ ಶಿಫಾರಸು, ಚಿಕಿತ್ಸಾ ವೆಚ್ಚದಲ್ಲಿ ಶೇ 30 ರಷ್ಟು ಮಾತ್ರ ಹಣ ಪಾವತಿ ಸೇರಿ ವಿವಿಧ ಕಾರಣಗಳಿಂದ ರಾಜ್ಯದಲ್ಲಿ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' (ಎಬಿ–ಎಆರ್‌ಕೆ) ಯೋಜನೆಯಡಿ ಚಿಕಿತ್ಸೆ ಪಡೆಯಲು ಎಪಿಎಲ್ ಕುಟುಂಬದ ಸದಸ್ಯರು ನಿರಾಸಕ್ತಿ ತೋರಿದ್ದಾರೆ. ಈವರೆಗೆ ಯೋಜನೆಯಡಿ ಚಿಕಿತ್ಸೆ ಪಡೆದವರಲ್ಲಿ ಶೇ 4ರಷ್ಟು ಮಂದಿ ಮಾತ್ರ ಎಪಿಎಲ್ ಕುಟುಂಬದ ಫಲಾನುಭವಿಗಳಾಗಿದ್ದಾರೆ.



ಯೋಜನೆಯಡಿ ಚಿಕಿತ್ಸೆಗೆ ಇರುವ ತೊಡಕುಗಳೇ ನಿರಾಸಕ್ತಿಗೆ ಕಾರಣವಾಗಿವೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಚಿಕಿತ್ಸಾ ವೆಚ್ಚದಲ್ಲಿ ಶೇ 30ರಷ್ಟು ಹಣವನ್ನು ಮಾತ್ರ ಪಾವತಿಸಲಾಗುತ್ತಿದೆ. ಇದರ ಪ್ರಯೋಜನ ಪಡೆಯಬೇಕಾದರೆ ಫಲಾನುಭವಿಗಳು ಮೊದಲು ಸರ್ಕಾರಿ ಆಸ್ಪತ್ರೆಗೆ ದಾಖಲಾಗಬೇಕು. ಅಲ್ಲಿ ಚಿಕಿತ್ಸೆ ಲಭ್ಯವಿಲ್ಲದಿದ್ದಲ್ಲಿ ಬೇರೆ ಆಸ್ಪತ್ರೆಗೆ ಶಿಫಾರಸು ಆಧಾರದಲ್ಲಿ ತೆರಳಿ ಚಿಕಿತ್ಸೆ ಪಡೆದುಕೊಳ್ಳಬೇಕು. ಇದರಿಂದ ಚಿಕಿತ್ಸೆ ವಿಳಂಬವಾಗುವ ಜತೆಗೆ ರೋಗಿಯ ಸ್ಥಿತಿ ಮತ್ತಷ್ಟು ಹದಗೆಡಲಿದೆ. ಆದ್ದರಿಂದ ಯೋಜನೆಯಡಿ ದೊರೆಯುತ್ತಿದ್ದ ಅಲ್ಪ ನೆರವಿಗೆ ಎಪಿಎಲ್ ಕುಟುಂಬಸ್ಥರು ಆಸಕ್ತಿ ತೋರುತ್ತಿಲ್ಲ. 2

ವೆಚ್ಚ ₹10 ಸಾವಿರ ಕೋಟಿ: ಎಪಿಎಲ್ ಬಳಕೆ ₹120 ಕೋಟಿ

'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಯೋಜನೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಿರ್ವಹಣೆ ಮಾಡುತ್ತಿದ್ದು, 1,650 ಚಿಕಿತ್ಸಾ ಪ್ಯಾಕೇಜ್‌ಗಳು ಒಳಗೊಂಡಿವೆ. ಯೋಜನೆಯಡಿ ಈವರೆಗೆ ಚಿಕಿತ್ಸೆಗೆ ಒಟ್ಟು ₹ 10,885 ಕೋಟಿ ವೆಚ್ಚ ಮಾಡಲಾಗಿದೆ. ಈ ಚಿಕಿತ್ಸಾ ಮೊತ್ತದಲ್ಲಿ ₹ 10,764 ಕೋಟಿಯನ್ನು ಬಿಪಿಎಲ್ ಕುಟುಂಬದ ಸದಸ್ಯರ ಚಿಕಿತ್ಸೆಗೆ ಬಳಸಿದರೆ, ₹ 120 ಕೋಟಿ ಮಾತ್ರ ಎಪಿಎಲ್ ಕುಟುಂಬದ ಸದಸ್ಯರಿಗೆ ಚಿಕಿತ್ಸೆ ಸಂಬಂಧಿಸಿದಂತೆ ಟ್ರಸ್ಟ್ ಭರಿಸಿದೆ.

ಬೆನ್ನುಹುರಿ ವಿರೂಪಕ್ಕೆ ಸಂಬಂಧಿಸಿದ ಚಿಕಿತ್ಸೆ, ಗಿಲ್ಲೈನ್-ಬರ್ರೆ ಸಿಂಡ್ರೋಮ್ (ಜಿಬಿಎಸ್) ಕಾಯಿಲೆಗೆ ನೀಡುವ 'ಇಂಟ್ರಾವೀನಸ್ ಇಮ್ಯುನೋಗ್ಲೋಬಿನ್' (ಐವಿಐಜಿ) ಥೆರಪಿಯಂತಹ ಚಿಕಿತ್ಸೆಗಳನ್ನು ಯೋಜನೆಯಡಿ ಇತ್ತೀಚೆಗೆ ಸೇರ್ಪಡೆ ಮಾಡಲಾಗಿದೆ. ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಿಗೂ ಚಿಕಿತ್ಸೆಗೆ ಅನುಸಾರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹಣ ಬಿಡುಗಡೆ ಮಾಡುತ್ತಿದೆ. ಈ ಹಣವನ್ನು ಆಸ್ಪತ್ರೆಗಳ ಅಭಿವೃದ್ಧಿ ಹಾಗೂ ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ಪ್ರೋತ್ಸಾಹ ಧನ ಒದಗಿಸಲು ಬಳಸಿಕೊಳ್ಳಲಾಗುತ್ತಿದೆ.

‘ಸ್ಪಾಂಜ್ ಐರನ್’ ದೂಳು, ತಪ್ಪದ ಗೋಳು

ಬಳ್ಳಾರಿ ಜಿಲ್ಲೆಯ 40 ಗ್ರಾಮಗಳಲ್ಲಿ ಆವರಿಸಿದ ಹೊಗೆ, ಬೆಳೆಗಳು ಹಾಳು • ಆರೋಗ್ಯದ ಮೇಲೂ ಪ್ರತಿಕೂಲ ಪರಿಣಾಮ

• ಹರಿಶಂಕರ್ ಆರ್.

ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ಕಾರ್ಖಾನೆಗಳ ಬಗ್ಗೆ ಮಾಹಿತಿ ಪಡೆಯುತ್ತೇನೆ. ಎಷ್ಟೇ ದೊಡ್ಡವರಿದ್ದರೂ ಕ್ರಮಕ್ಕೆ ಹಿಂಜರಿಯುವುದಿಲ್ಲ.
ಪಿ.ಎಂ.ನರೇಂದ್ರ ಸ್ವಾಮಿ, ಅಧ್ಯಕ್ಷ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಕಾರ್ಖಾನೆಗಳ ಮಾಲಿನ್ಯದಿಂದ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಉಸಿರಾಟದ ಸಮಸ್ಯೆ ಹೆಚ್ಚುತ್ತಿದೆ. ಭವಿಷ್ಯದಲ್ಲಿ ಮತ್ತಷ್ಟು ಗಂಭೀರವಾಗಲಿದೆ
ಡಾ. ಗಂಗಾಧರ ಗೌಡ, ನಿರ್ದೇಶಕ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ

ಬಳ್ಳಾರಿ: ಕಬ್ಬಿಣದ ಬೃಹತ್ ಕೈಗಾರಿಕೆಗಳಿಗೆ ‘ಸ್ಪಾಂಜ್ ಐರನ್’ ಕಚ್ಚಾ ವಸ್ತುವನ್ನು ಪೂರೈಸುವ ಕಾರ್ಖಾನೆಗಳಿಂದ ಆಗುತ್ತಿರುವ ಮಾಲಿನ್ಯವು ಬಳ್ಳಾರಿ ನಗರ, ಕುಡುತಿನಿ, ತೋರಣಗಲ್ಲು ಮತ್ತು ಸಂಡೂರು ಭಾಗದಲ್ಲಿ ಜನರ ಆರೋಗ್ಯ, ಕೃಷಿ ಚಟುವಟಿಕೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ.

‘ಸ್ಪಾಂಜ್ ಐರನ್ ಕಾರ್ಖಾನೆ ಮತ್ತು ಗಣಿ ಚಟುವಟಿಕೆ ಪ್ರದೇಶದಲ್ಲಿ ದೂಳು ಅಧಿಕವಾಗಿದೆ. ಇದರಿಂದ ಉಸಿರಾಟದ ಸಮಸ್ಯೆ ಸೇರಿ ಅನಾರೋಗ್ಯಗಳಿಗೆ ಕಾರಣವಾಗುತ್ತಿದೆ’ ಎಂಬುದು ವೈದ್ಯರ ಅಭಿಮತ.

‘ಕಾರ್ಖಾನೆಗಳ ಅಕ್ಕಪಕ್ಕದ ಜಮೀನುಗಳಲ್ಲಿ ಬಿತ್ತಿದ ಬೀಜಗಳು ಮೊಳಕೆಯೊಡೆಯುವುದಿಲ್ಲ. ಮೊಳಕೆಯೊಡೆದವು ಬೆಳೆಯುತ್ತಿಲ್ಲ. ಬೆಳೆ ಕಾಳು ಕಟ್ಟುವುದಿಲ್ಲ. ಕೆಲವು ವರ್ಷ ಎಕರೆಗೆ ಒಂದು ಸಾವಿರದಂತೆ ಪರಿಹಾರ ನೀಡುತ್ತಿದ್ದ ಕಂಪನಿಗಳು ಈಗ ಅದನ್ನೂ ನಿಲ್ಲಿಸಿವೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ’ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಮಾಧವರೆಡ್ಡಿ ಬೇಸರ ವ್ಯಕ್ತಪಡಿಸಿದರು.

ವರ್ಷ 2000ದಲ್ಲಿ ಬಳ್ಳಾರಿಯಲ್ಲಿ ಕಬ್ಬಿಣದ ಅದಿರಿನ ಗಣಿ ಚಟುವಟಿಕೆಗಳು ಪ್ರವರ್ಧಮಾನಕ್ಕೆ ಬಂದ ಬಳಿಕ ಸ್ಪಾಂಜ್ ಐರನ್ ಕಾರ್ಖಾನೆಗಳು ಕಾಲಿರಿಸಿದವು. ಬಳ್ಳಾರಿಯ ಸುತ್ತಮುತ್ತ ಹಲಕುಂದಿ, ಬ್ಯಾಲಚಿಂತೆ, ಬೆಳಗಲ್, ಜಾನೆಕುಂಟೆ, ವೇಣಿವೀರಾಪುರ, ಕುಡುತಿನಿ, ಸಂಡೂರು, ತೋರಣಗಲ್ಲು ಸೇರಿ ಹಲವು ಪ್ರದೇಶಗಳಲ್ಲಿ ಅಸ್ತಿತ್ವ ಕಂಡುಕೊಂಡವು. ಸದ್ಯ ಅಂಥವು 20 ಕಾರ್ಖಾನೆಗಳಿವೆ.

‘ಈ ಕಾರ್ಖಾನೆಗಳಲ್ಲಿ ಕಲುಮೆಯಲ್ಲಿ ಕಬ್ಬಿಣದ ಅದಿರು ಕಾಯಿಸಿ, ಕಬ್ಬಿಣ ಬೇರ್ಪಡಿಸಿ, ಗಟ್ಟಿಗೊಳಿಸುವ ಪ್ರಕ್ರಿಯೆ ನಡೆಯಲಿದೆ. ಈ ಹಂತದಲ್ಲಿ ಹೊರ ಹೊಮ್ಮುವ ದೂಳು ಹತ್ತಾರು ಕಿಲೋಮೀಟರ್ ಹೋಗುತ್ತದೆ. ಮನೆ, ಹೊಲಗಳ ಮೇಲೆ ಕೂರುತ್ತದೆ. ಮಳೆ ಬಂದರೆ, ಮನೆಗಳ ಚಾವಣಿಯಿಂದ ಡಾಂಬರಿನಂತೆ ನೀರು ಹರಿಯುತ್ತದೆ. ಎಲ್ಲೆಲ್ಲಿ ಕಾರ್ಖಾನೆಗಳು ಇವೆಯೋ ಅವುಗಳ ಸುತ್ತಲಿನ ಕನಿಷ್ಠ ಐದು ಕಿ.ಮೀ ಪ್ರದೇಶ ಕಡುಗಪ್ಪಾಗಿ ರೂಪಾಂತರಗೊಂಡಿದೆ’ ಎಂದು ಸ್ಥಳೀಯರು ತಿಳಿಸಿದರು.

ಹೆಸರಿಗಷ್ಟೇ ಇಎಸ್‌ಪಿ: ‘ಕಾರ್ಖಾನೆಗಳಲ್ಲಿ ಕುಲುಮೆಯ ಚಿಮಣಿಗಳಿಗೆ ಕಡ್ಡಾಯವಾಗಿ ಎಲೆಕ್ಟ್ರೋಸ್ಟ್ಯಾಟಿಕ್ ಪ್ರೆಸಿಪಿಟೇಟರ್ (ಇಎಸ್‌ಪಿ) ಬಳಸಲು ಮಾಲಿನ್ಯ ನಿಯಂತ್ರಣಾ ಮಂಡಳಿ ಸೂಚಿಸಿದೆ. ಇದು ದೂಳು ಬೇರ್ಪಡಿಸಿ ಹೊಗೆ ಮಾತ್ರವೇ ಕುಲುಮೆಯಿಂದ ಹೊರಹೋಗುವಂತೆ ಮಾಡುತ್ತದೆ. ಎಲ್ಲ ಕಾರ್ಖಾನೆಗಳು ಈ ವ್ಯವಸ್ಥೆ ಅಳವಡಿಸಿಕೊಂಡಿವೆ. ಆದರೆ, ವಿದ್ಯುತ್ ಹೊರೆಯ ಕಾರಣಕ್ಕೆ ಬಹುತೇಕ ಕಾರ್ಖಾನೆಗಳು ಬಳಸುತ್ತಿಲ್ಲ. ಹೀಗಾಗಿ ಕಪ್ಪು ಬಣ್ಣದ ದೂಳು ಪರಿಸರ ಸೇರುತ್ತಿದೆ’ ಎಂದು ಸ್ಪಾಂಜ್ ಐರನ್ ಕಾರ್ಖಾನೆಗಳ ಒಕ್ಕೂಟ, ಹೆಸರು ಹೇಳಲಿಚ್ಛಿಸದ ಮುಖಂಡರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಾರ್ಖಾನೆಗಳ ಸುತ್ತಲು ಹಸಿರು ಬೆಳೆಸಬೇಕು ಎಂಬ ಸೂಚನೆಯಿದೆ. ಅದು ಪಾಲನೆ ಆಗುತ್ತಿಲ್ಲ. ಅದಿರು ಪೂರೈಕೆ ಲಾರಿಗಳಿಂದ ರಸ್ತೆಗಳಲ್ಲಿ ಗುಂಡಿ ಬೀಳುತ್ತಿವೆ. ದೂಳು ತಡೆಗೆ ಅದಿರು ಸಾಗಣೆ ವೇಳೆ ಲಾರಿಗಳಿಗೆ ಟಾರ್ಪಲಿನ್ ಹೊದಿಸುವ ಕೆಲಸವು ಆಗುತ್ತಿಲ್ಲ’ ಎಂದು ಕುಡುತಿನಿ ನಿವಾಸಿ ರಾಮು ತಿಳಿಸಿದರು.

‘ಇಎಸ್‌ಪಿ ಬಳಸದ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ನೀಡಿದ್ದೇವೆ. ಈ ದೂರುಗಳು ಮಂಡಳಿಯ ಕೇಂದ್ರ ಕಚೇರಿವರೆಗೆ ಹೋಗುತ್ತವೆ. ನಂತರ ಏನಾಗುವುದೋ ತಿಳಿಯುವುದೇ ಇಲ್ಲ. ಬೆಳೆಹಾನಿಗೆ ಪರಿಹಾರ ನೀಡುತ್ತಿದ್ದ ಕಾರ್ಖಾನೆಗಳು ಈಗ ರೈತರನ್ನು ನಿರ್ಲಕ್ಷಿಸುತ್ತಿವೆ. ಕಾರ್ಖಾನೆಗಳಿಗೆ ಆರಂಭದಲ್ಲಿ ಸ್ಥಳೀಯರೇ ಮಾಲೀಕರು ಆಗಿದ್ದರು. ಈಗ ಉತ್ತರ ಭಾರತೀಯರು ಆಗಿದ್ದಾರೆ. ಸ್ಥಳೀಯ ಸಮಸ್ಯೆಗಳ ಬಗ್ಗೆ ಅವರಿಗೆ ಕಾಳಜಿಯಿಲ್ಲ’ ಎಂದು ಹೋರಾಟಗಾರ ಎರ್ರಿಸ್ವಾಮಿ ಆರೋಪಿಸಿದರು.

‘ಸ್ಪಾಂಜ್ ಐರನ್ ಕಂಪನಿಗಳೆಲ್ಲವೂ ಇಎಸ್‌ಪಿ ಅಳವಡಿಸಿಕೊಂಡಿವೆ. ಪರಿಶೀಲಿಸುತ್ತೇವೆ. ಸ್ಥಳೀಯರ ದೂರುಗಳನ್ನು ಪರಿಶೀಲಿಸಿ ಕ್ರಮ ಜರುಗಿಸುತ್ತೇವೆ’ ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯ ಬಳ್ಳಾರಿ ವಲಯದ ಪರಿಸರ ಅಧಿಕಾರಿ ಸಿದ್ದೇಶ್ವರ ಬಾಬು ಪ್ರತಿಕ್ರಿಯಿಸಿದರು.



ಬಳ್ಳಾರಿ ಹೊರವಲಯದ ವೇಣಿವೀರಾಪುರ ಬಳಿಯ ಸ್ಪಾಂಜ್ ಐರನ್ ಕಾರ್ಖಾನೆಯೊಂದರ ಬಳಿಯ ದೃಶ್ಯ




ಸ್ಪಾಂಜ್ ಐರನ್ ಕಾರ್ಖಾನೆಯೊಂದರಿಂದ ಹೊಮ್ಮುತ್ತಿರುವ ಹೊಗೆ

ಸುದ್ದಿ 2 ನಿಮಿಷ

‘ಜಾಲಿವುಡ್ ಸ್ಟುಡಿಯೊ ವಿರುದ್ಧ ಬಂದ್ ಆದೇಶ ಜಾರಿಯಲ್ಲಿದೆ’

ಬಳ್ಳಾರಿ: ‘ಬಿಡದಿಯ ಜಾಲಿವುಡ್ ಸ್ಟುಡಿಯೋಸ್ ಆ್ಯಂಡ್ ಅಡ್ವೆಂಚರ್ಸ್ ಪಾರ್ಕ್ ವಿರುದ್ಧ ಕಾನೂನಿನಡಿ ಕ್ರಮ ತೆಗೆದುಕೊಂಡಿದ್ದು, ಬಂದ್ ಆದೇಶ ಈಗಲೂ ಜಾರಿಯಲ್ಲಿದೆ’ ಎಂದು ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ ಅಧ್ಯಕ್ಷ ಪಿ.ಎಂ.ನರೇಂದ್ರ ಸ್ವಾಮಿ ಹೇಳಿದರು.



‘ಜಾಲಿವುಡ್ ಸ್ಟುಡಿಯೊ ಬಂದ್ ಆಗಿದೆ. ಬಹುಜನರ ಬೇಡಿಕೆ, ಸ್ಥಳೀಯ ನಾಯಕರು ಮತ್ತು ಜನರ ಭಾವನೆಗೆ ಸ್ಪಂದಿಸಲು ಉಪ ಮುಖ್ಯಮಂತ್ರಿ ಕ್ರಮ ಕೈಗೊಂಡಿದ್ದಾರೆ. ಜಾಲಿವುಡ್‌ನ ಒಟ್ಟು 30 ಎಕರೆ ಪ್ರದೇಶದಲ್ಲಿ ಬಿಗ್‌ಬಾಸ್ ಮನೆ ಒಂದು ಭಾಗ ಮಾತ್ರ. ಜಾಲಿವುಡ್ ವಿರುದ್ಧ ಕೈಗೊಂಡ ಕ್ರಮಕ್ಕೆ ತೊಂದರೆ ಆಗದಂತೆ ಜಿಲ್ಲಾಡಳಿತ ಮತ್ತು ಸರ್ಕಾರ ನಡೆದುಕೊಳ್ಳುತ್ತಿದೆ’ ಎಂದು ಹೇಳಿದರು.

‘ನಾನು ಮಂಡಳಿ ಅಧ್ಯಕ್ಷನಾದ ಬಳಿಕ 150ಕ್ಕೂ ಹೆಚ್ಚಿನ ಕಾರ್ಖಾನೆಗಳ ವಿರುದ್ಧ ಸ್ಥಗಿತ ಆದೇಶ ನೀಡಿದ್ದೇನೆ. ಈ ಆದೇಶಗಳನ್ನು ಪ್ರಶ್ನಿಸಲು ಕಾರ್ಖಾನೆಯವರಿಗೆ ಸಾಧ್ಯವಾಗಿಲ್ಲ’ ಎಂದರು.

ಮತ್ತೆ 8 ಸಂಸ್ಥೆಗಳೊಂದಿಗೆ ಸಂಗೀತ ವಿ. ವಿ ಒಪ್ಪಂದ

ಮೈಸೂರು: ಕರ್ನಾಟಕ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ, 8 ಶಿಕ್ಷಣ ಸಂಸ್ಥೆಗಳ ಜೊತೆಗೆ ವಿವಿಧ ಕೋರ್ಸ್‌ಗಳ ಆರಂಭ ಕುರಿತು ಒಡಂಬಡಿಕೆ ಮಾಡಿಕೊಂಡಿದೆ. ಇದರೊಂದಿಗೆ, 84 ಸಂಸ್ಥೆಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದಂತಾಗಿದೆ.

ಸಂಗೀತ ಮತ್ತು ಪ್ರದರ್ಶಕ ಕಲೆಗಳ ಹಲವು ಪ್ರಕಾರಗಳಲ್ಲಿ ಶಿಕ್ಷಣ ನೀಡುವ ಧ್ಯೇಯದೊಂದಿಗೆ 2025–26ನೇ ಸಾಲಿಗೆ ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಪ್ರಕ್ರಿಯೆ ನಡೆದಿದೆ. 2023ರಿಂದ ಈವರೆಗೆ 76 ಸಂಸ್ಥೆಗಳೊಂದಿಗೆ ಒಪ್ಪಂದವಾಗಿತ್ತು. ‘ಸಂಗೀತಾದಿ ಪ್ರದರ್ಶನ ಕಲೆಗಳನ್ನು ರಾಜ್ಯದಾದ್ಯಂತ ಬೆಳೆಸುವ ಹಾಗೂ ಶಿಕ್ಷಣ ನೀಡುವ ನಿಟ್ಟಿನಲ್ಲಿ ಒಪ್ಪಂದ ಮಾಡಿಕೊಂಡು, ಕೇಂದ್ರಗಳನ್ನು ಸ್ಥಾಪಿಸುತ್ತಿದೆ’ ಎಂದು ಕುಲಪತಿ ತಿಳಿಸಿದ್ದಾರೆ.



ಶಿರಸಿ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಧರಣಿ ಆರಂಭಿಸಿದರು

ನೇರ ನೇಮಕಾತಿಗೆ ಪದವಿ ಪರಿಗಣಿಸಲು ಆಗ್ರಹ, ಧರಣಿ

ಪ್ರಜಾವಾಣಿ ವಾರ್ತೆ

ಶಿರಸಿ: ‘ಡಿಆರ್‌ಎಫ್‌ಒ, ಆರ್‌ಎಫ್‌ಒ, ಆರ್‌ಎಫ್‌ಒ, ಎಸಿಎಫ್ ಹುದ್ದೆಗಳ ನೇರ ನೇಮಕಾತಿಗೆ ಕನಿಷ್ಠ ವಿದ್ಯಾರ್ಹತೆಯಾಗಿ ಬಿ.ಎಸ್ಸಿ ಅರಣ್ಯ ವಿಜ್ಞಾನ ಪದವಿ ಪರಿಗಣಿಸಲು ಒತ್ತಾಯಿಸಿ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಶುಕ್ರವಾರ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ಕರ್ನಾಟಕ ಅರಣ್ಯ ವಿದ್ಯಾರ್ಥಿಗಳು ಮತ್ತು ಪದವೀಧರರ ಸಂಘದ ನೇತೃತ್ವದಲ್ಲಿ ಧರಣಿ ನಡೆಸಿದ ವಿದ್ಯಾರ್ಥಿಗಳು, ‘ಅರಣ್ಯ ವಿಜ್ಞಾನ ಪದವೀಧರರ ಸಾಮರ್ಥ್ಯ ಮತ್ತು ಅಗತ್ಯ ಅರಿತ ಕರ್ನಾಟಕ ಸರ್ಕಾರ 2003ರಲ್ಲಿ ಎಸಿಎಫ್ ಮತ್ತು ಆರ್‌ಎಫ್‌ಒ ಹುದ್ದೆಗೆ ಶೇಕಡ 50ರಷ್ಟು ಮೀಸಲಾತಿ ಒದಗಿಸಿತ್ತು. ಪ್ರತಿಭಟನೆ ನಂತರ 2012ರಲ್ಲಿ ಆರ್‌ಎಫ್‌ಒ ಹುದ್ದೆಗೆ ಶೇಕಡ 75ಕ್ಕೆ ಹೆಚ್ಚಿಸಿತ್ತು’ ಎಂದರು.

‘2018ರಲ್ಲಿ ಮತ್ತೆ ನೇರ ನೇಮಕಾತಿಗೆ ಮೊದಲಿದ್ದ ಶೇ 50ಕ್ಕೆ ಕಡಿಮೆಗೊಳಿಸಿತ್ತು. ಬೇಡಿಕೆ ಪರಿಶೀಲಿಸಲು ವಿಶೇಷ ಸಮಿತಿ ರಚಿಸುವ ಆಶ್ವಾಸನೆಯೂ ಈವರೆಗೆ ಈಡೇರಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಕೇರಳ, ಒಡಿಶಾ, ಜಾರ್ಖಂಡ್‌ನಲ್ಲಿ ಮೀಸಲಾತಿ ಒದಗಿಸಿವೆ. ಅಂತೆಯೇ ರಾಜ್ಯದಲ್ಲೂ ಬಿ.ಎಸ್ಸಿ ಪದವಿಯನ್ನು (ಅರಣ್ಯ ಶಾಸ್ತ್ರ) ಕನಿಷ್ಠ ವಿದ್ಯಾರ್ಹತೆಯಾಗಿಸಿ ಅಧಿಸೂಚನೆ ಹೊರಡಿಸಬೇಕು’ ಎಂದು ಸಂಘಟನೆ ಅಧ್ಯಕ್ಷ ಅಕ್ಷಯಕುಮಾರ, ಕಾರ್ಯದರ್ಶಿ ವಿಕಾಸ ಎ.ಜಿ. ಒತ್ತಾಯಿಸಿದರು.

ಮಾರಿಯಾಗೆ ನೊಬೆಲ್ ಶಾಂತಿ ಪುರಸ್ಕಾರ

ಒಂದನೇ ಪುಟದಿಂದ...

ಕಳೆದ ಒಂದು ವರ್ಷದಿಂದ ಮಾರಿಯಾ ಅವರು ಅಜ್ಞಾತವಾಸದಲ್ಲಿದ್ದರು. ‘ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವಕ್ಕಾಗಿ ಒಬ್ಬ ಮಹಿಳೆ ಹಾಗೂ ದೇಶದ ಜನರು ನಡೆಸುತ್ತಿರುವ ನಿರಂತರ ಹೋರಾಟ ಗುರುತಿಸಿ ನೀಡಿರುವ ಪ್ರಶಸ್ತಿ ಇದು’ ಎಂದು ವಿರೋಧ ಪಕ್ಷದ ನಾಯಕ ಎಡ್ಮಂಡೊ ಗೊನ್ಜಾಲೇಜ್ ಉರುಟಿಯಾ ಹೇಳಿದ್ದಾರೆ.

ಕಳೆದ ವರ್ಷ ಮಾರಿಯಾ ಅವರು ಐರೋಪ್ಯ ಒಕ್ಕೂಟದ ಮಾನವ ಹಕ್ಕುಗಳ ಸಂಘಟನೆ ನೀಡುವ ‘ಸಖರೋವ್ ಪ್ರಶಸ್ತಿ’ಗೆ ಭಾಜನರಾಗಿದ್ದಾರೆ. ಕೌನ್ಸಿಲ್ ಆಫ್ ಯುರೋಪ್ ನೀಡುವ ‘ವಕ್ಲಾವ್ ಹ್ಯಾವೆಲ್’ ಪ್ರಶಸ್ತಿಯೂ ಅವರಿಗೆ ಸಂದಿದೆ.

ಮಾರಿಯಾ ಯಾರು?

1967 ಅಕ್ಟೋಬರ್ 7ರಂದು ವೆನೆಜುವೆಲಾದ ಕರಾಕಸ್‌ನಲ್ಲಿ ಜನಿಸಿದ ಮಾರಿಯಾ ಅವರು ರಾಜಕೀಯಕ್ಕೆ ಧುಮುಕುವ ಮೊದಲು ಕೈಗಾರಿಕಾ ಎಂಜಿನಿಯರ್ ಆಗಿದ್ದರು.

2023ರಲ್ಲಿ ಪಕ್ಷದ ಪದಾಧಿಕಾರಿಗಳ ಆಯ್ಕೆಗಾಗಿ ನಡೆದ ಪ್ರಾಥಮಿಕ ಚುನಾವಣೆಯಲ್ಲಿ ಗೆಲುವು ದಾಖಲಿಸಿದ್ದರು. ವೆನೆಜುವೆಲಾ ಅಧ್ಯಕ್ಷ ಸ್ಥಾನಕ್ಕೆ 2024ರಲ್ಲಿ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಲು ಮುಂದಾಗಿದ್ದರು. ಆದರೆ, ಕಾರಣಾಂತರಗಳಿಂದಾಗಿ ಅವರು ಕಣದಿಂದ ಹಿಂದೆ ಸರಿಯಬೇಕಾಯಿತು.

ಸರ್ವಾಧಿಕಾರಿ ಧೋರಣೆ ಮತ್ತು ಪ್ರಜಾಪ್ರಭುತ್ವ ವಿರೋಧಿ ನಡೆಗಳ ವಿರುದ್ಧ ನಿರಂತರವಾಗಿ ಹೋರಾಟ ನಡೆಸುತ್ತಿರುವ ಮಾರಿಯಾ ಅವರು ಹಲವು ಬಾರಿ ತಲೆಮರೆಸಿಕೊಳ್ಳಬೇಕಾದ ಪರಿಸ್ಥಿತಿಯು ನಿರ್ಮಾಣವಾಗಿತ್ತು.

ದೇಶದ ಹಾಲಿ ಅಧ್ಯಕ್ಷ ನಿಕೋಲಸ್ ಮಡುರೊ ವಿರುದ್ಧ ಪ್ರತಿಭಟನೆ ನಡೆಸಿದ ಕಾರಣಕ್ಕಾಗಿ ಕೆಲ ಕಾಲ ಅವರು ಸೆರೆವಾಸ ಅನುಭವಿಸಬೇಕಾಯಿತು.

ಜಗತ್ತಿಗೆ ಒಂದು ಶಕ್ತಿಯುತ ಸಂದೇಶ ರವಾನೆಯಾಗಿದೆ. ಸ್ವಾತಂತ್ರ್ಯದ ಕಿಚ್ಚನ್ನು ಬಂಧಿಸಲಾಗುವುದಿಲ್ಲ. ಪ್ರಜಾಪ್ರಭುತ್ವ ಪರವಾದ ಹೋರಾಟ ಯಾವಾಗಲೂ ಗೆಲ್ಲುತ್ತದೆ. ಮಾರಿಯಾ ಹೋರಾಟ ಮುಂದುವರಿಯಲಿ
ಉರ್ಸುಲಾ ವಾನ್ ಡರ್ ಲೆಯೆನ್, ಐರೋಪ್ಯ ಒಕ್ಕೂಟದ (ಇಯು) ಅಧ್ಯಕ್ಷೆ

ಪ್ರಜಾಪ್ರಭುತ್ವ ಮತ್ತು ಮಾನವಹಕ್ಕುಗಳ ಉಲ್ಲಂಘನೆ ವಿರುದ್ಧ ಧೈರ್ಯದ ಹೋರಾಟ ಮತ್ತು ದೀರ್ಘಕಾಲ ಬದ್ಧತೆಗೆ ಗೌರವ ದೊರೆತಿದೆ
ಜರ್ಮನಿ ಸರ್ಕಾರ

ಮಾರಿಯಾ ಅವರಿಗೆ ದೊರೆತ ಗೌರವವು, ಮುಕ್ತ ಹಾಗೂ ನ್ಯಾಯಯುತ ಚುನಾವಣೆ, ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಪರವಾದ ವೆನೆಜುವೆಲಾ ಜನರ ಆಕಾಂಕ್ಷೆಗಳ ಪ್ರತಿಫಲವಾಗಿದೆ
ವಿಶ್ವಸಂಸ್ಥೆ

ಟ್ರಂಪ್‌ಗೆ ನಿರಾಸೆ

ಒಂದನೇ ಪುಟದಿಂದ...



ಟ್ರಂಪ್ ಈಗ ಎರಡನೇ ಬಾರಿ ಅಧ್ಯಕ್ಷಗಾದಿ ಏರಿದ್ದಾರೆ. ಕಳೆದ ಬಾರಿಯಂತೆ ಈ ಸಲವೂ ಅವರು ನೊಬೆಲ್ ಶಾಂತಿ ಪ್ರಶಸ್ತಿಯನ್ನು ತಮಗೇ ನೀಡಬೇಕು ಎಂದು ಬಹಿರಂಗವಾಗಿಯೇ ಹೇಳಿಕೊಂಡಿದ್ದರು.

ನೊಬೆಲ್ ಸಮಿತಿಯು ತಮ್ಮನ್ನು ಪ್ರಶಸ್ತಿಗೆ ಆಯ್ಕೆ ಮಾಡುವ ಬಗ್ಗೆ ಟ್ರಂಪ್ ಸಂಶಯವನ್ನೂ ವ್ಯಕ್ತಪಡಿಸಿದ್ದರು. ‘ಅವರು ಏನು ಮಾಡಬೇಕೋ ಅದನ್ನೇ ಮಾಡಬೇಕಾಗುತ್ತದೆ. ಅವರು ಏನೇ ನಿರ್ಧಾರ ಕೈಗೊಂಡರೂ ಒಳ್ಳೆಯದು. ನೊಬೆಲ್ ಪ್ರಶಸ್ತಿಗಾಗಿಯೇ ನಾನು ಈ ಕಾರ್ಯ (ಅವರೇ ಹೇಳಿಕೊಂಡಂತೆ, ಹಲವು ದೇಶಗಳ ನಡುವಿನ ಯುದ್ಧ ನಿಲ್ಲಿಸಿದ್ದು) ಮಾಡಲಿಲ್ಲ. ಜನರ ಪ್ರಾಣ ಉಳಿಸುವುದಕ್ಕಾಗಿ ನಾನು ಯುದ್ಧಗಳನ್ನು ನಿಲ್ಲಿಸಿದೆ’ ಎಂದು ಗುರುವಾರವಷ್ಟೆ ಹೇಳಿದ್ದರು.

‘ನಾಯಕತ್ವ: ಚರ್ಚೆ ಅಪ್ರಸ್ತುತ’

ಪ್ರಜಾವಾಣಿ ವಾರ್ತೆ

ಸಂಪುಟ ವಿಸ್ತರಣೆ ಎಂಬುದು ಮುಖ್ಯಮಂತ್ರಿ ಪರಮಾಧಿಕಾರ. ಇದೇ 13ರಂದು ಸಿ.ಎಂ ಕರೆದಿರುವ ಔತಣ ಕೂಟಕ್ಕೆ ನಾವೆಲ್ಲರೂ ಭಾಗವಹಿಸಲಿದ್ದೇವೆ
ಈಶ್ವರ ಖಂಡ್ರೆ, ಅರಣ್ಯ ಸಚಿವ

ಮಂಗಳೂರು: ‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಲ್ಲಿ ಇರುವಾಗ ನಾಯಕತ್ವ ಬದಲಾವಣೆ ಅವಶ್ಯಕತೆ ಬರುವುದಿಲ್ಲ, ಆ ಚರ್ಚೆ ಅಪ್ರಸ್ತುತ’ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಶುಕ್ರವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರಿಸಿದ ಅವರು, ‘ಪಕ್ಷದ ಹೈಕಮಾಂಡ್ ಇದೆ. ಈ ಬಗ್ಗೆ ಹೈಕಮಾಂಡ್ ತೀರ್ಮಾನವೇ ಅಂತಿಮ’ ಎಂದರು.

‘ಸಚಿವರಾದ ಸತೀಶ ಜಾರಕಿಹೊಳಿ, ಜಿ. ಪರಮೇಶ್ವರ ಮತ್ತು ಎಚ್.ಸಿ. ಮಹದೇವಪ್ಪ ಅವರೆಲ್ಲ ಸ್ನೇಹಿತರು. ಅವರು ಆಗಾಗ ಭೇಟಿಯಾಗುತ್ತಿರುತ್ತಾರೆ. ಇದಕ್ಕೊಂದು ಕಥೆ ಕಟ್ಟುವ ಅಗತ್ಯವಿಲ್ಲ. ಸಚಿವ ಸಂಪುಟ ವಿಸ್ತರಣೆ ಬಗ್ಗೆ ನನಗೆ ಮಾಹಿತಿ ಇಲ್ಲ’ ಎಂದು ಅವರು ಹೇಳಿದರು.

‘ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಕೃತ್ಯಗಳ ಕುರಿತ ಎಸ್‌ಐಟಿ ತನಿಖೆ ಹಸ್ತಕ್ಷೇಪ ಇಲ್ಲದೆ ನಡೆದಿದೆ. ತಪ್ಪಿತಸ್ಥರ ಮೇಲೆ ಮುಲಾಜಿಲ್ಲದೆ ಕ್ರಮವಾಗುತ್ತದೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ’ ಎಂದರು.

ಸಚಿವನಾಗುವ ಆಸೆ: ಸಲೀಂ

ಕೊಪ್ಪಳ: ‘ನನಗೂ ಸಚಿವನಾಗುವ ಆಸೆಯಿದೆ. ಮೊದಲ ಅವಧಿಯಲ್ಲೇ ಮಂತ್ರಿ ಸ್ಥಾನ ಸಿಗಬೇಕಿತ್ತು’ ಎಂದು ಮೇಲ್ಮನೆಯ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದರು.

ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಹಿಂದೆ ಸಚಿವ ಸ್ಥಾನ ನೀಡದೇ ಏಕೆ ಕೈಬಿಟ್ಟರು ಎನ್ನುವುದು ಗೊತ್ತಿಲ್ಲ. ಈ ಬಾರಿ ಆಗುವ ಭರವಸೆಯಿದೆ’ ಎಂದರು.

ಹೆಣ್ಣು ಶಿಶು ಶವ ಪತ್ತೆ

ಔರಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ವಾಗನಗೇರಾ ಗ್ರಾಮದ ಖಾಸಗಿ ಶಾಲೆಯ ಆವರಣದಲ್ಲಿ ಕೊಳೆತ ಸ್ಥಿತಿಯಲ್ಲಿ ಹೆಣ್ಣು ಶಿಶುವಿನ ಶವ ಪತ್ತೆಯಾಗಿದೆ. ಹೊಕ್ರಾಣಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ರಾಜ್ಯ ಮಾಹಿತಿ ಆಯೋಗದಲ್ಲಿ 40,040 ಪ್ರಕರಣ ಬಾಕಿ’

ಪ್ರಜಾವಾಣಿ ವಾರ್ತೆ

ಯಾದಗಿರಿ: ‘ರಾಜ್ಯ ಮಾಹಿತಿ ಆಯೋಗದಲ್ಲಿ 40,040 ಪ್ರಕರಣಗಳು ಬಾಕಿ ಇದ್ದು, ಬೆಂಗಳೂರು ನಗರದಲ್ಲೇ 9,211 ಪ್ರಕರಣಗಳಿವೆ’ ಎಂದು ರಾಜ್ಯ ಮಾಹಿತಿ ಆಯೋಗದ ಆಯುಕ್ತ ಡಾ.ಹರೀಶ್ ಕುಮಾರ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಳಗಾವಿ ಜಿಲ್ಲೆಯಲ್ಲಿ 3,570, ರಾಯಚೂರಿನಲ್ಲಿ 2,220, ಬಾಗಲಕೋಟೆಯಲ್ಲಿ 2,151, ಕೋಲಾರದಲ್ಲಿ 2,103 ಪ್ರಕರಣಗಳು ಉಳಿದಿವೆ. ಕೊಡಗು ಜಿಲ್ಲೆಯಲ್ಲಿ ಅತಿ ಕಡಿಮೆ 45 ಪ್ರಕರಣಗಳು ವಿಚಾರಣೆಗಾಗಿ ಕಾದಿವೆ’ ಎಂದರು.

ಮತ್ತೊಬ್ಬ ಆಯುಕ್ತ ಬದ್ರುದ್ದೀನ್ ಕೆ. ಅವರು, ‘ಇಲಾಖೆವಾರು ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಆರ್‌ಟಿಐ ಅರ್ಜಿಗಳನ್ನು ಪರಿಶೀಲಿಸಿ ಇತ್ಯರ್ಥಪಡಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಆರ್‌ಟಿಐ ಅರ್ಜಿಗಳನ್ನು ಕೆಡಿಪಿ ಸಭೆ ವ್ಯಾಪ್ತಿಗೆ ತರಲು ಪತ್ರ ಬರೆಯಲಾಗಿದೆ’ ಎಂದು ಹೇಳಿದರು.

ನಿಷೇಧಿತ ಪಿಎಫ್‌ಐ ಪರ ಪೋಸ್ಟ್: ಬಂಧನ

ಮಂಗಳೂರು: ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆ ಪರ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ಆರೋಪದ ಮೇರೆಗೆ ಕಡಬ ತಾಲ್ಲೂಕು ರಾಮಕುಂಜ ಗ್ರಾಮದ ಬೀಜಾತಳಿ ಹೌಸ್ ನಿವಾಸಿ ಸೈಯ್ಯದ್ ಇಬ್ರಾಹಿಂ ತಂಜಳ್ (55) ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಸೈಯ್ಯದ್ ಇಬ್ರಾಹಿಂ

‘ಪಿಎಫ್‌ಐ ಅನ್ನು ಕಾನೂನುಬಾಹಿರ ಸಂಘಟನೆ ಎಂದು 2022ರಲ್ಲಿ ಸರ್ಕಾರ ನಿಷೇಧಿಸಿದೆ. ಆದರೂ, ಆ ಸಂಘಟನೆ ಪರ ಪ್ರಚಾರ ಮಾಡಿ, ಆತಂಕ ಉಂಟು ಮಾಡಿದ ಸಂಬಂಧ ಯುಎಪಿಎ ಅಡಿ ಮಂಗಳೂರು ಉತ್ತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

ಬಂಧಿತನಿಂದ ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ. ಈ ಹಿಂದೆ ಮಸೀದಿಯೊಂದರಲ್ಲಿ ಧರ್ಮಗುರುವಾಗಿ ಕಾರ್ಯ ನಿರ್ವಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಹಸಿರು ಪಟಾಕಿಗಷ್ಟೇ ಅವಕಾಶ

ಒಂದನೇ ಪುಟದಿಂದ...

ಸುಪ್ರೀಂ ಕೋರ್ಟ್ 2005ರಲ್ಲಿ ಪಟಾಕಿ ಬಳಕೆ ಕುರಿತಂತೆ ಸ್ಪಷ್ಟ ನಿರ್ದೇಶನಗಳನ್ನು ನೀಡಿದ್ದು, 2015, 2018 ರಲ್ಲಿ ಹಲವಾರು ನಿರ್ದೇಶನಗಳನ್ನೂ ನೀಡಿದೆ. ಅದರಂತೆ, ಬೆಳಿಗ್ಗೆ 8 ರಿಂದ ರಾತ್ರಿ 10ವರೆಗೆ ಮಾತ್ರ ಪಟಾಕಿ ಸಿಡಿಸಬಹುದು. ಉಳಿದ ಸಮಯದಲ್ಲಿ ಪಟಾಕಿ ಸಿಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಈ ನಿರ್ದೇಶನದ ಮೇರೆಗೆ ದೀಪಾವಳಿ ಹಬ್ಬವನ್ನು ‘ಪರಿಸರ ಸ್ನೇಹಿ ದೀಪಾವಳಿ– 2025’ಯಾಗಿ ಆಚರಿಸಲು ಅರಣ್ಯ–ಪರಿಸರ ಸಚಿವರು ಸೂಚಿಸಿದ್ದಾರೆ.

ಹೀಗಾಗಿ, ಹಸಿರು ಪಟಾಕಿಗಳನ್ನು ಮಾತ್ರ ಬಳಸಲು ಅವಕಾಶವಿದ್ದು, ಇತರೆ ಪಟಾಕಿಗಳನ್ನು ನಿಷೇಧಿಸಬೇಕು. ಇದಕ್ಕೆ ಸ್ಥಳೀಯ ಸಂಸ್ಥೆಗಳು, ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ನಿಷೇಧಿತ ಪಟಾಕಿಗಳ ಉತ್ಪಾದನೆ, ಸಂಗ್ರಹ, ಮಾರಾಟ, ಬಳಕೆಯನ್ನು ನಿಷೇಧಿಸಲಾಗಿದೆ. ಅಂತಹ ಪಟಾಕಿಗಳನ್ನು ಮುಟ್ಟುಗೋಲು ಹಾಕಿಕೊಂಡು, ಕಾನೂನು ಉಲ್ಲಂಘಿಸಿದವರ ವಿರುದ್ಧ ಕಾನೂನು ಪ್ರಕಾರ ತೀವ್ರವಾದ ಕ್ರಮ ಕೈಗೊಳ್ಳಬೇಕು. ಹಸಿರು ಪಟಾಕಿಯನ್ನಷ್ಟೇ ಬಳಸಿ, ದೀಪಾವಳಿಯನ್ನು ಬೆಳಕು– ಜ್ಞಾನದ ಹಬ್ಬವಾಗಿ ಆಚರಿಸಬೇಕು. ಈ ಬಗ್ಗೆ ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸಬೇಕು ಎಂದು ಸರ್ಕಾರದ ಎಲ್ಲ ಇಲಾಖೆ, ಸ್ಥಳೀಯ ಸಂಸ್ಥೆ ಹಾಗೂ ಪ್ರಾಧಿಕಾರಗಳ ಮುಖ್ಯಸ್ಥರಿಗೆ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಸುತ್ತೋಲೆ ಹೊರಡಿಸಿದ್ದಾರೆ.

‘ಆಯುಷ್ಮಾನ್’ಗೆ ಎಪಿಎಲ್ ಕುಟುಂಬ ನಿರಾಸಕ್ತಿ

ಒಂದನೇ ಪುಟದಿಂದ...

ಈವರೆಗೆ ಚಿಕಿತ್ಸೆ ಒದಗಿಸಲಾದ 1.30 ಕೋಟಿ ಪ್ರಕರಣಗಳಲ್ಲಿ 1.25 ಕೋಟಿ ಪ್ರಕರಣಗಳು ಬಿಪಿಎಲ್ ಕುಟುಂಬದ ಸದಸ್ಯರಾದರೆ, 4.94 ಲಕ್ಷ ಪ್ರಕರಣಗಳಲ್ಲಿ ಮಾತ್ರ ಚಿಕಿತ್ಸೆ ಪಡೆದವರು ಎಪಿಎಲ್ ಕುಟುಂಬದವರಾಗಿದ್ದಾರೆ.

‘ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ’ ಯೋಜನೆ 2018ರಲ್ಲಿ ಆರಂಭವಾಗಿದೆ. ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ರಾಜ್ಯದಲ್ಲಿ ಒಂದು ಕೋಟಿಗೂ ಅಧಿಕ ಕುಟುಂಬಗಳು ಬಿಪಿಎಲ್ ಕಾರ್ಡ್ ಹೊಂದಿದ್ದು, ಅವು ‘ಆಯುಷ್ಮಾನ್ ಭಾರತ್’ ಯೋಜನೆ ಅಡಿ ಬರಲಿವೆ. 20 ಲಕ್ಷಕ್ಕೂ ಅಧಿಕ ಎಪಿಎಲ್ ಕುಟುಂಬಗಳನ್ನು ‘ಆರೋಗ್ಯ ಕರ್ನಾಟಕ’ ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣವನ್ನು ಪಾವತಿಸಲಾಗುತ್ತದೆ.

ಶಿಫಾರಸು ಅಡ್ಡಿ: ಯೋಜನೆಯಡಿ 171 ತುರ್ತು ಚಿಕಿತ್ಸೆಗಳನ್ನು ಸೇರ್ಪಡೆ ಮಾಡಲಾಗಿದೆ. ರಸ್ತೆ ಅಪಘಾತ ಸೇರಿ ವಿವಿಧ ತುರ್ತು ಸಂದರ್ಭದಲ್ಲಿ ಮಾತ್ರ ನೋಂದಾಯಿತ ಖಾಸಗಿ ಆಸ್ಪತ್ರೆಗೂ ನೇರವಾಗಿ ದಾಖಲಾಗಬಹುದಾಗಿದೆ. ಉಳಿದ ಪ್ರಕರಣಗಳಲ್ಲಿ ಸರ್ಕಾರಿ ಆಸ್ಪತ್ರೆಗಳ ಶಿಫಾರಸು ಅಗತ್ಯ. ಅದೇ ಸಹಕಾರ ಇಲಾಖೆ ಅನುಷ್ಠಾನ ಮಾಡಿರುವ ಯಶಸ್ವಿನಿ ಯೋಜನೆಯಲ್ಲಿ ನೋಂದಾಯಿತ ಸದಸ್ಯರು ನೇರವಾಗಿ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ. ಈ ಕಾರಣದಿಂದ ಎಪಿಎಲ್ ಕುಟುಂಬದ ಸದಸ್ಯರು ‘ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ’ ಯೋಜನೆಯಡಿ ಚಿಕಿತ್ಸೆಗೆ ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ.

‘ಯೋಜನೆ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲಾಗುತ್ತಿದೆ. ಉಚಿತವಾಗಿ ನೀಡುವ ಕಾರ್ಡ್ ಹೊಂದಿರದಿದ್ದರೂ ಪಡಿತರ ಚೀಟಿ ಇದ್ದಲ್ಲಿ ಯೋಜನೆಯಡಿ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ರಾಜ್ಯದಲ್ಲಿ ಯೋಜನೆ ಅನುಷ್ಠಾನ ಮಾಡುತ್ತಿರುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಅಧಿಕಾರಿಯೊಬ್ಬರು ತಿಳಿಸಿದರು.

ಅಂಕಿ ಅಂಶಗಳು

2,965 ಯೋಜನೆಯಡಿ ನೋಂದಾಯಿತ ಸರ್ಕಾರಿ ಆಸ್ಪತ್ರೆಗಳು

588 ಯೋಜನೆಯಡಿ ನೋಂದಾಯಿತ ಖಾಸಗಿ ಆಸ್ಪತ್ರೆಗಳು



ಯೋಜನೆಯಡಿ ಶಿಫಾರಸಿನಂತಹ ಕೆಲ ಗೊಂದಲಗಳನ್ನು ನಿವಾರಿಸಲಾಗಿದೆ. ದುಬಾರಿ ವೆಚ್ಚದ ಚಿಕಿತ್ಸೆಗಳನ್ನೂ ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ
ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ



ಬಹುತೇಕ ದಂಪತಿಗಳು 'ಕುಟುಂಬ ಯೋಜನೆ'ಯ ವಿಷಯದಲ್ಲಿ ಎಡವುತ್ತಾರೆ. ಕೈಗೂಸಿರುವಾಗಲೇ ಮತ್ತೊಮ್ಮೆ ಗರ್ಭ ಧರಿಸುವುದು, ಶಿಶು ತಮಗೆ 'ದಕ್ಕಿತು' ಎನ್ನುವುದು ಖಾತರಿಯಾಗುವ ಮೊದಲೇ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ (ಟ್ಯೂಬೆಕ್ಟಮಿ) ಮುಂದಾಗಿ, ಬಳಿಕ ಪರಿತಪಿಸುವ ಸಂದರ್ಭ ಸಹ ಎದುರಾಗುತ್ತದೆ. ಸೂಕ್ತ ಅರಿವು ಹೊಂದುವುದೇ ಇದಕ್ಕೆಲ್ಲ ಪರಿಹಾರ ಎನ್ನುತ್ತಾರೆ ಸ್ತ್ರೀರೋಗತಜ್ಞೆ **ಡಾ. ವೀಣಾ ಎಸ್. ಭಟ್**

ಯೋಚಿಸಿ ಯೋಜಿಸಿ ಕುಟುಂಬ ಯೋಜನೆ

ಆಹಾರ, ನಿದ್ರೆ ಹಾಗೂ ಮೈಥುನವು ಪ್ರಾಣಿ ಮತ್ತು ಮನುಷ್ಯನಿಗೆ ಸಾಮಾನ್ಯವಾದ ಸಂಗತಿಗಳು. ಆದರೆ ಮಾನವ ತನ್ನ ಬುದ್ಧಿವಂತಿಕೆ ಹಾಗೂ ಸಂಯಮದಿಂದ ಸಂತಾನೋತ್ಪತ್ತಿ, ಲೈಂಗಿಕ ಕ್ರಿಯೆ ಎಲ್ಲದರ ಮೇಲೂ ನಿಯಂತ್ರಣ ಸಾಧಿಸಲು ಸಾಧ್ಯವಿರುವುದರಿಂದ, ಆತನಲ್ಲಿ ಸಂತಾನೋತ್ಪತ್ತಿಯು ಆಯ್ಕೆಯ ಪ್ರಕ್ರಿಯೆ ಆಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಎಡವಿದರೆ, ಬೇಡವಾದ ಸಂದರ್ಭದಲ್ಲಿ ಗರ್ಭ ಧರಿಸುವ ಅನಿವಾರ್ಯ ಸ್ಥಿತಿ ಎದುರಾಗುತ್ತದೆ.

ಆದರೆ, ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಸಹಜ ಸಂತಾನೋತ್ಪತ್ತಿ ಕ್ರಿಯೆ, ನಿಯಂತ್ರಣ ಕ್ರಮಗಳು ಮತ್ತು ಈ ದಿಸೆಯಲ್ಲಿ ದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ಸೂಕ್ತ ಮಾಹಿತಿ ಮತ್ತು ಅಗತ್ಯ ಅರಿವು ಹೆಚ್ಚಿನವರಿಗೆ ಇರುವುದಿಲ್ಲ. ಎಷ್ಟೋ ಮಹಿಳೆಯರು ಒಂದು ಮಗುವಿಗೆ ಜನ್ಮ ನೀಡಿದ ಬಳಿಕ, ತಮಗೆ ಇನ್ನೊಂದು ಮಗು ಸದ್ಯಕ್ಕೆ ಬೇಡ ಎಂದುಕೊಳ್ಳುತ್ತಿರುವಾಗಲೇ ಮತ್ತೊಮ್ಮೆ ಗರ್ಭ ಧರಿಸಿಬಿಟ್ಟಿರುತ್ತಾರೆ. ಆಗ 'ಅಯ್ಯೋ ನಮಗೆ ಬೇಡವಾಗಿತ್ತು, ನಾವು ಜಾಗರೂಕತೆಯಿಂದ ಇದ್ದರೂ ಹೇಗೋ ಗರ್ಭ ನಿಂತುಬಿಟ್ಟಿದೆ' ಎಂದು ಹಲುಬುತ್ತಾರೆ. ಇಂತಹ ಸಂದರ್ಭದಲ್ಲಿ, ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ ಎಡತಾಕಿ, ಗರ್ಭಪಾತ ಮಾಡಿಸುವಂತೆ ವೈದ್ಯರಿಗೆ ದುಂಬಾಲು ಬೀಳುವುದು ಸಾಮಾನ್ಯ ಸಂಗತಿಯೇ ಆಗಿದೆ.

ಈ ಆಧುನಿಕ ಯುಗದಲ್ಲಿ ಸಂತಾನಶಕ್ತಿ ನಿಯಂತ್ರಣಕ್ಕೆ ಸಂಬಂಧಿಸಿದ ಹಲವಾರು ವಿಧಾನಗಳ 'ಆಯ್ಕೆಯ ಬುಟ್ಟಿ'ಯೇ ಇಂದು ನಮ್ಮೆದುರಿಗಿದೆ. ಆದರೆ ಲಿಂಗಾಧಾರಿತ ಅಡೆತಡೆಗಳು, ಸೂಕ್ತ ವಿಧಾನದ ಆಯ್ಕೆಯಲ್ಲಿ ಹಿನ್ನಡೆ, ಸೇವೆಯ ಅಲಭ್ಯತೆ, ಅರಿವಿನ ಕೊರತೆಯಂತಹ ಕಾರಣಗಳಿಂದ ಇಂದು ವಿಶ್ವದಲ್ಲಿ 25 ಕೋಟಿಗೂ ಹೆಚ್ಚು ಮಹಿಳೆಯರು ತೊಂದರೆಗೆ ಒಳಗಾಗುತ್ತಿದ್ದಾರೆ. ಇದು ಮಾತೃಮರಣ ಹಾಗೂ ಶಿಶುಮರಣ ಪ್ರಮಾಣದ ಹೆಚ್ಚಳಕ್ಕೂ ಕಾರಣವಾಗುತ್ತಿದೆ.

ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಸ್ತ್ರೀ-ಪುರುಷ ಇಬ್ಬರ ಪಾತ್ರವೂ ಇರುತ್ತದಾದರೂ ಸಂತಾನಶಕ್ತಿ ನಿಯಂತ್ರಣ ಕ್ರಮಗಳನ್ನು ಅನುಸರಿಸುವಲ್ಲಿ ಮಾತ್ರ ಇಂತಹ ಭಾಗವಹಿಸುವಿಕೆ ನಿರೀಕ್ಷಿತ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಅರಿವಿನ ಕೊರತೆಯಿಂದಲೋ ಪುರುಷಪ್ರಧಾನ ವ್ಯವಸ್ಥೆಯ ಭಾಗವಾಗಿಯೋ ಮಹಿಳೆಯರೇ ಸಂತಾನಶಕ್ತಿ ನಿಯಂತ್ರಣ ಕ್ರಮಗಳನ್ನು ಅನುಸರಿಸಬೇಕಾದ ಅನಿವಾರ್ಯ ಸ್ಥಿತಿ ಎದುರಾಗುತ್ತದೆ. ಈ ಬಗ್ಗೆ ಅರಿವು ಮೂಡಿಸಲು 'ವಿಶ್ವ ಸಂತಾನಶಕ್ತಿ ನಿಯಂತ್ರಣ ಜಾಗೃತಿ ದಿನ'ವನ್ನು ವರ್ಷಂಪ್ರತಿ ಸೆಪ್ಟೆಂಬರ್ 26ರಂದು ಆಚರಿಸಲಾಗುತ್ತದೆ. ಆದರೂ ಸುರಕ್ಷಿತ ಗರ್ಭನಿರೋಧಕ ಕ್ರಮಗಳನ್ನು ಅನುಸರಿಸುವಲ್ಲಿ ಬಹುತೇಕರು ವಿಫಲರಾಗುತ್ತಿದ್ದಾರೆ. ಇದರಿಂದ ಗರ್ಭಪಾತ, ಎರಡು ಗರ್ಭಧಾರಣೆಗಳ ನಡುವೆ ಅಗತ್ಯ ಅಂತರ ಇಲ್ಲದಿರುವುದು ಕಂಡುಬರುತ್ತದೆ. ಇದರ ಫಲವಾಗಿ ತಾಯಿಯಲ್ಲಿ ರಕ್ತಹೀನತೆ, ಅಕಾಲಿಕ ಶಿಶುಜನನ, ಸ್ತನ್ಯಪಾನ ಮಾಡಿಸುವಲ್ಲಿ ವೈಫಲ್ಯದಂತಹವು ಸಾಮಾನ್ಯವಾಗಿ ಕಾಡುವ ಪಿಡುಗುಗಳಾಗಿಯೇ ಮುಂದುವರಿದಿವೆ.

ಸಿಸೇರಿಯನ್ ಹೆರಿಗೆಯು ಇತ್ತೀಚಿನ ದಿನಗಳಲ್ಲಿ ಸಹಜ ಮತ್ತು ಅನಿವಾರ್ಯ ಎಂಬಂತಾಗಿದೆ. ಇಂತಹ ಸ್ಥಿತಿಯಲ್ಲಿ, ಸಿಸೇರಿಯನ್ ಮೂಲಕ ಆಗುವ ಎರಡನೇ ಹೆರಿಗೆಯ ಜೊತೆಯಲ್ಲೇ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನೂ (ಟ್ಯೂಬೆಕ್ಟಮಿ) ಮಾಡಿಬಿಡುವಂತೆ ವೈದ್ಯರನ್ನು ಒತ್ತಾಯಿಸುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಇನ್ನು ಕೆಲವರು, ಮೊದಲನೆಯದು ನಾರ್ಮಲ್ ಹೆರಿಗೆ ಆಗಿದ್ದರೂ ಎರಡನೆಯ ಹೆರಿಗೆಗೆ 'ಸಿಸೇರಿಯನ್ ಮಾಡಿ, ಜೊತೆಗೆ ಮಕ್ಕಳಾಗದ ಹಾಗೆ ಆಪರೇಷನ್ ಅನ್ನೂ ತಕ್ಷಣವೇ ಮಾಡಿಬಿಡಿ. ಇಲ್ಲದಿದ್ದರೆ ಟ್ಯುಬೆಕ್ಟಮಿ ಮಾಡಿಸಿಕೊಂಡಾಗ ಮತ್ತೆ ವಿಶ್ರಾಂತಿ ಪಡೆಯಬೇಕಾಗುತ್ತದೆ. ಅದಕ್ಕೆಲ್ಲಾ ಸಮಯ ಇರುವುದಿಲ್ಲ. ಬಾಣಂತನದಲ್ಲಿಯೇ ಒಟ್ಟಿಗೆ ಎಲ್ಲಾ ಮುಗಿದುಹೋದರೆ ರೆಸ್ಟ್‌ನಲ್ಲಿ ರೆಸ್ಟ್ ಆಗಿಹೋಗುತ್ತದೆ' ಎಂದು ಕೇಳಿಕೊಳ್ಳುತ್ತಾರೆ.

ಕೆಲವು ಹೆಣ್ಣುಮಕ್ಕಳಿಗಂತೂ ಮೊದಲನೇ ಮಗು ಒಂದೆರಡು ವರ್ಷದ ಒಳಗಿದ್ದಾಗಲೇ ಇನ್ನೊಂದು ಮಗು ಆಗಿರುತ್ತದೆ. ಒಂದುವೇಳೆ ಎರಡನೇ ಮಗುವಿಗೆ ಹೃದ್ರೋಗದಂಥ ಜನ್ಮಜಾತ ಕಾಯಿಲೆ ಇದ್ದರೆ ಅಥವಾ ಚಯಾಪಚಯಕ್ಕೆ ಸಂಬಂಧಿಸಿದ ಸಮಸ್ಯೆಯೇನಾದರೂ ಇದ್ದರೆ, ಹೆರಿಗೆಯಾದ ಆರಂಭದ ದಿನಗಳಲ್ಲೇ ಅದನ್ನು ಪತ್ತೆಹಚ್ಚುವುದು ಅಸಾಧ್ಯ. ತಾಯಿಗೆ ಟ್ಯೂಬೆಕ್ಟಮಿ ಆದ ನಂತರ ಶ್ವಾಸಕೋಶದ ಸೋಂಕು, ಕರುಳಿನ ಸೋಂಕಿನಂತಹ ಕಾರಣಗಳಿಂದ ಮಗು ತೀರಿಹೋದ ಎಷ್ಟೋ ಪ್ರಕರಣಗಳಿವೆ. ಆಗ ಮತ್ತೆ ಮಗು ಹೊಂದಲು ಸಾಧ್ಯವಾಗುವಂತೆ ಗರ್ಭನಾಳ ಮರುಜೋಡಣೆಯ ಶಸ್ತ್ರಚಿಕಿತ್ಸೆ ಮಾಡುವಂತೆ ಕೇಳಿಕೊಳ್ಳುವವರೂ ಇದ್ದಾರೆ.

ಕೆಲವೊಮ್ಮೆ ಹೆರಿಗೆಯಾದ ತಕ್ಷಣ ಮಗು ಚೆನ್ನಾಗಿ ಅಳದೇ ಇದ್ದಾಗ ಅಥವಾ ಗರ್ಭದೊಳಗೆ ಮಲವನ್ನು ತಿಂದಿದ್ದಾಗ ಮುಂದೆ ಮಗುವಿಗೆ ಆಗಬಹುದಾದ ತೊಂದರೆಗಳ ಬಗ್ಗೆ ತಕ್ಷಣವೇ ಹೇಳುವುದು ವೈದ್ಯರಿಗೂ ಕಷ್ಟದ ಸಂಗತಿಯೇ ಆಗಿರುತ್ತದೆ. ಹೀಗಾಗಿ, ಸಿಸೇರಿಯನ್ ಹೆರಿಗೆಯೊಟ್ಟಿಗೆ ಟ್ಯುಬೆಕ್ಟಮಿಯನ್ನೂ ಮಾಡಿಬಿಡುವಂತೆ ವೈದ್ಯರನ್ನು ಒತ್ತಾಯಿಸುವುದು, ವೈದ್ಯರು ಕೂಡ ಒತ್ತಾಯಕ್ಕೆ ಮಣಿದು ತತ್‌ಕ್ಷಣವೇ ಎರಡೂ ಶಸ್ತ್ರಚಿಕಿತ್ಸೆಗಳನ್ನು ಒಟ್ಟಿಗೇ ಮಾಡಿ ಆಮೇಲೆ ಪಶ್ಚಾತ್ತಾಪ ಪಡುವುದೂ ಇದೆ.

ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ತಂದುಕೊಳ್ಳುವ ಬದಲು, ತಾತ್ಕಾಲಿಕವಾಗಿ ಸೂಕ್ತ ಸಂತಾನ ನಿಯಂತ್ರಣ ಕ್ರಮಗಳನ್ನು ಅನುಸರಿಸುವುದು ಒಳ್ಳೆಯದು. ನಂತರ ನಿಧಾನವಾಗಿ, ಅಂದರೆ ಮಗುವಿಗೆ ಒಂದೆರಡು ವರ್ಷಗಳಾದ ಬಳಿಕ, ಶಾಶ್ವತ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದು ಒಳ್ಳೆಯದು. ಇಲ್ಲವೇ ಪುರುಷರಲ್ಲಿ ಕಾಂಡೋಮ್ ಬಳಕೆ ಅಥವಾ ಶಾಶ್ವತ ಸಂತಾನಶಕ್ತಿ ನಿಯಂತ್ರಣ ಕ್ರಮವಾದ ವ್ಯಾಸೆಕ್ಟಮಿ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಉತ್ತೇಜಿಸುವಂತಹ ಕಾರ್ಯಗಳು ಆಗಬೇಕು.

ಹೀಗೆ ಮಾಡುವ ಬದಲು 'ಗುಂಪಿನಲ್ಲಿ ಗೋವಿಂದ' ಎನ್ನುವಂತೆ, ಬಾಣಂತನದ ವಿಶ್ರಾಂತಿಯಲ್ಲಿಯೇ ಟ್ಯುಬೆಕ್ಟಮಿಯ ವಿಶ್ರಾಂತಿಯೂ ಸೇರಿಹೋಗಲಿ ಎಂದುಕೊಂಡು ವೈದ್ಯರ ಮೇಲೆ ಒತ್ತಡ ಹೇರುವುದು, ತಾವೂ ಒತ್ತಡಕ್ಕೆ ಒಳಗಾಗುವುದು ಸರಿಯಲ್ಲ. ಸೂಕ್ತ ಸಂತಾನಶಕ್ತಿ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಂಡಾಗ ಮಾತೃಮರಣ, ಶಿಶುಮರಣ ಪ್ರಮಾಣ ಎರಡೂ ಕಡಿಮೆಯಾಗಿ ಕುಟುಂಬ, ಸಮಾಜ ಹಾಗೂ ರಾಷ್ಟ್ರದ ಅಭಿವೃದ್ಧಿ ಸಾಧ್ಯವಾಗುತ್ತದೆ.

ಪ್ರತಿ ವ್ಯಕ್ತಿಯೂ ತನ್ನ ಸಂತಾನೋತ್ಪತ್ತಿ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ತನ್ನ ಕುಟುಂಬ ನಿಯಂತ್ರಣ ವ್ಯವಸ್ಥೆಯನ್ನು ಯೋಜಿಸಲು ಸ್ವಾತಂತ್ರ್ಯ ಹೊಂದಿರಬೇಕು. ಆರೋಗ್ಯಕರ ಕುಟುಂಬವು ಆಯ್ಕೆಯಿಂದಾಗಿಯೇ ವಿನಾ ಆಕಸ್ಮಿಕವಾಗಿ ಅಲ್ಲ ಎಂಬುದನ್ನು ಅರಿಯಬೇಕು. ❖

ವ್ಯಾಸೆಕ್ಟಮಿ ತಪ್ಪುಕಲ್ಪನೆ ಬೇಡ

ಪುರುಷರಲ್ಲಿ ವ್ಯಾಸೆಕ್ಟಮಿ ಶಸ್ತ್ರಚಿಕಿತ್ಸೆಯು ಅತ್ಯಂತ ಸರಳ, ಸುರಕ್ಷಿತ ಹಾಗೂ ಹೊರರೋಗಿಯಾಗಿಯೇ ಮಾಡಿಸಿಕೊಳ್ಳಬಹುದಾದ ಸಂತಾನಶಕ್ತಿ ನಿಯಂತ್ರಣ ವಿಧಾನ. ಆದರೂ ಶೇ 2ಕ್ಕಿಂತ ಕಡಿಮೆ ಪ್ರಮಾಣದ ಪುರುಷರು ಈ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಾರೆ. ಏಕೆಂದರೆ, ಇದರಿಂದ ಪುರುಷತ್ವವೇ ಕಡಿಮೆಯಾಗುತ್ತದೆ ಎಂಬ ತಪ್ಪುಕಲ್ಪನೆ ಹಲವರಲ್ಲಿ ಇದೆ ಮತ್ತು ಮಹಿಳೆಯರಲ್ಲಿ ಇಂತಹ ಭಾವನೆ ಇನ್ನೂ ಹೆಚ್ಚಾಗಿಯೇ ಬೇರೂರಿದೆ. ಈ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಬೇಕಾಗಿದೆ.

> **ಮಹಿಳೆಯರೇ ಸಂತಾನಶಕ್ತಿ ನಿಯಂತ್ರಣ ಕ್ರಮಕ್ಕೆ ಒಳಗಾಗುವ ಬದಲು, ಪುರುಷರು ಸಾಧ್ಯವಾದಷ್ಟೂ ಕಾಂಡೋಮ್ ಬಳಕೆ ಅಥವಾ ವ್ಯಾಸೆಕ್ಟಮಿ ಮಾಡಿಸಿಕೊಳ್ಳಲು ಮುಂದಾಗಬೇಕು**

ತಾತ್ಕಾಲಿಕ ಸಂತಾನಶಕ್ತಿ ನಿಯಂತ್ರಣ ಹೀಗೆಲ್ಲಾ ಸಾಧ್ಯ

ತಾತ್ಕಾಲಿಕ ಸಂತಾನನಿಯಂತ್ರಣ ಕ್ರಮವಾಗಿ ಬಳಸಬಹುದಾದ ಅತ್ಯುತ್ತಮ ಸಾಧನ ಕಾಪರ್–ಟಿ. ಇದನ್ನು ಗರ್ಭಕೋಶದ ಒಳಗೆ ಅಳವಡಿಸುತ್ತಾರೆ. ಹೆರಿಗೆಯಾದ ತಕ್ಷಣ ಅಥವಾ ನಾಲ್ಕಾರು ವಾರಗಳ ನಂತರ ಅಳವಡಿಸಬಹುದು. ಇದು ಅತ್ಯಂತ ಸುರಕ್ಷಿತ ವಿಧಾನವಾದರೂ ಕಾಪರ್–ಟಿ ಎದೆಗೇರುತ್ತದೆ, ಹೊಟ್ಟೆಯೊಳಗೆ ಹೋಗಿಬಿಡುತ್ತದೆ ಎಂಬಂತಹ ತಪ್ಪುಕಲ್ಪನೆ ಹಲವರಲ್ಲಿ ಇದೆ.

ಮೂರು ತಿಂಗಳಿಗೊಮ್ಮೆ ಹಾಕಬಹುದಾದ, ಸರ್ಕಾರದಿಂದ ಉಚಿತವಾಗಿ ಕೊಡಲಾಗುವ ಪ್ರೊಜೆಸ್ಟಿರಾನ್ ಡಿಪೋಟ್ ಇಂಜೆಕ್ಷನ್ ಇಲ್ಲವೇ ಅತ್ಯಾಧುನಿಕ ವಿಧಾನವಾದ, ಚರ್ಮದ ಕೆಳಗೆ ಅಳವಡಿಸುವ 'ಹಾರ್ಮೋನ್ ಪ್ಯಾಚ್'ನಂತಹ ವಿಧಾನಗಳು ಗರ್ಭಧಾರಣೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯುವ ಸೂಕ್ತ ವಿಧಾನಗಳಾಗಿವೆ. ಸಂತಾನ ನಿಯಂತ್ರಣ ಗುಳಿಗೆಗಳೂ ಸರ್ಕಾರದಿಂದ ಉಚಿತವಾಗಿ ಸಿಗುತ್ತವೆ. ವೈದ್ಯರ ಸಲಹೆಯ ಮೇರೆಗೆ ಇವುಗಳನ್ನು ಬಳಸಬಹುದು.



ನಿಮ್ಮ ಬಣ್ಣ ಅರಿಯಿರಿ ಬಟ್ಟೆ ಕೊಳ್ಳಿರಿ!

ಫ್ಯಾಷನ್

• ವಿದ್ಯಾ ಹಂಚಿನಮನಿ

'ಈ ಡ್ರೆಸ್ ತುಂಬಾ ಚೆನ್ನಾಗಿದೆ. ಒಳ್ಳೆ ಡಿಸೈನ್. ಆದರೆ ಇದರಲ್ಲಿ ಎಷ್ಟೊಂದು ಬಣ್ಣಗಳಿವೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಲಿ? ನನಗೆ ಯಾವ ಬಣ್ಣ ಸೂಟ್ ಆಗುತ್ತದೆ?'

ಶಾಪಿಂಗ್ ಮಾಡುವಾಗ ಸಾಮಾನ್ಯವಾಗಿ ನಾವೆಲ್ಲ ಹೇಳಿಕೊಳ್ಳುವ ಮಾತಿದು. ಬಟ್ಟೆಯ ಬಣ್ಣದ ಆಯ್ಕೆಯ ಗೊಂದಲ ಹಲವರನ್ನು, ಅದರಲ್ಲೂ ಹದಿಹರೆಯದ ಹೆಣ್ಣುಮಕ್ಕಳನ್ನು ಸದಾ ಕಾಡುತ್ತದೆ. ಏಕೆಂದರೆ, ಎಷ್ಟೋ ಜನರಿಗೆ ಅವರು ಇಷ್ಟಪಡುವ ಬಣ್ಣಗಳು ಹಾಗೂ ಅವರಿಗೆ ಒಪ್ಪುವ ಬಣ್ಣಗಳು ಒಂದೇ ಆಗಿರುವುದಿಲ್ಲ.

ಯಾರಿಗೆ ಯಾವ ಬಣ್ಣದ ಬಟ್ಟೆ ಸರಿಯಾಗಿ ಹೊಂದುತ್ತದೆ ಎಂಬುದಕ್ಕೆ ಜಗತ್ತಿನಲ್ಲಿ ಹಲವು ಥಿಯರಿಗಳಿವೆ. ಚರ್ಮದ ಬಣ್ಣದ ಆಧಾರದ ಮೇಲೆ ಬಟ್ಟೆಯ ಬಣ್ಣವನ್ನು ಆಯ್ಕೆ ಮಾಡಿಕೊಳ್ಳುವ 'ಸ್ಕಿನ್‌ಟೋನ್' ವಿಧಾನ ಸಾಮಾನ್ಯವಾಗಿ ನಮಗೆಲ್ಲರಿಗೂ ತಿಳಿದಿದೆ ಮತ್ತು ಅನೇಕರು ಅದನ್ನು ಪಾಲಿಸುತ್ತಾರೆ. ಆದರೆ ನಿಮಗೆ ಗೊತ್ತೇ? 'ಅಂಡರ್‌ಟೋನ್' ಅಥವಾ ಚರ್ಮದ ಒಳಪದರದ ಆಧಾರದ ಮೇಲೆಯೂ ನಮಗೆ ಒಪ್ಪುವಂತಹ ಬಣ್ಣದ ಬಟ್ಟೆಯನ್ನು ಆಯ್ಕೆ ಮಾಡಿಕೊಳ್ಳುವ ಹೊಸ ವಿಧಾನ ಇತ್ತೀಚೆಗೆ ಮುನ್ನೆಲೆಗೆ ಬಂದಿದೆ. ಅದರ ಪ್ರಕಾರ, ನಮ್ಮ ಚರ್ಮದ ಒಳಪದರವನ್ನು ವಾರ್ಮ್, ಕೂಲ್ ಮತ್ತು ನ್ಯೂಟ್ರಲ್ ಎಂದು ಮೂರು ವಿಧಗಳನ್ನಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ನೀವು ಯಾವ ವಿಧಕ್ಕೆ ಸೇರುತ್ತೀರಿ ಎಂಬುದನ್ನು ತಿಳಿದುಕೊಳ್ಳುವುದು ಸುಲಭ. ಅದಕ್ಕಾಗಿ ಸಣ್ಣ ಪರೀಕ್ಷೆಗಳು ಇಲ್ಲಿವೆ:

1. ಮಣಿಕಟ್ಟಿನ ಮೇಲೆ ಕಾಣುವ ರಕ್ತನಾಳಗಳ ಬಣ್ಣದಿಂದ ನಿಮ್ಮ ಚರ್ಮದ ಒಳಪದರದ ವಿಧವನ್ನು ತಿಳಿದುಕೊಳ್ಳಬಹುದು. ರಕ್ತನಾಳಗಳು ಹಸಿರು ಬಣ್ಣದಲ್ಲಿದ್ದರೆ 'ವಾರ್ಮ್', ನೀಲಿಯಾಗಿದ್ದರೆ 'ಕೂಲ್', ಹಸಿರು ಮತ್ತು ನೇರಳೆ ಬಣ್ಣದಲ್ಲಿದ್ದರೆ 'ನ್ಯೂಟ್ರಲ್' ಟೋನ್.

2. ಬಿಸಿಲಿನಲ್ಲಿ ಕನಿಷ್ಠ 15 ನಿಮಿಷ ಇದ್ದಾಗ ನಿಮ್ಮ ಚರ್ಮದ ಬಣ್ಣವು ಗುಲಾಬಿ ಬಣ್ಣಕ್ಕೆ ತಿರುಗಿದರೆ ಕೂಲ್, ಕಂದು ಬಣ್ಣಕ್ಕೆ ತಿರುಗಿದರೆ ವಾರ್ಮ್ ಹಾಗೂ ಎರಡೂ ರೀತಿಯಾಗಿ ಕಂಡುಬಂದರೆ ನ್ಯೂಟ್ರಲ್ ಟೋನ್ ಎಂಬುದು ಗೊತ್ತಾಗುತ್ತದೆ.

ಯಾವ ಟೋನ್‌ಗೆ ಯಾವ ಬಣ್ಣ?

ಕೂಲ್: ತಿಳಿ ಗುಲಾಬಿ, ಗುಲಾಬಿ, ನೀಲಿ, ತಿಳಿ ಹಸಿರು, ಕೆಂಪು, ಕ್ರೀಮ್ ಅಥವಾ ಆಫ್ ವೈಟ್, ಕಪ್ಪು, ನೇರಳೆ, ಲ್ಯಾವೆಂಡರ್ ಸೇರಿದಂತೆ ಹಲವು ಬಣ್ಣಗಳು ಕೂಲ್ ಸ್ಕಿನ್‌ಟೋನ್‌ಗೆ ಹೊಂದುತ್ತವೆ.

ಇದು ಬೇಡ– ಗಾಢ ಹಳದಿ, ಕಿತ್ತಳೆ, ಬ್ರೌನ್ ಹಾಗೂ ಚಿನ್ನದ ಬಣ್ಣದ ಬಟ್ಟೆ.

ವಾರ್ಮ್: ಗಾಢ ನೀಲಿ, ಹಳದಿ, ಕೆಂಪು, ಕಿತ್ತಳೆ ಹಾಗೂ ಗಾಢ ನೇರಳೆ ವಾರ್ಮ್ ಸ್ಕಿನ್‌ಟೋನ್‌ಗೆ ಒಪ್ಪುತ್ತವೆ.

ಇದು ಬೇಡ– ತಿಳಿ ನೀಲಿ, ತಿಳಿ ಹಸಿರು, ಗಾಢ ಬಿಳಿ ಹಾಗೂ ತಿಳಿ ಬೂದು.

ನ್ಯೂಟ್ರಲ್: ಕಪ್ಪು, ಬಿಳಿ, ಬೂದು, ಕಡು ನೀಲಿ, ಕಂದು, ಆಲಿವ್ ಗ್ರೀನ್ ಹಾಗೂ ಕ್ರೀಮ್ ಬಣ್ಣಗಳ ಎಲ್ಲ ಶೇಡ್‌ಗಳು ಈ ಸ್ಕಿನ್‌ಟೋನ್‌ನವರಿಗೆ ಒಪ್ಪುತ್ತವೆ.

ಇದು ಬೇಡ– ಗಾಢ ಹಳದಿ, ಕೆಂಪು, ನೀಲಿ ಹಾಗೂ ಇತರ ಯಾವುದೇ ಅತಿಯಾದ ಗಾಢ ಬಣ್ಣಗಳು.

ಕಣ್ಣು ಮತ್ತು ಕೂದಲಿನ ಬಣ್ಣದ ಆಧಾರದ ಮೇಲೆಯೂ ಬಟ್ಟೆಯ ಬಣ್ಣವನ್ನು ಆಯ್ಕೆ ಮಾಡಿಕೊಳ್ಳುವ ವಿಧಾನವಿದೆ. ಅಷ್ಟೇ ಏಕೆ ಹುಟ್ಟಿದ ದಿನಾಂಕ, ವಾರ, ನಕ್ಷತ್ರ ಸೇರಿದಂತೆ ಜಾತಕದ ಆಧಾರದ ಮೇಲೆ ಸಹ ಕೆಲವರು ಅದೃಷ್ಟದ ಬಣ್ಣದ ಬಟ್ಟೆ ಧರಿಸುವುದು ರೂಢಿಯಲ್ಲಿದೆ.

ಆದರೆ ಅಂತಿಮವಾಗಿ, ಇವೆಲ್ಲವೂ ತರ್ಕಗಳಷ್ಟೆ. ಇವನ್ನು ಅನುಸರಿಸುವುದು ಅಥವಾ ಬಿಡುವುದು ನಿಮ್ಮ ವೈಯಕ್ತಿಕ ಆಯ್ಕೆ. ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ಸುಂದರ. ಎಲ್ಲರ ಬಣ್ಣವೂ ಚೆಂದವೆ. ಎಲ್ಲರಿಗೂ ತಮಗೆ ಬೇಕಾದ ಬಟ್ಟೆಗಳನ್ನು ಧರಿಸುವ ಸ್ವಾತಂತ್ರ್ಯ ಮತ್ತು ಹಕ್ಕಿದೆ. ಇದರ ಜೊತೆಗೆ, ಆಂತರಿಕ ಸೌಂದರ್ಯವೇ ಎಲ್ಲಕ್ಕಿಂತ ಮುಖ್ಯ ಎಂಬುದನ್ನು ನಾವು ಮರೆಯಬಾರದು.

ರಸಾಸ್ವಾದ

ಕೆಂಪುಹರಿವೆ ಕಲಸನ್ನ

ಕಣ್ಣಿಗೆ ಕೆಂಪು ದೇಹಕ್ಕೆ ತಂಪು

• ಪದ್ಮಿನಿ ವಿಶ್ವನಾಥ್



ಮನೆಯ ಸದಸ್ಯರ ಹಿತಕ್ಕಾಗಿ ಆರೋಗ್ಯಕರ ಆಹಾರವನ್ನು ತಯಾರಿಸುವ ಜವಾಬ್ದಾರಿ ಹೆಣ್ಣುಮಕ್ಕಳಿಗೆ ಸವಾಲಿನ ಕೆಲಸವೇ ಸರಿ. ಅದರಲ್ಲೂ ಹಿರಿಯರು, ಮಕ್ಕಳು ಎಲ್ಲರಿಗೂ ಇಷ್ಟವಾಗುವ ಸತ್ವಭರಿತ ಅಡುಗೆಯನ್ನು ನಿತ್ಯವೂ ಮಾಡುವುದು ಅನಿವಾರ್ಯ. ಆದರೆ, ವಿಧವಿಧವಾದ ಅಡುಗೆ ಮಾಡಲು ಹೆಚ್ಚು ಸಮಯ ಬೇಕು. ಪೋಷಕಾಂಶಭರಿತವಾದ ಕೆಲವು ಸೊಪ್ಪು, ತರಕಾರಿಗಳನ್ನು ಬಳಸಿ ಅತಿ ಸುಲಭವಾಗಿ ರುಚಿರುಚಿಯಾದ ಅಡುಗೆ ಮಾಡಿ ಬಡಿಸುವುದು ತಿಳಿದಿದ್ದಲ್ಲಿ ನಾವು ಗೆದ್ದಂತೆಯೇ ಅಲ್ಲವೇ?

ಅಂತಹ ಸುಲಭ ವಿಧಾನದಲ್ಲಿ ರುಚಿಕಟ್ಟಾಗಿ ತಯಾರಿಸಬಹುದಾದ ಅಡುಗೆ ಪದಾರ್ಥಗಳಲ್ಲಿ ಒಂದು, ಕೆಂಪುಹರಿವೆ ಕಲಸನ್ನ. ಸೊಪ್ಪುಗಳು ಮನುಷ್ಯನ ಆರೋಗ್ಯಕ್ಕೆ ಹೆಚ್ಚು ಪ್ರಯೋಜನಕಾರಿ. ಅದರಲ್ಲೂ ಕೆಂಪುಹರಿವೆ ಸೊಪ್ಪು ಹದವಾದ ಕಂಪು ಮತ್ತು ಕೆಂಪು ಬಣ್ಣದಿಂದ ಕೂಡಿದ ಆರೋಗ್ಯಕಾರಿ ಸೊಪ್ಪು. ಬಹೂಪಯೋಗಿಯಾದ ಕೆಂಪುಹರಿವೆಯಲ್ಲಿ ಸಾಂಬಾರ್, ಪಲ್ಯ, ಪಕೋಡದಂತಹ ಖಾದ್ಯಗಳನ್ನು ತಯಾರಿಸಬಹುದು. ಆದರೆ, ಈ ಸೊಪ್ಪಿನಲ್ಲಿ ರುಚಿಕರವಾದ ಕಲಸನ್ನ ಮಾಡಿ ತಿನ್ನುತ್ತಿದ್ದರೆ, ಅದರ ಸ್ವಾದ ಬಲ್ಲವರಿಗಷ್ಟೇ ಗೊತ್ತು!

ಅದನ್ನು ಮಾಡುವುದು ಹೇಗೆಂದು ನೋಡಿ

ಬೇಕಾಗುವ ಸಾಮಗ್ರಿ: ಚೆನ್ನಾಗಿ ತೊಳೆದು ಸಣ್ಣಗೆ ಹೆಚ್ಚಿಟ್ಟುಕೊಂಡ ಎರಡು ಕಟ್ಟು ತಾಜಾ ಕೆಂಪುಹರಿವೆ ಸೊಪ್ಪು, ಹುಡಿಹುಡಿಯಾಗಿ ಮಾಡಿದ ಒಂದು ಬಟ್ಟಲು ಅನ್ನ, ಎರಡು ಹಸಿಮೆಣಸಿನಕಾಯಿ, ಎರಡು ಒಣಮೆಣಸಿನಕಾಯಿ, 4 ದೊಡ್ಡ ಚಮಚ ಎಣ್ಣೆ, ಒಗ್ಗರಣೆಗೆ ಸಾಸಿವೆ, ಜೀರಿಗೆ, ಇಂಗು, ಕಡಲೆಬೇಳೆ, ಉದ್ದಿನಬೇಳೆ, ಒಂದು ಬಟ್ಟಲು ತೆಂಗಿನತುರಿ, ವಾಂಗಿಬಾತ್ ಪುಡಿ, ಕೊತ್ತಂಬರಿ ಸೊಪ್ಪು, ಸ್ವಲ್ಪ ತುಪ್ಪ, ಒಂದು ಚಮಚ ನಿಂಬೆರಸ.

ಮಾಡುವ ವಿಧಾನ: ಬಾಣಲೆಗೆ ಎಣ್ಣೆ ಹಾಕಿ ಕಾದ ನಂತರ ಸಾಸಿವೆ, ಜೀರಿಗೆ, ಕಡಲೆಬೇಳೆ, ಉದ್ದಿನಬೇಳೆ, ಚಿಟಿಕೆ ಇಂಗು ಹಾಕಿ, ಬೇಳೆಗಳು ಹದವಾದ ಕೆಂಬಣ್ಣಕ್ಕೆ ಬಂದಾಗ, ಹೆಚ್ಚಿದ ಹಸಿಮೆಣಸಿನಕಾಯಿ ಹಾಗೂ ಮುರಿದ ಒಣಮೆಣಸಿನಕಾಯಿಯನ್ನು ಒಗ್ಗರಣೆಗೆ ಹಾಕಿ. ನಂತರ ಸಣ್ಣದಾಗಿ ಹೆಚ್ಚಿಟ್ಟುಕೊಂಡ ಕೆಂಪುಹರಿವೆ ಸೊಪ್ಪನ್ನು ಹಾಕಿ ಸ್ವಲ್ಪ ಕೈಯಾಡಿಸಿ ಮುಚ್ಚಿಡಿ. ಎರಡು ನಿಮಿಷ ಬಿಟ್ಟು ಅದಕ್ಕೆ ಸ್ವಲ್ಪ ಉಪ್ಪು, ಚಿಟಿಕೆ ಅರಿಶಿನ, ಅರ್ಧ ಚಮಚ ಸಕ್ಕರೆ, 3 ದೊಡ್ಡ ಚಮಚ ವಾಂಗಿಬಾತ್ ಪುಡಿ ಸೇರಿಸಿ ಮತ್ತೆ 5 ನಿಮಿಷ ಬೇಯಲು ಬಿಡಿ. ಇದಕ್ಕೆ ನೀರು ಹಾಕುವ ಅವಶ್ಯಕತೆ ಇಲ್ಲ. ಒಗ್ಗರಣೆಗೆ ಹಾಕಿದ ನಂತರ ಸೊಪ್ಪಿನಲ್ಲಿರುವ ನೀರಿನಂಶವೇ ಸಾಕು ಬೇಯಲು. ಪೂರ್ಣ ಬೆಂದ ನಂತರ ತೆಂಗಿನತುರಿ ಹಾಕಿ ಮತ್ತೆ ಕೈಯಾಡಿಸಿ. ಬಳಿಕ ಗ್ಯಾಸ್ ಆರಿಸಿ ಸ್ವಲ್ಪ ನಿಂಬೆರಸ ಹಾಕಿ ಮುಚ್ಚಿಡಿ.



ಹೀಗೆ ತಯಾರಿಸಿದ ಈ ಮಿಶ್ರಣಕ್ಕೆ ಅನ್ನ ಹಾಕಿ, ರುಚಿಗೆ ತಕ್ಕಷ್ಟು ಉಪ್ಪು, ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು, ಒಂದು ಚಮಚ ತುಪ್ಪ ಹಾಕಿ ಚೆನ್ನಾಗಿ ಕಲಸಿದರೆ ರುಚಿರುಚಿಯಾದ ಕೆಂಪುಹರಿವೆ ಕಲಸನ್ನ ರೆಡಿ.

ಬೆಳಗಿನ ತಿಂಡಿ, ಮಧ್ಯಾಹ್ನದ ಊಟ ಅಥವಾ ರಾತ್ರಿ ಊಟಕ್ಕೂ ಚೆನ್ನಾಗಿರುತ್ತದೆ. ಮಕ್ಕಳಿಗೆ ಲಂಚ್ ಬಾಕ್ಸ್‌ಗೂ ಕೊಡಬಹುದು. ಕೆಂಪುಹರಿವೆಯ ಘಮ ಬಲು ಚೆನ್ನ. ಇದರೊಟ್ಟಿಗೆ ದೊಡ್ಡಪತ್ರೆ ಸೊಪ್ಪಿನ ತಂಬುಳಿ ಇದ್ದರೆ ರುಚಿ ಇನ್ನೂ ಹೆಚ್ಚು. ಇಲ್ಲದಿದ್ದಲ್ಲಿ ಕಾಯಿಚಟ್ನಿ ಜೊತೆಗೂ ಸವಿಯಬಹುದು.

ಏನೆಲ್ಲಾ ವೈಶಿಷ್ಟ್ಯ

ಕೆಂಪುಹರಿವೆ ಸೊಪ್ಪಿನಲ್ಲಿ ವಿಟಮಿನ್ ಇ, ಸಿ, ಕೆ, ಕಬ್ಬಿಣ, ಕ್ಯಾಲ್ಸಿಯಂ ಮತ್ತು ಫೈಬರ್‌ನಂತಹ ಪೋಷಕಾಂಶಗಳಿಂದ ಸಮೃದ್ಧವಾಗಿದೆ. ಇದರಲ್ಲಿ ಫೈಬರ್ ಅಂಶ ಅಧಿಕವಾಗಿ ಇರುವುದರಿಂದ ಹೊಟ್ಟೆ ತುಂಬಿದ ಅನುಭವ ನೀಡಿ, ತೂಕ ನಷ್ಟಕ್ಕೆ ಸಹಾಯ ಮಾಡುತ್ತದೆ. ಮೆಗ್ನೀಷಿಯಮ್ ಮತ್ತು ಪೊಟ್ಯಾಷಿಯಮ್ ಅಂಶಗಳು ರಕ್ತದೊತ್ತಡವನ್ನು ನಿಯಂತ್ರಿಸಲು ಮತ್ತು ಹೃದಯದ ಆರೋಗ್ಯಕ್ಕೆ ಸಹಕಾರಿ.

ಕಬ್ಬಿಣಾಂಶ ಹೆಚ್ಚಿರುವುದರಿಂದ ಕೆಂಪು ರಕ್ತಕಣಗಳ ಉತ್ಪತ್ತಿಗೆ ಸಹಾಯ ಮಾಡಿ, ರಕ್ತಹೀನತೆಯನ್ನು ನಿವಾರಿಸುತ್ತದೆ. ದೈನಂದಿನ ಆಹಾರದಲ್ಲಿ ಇದನ್ನು ಸೇರಿಸುವುದರಿಂದ ಆರೋಗ್ಯಕರ ಜೀವನಶೈಲಿಯನ್ನು ಪಡೆಯಬಹುದು.

ಏನಿವರ ಬ್ಯೂಟಿ ಸೀಕ್ರೆಟ್?

ಅಂಕಿತಾ ಅಮರ್
ಚಿತ್ರನಟಿ



ನಾನು ಚರ್ಮಕ್ಕೆ ನಿರ್ದಿಷ್ಟ ಕ್ರೀಂ ಅಂತೇನೂ ಬಳಸುವುದಿಲ್ಲ. ಶೂಟಿಂಗ್ ಅಥವಾ ನೃತ್ಯ ಕಾರ್ಯಕ್ರಮಗಳಿಗಾಗಿ ಮೇಕಪ್ ಹಾಕಿದ್ದಾಗ, ಬಳಿಕ ಕೊಬ್ಬರಿಎಣ್ಣೆಯಿಂದ ಅದನ್ನು ಸಂಪೂರ್ಣವಾಗಿ ತೆಗೆಯುತ್ತೇನೆ. ನನ್ನದು ಸಾಮಾನ್ಯ ಚರ್ಮ. ಕೆಲವೊಮ್ಮೆ ಒಣಚರ್ಮದಂತೆ ಆಗುತ್ತದೆ. ಕೊಬ್ಬರಿಎಣ್ಣೆ ನನಗೆ ಉತ್ತಮ ಆಯ್ಕೆಯಾಗಿ ಒದಗಿಬಂದಿದೆ.

ಇನ್ನು ಕೂದಲಿಗೂ ಕೊಬ್ಬರಿಎಣ್ಣೆ ಹಚ್ಚುತ್ತೇನೆ. ಹಚ್ಚಿದ ಕೂಡಲೇ ಸ್ನಾನ ಮಾಡುವುದಿಲ್ಲ. ಬುಡದಿಂದ ತುದಿಯವರೆಗೆ ಉಗುರು ಬೆಚ್ಚಗಿನ ಕೊಬ್ಬರಿಎಣ್ಣೆ ಹಚ್ಚಿ, ಸುಮಾರು ಎಂಟು ಗಂಟೆ ಹಾಗೇ ಬಿಡುತ್ತೇನೆ. ನಂತರ ಸ್ನಾನ ಮಾಡುತ್ತೇನೆ. ಊರಿಗೆ ಹೋದಾಗ, ದಾಸವಾಳದ ಎಲೆಗಳನ್ನು ಹಾಕಿ ಕುದಿಸಿದ ಎಣ್ಣೆಯಿದ್ದರೆ, ಅದನ್ನು ಕೊಬ್ಬರಿ ಎಣ್ಣೆಯೊಂದಿಗೆ ಬೆರೆಸಿ ಹಚ್ಚುತ್ತೇನೆ.

ಮೊದಲಿಗೆ ನಿಮಗಿರುವ ಚರ್ಮ ಮತ್ತು ಕೂದಲು ಎಂಥದ್ದು ಎಂಬುದನ್ನು ಅರ್ಥ ಮಾಡಿಕೊಳ್ಳಿ. ಎಲ್ಲರಿಗೂ ಒಂದೇ ರೀತಿಯ ಆರೈಕೆ ಒಗ್ಗದು. ಬಾಲ್ಯದಿಂದಲೂ ಏನು ಬಳಸಿರುತ್ತಿರೋ ಅವುಗಳ ಕಡೆಗೆ ಹೆಚ್ಚು ಒಲವು ಇಟ್ಟುಕೊಳ್ಳುವುದು ಒಳ್ಳೆಯದು. ಹೊಸ ಪ್ರಯತ್ನ ಮಾಡುವುದಕ್ಕಿಂತ ನಿಮ್ಮ ಚರ್ಮ ಹಾಗೂ ಕೂದಲಿಗೆ ಏನು ಉತ್ತಮ ಎನ್ನುವುದನ್ನು ಮೊದಲು ತಿಳಿದುಕೊಳ್ಳಿ.

ಸೌಂದರ್ಯ ಎಂಬುದು ಮನಸ್ಸನ್ನು ಎಷ್ಟು ಖುಷಿಯಾಗಿ ಇಟ್ಟುಕೊಳ್ಳುತ್ತೇವೆ ಎನ್ನುವುದರ ಮೇಲೂ ನಿರ್ಧಾರವಾಗುತ್ತದೆ. ಮನಸ್ಸು ಖುಷಿಯಾಗಿದ್ದರೆ ಉಳಿದೆಲ್ಲ ಸವಾಲುಗಳನ್ನೂ ಸರಾಗವಾಗಿ ಎದುರಿಸಬಹುದು. ನಾನಂತೂ ಪ್ರತಿಕ್ಷಣವನ್ನು ಆಸ್ವಾದಿಸುವುದರಲ್ಲೂ ಖುಷಿಯನ್ನು ಕಂಡುಕೊಳ್ಳುತ್ತೇನೆ.

ವಿಶ್ವ ಮಾನಸಿಕ ಆರೋಗ್ಯ ದಿನ

ಭಾವನೆ ನಿಯಂತ್ರಿಸಿ; ಬದುಕು ಗೆಲ್ಲಿ



ಡಾ. ಶ್ರೀದೇವಿ ಎ.ಯು.

ಹೆಣ್ಣುಮಕ್ಕಳು ಶಿಕ್ಷಣ, ಉದ್ಯೋಗ, ಮದುವೆ, ಮಕ್ಕಳು, ಮನೆ ನಿರ್ವಹಣೆ ಸೇರಿದಂತೆ ಬದುಕಿನ ನಾನಾ ಹಂತಗಳಲ್ಲಿ ಹಲವು ಬಗೆಯ ಒತ್ತಡಗಳನ್ನು ಎದುರಿಸುತ್ತಲೇ ಇರುತ್ತಾರೆ. ಪ್ರತಿಬಾರಿಯೂ ತನ್ನ ಸಾಮರ್ಥ್ಯವನ್ನು ನಿರೂಪಿಸಲೇಬೇಕಾದ ಧಾವಂತದ ಬದುಕು ಆಕೆಯದು. ಅಲ್ಲಿ ತನಗೆ ತಾನೇ ಹಾಕಿಕೊಂಡ ಸಿದ್ಧಸೂತ್ರ ಒಂದಿಷ್ಟು ಆಚೆ ಈಚೆಯಾದರೂ ಆಕೆ ತನ್ನನ್ನು ತಾನೇ ಹಳಿದುಕೊಂಡು ಖಿನ್ನತೆಗೆ ಜಾರುವ ಅಪಾಯ ಇದ್ದೇ ಇರುತ್ತದೆ. ಹಾಗಾಗದಂತೆ, ಬದುಕಿನ ಸವಾಲುಗಳನ್ನು ದಿಟ್ಟವಾಗಿ ಎದುರಿಸಲು ಅಗತ್ಯವಾದ ಮಾನಸಿಕ ಸ್ವಾಸ್ಥ್ಯ ಕಾಯ್ದುಕೊಳ್ಳುವುದು ಬಹುಮುಖ್ಯ. ವಿಶ್ವ ಮಾನಸಿಕ ಆರೋಗ್ಯ ದಿನದ (ಅ.10) ಪ್ರಯುಕ್ತ 'ಭೂಮಿಕಾ' ನಡೆಸಿದ ಸಂದರ್ಶನದಲ್ಲಿ ಈ ಮಹತ್ವವನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ 'ನಿಮ್ಹಾನ್ಸ್'ನಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿರುವ ಡಾ. ಶ್ರೀದೇವಿ ಎ.ಯು.

• **ದೈಹಿಕ ಕಾಳಜಿಯಷ್ಟೇ ಮಾನಸಿಕ ಆರೋಗ್ಯವೂ ಮುಖ್ಯ. ಈ ಬಗ್ಗೆ ಹೆಣ್ಣುಮಕ್ಕಳಲ್ಲಿ ಅರಿವು ಮೂಡಿಸುವುದು ಹೇಗೆ?**

ಮೊದಲಿಗೆ, ತನಗೆ ಏನಾಗುತ್ತಿದೆ ಎನ್ನುವುದರ ಬಗ್ಗೆ ಹೆಣ್ಣುಮಕ್ಕಳು ಮುಕ್ತವಾಗಿ ಮಾತನಾಡುವ ವಾತಾವರಣವನ್ನು ಕಲ್ಪಿಸಬೇಕು. ಆ ವಾತಾವರಣ ಇಲ್ಲದೇ ಇದ್ದಾಗಲೂ ತಮಗೆ ಏನು ಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳುವ ಮತ್ತು ಸಹಾಯವನ್ನು ಪಡೆದುಕೊಳ್ಳಲು ಮುಂದಾಗುವ ಛಾತಿಯನ್ನು ಬೆಳೆಸಿಕೊಳ್ಳಬೇಕು. ಮಾನಸಿಕ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಮಾಹಿತಿಯ ಆಗರವೇ ನಮ್ಮ ಮುಂದೆ ಇದೆ. ಆದರೆ, ಈ ಕ್ಷೇತ್ರದಲ್ಲಿರುವ ತಜ್ಞರು ಇದರ ಬಗ್ಗೆ ನಿಖರವಾದ ಮಾಹಿತಿಯನ್ನು ಕೊಟ್ಟು ಮನದಟ್ಟು ಮಾಡಿಸಬೇಕು. ಅಸಂಘಟಿತ ಕಾರ್ಮಿಕ ವಲಯ ಹಾಗೂ ಸಂಸ್ಥೆಗಳು ಮಾನಸಿಕ ಆರೋಗ್ಯ ಕಾಳಜಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಸ್ಪಂದಿಸಬೇಕು. ಶಾಲಾ ಕಾಲೇಜುಗಳಲ್ಲಿ ನಡೆಯುವ ಪೋಷಕರು ಮತ್ತು ಶಿಕ್ಷಕರ ಸಭೆಗಳಲ್ಲಿ ಮಾಹಿತಿ ಕೊಡುವ ಅಭಿಯಾನ ಆಗಬೇಕು. ಇದರಿಂದ ಭಾವನೆಗಳನ್ನು ಗೌರವಿಸುವ ಹಾಗೂ ನಿರ್ವಹಿಸುವ ಕಲೆಯನ್ನು ಕಲಿಯಲು ಸಹಾಯವಾಗುತ್ತದೆ.

• **ಮಾನಸಿಕ ಆರೋಗ್ಯಕ್ಕೆ ಆಪತ್ತು ಒದಗಿದೆ ಎಂಬುದನ್ನು ಸೂಚಿಸುವ ನಡವಳಿಕೆಗಳು ಯಾವುವು?**

ಊಟ, ನಿದ್ರೆ, ದೈಹಿಕ ಚಟುವಟಿಕೆಗಳನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗದೇ ಇರುವುದು, ಯಾವುದೇ ಪ್ರಕರಣವಿರಲಿ ಅತಿಯಾಗಿ ಸ್ಪಂದಿಸುವುದು ಅಥವಾ ಸ್ಪಂದಿಸದೇ ಇರುವುದು, ಕೆಲಸ ಕಾರ್ಯಗಳಲ್ಲಿ ನಿರಾಸಕ್ತಿ, ತನ್ನ ವ್ಯಕ್ತಿತ್ವಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುವುದು. ಉದಾಹರಣೆಗೆ, ಹೆಚ್ಚು ಮಾತನಾಡದೇ ಇರುವ ವ್ಯಕ್ತಿತ್ವ ಹೊಂದಿರುವವರು ಪದೇ ಪದೇ ಅತಿಯಾಗಿ ಪ್ರತಿಕ್ರಿಯಿಸಿ, ಕೋಪದ ನಡವಳಿಕೆಯನ್ನು ತೋರಿಸಬಹುದು.

• **ಹೆಣ್ಣುಮಕ್ಕಳೆಲ್ಲ ಭಾವನಾಜೀವಿಗಳು ಎನ್ನುವ ಮಾತಿದೆ. ಇದು ನಿಜವೇ ಅಥವಾ ತಪ್ಪುಕಲ್ಪನೆಯೇ?**

ಇಂತಹದ್ದೊಂದು ಅಭಿಪ್ರಾಯವನ್ನು ನಂಬಿರುವ ವ್ಯವಸ್ಥೆಗೆ ಹೆಣ್ಣುಮಕ್ಕಳು ಒಳಪಟ್ಟಿದ್ದಾರೆಯೇ ವಿನಾ ಅವರು ಭಾವನಾತ್ಮಕವಾಗಿ ದುರ್ಬಲರಲ್ಲ. ಹಾಗೆ ನೋಡಿದರೆ, ಹೆಣ್ಣುಮಕ್ಕಳು ನಿಜವಾಗಿಯೂ ಭಾವನಾತ್ಮಕವಾಗಿ ಬಹಳ ಶಕ್ತಿಶಾಲಿಗಳು. ಅವರ ದೇಹದಲ್ಲಿ ಆಗುವ ಹಾರ್ಮೋನ್‌ಗಳ ವ್ಯತ್ಯಾಸದಿಂದ ಮಾನಸಿಕ ಆರೋಗ್ಯಕ್ಕೂ ತೊಂದರೆಯಾಗುವುದು ಸಹಜ. ಎಂಥ ಸವಾಲುಗಳಿದ್ದರೂ ಹೆಣ್ಣುಮಕ್ಕಳು ಸರಿಯಾದ ರೀತಿಯಲ್ಲಿ ಅವನ್ನು ನಿಭಾಯಿಸಬಲ್ಲರು. ಅವರಿಗೆ ಬೇಕಿರುವುದು ತಮ್ಮವರಿಂದ ಸಹಕಾರ ಅಷ್ಟೆ.

• **ಭಾವನೆಗಳ ತಾಕಲಾಟವನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು, ಭಾವನಾತ್ಮಕವಾಗಿ ಸದೃಢರಾಗುವುದು ಹೇಗೆ?**

ತನಗೆ ಏನು ಬೇಕು ಎಂಬುದರ ಬಗ್ಗೆ ಹೆಣ್ಣುಮಕ್ಕಳಲ್ಲಿ ಸ್ಪಷ್ಟತೆ ಇರಬೇಕು. ಇಂತಹ ಸ್ಪಷ್ಟತೆ ಹೊಂದುವುದನ್ನು ಚಿಕ್ಕಂದಿನಿಂದಲೇ ಕಲಿಸಿಕೊಡುವ ಕೆಲಸ ಆಗಬೇಕು. ಇತರರೇ ಅರ್ಥ ಮಾಡಿಕೊಳ್ಳಲಿ ಎಂಬ ನಿರೀಕ್ಷೆ ಬಿಟ್ಟು, ತನ್ನ ಭಾವನೆಗಳು, ಅಭಿಪ್ರಾಯಗಳನ್ನು ಇತರರಿಗೆ ಸ್ಪಷ್ಟವಾಗಿ ಹೇಳುವುದನ್ನು ರೂಢಿಸಿಕೊಳ್ಳಬೇಕು. ಭಾವನಾತ್ಮಕವಾಗಿ ಸದೃಢರಾಗಲು ಒಂದಷ್ಟು ಚಟುವಟಿಕೆಗಳನ್ನು ರೂಪಿಸಿಕೊಳ್ಳಬೇಕು. ತಮಗೆ ಸಾಧ್ಯವೇ ಆಗುತ್ತಿಲ್ಲ ಎಂದಾದಾಗ 'ಆಗಲ್ಲ', 'ಬೇಡ' ಎಂದು ಹೇಳುವುದನ್ನು ಕಲಿಯಬೇಕು. ಇದರಿಂದ ಅತಿಯಾದ ಹೊರೆ ಹೊರುವುದು ತಪ್ಪುತ್ತದೆ. ಎಲ್ಲವನ್ನೂ ಗಲಾಟೆಯಿಂದಲೇ ನಿರ್ವಹಿಸಬೇಕಾಗಿಲ್ಲ. ಬಹಳ ಶಾಂತವಾಗಿ ಇದ್ದುಕೊಂಡು ಸಂಬಂಧಗಳು, ಭಾವನೆಗಳನ್ನು ನಿರ್ವಹಿಸುವ ಕಲೆಯನ್ನು ಕಲಿಯಬೇಕು.

• **ದೈಹಿಕ ಬದಲಾವಣೆಗಳಿಂದಲೂ ಮಾನಸಿಕ ಆರೋಗ್ಯ ಹದಗೆಡುತ್ತದೆ. ಅಂಥ ಸಂದರ್ಭಗಳು ಯಾವುವು, ಪರಿಹಾರವೇನು?**

ಮಾಸಿಕ ಋತುಚಕ್ರದ ಸಮಯ, ಗರ್ಭಧಾರಣೆಗೆ ಮೊದಲು ಮತ್ತು ನಂತರ ಹಾರ್ಮೋನ್‌ಗಳ ಏರಿಳಿತದಿಂದ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಆಗುವುದು ಸಹಜ. ತಮ್ಮ ಮಾನಸಿಕ ಸಮಸ್ಯೆಗಳ ಬಗ್ಗೆ ಹೇಳಿಕೊಂಡರೆ ಏನಾಗುವುದೋ ಎಂಬ ಭಯದಿಂದ ಮೊದಲು ಹೊರಬರಬೇಕು. ಸರಿಯಾದ ಸಮಯದಲ್ಲಿ ಸರಿಯಾದ ಸಹಾಯ ಪಡೆಯಬೇಕು. ಒತ್ತಡ ಹೆಚ್ಚಾದಾಗ ಮಿದುಳು ಕೆಲವು ಹಾರ್ಮೋನ್‌ಗಳನ್ನು ಬಿಡುಗಡೆ ಮಾಡುತ್ತದೆ. ಇದು ಅತಿಯಾದಾಗ ಮಾನಸಿಕ ಆರೋಗ್ಯಕ್ಕೆ ಚಿಕಿತ್ಸೆ ಪಡೆದುಕೊಳ್ಳುವ ಅಗತ್ಯವನ್ನು ಅಲ್ಲಗಳೆಯುವಂತಿಲ್ಲ.

• **ಸದಾ ಒತ್ತಡದಿಂದಲೇ ಬದುಕುವ ಹೆಣ್ಣುಮಕ್ಕಳು ಅದರಿಂದ ಹೊರಬರುವುದು ಹೇಗೆ?**

ಒತ್ತಡದಲ್ಲಿ ಯಾಕೆ ಇರುತ್ತಾರೆ ಎನ್ನುವುದು ಮುಖ್ಯ. ಹಸಿ ಬಾಣಂತಿಗೆ ಒಂದು ಬಗೆಯ ಒತ್ತಡವಿದ್ದರೆ, 40 ವರ್ಷದ ಮಹಿಳೆಗೆ ಇನ್ನೊಂದು ಬಗೆಯ ಒತ್ತಡ ಇರುತ್ತದೆ. ಇಂತಹ ಸಂದರ್ಭಗಳನ್ನು ನಿಯಂತ್ರಿಸುವುದನ್ನು ಕಲಿಯಬೇಕು. ಆದಷ್ಟೂ ವಾಸ್ತವ ಸ್ಥಿತಿಯನ್ನು ಅರ್ಥ ಮಾಡಿಕೊಂಡು, ಅದಕ್ಕೆ ತಕ್ಕಂತೆ ಹೆಜ್ಜೆ ಇಡುವುದು ಬಹಳ ಮುಖ್ಯ. ಹೆಣ್ಣುಮಕ್ಕಳು ತಮಗೆ ಲಭ್ಯವಿರುವ ಸಹಕಾರ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳಬೇಕು. ಈ ಸಹಕಾರ ಮನೆಯಿಂದಲೂ ಸಿಗಬಹುದು, ಸ್ನೇಹಿತರಿಂದಲೂ ಪಡೆದುಕೊಳ್ಳಬಹುದು.

• **ಪರಿಪೂರ್ಣತೆಯ ಗೀಳು ಆಕೆಯ ಮಾನಸಿಕ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ?**

ಪರಿಪೂರ್ಣತೆ ಸಾಧಿಸಬೇಕು ಎಂದುಕೊಂಡಿರುವುದು ಇಷ್ಟದ ಸಂಗತಿಯಾಗಿದ್ದರೆ, ಆ ಗೀಳಿನಿಂದ ಹೆಚ್ಚಿನ ಸಮಸ್ಯೆಯಾಗದು. ಆದರೆ, ಬೇರೆಯವರೊಂದಿಗೆ ತಮ್ಮನ್ನು ಹೋಲಿಸಿಕೊಂಡು, ಅವರಂತೆ ಪರಿಪೂರ್ಣರಾಗಬೇಕು ಎಂದು ಯೋಚಿಸಿದಾಗ ಅನವಶ್ಯಕ ಒತ್ತಡ ಉಂಟಾಗುತ್ತದೆ. ನಮ್ಮ ಸಾಮರ್ಥ್ಯ ಏನು ಎನ್ನುವುದನ್ನು ಮೊದಲಿಗೆ ಅರ್ಥ ಮಾಡಿಕೊಂಡು, ಅದಕ್ಕೆ ಅನುಗುಣವಾಗಿ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಸಾಮರ್ಥ್ಯ ಹಾಗೂ ಸಹಕಾರ ಇದ್ದಾಗಷ್ಟೇ ಚಲನಶೀಲರಾಗಿ ಇರಲು ಸಾಧ್ಯ. ಅವೆರಡನ್ನೂ ಪ್ರಜ್ಞಾಪೂರ್ವಕವಾಗಿ ಹೊಂದುವುದು ಮುಖ್ಯ.

ವನ್ಯಜೀವಿ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ: ಪಿಣರಾಯಿ

ತಿರುವನಂತಪುರ (ಪಿಟಿಐ): 'ಕೇಂದ್ರದ ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ಕ್ಕೆ ತಿದ್ದುಪಡಿ ತರುವ ಮಸೂದೆಯನ್ನು ಅಂಗೀಕರಿಸಿದ ಮೊದಲ ರಾಜ್ಯ ಕೇರಳ' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ರಾಜ್ಯದಲ್ಲಿ ಹೆಚ್ಚುತ್ತಿರುವ ಮಾನವ- ವನ್ಯಮೃಗ ಸಂಘರ್ಷವನ್ನು ಕಡಿಮೆ ಮಾಡುವ ಉದ್ದೇಶವನ್ನು ಹೊಂದಿರುವ 'ಕೇರಳ ವನ್ಯಜೀವಿ ಸಂರಕ್ಷಣಾ ತಿದ್ದುಪಡಿ ಮಸೂದೆ'ಯನ್ನು ಕೇರಳ ವಿಧಾನಸಭೆಯು ಬುಧವಾರ ಅಂಗೀಕರಿಸಿದೆ.

'ಈ ಮಸೂದೆಯು ಹೆಚ್ಚುತ್ತಿರುವ ಮಾನವ-ಪ್ರಾಣಿ ಸಂಘರ್ಷಕ್ಕೆ ಪರಿಹಾರ ಕಂಡುಕೊಳ್ಳುವ ಮತ್ತು ಅರಣ್ಯದ ಅಂಚಿನಲ್ಲಿ ವಾಸಿಸುತ್ತಿರುವ ಜನರಿಗೆ ನ್ಯಾಯವನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಇಟ್ಟಂತಹ ಪ್ರಮುಖ ಹೆಜ್ಜೆಯಾಗಿದೆ' ಎಂದು ಮುಖ್ಯಮಂತ್ರಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಈ ತಿದ್ದುಪಡಿಯು ಮಾನವ ಜೀವ ಮತ್ತು ವನ್ಯಜೀವಿ ಎರಡನ್ನೂ ಸಂರಕ್ಷಿಸಲು ಕೇರಳ ಸರ್ಕಾರ ಹೊಂದಿರುವ ಬದ್ಧತೆಯನ್ನು ಪುನರುಚ್ಚರಿಸುತ್ತದೆ. ಜನರು ಮತ್ತು ಪ್ರಕೃತಿಯ ನಡುವೆ ಸಾಮರಸ್ಯವನ್ನು ಬೆಳೆಸುತ್ತದೆ' ಎಂದು ತಿಳಿಸಿದ್ದಾರೆ.

'ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ಕ್ಕೆ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗದ ಕಾರಣ ಕಾಯ್ದೆಗೆ ನಮ್ಮದೇ ಆದ ತಿದ್ದುಪಡಿ ತರಲು ಮುಂದಾಗಿದ್ದೇವೆ' ಎಂದು ಅರಣ್ಯ ಸಚಿವ ಎ.ಕೆ.ಶಶೀಂದ್ರನ್ ವಿಧಾನಸಭೆಗೆ ತಿಳಿಸಿದ್ದರು.

'ಮಸೂದೆಯನ್ನು ರಾಜ್ಯಪಾಲರಿಗೆ ಕಳುಹಿಸಲಾಗುವುದು. ಇದು ಕೇಂದ್ರದ ಕಾಯ್ದೆ ಆಗಿರುವುದರಿಂದ ರಾಜ್ಯಪಾಲರು ಅದನ್ನು ರಾಷ್ಟ್ರಪತಿಗೆ ಕಳುಹಿಸುವರು' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಸಚಿವರ ಕಚೇರಿಯಲ್ಲಿ ಇ.ಡಿ ಶೋಧ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಚಿವ ಸುಜಿತ್ ಬೋಸ್‌ಗೆ ಸಂಬಂಧಿಸಿದ ಆಸ್ತಿಗಳು ಸೇರಿದಂತೆ ಕೋಲ್ಕತ್ತದ ಏಳು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ಶೋಧ ಕಾರ್ಯಾಚರಣೆ ನಡೆಸಿದರು.

ಪುರಸಭೆಗಳ ಸಿಬ್ಬಂದಿ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ತನಿಖೆಗೆ ಸಂಬಂಧಿಸಿದಂತೆ ಈ ಶೋಧ ನಡೆದಿದ್ದು, ಸಚಿವರ ಕಚೇರಿಯಿಂದ ಒಎಂಆರ್ ಶೀಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಾಲ್ಟ್ ಲೇಕ್‌ನಲ್ಲಿರುವ ಸಚಿವರ ನಿವಾಸ– ಗೃಹ ಕಚೇರಿ, ನಾಗೇರ್ ಬಜಾರ್ ಪ್ರದೇಶದ ಕೌನ್ಸಿಲರ್ ಮನೆ, ದಕ್ಷಿಣ ಡುಮ್ ಡುಮ್ ಪುರಸಭೆಯ ಮಾಜಿ ಅಧಿಕಾರಿಗಳ ಮನೆಯಲ್ಲೂ ಇ.ಡಿ ತಂಡಗಳು ಶೋಧ ನಡೆಸಿವೆ ಎಂದು ಅವರು ಹೇಳಿದರು.

ಕೇಂದ್ರ ಕೋಲ್ಕತ್ತದ ಥಂತಾನಿಯಾ ಕಾಲಿಬಾರಿ ಪ್ರದೇಶದ ಮನೆಯೊಂದರ ಮೇಲೆ ಮತ್ತು ದಕ್ಷಿಣ ಭಾಗದ ನ್ಯೂ ಅಲಿಪೋರ್‌ನಲ್ಲಿರುವ ವಕೀಲರ ನಿವಾಸದ ಮೇಲೂ ದಾಳಿ ನಡೆದಿದೆ ಎಂದಿದ್ದಾರೆ.

'ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸುವ ಗುರಿಯೊಂದಿಗೆ ಈ ದಾಳಿ ನಡೆದಿದೆ. ಸಚಿವರ ಕಚೇರಿಯು ದಾಳಿ ನಡೆಸಬೇಕಾದ ಸ್ಥಳಗಳ ಪಟ್ಟಿಯಲ್ಲಿ ಇರಲಿಲ್ಲ' ಎಂದು ಇ.ಡಿ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಸಚಿವರ ಒಡೆತನದ ಸಾಲ್ಟ್ ಲೇಕ್ ಪ್ರದೇಶದಲ್ಲಿನ ರೆಸ್ಟೊರೆಂಟ್‌ನ ವ್ಯವಸ್ಥಾಪಕರನ್ನು ಪ್ರಶ್ನಿಸಲಾಗಿದೆ.

'ಎಲ್ಲ ಆರೋಪಿಗಳ ಹೆಸರು ದಾಖಲಿಸಿ'



ಚಂಡೀಗಢ (ಪಿಟಿಐ): 'ಎಲ್ಲ ಆರೋಪಿಗಳ ಹೆಸರನ್ನು ಎಫ್‌ಐಆರ್‌ನಲ್ಲಿ ದಾಖಲಿಸಬೇಕು' ಎಂದು ಆತ್ಮಹತ್ಯೆ ಮಾಡಿಕೊಂಡ ಹರಿಯಾಣದ ಹಿರಿಯ ಐಪಿಎಸ್ ಅಧಿಕಾರಿ ವೈ.ಪೂರನ್ ಕುಮಾರ್ ಅವರ ಪತ್ನಿಯು ಪೊಲೀಸರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ.

'ಎಫ್‌ಐಆರ್‌ನಲ್ಲಿನ 'ಅಪೂರ್ಣ ಮಾಹಿತಿ'ಯನ್ನು ಪ್ರಶ್ನಿಸಿರುವ ಹಿರಿಯ ಐಎಎಸ್ ಅಧಿಕಾರಿಯೂ ಆಗಿರುವ ಅಮ್ನೀತ್ ಪಿ. ಕುಮಾರ್ ಅವರು ಪ್ರಾಥಮಿಕ ಮಾಹಿತಿ ವರದಿಯಲ್ಲಿ ತಿದ್ದುಪಡಿ ಮಾಡುವಂತೆ ಕೋರಿದ್ದಾರೆ.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ದುರ್ಬಲ ಸೆಕ್ಷನ್‌ಗಳನ್ನು ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದೆ. ಇದನ್ನು ಬದಲಿಸಬೇಕು' ಎಂದು ಅಮ್ನೀತ್ ಅವರು ಚಂಡೀಗಢದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಕನ್ವರ್‌ದೀಪ್ ಕೌರ್ ಅವರಿಗೆ ಪತ್ರ ಬರೆದಿದ್ದಾರೆ.

ಪೂರನ್ ಕುಮಾರ್ ಅವರು ಬರೆದಿಟ್ಟಿದ್ದ ಮರಣ ಪತ್ರವನ್ನು ಆಧರಿಸಿ ಚಂಡೀಗಢ ಪೊಲೀಸರು ಗುರುವಾರ ಸಂಜೆ ಆತ್ಮಹತ್ಯೆಗೆ ಪ್ರಚೋದನೆ ಮತ್ತು ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ಕೆಲವು ಸೆಕ್ಷನ್‌ಗಳನ್ನು ಉಲ್ಲೇಖಿಸಿ ಎಫ್‌ಐಆರ್ ದಾಖಲಿಸಿದ್ದರು.

'ಹರಿಯಾಣ ಡಿಜಿಪಿ ಶತ್ರುಜೀತ್ ಕಪೂರ್ ಹಾಗೂ ರೋಹಟಕ್ ಎಸ್‌ಪಿ ನರೇಂದ್ರ ಬಿಜಾರಣಿಯಾ ಅವರು ಕಿರುಕುಳ ನೀಡುವ ಜೊತೆಗೆ ನನ್ನನ್ನು ಸದಾ ಅವಮಾನಿಸುತ್ತಿದ್ದರು' ಎಂದು ಪೂರನ್ ತಮ್ಮ ಮರಣಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ನ್ಯಾಯ ಒದಗಿಸುವವರೆಗೆ' ಮರಣೋತ್ತರ ಪರೀಕ್ಷೆಗೆ ಅವಕಾಶ ನೀಡಲು ಅಮ್ನೀತ್ ನಿರಾಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜಾತಿ ತಾರತಮ್ಯ: ಕ್ರಮಕೈಗೊಳ್ಳಿ

ನವದೆಹಲಿ (ಪಿಟಿಐ): ಜಾತಿ ಆಧಾರಿತ ತಾರತಮ್ಯ ಎದುರಿಸುತ್ತಿದ್ದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ, ಏಳು ದಿನದೊಳಗೆ ಕ್ರಮ ಕೈಗೊಂಡ ವರದಿಯನ್ನು ಸಲ್ಲಿಸಿ ಎಂದು ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗವು (ಎನ್‌ಸಿಎಸ್‌ಸಿ) ಹರಿಯಾಣ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದೆ.

ಜಮ್ಮು–ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ಪ್ರತಿಕ್ರಿಯೆಗೆ 4 ವಾರಗಳ ಗಡುವು

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತು ಪ್ರತಿಕ್ರಿಯೆ ನೀಡಲು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ನಾಲ್ಕು ವಾರಗಳ ಗಡುವು ನೀಡಿದೆ.

ಜಮ್ಮು- ಕಾಶ್ಮೀರಕ್ಕೆ ಶೀಘ್ರದಲ್ಲಿ ರಾಜ್ಯದ ಸ್ಥಾನಮಾನ ನೀಡಲು ಸೂಚಿಸುವಂತೆ ಕೋರಿ ಶಿಕ್ಷಣ ತಜ್ಞ ಝಹೂರ್ ಅಹಮದ್ ಭಟ್ ಮತ್ತು ಸಾಮಾಜಿಕ ಕಾರ್ಯಕರ್ತ ಅಹಮದ್ ಮಲ್ಲಿಕ್ ಸಲ್ಲಿಸಿದ್ದ ಅರ್ಜಿ ಸೇರಿದಂತೆ ಈ ಕುರಿತಾದ ಹಲವು ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರ ಪೀಠವು ವಿಚಾರಣೆ ನಡೆಸುತ್ತಿದೆ.

'ಇದೊಂದು ವಿಭಿನ್ನ ಸಮಸ್ಯೆ ಹಾಗಾಗಿ ಸಮಗ್ರ ಅವಲೋಕನ ಅತ್ಯಗತ್ಯವಾಗಿದೆ. ಈ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ' ಎಂದು ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಾಲಯಕ್ಕೆ ತಿಳಿಸಿದರು.

ಸಂವಿಧಾನದ 37ನೇ ವಿಧಿಯಡಿ ಜಮ್ಮು-ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್ 2023ರ ಡಿ. 11ರಂದು ಎತ್ತಿಹಿಡಿದಿತ್ತು. ಆದರೆ, ಈ ಕೇಂದ್ರಾಡಳಿತ ಪ್ರದೇಶಗಳಲ್ಲಿ 2024ರ ಸೆಪ್ಟೆಂಬರ್ ಒಳಗಾಗಿ ವಿಧಾನಸಭಾ ಚುನಾವಣೆ ನಡೆಸಬೇಕು ಮತ್ತು ಶೀಘ್ರದಲ್ಲಿ ರಾಜ್ಯದ ಸ್ಥಾನಮಾನ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

'ರಾಷ್ಟ್ರೀಯತೆಗಿಂತ ಮಾನವೀಯತೆ ಮುಖ್ಯ'

ಪಣಜಿ (ಪಿಟಿಐ): 'ಬಾಹ್ಯಾಕಾಶದಲ್ಲಿ ಇದ್ದಾಗ ವೈಯಕ್ತಿಕ ಗುರುತು ಮರೆಯಾಗಿ ಇಡೀ ಭೂಮಿಯೇ ನಮ್ಮ ಗುರುತಾಗುತ್ತದೆ' ಎಂದು ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಶುಕ್ರವಾರ ಹೇಳಿದರು.

'ಬಾಹ್ಯಾಕಾಶದಲ್ಲಿ ರಾಷ್ಟ್ರೀಯತೆ ಮುಖ್ಯವಾಗುವುದಿಲ್ಲ. ಬದಲಿಗೆ, ಮಾನವೀಯತೆಯೇ ಪ್ರಾಶಸ್ತ್ಯ ಪಡೆಯುತ್ತದೆ' ಎಂದರು.

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ (ಐಎಸ್‌ಎಸ್) ಅನುಭವವನ್ನು ಹಂಚಿಕೊಂಡ ಅವರು, 'ಅದು ಹೆಚ್ಚು ಆಕರ್ಷಕವಾಗಿತ್ತು. ಜನರು ಈ ಜಗತ್ತಿನಲ್ಲಿ ವಿಭಿನ್ನ ಗುರುತುಗಳನ್ನು ಹೊಂದಿರಬಹುದು. ಆದರೆ ಬಾಹ್ಯಾಕಾಶದಲ್ಲಿದ್ದಾಗ ಅದು ಮರೆಯಾಗುತ್ತವೆ' ಎಂದು ಹೇಳಿದರು.

ಜುಬಿನ್ ಸಾವು ಇಬ್ಬರ ಬಂಧನ

ಗುವಾಹಟಿ (ಪಿಟಿಐ): ಗಾಯಕ ಜುಬಿನ್ ಗರ್ಗ್ ಅವರ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಭದ್ರತಾ ಸಿಬ್ಬಂದಿಯನ್ನು ಶುಕ್ರವಾರ ಬಂಧಿಸಲಾಗಿದೆ.

ನಂದೇಶ್ವರ ಬೋರಾ, ಪರೇಶ್ ಬೈಶ್ಯ ಬಂಧಿತರು.

ಗಾಯಕನ ಭದ್ರತೆಗಾಗಿ ಈ ಇಬ್ಬರು ಸರ್ಕಾರದಿಂದಲೇ ನಿಯೋಜಿಸಲ್ಪಟ್ಟಿದ್ದರು. ಹಲವು ಸುತ್ತಿನ ವಿಚಾರಣೆ ಬಳಿಕ, ಅಸ್ಸಾಂ ಪೊಲೀಸರು ಮಂಗಳವಾರ ಇವರನ್ನು ಅಮಾನತುಗೊಳಿಸಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇವರಿಬ್ಬರ ಬ್ಯಾಂಕ್ ಖಾತೆಗಳಿಂದ ಹಲವು ಲಕ್ಷ ರೂಪಾಯಿಗಳ ವಹಿವಾಟು ನಡೆದಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದಿದ್ದಾರೆ.

ಸಿಂಗಪುರದಲ್ಲಿ ಗಾಯಕ ಜುಬಿನ್ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ ಒಟ್ಟು ಏಳು ಜನರನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಜೀವಂತವಾದ ಯಾವ ಭಾಷೆಯೂ, ತಾನೂ ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸಂಪಾದಕೀಯ

ಋತುಚಕ್ರ ನೀತಿ: ಮಹತ್ವದ ನಡೆ ಅನುಷ್ಠಾನದಲ್ಲಿ ಇಚ್ಛಾಶಕ್ತಿ ಅಗತ್ಯ

ಉದ್ಯೋಗಸ್ಥ ಮಹಿಳೆಯರಿಗೆ ಪ್ರತಿ ತಿಂಗಳು ಒಂದು ದಿನದ ವೇತನಸಹಿತ ಮುಟ್ಟಿನ ರಜೆ ನೀಡುವ ರಾಜ್ಯ ಸಚಿವ ಸಂಪುಟದ ಮಹತ್ವದ ನಿರ್ಣಯ, ಮಹಿಳೆಯರಲ್ಲಿ ಆತ್ಮವಿಶ್ವಾಸ ತುಂಬುವ ಹಾಗೂ ಅವರನ್ನು ಘನತೆಯಿಂದ ನಡೆಸಿಕೊಳ್ಳುವ ಮಹತ್ವದ ನಡೆಯಾಗಿದೆ. ಬಿಹಾರ, ಒಡಿಶಾ, ಕೇರಳ ರಾಜ್ಯಗಳಲ್ಲಿ ಮುಟ್ಟಿನ ರಜೆ ಈಗಾಗಲೇ ಜಾರಿಯಲ್ಲಿದೆ. ಆದರೆ, ಆ ರಜೆ ಸರ್ಕಾರಿ ನೌಕರರಿಗೆ ಇಲ್ಲವೇ ಸೀಮಿತ ವರ್ಗಕ್ಕೆ ಅನ್ವಯಗೊಳ್ಳುವಂತಹದ್ದು. ಸರ್ಕಾರಿ ಕಚೇರಿಗಳು, ಬಹುರಾಷ್ಟ್ರೀಯ ಕಂಪನಿಗಳು, ಐ.ಟಿ ಕಂಪನಿಗಳು, ಗಾರ್ಮೆಂಟ್ಸ್ ಹಾಗೂ ಇತರ ಖಾಸಗಿ ಕೈಗಾರಿಕೆಗಳು ಸೇರಿದಂತೆ ಎಲ್ಲಾ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಕರ್ನಾಟಕದ ‘ಋತುಚಕ್ರ ನೀತಿ– 2025’ ಅನ್ವಯವಾಗುವಂತಿದೆ. ಇದರೊಂದಿಗೆ, ಮುಟ್ಟಿನ ರಜೆಗೆ ಸಂಬಂಧಿಸಿದಂತೆ ಇಡೀ ದೇಶಕ್ಕೆ ಕರ್ನಾಟಕ ಮಾದರಿಯೊಂದನ್ನು ಕಲ್ಪಿಸಿದೆ. ಋತುಚಕ್ರದ ದಿನಗಳ ಆರೋಗ್ಯವನ್ನು ಮಹಿಳೆಯ ಹಕ್ಕುಗಳು ಮತ್ತು ಉದ್ಯೋಗ ಮಾಡುವ ಸ್ಥಳದ ಮೂಲಭೂತ ಅಂಶವೆಂದು ಪರಿಗಣಿಸಿ, ಅದರ ಮಹತ್ವವನ್ನು ಗುರ್ತಿಸಿರುವ ರೂಪದಲ್ಲಿ ಋತುಚಕ್ರದ ರಜೆ ನೀಡಲು ನಿರ್ಧರಿಸಿರುವುದಾಗಿ ಸರ್ಕಾರ ಹೇಳಿರುವುದು ಸರಿಯಾಗಿದೆ. ಮಹಿಳೆಯರ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವ ಈ ಕ್ರಮ, ವಿವೇಕ ಮತ್ತು ಸಂವೇದನಾಶೀಲ ನಿರ್ಧಾರವಾಗಿದೆ. ಸರ್ಕಾರಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ ‘ಶಕ್ತಿ’ ಹಾಗೂ ಮಾಸಿಕ ₹2,000 ನೀಡುವ ‘ಗೃಹಲಕ್ಷ್ಮಿ’ ಯೋಜನೆಗಳ ಮೂಲಕ ಮಹಿಳೆಯರ ಸಬಲೀಕರಣದ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಿಟ್ಟಿದ್ದ ರಾಜ್ಯ ಸರ್ಕಾರ, ಈಗ ಮುಟ್ಟಿನ ರಜೆಯ ಮೂಲಕ ಮತ್ತೊಂದು ಮಹಿಳಾಪರ ನಿರ್ಧಾರ ಕೈಗೊಂಡಿದೆ.



ಉದ್ಯೋಗಸ್ಥ ಮಹಿಳೆಯರಿಗೆ ಮುಟ್ಟಿನ ರಜೆ ನೀಡುವ ರಾಜ್ಯ ಸರ್ಕಾರದ ತೀರ್ಮಾನ ಸ್ವಾಗತಾರ್ಹ. ಕಟ್ಟುನಿಟ್ಟಾಗಿ ಜಾರಿಗೊಳಿಸಿದಲ್ಲಿ ಇಡೀ ದೇಶಕ್ಕೆ ಕರ್ನಾಟಕ ಮಾದರಿಯಾಗುತ್ತದೆ.

ಮಹಿಳಾ ಉದ್ಯೋಗಿಗಳನ್ನು ಮಾನಸಿಕವಾಗಿ ಗಟ್ಟಿಗೊಳಿಸುವ ಹಾಗೂ ಒಂದು ಸವಲತ್ತಿನ ರೂಪದಲ್ಲಿ ನೋಡಬಹುದಾದ ಮುಟ್ಟಿನ ರಜೆಗೆ ಸಾಮಾಜಿಕ ಆಯಾಮದ ಮಹತ್ವವೂ ಇದೆ. ಈ ನಿರ್ಧಾರ, ಹೆಣ್ಣಿನ ಋತುಚಕ್ರದ ಬಗ್ಗೆ ಸಾರ್ವಜನಿಕ ಸಂವೇದನೆಯನ್ನು ರೂಪಿಸಲು ಅಗತ್ಯವಾಗಿದ್ದ ಕ್ರಮವೂ ಆಗಿದೆ. ಲಿಂಗಸಂವೇದನೆಯ ಸೂಕ್ಷ್ಮಗಳ ಬಗ್ಗೆ ವ್ಯಾಪಕ ಚರ್ಚೆಯಾಗುತ್ತಿದ್ದರೂ, ಮುಟ್ಟಿನ ಬಗೆಗಿನ ಪೂರ್ವಗ್ರಹಗಳಿಂದ ಸಮಾಜ ಇನ್ನೂ ಮುಕ್ತವಾಗಿಲ್ಲ. ಗೌರವ ಹಾಗೂ ಸಹಾನುಭೂತಿಯಿಂದ ನೋಡಬೇಕಾದ ಹೆಣ್ಣಿನ ದೈಹಿಕ ಬದಲಾವಣೆಯನ್ನು ಮೈಲಿಗೆಯಾಗಿ ನೋಡುವ ಹಾಗೂ ತಮಾಷೆ ಮಾಡುವ ಪ್ರವೃತ್ತಿ ಸಮಾಜದಲ್ಲಿದೆ. ಹೆಣ್ಣು ತನ್ನ ಋತುಚಕ್ರದ ಬಗ್ಗೆ ಮುಕ್ತವಾಗಿ ಮಾತನಾಡುವ ಸ್ಥಿತಿ ಮನೆಯ ಹೊರಗಿರಲಿ, ಅನೇಕ ಕುಟುಂಬಗಳಲ್ಲೂ ಇಲ್ಲ. ಮನೆಯ ಹೆಣ್ಣುಮಕ್ಕಳ ದೈಹಿಕ ಬದಲಾವಣೆಗಳ ಬಗ್ಗೆ ಕುಟುಂಬದ ಸದಸ್ಯರೇ ಸಂವೇದನಾಶೂನ್ಯರಾಗಿರುವ ಉದಾಹರಣೆಗಳೇ ಹೆಚ್ಚು. ಮುಟ್ಟಿನ ಸಂದರ್ಭದ ದೈಹಿಕ ಹಾಗೂ ಮಾನಸಿಕ ಒತ್ತಡದ ಜೊತೆಗೆ ಸಮಾಜದ ಕಟ್ಟುಪಾಡುಗಳ ಸಂಕಷ್ಟವನ್ನೂ ಮಹಿಳೆ ಎದುರಿಸಬೇಕಾಗಿದೆ. ಇಂಥ ಸಂದರ್ಭದಲ್ಲಿ, ಮುಟ್ಟಿಗೆ ಅಂಟಿಕೊಂಡಿರುವ ಪೂರ್ವಗ್ರಹಗಳನ್ನು ತೊಡೆದುಹಾಕುವ ಹಾಗೂ ಉದ್ಯೋಗಸ್ಥ ಮಹಿಳೆಯರ ಮುಟ್ಟಿನ ಸಂದರ್ಭವನ್ನು ಸ್ವಲ್ಪವಾದರೂ ಸಹನೀಯಗೊಳಿಸುವ ಸಾಧ್ಯತೆಯ ರೂಪದಲ್ಲಿ ಸರ್ಕಾರದ ನಿರ್ಧಾರವನ್ನು ನೋಡಬಹುದಾಗಿದೆ.

ಸರ್ಕಾರಿ ಉದ್ಯೋಗಿಗಳು ಸೇರಿದಂತೆ ಎಲ್ಲ ವಲಯಗಳಲ್ಲಿನ ಮಹಿಳಾ ಉದ್ಯೋಗಿಗಳನ್ನೂ ಸರ್ಕಾರ ತನ್ನ ‘ಋತುಚಕ್ರ ನೀತಿ’ಯಡಿ ತಂದಿದೆ. ಆದರೆ, ರಜಾ ನೀತಿಯನ್ನು ಜಾರಿಗೆ ತರುವಷ್ಟಕ್ಕೆ ಸರ್ಕಾರದ ಹೊಣೆಗಾರಿಕೆ ಮುಗಿಯುವುದಿಲ್ಲ. ಈ ನೀತಿ ಅನುಷ್ಠಾನಗೊಳ್ಳುವುದನ್ನು ಖಾತರಿಪಡಿಸಿಕೊಳ್ಳುವ ವ್ಯವಸ್ಥೆಯನ್ನೂ ಸರ್ಕಾರ ರೂಪಿಸಬೇಕಾಗಿದೆ. ನೌಕರರನ್ನು ಯಂತ್ರಗಳಂತೆ ನಡೆಸಿಕೊಳ್ಳುವ, ಕನಿಷ್ಠ ಸೌಲಭ್ಯಗಳನ್ನೂ ನೀಡದ ಸಂಸ್ಥೆಗಳಿವೆ. ಮಹಿಳೆಯರ ಉತ್ಪಾದನಾಶಕ್ತಿ ಹಾಗೂ ಕೆಲಸದ ಬದ್ಧತೆಯನ್ನು ಅನುಮಾನದಿಂದ ನೋಡುವವರೂ ಇದ್ದಾರೆ. ಪುರುಷಪ್ರಧಾನ ಉದ್ಯೋಗ ವಲಯಗಳಲ್ಲಿ ಮಹಿಳಾ ಉದ್ಯೋಗಿ ತನ್ನ ಹಕ್ಕಿನ ರಜೆಯನ್ನು ಪಡೆದುಕೊಳ್ಳಲು ಹಿಂಜರಿಯುವ ಪರಿಸ್ಥಿತಿ ಎದುರಾದಲ್ಲಿ ಆಶ್ಚರ್ಯವೇನೂ ಇಲ್ಲ. ಮುಟ್ಟಿನ ರಜೆಯು ಉದ್ಯೋಗದ ಸ್ಥಳದಲ್ಲಿ ಮಹಿಳೆಯರನ್ನು ತಾರತಮ್ಯದಿಂದ ನಡೆಸಿಕೊಳ್ಳಲು ಕಾರಣವಾಗಬಹುದು ಹಾಗೂ ವೃತ್ತಿಪರ ಅವಕಾಶಗಳಿಗೆ ಅಡಚಣೆ ಉಂಟುಮಾಡಬಹುದೆನ್ನುವ ವಾದಗಳೂ ಇವೆ. ಇಂಥ ಸಂದರ್ಭಗಳನ್ನು ನಿಭಾಯಿಸಲು ಸರ್ಕಾರ ಸಮರ್ಪಕ ಸಿದ್ಧತೆ ಮಾಡಿಕೊಳ್ಳದೆ ಹೋದರೆ, ಮುಟ್ಟಿನ ರಜೆ ಎನ್ನುವುದು ಸಾಂಕೇತಿಕವಾಗಿಯಷ್ಟೇ ಉಳಿದು, ಕೆಲವರಿಗಷ್ಟೇ ಸೀಮಿತವಾಗುವ ಸಾಧ್ಯತೆಯೂ ಇದೆ.

ಜಾಲತಾಣ

ಅಪಮೌಲ್ಯದ ಸರಣಿ



ಮೊದಲು ಮಹಾತ್ಮ ಗಾಂಧೀಜಿ ಅವರನ್ನು ಅಪಮೌಲ್ಯಗೊಳಿಸಲು ಪ್ರಯತ್ನಿಸಿದರು. ನಂತರ, ನೆಹರೂ ಮತ್ತವರ ಕುಟುಂಬ ಆಯ್ತು. ಈಗ ಅಂಬೇಡ್ಕರ್ ಅವರ ಮೇಲೆ ಕೈ ಹಾಕಿದ್ದಾರೆ. ಗಾಂಧಿವಾದ, ಅಂಬೇಡ್ಕರ್‌ವಾದ ಜೊತೆಯಾಗದಿದ್ದರೆ ಗೋಡ್ಸೆವಾದ ಈ ದೇಶವನ್ನು ಆಳುತ್ತದೆ ಅನ್ನುವ ಹಳೆಯ ಮಾತು ಈಗ ನಿಜವಾಗುತ್ತಿದೆ!

ಪ್ರಕಾಶ್‌ರಾಜ್ ಮೇಹು, ಚಲನಚಿತ್ರ ನಿರ್ದೇಶಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ರಾಜ್ಯ ಸರ್ಕಾರದಲ್ಲಿ ಕೂಗುಮಾರಿಗಳಿದ್ದಾರೆ. ಉಕ್ರೇನ್, ರಷ್ಯಾದ ಬಗ್ಗೆ ಪ್ರತಿಕ್ರಿಯೆ ಕೊಡುತ್ತಾರೆ. ಅಮೆರಿಕ ಅಧ್ಯಕ್ಷರ ಕುರಿತೂ ಮಾತನಾಡುತ್ತಾರೆ. ಆದರೆ, ಮೈಸೂರಿನಲ್ಲಿ ನಡೆದ ಬಾಲಕಿ ಕೊಲೆ ಪ್ರಕರಣದ ಬಗ್ಗೆ ಏಕೆ ಮಾತನಾಡಿಲ್ಲ?

ಪ್ರತಾಪ್ ಸಿಂಹ, ಮಾಜಿ ಸಂಸದ

25 ವರ್ಷಗಳ ಹಿಂದೆ

ಬುಧವಾರ, 11-10-2000

• **ಗೋಪಾಲ್ ಜತೆ ಅರಣ್ಯಕ್ಕೆ ತೆರಳಿದ ಇನ್ನೂ ಮೂವರು**

ಚೆನ್ನೈ, ಅ. 10 (ಪಿಟಿಐ)– ವರನಟ ಡಾ. ರಾಜ್‌ಕುಮಾರ್ ಅವರ ಬಿಡುಗಡೆಗಾಗಿ ನರಹಂತಕ ವೀರಪ್ಪನ್ ಜತೆಗೆ ಸಂಧಾನ ನಡೆಸಲು ನಕ್ಕೀರನ್ ಪತ್ರಿಕೆಯ ಸಂಪಾದಕ ಆರ್.ಆರ್. ಗೋಪಾಲ್ ಅವರೊಂದಿಗೆ, ತಮಿಳು ರಾಷ್ಟ್ರೀಯವಾದಿ ಚಳವಳಿ ನಾಯಕ ಪಿ. ನೆಡುಮಾರನ್ ಮತ್ತು ಇನ್ನಿಬ್ಬರು ಇಂದು ಬೆಳಿಗ್ಗೆ ಅರಣ್ಯಕ್ಕೆ ತೆರಳಿದರು.

ಕರ್ನಾಟಕ ಮತ್ತು ತಮಿಳುನಾಡು ಮುಖ್ಯಮಂತ್ರಿಗಳ ಮನವಿ ಮೇರೆಗೆ ಈ ಕಾರ್ಯಕ್ಕೆ ಮುಂದಾಗಿರುವುದಾಗಿ ಅವರು ತಿಳಿಸಿದರು.

ಇದರಿಂದಾಗಿ ಡಾ. ರಾಜ್ ಬಿಡುಗಡೆಗೆ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಈವರೆಗೆ ಅನುಸರಿಸಿದ್ದ ಕಾರ್ಯತಂತ್ರವನ್ನು ಗಣನೀಯವಾಗಿ ಬದಲಿಸಿದಂತಾಗಿದೆ.

• **ಲಂಕಾ: ಮಾಜಿ ಪ್ರಧಾನಿ ಸಿರಿಮಾವೋ ನಿಧನ**

ಕೊಲಂಬೊ, ಅ. 10 (ಪಿಟಿಐ)– ವಿಶ್ವದ ಪ್ರಥಮ ಚುನಾಯಿತ ಮಹಿಳಾ ಪ್ರಧಾನಿ ಎಂಬ ಖ್ಯಾತಿಯ ಶ್ರೀಲಂಕಾದ ಮಾಜಿ ಪ್ರಧಾನಿ ಸಿರಿಮಾವೋ ಬಂಡಾರ ನಾಯಿಕೆ (84) ಇಂದು ಬೆಳಿಗ್ಗೆ ಹೃದಯಾಘಾತದಿಂದ ಮೃತರಾದರು. ಅವರು ಮೂರು ಬಾರಿ ಪ್ರಧಾನಿಯಾಗಿದ್ದರು.

75 ವರ್ಷಗಳ ಹಿಂದೆ

ಬುಧವಾರ, 11-10-1950

• **ದಸರಾ ಪ್ರೇಕ್ಷಕರಿಗೆ ರೇಷನ್ ಸಾಧ್ಯವಿಲ್ಲ**

ಬೆಂಗಳೂರು, ಅ. 10– ದಸರಾ ನೋಡಲು ಮೈಸೂರು ನಗರಕ್ಕೆ ಬರುವವರಿಗೆ ರೇಷನ್ ಕೊಡುವುದಿಲ್ಲ ಎಂದು ಸರ್ಕಾರ ಪ್ರಕಟಿಸಿದೆ.

ಈ ಸಂಬಂಧದಲ್ಲಿ ಇಂದು ಹೊರಟ ಸರ್ಕಾರಿ ಪ್ರಕಟಣೆ, ಈ ವರ್ಷ ಸಂಸ್ಥಾನದಲ್ಲಿ ಉಂಟಾಗಿರುವ ಉತ್ಕಟ ಆಹಾರ ಪರಿಸ್ಥಿತಿ ಹಾಗೂ ಎಂದಿನ ಸಾಮಾನ್ಯ ರೇಷನ್ ಪ್ರಮಾಣ ಒದಗಿಸಲು ಕಷ್ಟವಾಗಿರುವುದರಿಂದ ಅಕ್ಟೋಬರ್ 12ರಿಂದ ಮೈಸೂರಿನಲ್ಲಿ ಆರಂಭವಾಗುವ ದಸರಾಗೆ ಬರುವವರಿಗೆ ಆಹಾರ ಧಾನ್ಯ ಒದಗಿಸಲು ಸಾಧ್ಯವೇ ಇಲ್ಲವೆಂದು ತಿಳಿಸಿದೆ.

• **ಕಾಳಸಂತೆಕೋರರನ್ನು ಬಂಧಿಸಲು ಶಾಸನ?**

ಮದರಾಸು, ಅ. 10– ಕೇಂದ್ರ ಶಾಸನದ ಮೂಲಕ ಅಥವಾ ವಿಶೇಷಾಜ್ಞೆಗಳ ಮೂಲಕ ಭಾರಿ ಕಾಳಸಂತೆಕೋರರನ್ನೂ, ಅಕ್ರಮ ದಾಸ್ತಾನುಗಾರರನ್ನೂ ಹಾಗೂ ಅಧಿಕ ಲಾಭ ಪಡೆಯುವವರನ್ನು ಬಂಧಿಸಲು ಅಧಿಕಾರ ಪ್ರಯೋಗಿಸಬೇಕೆಂದು ಭಾರತ ಸರ್ಕಾರ ಸಲಹೆ ಮಾಡಿದೆ.

ದೇಶ ವಿಭಜನೆ: ವಾಸ್ತವವೇನು?



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

> ಭಾರತ–ಪಾಕಿಸ್ತಾನ ವಿಭಜನೆಯ ಬಹಳಷ್ಟು ಗ್ರಹಿಕೆಗಳು ಭಾವುಕ ನೆಲೆಗಟ್ಟಿನಲ್ಲಿವೆಯೇ ಹೊರತು, ಇತಿಹಾಸಕ್ಕೆ ಬದ್ಧವಾಗಿಲ್ಲ. 1947ರ ಭಾರತದ ಸ್ವರೂಪ ಮತ್ತು ರಾಜಕಾರಣಕ್ಕೂ, ಇಂದಿನ ಭಾರತದ ಸ್ವರೂಪ ಮತ್ತು ರಾಜಕಾರಣಕ್ಕೂ ಇರುವ ವ್ಯತ್ಯಾಸ ತಿಳಿದಲ್ಲಿ, ವಿಭಜನೆಯನ್ನು ವಸ್ತುನಿಷ್ಠವಾಗಿ ನೋಡಲು ಸಾಧ್ಯವಾಗುತ್ತದೆ.

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಇತ್ತೀಚೆಗೆ ಒಂದು ಸುತ್ತೋಲೆ ಹೊರಡಿಸಿ, ದೇಶ ವಿಭಜನೆಯ ಭಯಾನಕತೆಯನ್ನು ಶಾಲಾ ಮಕ್ಕಳಿಗೆ ಮಾಡ್ಯೂಲ್‌ಗಳ ಮೂಲಕ ತಿಳಿಸಬೇಕು ಎಂದು ಸೂಚಿಸಿತು. ಈ ಯೋಜನೆಯನ್ನು ಜಾರಿ ಮಾಡುವಂತೆ ಶಾಲೆಗಳಿಗೆ ಆದೇಶವನ್ನು ಕಳಿಸಿದ ರಾಜ್ಯ ಯೋಜನಾ ನಿರ್ದೇಶಕರು, ನಂತರ ಆದೇಶ ಹಿಂಪಡೆದರು.

ಏಳು ಮತ್ತು ಹತ್ತನೇ ತರಗತಿಯಲ್ಲಿನ ಪಾಠಗಳಲ್ಲಿ ವಿಸ್ತೃತವಾಗಿ ದೇಶ ವಿಭಜನೆಯ ಇತಿಹಾಸವಿದೆ. ಏಳು ದಶಕಗಳಿಂದಲೂ ಇದನ್ನು ಬೋಧಿಸುತ್ತಿರುವಾಗ ವಿಶೇಷ ಕಾರ್ಯಕ್ರಮವಾಗಿ ವಿವರಿಸುವುದರ ಉದ್ದೇಶವೇನು? ದೇಶ ವಿಭಜನೆಯ ಇತಿಹಾಸದ ಒಂದು ಘಟನೆ. ಅದರ ಬಗ್ಗೆ ವಿಶೇಷ ಕಾರ್ಯಕ್ರಮ ಮಾಡಲು ಹೊರಟಾಗ ಪ್ಲಾಸಿ ಕದನ, ಪಾಣಿಪತ್ ಕದನದಿಂದ ತೊಡಗಿ ವೇದಕಾಲದ ಸಪ್ತ ಸಿಂಧೂ ಕದನದವರೆಗೂ ವಿಶೇಷ ಕಾರ್ಯಕ್ರಮಗಳನ್ನು ನಡೆಸಬೇಕಾಗುವುದಿಲ್ಲವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಮಕ್ಕಳ ಮಾನಸಿಕ ಸ್ಥಿತಿಗೆ ಗಾಸಿಯಾಗದ ಹಾಗೆ ಎಚ್ಚರ ವಹಿಸಿ ಪಾಠ ಬೋಧಿಸಬೇಕಾಗುತ್ತದೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಭಯಾನಕವಾದದ್ದನ್ನೂ ಭೀಭತ್ಸ ಎನಿಸದಂತೆ ಹೇಳಬೇಕಾಗುತ್ತದೆ. ಅದರ ಉದ್ದೇಶ, ಮಕ್ಕಳ ಮಾನಸಿಕ ಬೆಳವಣಿಗೆಯ ಮಟ್ಟಕ್ಕೆ ಅಷ್ಟು ಭೀಭತ್ಸ ಆಗಿರುವುದನ್ನು ತಡೆದುಕೊಳ್ಳುವ ಶಕ್ತಿ ಇರುವುದಿಲ್ಲ ಎನ್ನುವುದೇ ಹೊರತು ಸುಳ್ಳನ್ನು ಹೇಳಬೇಕು ಎನ್ನುವುದಲ್ಲ. ಅಂತಹದ್ದರಲ್ಲಿ ಎನ್‌ಸಿಇಆರ್‌ಟಿ ‘ಭಯಾನಕತೆಯ ಅರಿವು ಮೂಡಿಸುವುದು’ ಎಂಬ ಪರಿಕಲ್ಪನೆಯನ್ನು ಕೊಟ್ಟಿರುವುದು ಶೈಕ್ಷಣಿಕ ಮನೋವಿಜ್ಞಾನದ ಹಿನ್ನೆಲೆಯಲ್ಲಿ ಸಮಂಜಸವಲ್ಲ. ಇದಿಷ್ಟು ಶೈಕ್ಷಣಿಕ ಸಂಗತಿಗಳಾದರೆ, ದೇಶ ವಿಭಜನೆಯನ್ನು ಬಹುತೇಕರು ಅರ್ಥ ಮಾಡಿಕೊಂಡಿರುವುದರಲ್ಲಿ ಸಾಕಷ್ಟು ದೋಷವಿದೆ.

ದೇಶ ವಿಭಜನೆ ಎಂದಾಕ್ಷಣ ಇಂದಿನ ಭಾರತದ ನಕಾಶೆ, ಪಾಕಿಸ್ತಾನದ ನಕಾಶೆ, ಬಾಂಗ್ಲಾದ ನಕಾಶೆಗಳೆಲ್ಲವೂ ಒಂದೇ ನಕಾಶೆಯಾಗಿತ್ತು, ಅದನ್ನು ಪಶ್ಚಿಮ ಪಾಕಿಸ್ತಾನ ಮತ್ತು ಪೂರ್ವ ಪಾಕಿಸ್ತಾನವೆಂದು ವಿಭಜಿಸಲಾಯಿತು ಎಂಬರ್ಥದಲ್ಲಿ ಕಲ್ಪಿಸಿಕೊಳ್ಳಲಾಗುತ್ತದೆ. ವಾಸ್ತವದಲ್ಲದು ಹಾಗಿರಲಿಲ್ಲ.

ಇವತ್ತಿನ ಭಾರತ 1947ರ ಭಾರತ ಆಗಿರಲಿಲ್ಲ. ಆಗ ಬ್ರಿಟಿಷರ ಅಧೀನದಲ್ಲಿ 17 ಪ್ರಾಂತ್ಯಗಳಿದ್ದವು. ಯುನೈಟೆಡ್ ಪ್ರಾವಿನ್ಸಸ್, ಸಿಂಧ್, ಪಂಜಾಬ್, ಪಂತ್–ಪಿಪ್ಲೋಡ, ಒರಿಸ್ಸಾ, ವಾಯವ್ಯ ಗಡಿ ಪ್ರಾಂತ್ಯ, ಮದ್ರಾಸ್, ಡೆಲ್ಲಿ, ಕೊಡಗು, ಸೆಂಟ್ರಲ್ ಪ್ರಾವಿನ್ಸ್ ಮತ್ತು ಬಿರಾರ್, ಬೊಂಬಾಯಿ, ಬಿಹಾರ, ಬಂಗಾಳ, ಬಲೂಚಿಸ್ಥಾನ, ಅಸ್ಸಾಂ, ಅಂಡಮಾನ್ ನಿಕೋಬಾರ್, ಅಜ್ಮೀರ್–ಮೇರ್ವಾರ, ಇವೇ ಆ ಹದಿನೇಳು ಪ್ರಾಂತ್ಯಗಳು. 1947ರ ಭಾರತ ಸ್ವಾತಂತ್ರ್ಯ ಶಾಸನವು ಸ್ವಾತಂತ್ರ್ಯದ ಘೋಷಣೆ ಮಾಡಿದ್ದು ಮತ್ತು ಭಾರತ–ಪಾಕಿಸ್ತಾನವೆಂಬ ರಾಷ್ಟ್ರಗಳನ್ನು ಸೃಷ್ಟಿಸಿದ್ದು ಈ ಪ್ರಾಂತ್ಯಗಳಿಗೆ ಮಾತ್ರ. ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆಗೆ 1947ರ ಸ್ವಾತಂತ್ರ್ಯದ ಶಾಸನದ ಪ್ರಕಾರ ಸ್ವಾತಂತ್ರ್ಯ ಬಂದಿತ್ತು. ಏಕೆಂದರೆ, ಅದು ಬ್ರಿಟಿಷರ ಮದ್ರಾಸ್ ಪ್ರಾಂತ್ಯದಲ್ಲಿತ್ತು. ಆದರೆ, ಸಕಲೇಶಪುರಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ. ಏಕೆಂದರೆ, ಅದು ಬ್ರಿಟಿಷರ ಅಧೀನದಲ್ಲಿ ಇರಲಿಲ್ಲ. ತಮ್ಮ ಅಧಿಕಾರವೇ ಇಲ್ಲದ ಸ್ಥಳಕ್ಕೆ ಬ್ರಿಟಿಷರು ಸ್ವಾತಂತ್ರ್ಯ ಘೋಷಿಸಲು ಸಾಧ್ಯವಿರಲಿಲ್ಲ. ಸಕಲೇಶಪುರವು ಮೈಸೂರಿನ ಮಹಾರಾಜರ ಅಧೀನದಲ್ಲಿತ್ತು.


1947ರಲ್ಲಿ ಅಸ್ತಿತ್ವದಲ್ಲಿದ್ದ ಸುಮಾರು 565 ಮಹಾರಾಜರುಗಳ ರಾಜ್ಯಕ್ಕೂ ಬ್ರಿಟಿಷರಿಗೂ ಇದ್ದ ಸಂಬಂಧವನ್ನು ಅರ್ಥ ಮಾಡಿಕೊಳ್ಳಬೇಕು. ಸಂವಿಧಾನದ ಕಾರಣದಿಂದಾಗಿ ಕೊಂಚ ವ್ಯತ್ಯಾಸವಿದೆ ಎಂಬುದನ್ನು ಬಿಟ್ಟರೆ ಪ್ರಸ್ತುತ ರಾಜ್ಯ ಸರ್ಕಾರಕ್ಕೂ ಕೇಂದ್ರ ಸರ್ಕಾರಕ್ಕೂ ಇರುವ ಸಂಬಂಧಕ್ಕೂ, ಬ್ರಿಟಿಷರಿಗೂ ದೇಶೀಯ ರಾಜರುಗಳಿಗೂ ಇದ್ದ ಸಂಬಂಧಕ್ಕೂ ಹೋಲಿಕೆ ಇದೆ. ಪ್ರಸ್ತುತ ರಾಜ್ಯ ಸರ್ಕಾರಗಳು ಸ್ವತಂತ್ರ ಅಧಿಕಾರ ಹೊಂದಿವೆ. ಆದರೆ, ಪರಮಾಧಿಕಾರ ಇಲ್ಲ. ಪರಮಾಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ. 1947ರ ಕಾಲದಲ್ಲಿ ರಾಜರು ಸ್ವತಂತ್ರ ಅಧಿಕಾರವನ್ನೇ ಹೊಂದಿದ್ದರೂ, ಯುದ್ಧ ಘೋಷಿಸುವ– ಶಾಂತಿ ಒಪ್ಪಂದದ ಪರಮಾಧಿಕಾರ ಇದ್ದದ್ದು ಬ್ರಿಟಿಷ್ ಸರ್ಕಾರಕ್ಕೆ ಮಾತ್ರ. 1947ರ ಈ ಸ್ಥಿತಿಗೆ ಕಾರಣವಾಗಿರುವುದ್ದುದು ಸಹಾಯಕ ಸೈನ್ಯ ಪದ್ಧತಿ. ಇದನ್ನು ಸ್ವೀಕರಿಸಿದ ದೇಶೀಯ ರಾಜರುಗಳಿಗೆ ಯಾರೊಂದಿಗೂ ಯುದ್ಧ ಘೋಷಿಸುವ ಮತ್ತು ಶಾಂತಿ ಒಪ್ಪಂದ ಮಾಡಿಕೊಳ್ಳುವ ಅಧಿಕಾರ ಇರಲಿಲ್ಲ. ಆದರೆ, ಆ ರಾಜರುಗಳ ರಕ್ಷಣೆ ಬ್ರಿಟಿಷರ ಜವಾಬ್ದಾರಿಯಾಗಿತ್ತು. ಇದೇ ನೀತಿ ಕಾಲಾನುಕ್ರಮದಲ್ಲಿ ಬ್ರಿಟಿಷರಿಗೆ ಕೆಲವು ವಿಷಯಗಳಲ್ಲಿ ತುಸು ಜಾಸ್ತಿ ಅಧಿಕಾರವಾಗಿ ವಿಸ್ತರಿಸಲ್ಪಟ್ಟು 1947ರವರೆಗೂ ಮುಂದುವರಿದಿತ್ತು.

1947ರ ಭಾರತ ಸ್ವಾತಂತ್ರ್ಯಶಾಸನ ಜಾರಿಯಾಗುವ ಕಾಲಕ್ಕೆ ಬ್ರಿಟಿಷರು ಸಾಮ್ರಾಟರಂತಿದ್ದರೆ, 565 ರಾಜರುಗಳು ಕಪ್ಪ ಕೊಡುವ ರಾಜರಂತಿದ್ದರು ಎಂದು ಭಾವಿಸಿಕೊಳ್ಳಬಹುದು. ಸ್ವಾತಂತ್ರ್ಯ ಶಾಸನವು ಜಾರಿಯಾದಾಕ್ಷಣ ಬ್ರಿಟಿಷ್ ಚಕ್ರವರ್ತಿ 6ನೇ ಜಾರ್ಜ್‌ಗೆ ಭಾರತದ ಮೇಲಿರುವ ಪರಮಾಧಿಕಾರವೂ ರದ್ದಾಗುತ್ತದೆ ಎನ್ನುವುದು ಶಾಸನದ ಒಂದು ನಿಯಮವಾಗಿತ್ತು. ಬ್ರಿಟಿಷರ ಅಧಿಕಾರವೇ ರದ್ದಾದಾಗ ಅವರೊಂದಿಗೆ 565 ರಾಜರು ಮಾಡಿಕೊಂಡ ಯಾವ ಒಪ್ಪಂದವೂ ಊರ್ಜಿತದಲ್ಲಿರುವುದಿಲ್ಲ. ಆಗ ಆ ರಾಜರುಗಳ ವ್ಯವಸ್ಥೆ ಏನು? ಅದಕ್ಕೂ 1947ರ ಸ್ವಾತಂತ್ರ್ಯ ಶಾಸನದಲ್ಲೇ ಬ್ರಿಟಿಷರು ವ್ಯವಸ್ಥೆ ಮಾಡಿದ್ದರು. 567 ರಾಜರುಗಳು ಬ್ರಿಟಿಷರು ಸ್ವತಂತ್ರಗೊಳಿಸಿದ ಅವರ ಅಧೀನದ ಪ್ರಾಂತ್ಯ ಆಡಳಿತದೊಂದಿಗೆ ವಿಲೀನಗೊಳ್ಳಬಹುದಿತ್ತು ಅಥವಾ ಸ್ವತಂತ್ರರಾಗಿ ಇರಬಹುದಾಗಿತ್ತು. ವಿಲೀನಗೊಳ್ಳಲೇಬೇಕು ಎನ್ನುವ ಷರತ್ತಿರಲಿಲ್ಲ. ಆಗ ದೇಶ ವಿಭಜನೆ ಆಗದೆ ಇದ್ದರೆ, ಈಗ ಪಾಕಿಸ್ತಾನವಾಗಿರುವ ಭಾಗದಲ್ಲಿದ್ದ ರಾಜರುಗಳು ಭಾರತದೊಂದಿಗೆ ವಿಲೀನ ಆಗುತ್ತಿದ್ದರು ಎಂದು ಊಹಿಸಲು ಬರುವುದಿಲ್ಲ. ಧರ್ಮದ ಆಧಾರದಲ್ಲಿ ವಿಭಜನೆಯಾದ ನಂತರವೂ ಕಾಶ್ಮೀರದ ಹರಿಸಿಂಗ್ ಅವರೇ ಭಾರತದೊಂದಿಗೆ ವಿಲೀನಗೊಳ್ಳಲು ಒಪ್ಪದೆ, ಸ್ವತಂತ್ರ ಪರಮಾಧಿಕಾರಿಯಾಗಿರುತ್ತೇನೆ ಎಂಬ ನಿರ್ಧಾರವನ್ನೇ ತೆಗೆದುಕೊಂಡಿದ್ದರು ಎಂದಮೇಲೆ, ಈಗಿನ ಪಾಕಿಸ್ತಾನದಲ್ಲಿದ್ದ ನವಾಬರುಗಳೆಲ್ಲ ಭಾರತದೊಂದಿಗೆ ವಿಲೀನಗೊಳ್ಳುವ ಸಾಧ್ಯತೆ ವಿರಳವಿತ್ತು.

1947ರಲ್ಲಿ ಪಾಂಡಿಚೇರಿ, ಕರೈಕಲ್, ಮಾಹೆ, ಯಾನಂ, ಚಂದ್ರನಗರಗಳು ಫ್ರೆಂಚರ ಅಧೀನದಲ್ಲೂ, ಗೋವಾ, ಡಾಮನ್, ಡಿಯು, ನಗರ ಹವೇಲಿ, ದಾದ್ರಾಗಳು ಪೋರ್ಚುಗೀಸರ ಅಧೀನದಲ್ಲೂ ಇದ್ದವು. ಫ್ರೆಂಚ್ ಮತ್ತು ಪೋರ್ಚುಗೀಸ್ ಪ್ರಾಂತ್ಯಗಳು ಆಯಾ ಸರ್ಕಾರಗಳ ಪರಮಾಧಿಕಾರವನ್ನೇ ಹೊಂದಿದ್ದು, ‘ನೀವು ಈ ರೀತಿ ಮಾಡಬಹುದು’ ಎಂದು ಸೂಚಿಸುವ ಅಧಿಕಾರವೂ ಬ್ರಿಟಿಷರಿಗೆ ಇರಲಿಲ್ಲ. ಪೋರ್ಚುಗೀಸರ ಪ್ರಾಂತ್ಯವನ್ನು ಯುದ್ಧದ ಮುಖಾಂತರ ಸ್ವತಂತ್ರಗೊಳಿಸಲಾಗಿತ್ತು. ಫ್ರೆಂಚರೊಂದಿಗೆ ಜನಮತ ಗಣನೆಯಾಗಿ ಅದು ಸ್ವತಂತ್ರವಾಯಿತು. ಇಷ್ಟಾದ ನಂತರ ‘ಭಾರತ’ ಎನ್ನುವ ಈಗಿನ ನಕಾಶೆ ರೂಪುಗೊಂಡಿದೆ. ಹಾಗಿರುವಾಗ ಈಗಿನ ಭಾರತದ ನಕಾಶೆ ಮತ್ತು ಪಾಕಿಸ್ತಾನ, ಬಾಂಗ್ಲಾ ದೇಶದ ನಕಾಶೆಗಳ ಗಡಿರೇಖೆಗಳನ್ನು ಕಲ್ಪಿಸಿಕೊಂಡು ದೇಶ ವಿಭಜನೆಯನ್ನು ಅರ್ಥ ಮಾಡಿಕೊಳ್ಳುವುದು ಸಮರ್ಪಕ ಗ್ರಹಿಕೆಯಾಗುವುದಿಲ್ಲ.

ಈಗ, 1947ರಲ್ಲಿ ಸಾಧ್ಯವಾಗಿರದ ದೇಶ ವಿಭಜನೆಯ ಕುರಿತ ಅನೇಕ ಒಳನೋಟಗಳ ಅಧ್ಯಯನ ನಡೆದಿದೆ. ಅಂತರರಾಷ್ಟ್ರೀಯ ತಂತ್ರಗಳನ್ನೂ ಅರ್ಥ ಮಾಡಿಸಿವೆ. ದೇಶ ವಿಭಜನೆಯಾಗದೆ ಸಮಸ್ಯೆಯನ್ನು ಇತ್ಯರ್ಥಪಡಿಸಲು ವೈಸರಾಯ್ ವವೆಲ್ ಒಂದು ಪ್ರಸ್ತಾಪವನ್ನು ಗಾಂಧಿ, ನೆಹರೂ, ಪಟೇಲ್ ಮುಂದೆ ಇರಿಸಿದ್ದರು. ಪೂರ್ವ ಪಾಕಿಸ್ತಾನ ಮತ್ತು ಪಶ್ಚಿಮ ಪಾಕಿಸ್ತಾನದ ಬ್ರಿಟಿಷ್ ಪ್ರದೇಶಗಳನ್ನು ಮುಸ್ಲಿಂ ಲೀಗ್ ಕೈಗೂ, ಇತರ ಭಾಗಗಳ ಬ್ರಿಟಿಷ್ ಪ್ರಾಂತ್ಯಗಳನ್ನು ಕಾಂಗ್ರೆಸ್ ಕೈಗೂ ಕೊಟ್ಟು ಎಲ್ಲರಿಗಾಗಿ ಒಂದೇ ಸಂಸತ್ತನ್ನು ರೂಪಿಸಿ, ಮುಸ್ಲಿಂ ಲೀಗಿಗೆ ವಿಟೊ ಅಧಿಕಾರವನ್ನು ಕೊಡುವುದು ವವೆಲ್ ಯೋಜನೆಯಾಗಿತ್ತು. ಈ ಯೋಜನೆ ಜಾರಿಗೆ ಬಂದಿದ್ದರೆ ಸಂಸತ್ತಿನ ಸರ್ವಾನುಮತದ ನಿರ್ಣಯವನ್ನು ಮುಸ್ಲಿಂ ಲೀಗಿನ ಒಬ್ಬ ಸದಸ್ಯ ರದ್ದುಪಡಿಸಬಹುದಾಗಿತ್ತು. ಇದನ್ನು ಕೇಳಿ ಗಾಂಧಿ, ‘ನಮ್ಮ ವೈಸರಾಯರಿಗೆ ಒಬ್ಬ ಕಾನೂನು ಸಲಹೆದಾರನ ಅಗತ್ಯವಿದೆ. ಕಳಿಸಿಕೊಡಿ’ ಎಂದು ಬ್ರಿಟಿಷ್ ಪ್ರಧಾನಿಗೆ ಟೆಲಿಗ್ರಾಂ ಕಳಿಸಿದ್ದರು. ನೆಹರೂ ಇಂಗ್ಲೆಂಡಿಗೆ ಹೋಗಿ ಮೌಂಟ್ ಬ್ಯಾಟನ್ ಅವರನ್ನು ವೈಸರಾಯ್ ಆಗಿ ಹಾಕಿಸಿಕೊಂಡು ಬಂದಿದ್ದರು. ಅದೇ ಸಮಯಕ್ಕೆ ಲಂಡನ್‌ಗೆ ಹೋದ ಮಹಮದಾಲಿ ಜಿನ್ನಾ ಅಲ್ಲಿನ ವಿರೋಧ ಪಕ್ಷದ ನಾಯಕ ಚರ್ಚಿಲ್ ಅವರನ್ನು ಭೇಟಿಯಾಗಿದ್ದರು. ಚರ್ಚಿಲ್ ಜಿನ್ನಾ ಪರ ಇದ್ದರು. ಚರ್ಚಿಲ್ ಪ್ರಧಾನಿಯಾಗಿದ್ದಾಗ ವೈಸರಾಯ್ ವವೆಲ್‌ರೊಂದಿಗೆ ಭಾರತ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ಗೋಪ್ಯ ಸಭೆ ನಡೆಸಿದ್ದರು. ಅದೇ ಸಮಯದಲ್ಲಿ ಅಮೆರಿಕದ ಅಧ್ಯಕ್ಷ ಟ್ರೂಮನ್ ಭಾರತ ಸ್ವಾತಂತ್ರ್ಯದ ಪ್ರಸ್ತಾಪ ಮಾಡಿದ್ದಾಗ ಚರ್ಚಿಲ್, ‘ನಮಗೆ ಅಭ್ಯಂತರವಿಲ್ಲ. ಆದರೆ, ಹಿಂದೂ– ಮುಸ್ಲಿಮರ ಸಮಸ್ಯೆಗಳಿದ್ದು ಅದಕ್ಕೆ ವಿಲೇವಾರಿ ಆಗಬೇಕು’ ಎಂದು ಉತ್ತರಿಸಿದ್ದರು. ದೇಶ ವಿಭಜನೆಯಾಗದಂತೆ ಚರ್ಚಿಸಲು ಸಿಮ್ಲಾ ಸಭೆ ನಡೆಯುವ ಹಿಂದಿನ ದಿವಸ ಬ್ರಿಟಿಷ್ ಅಧಿಕಾರಿಗಳು ಜಿನ್ನಾ ಬಳಿ, ‘ಎಷ್ಟು ಮಾತ್ರಕ್ಕೂ ಗಾಂಧಿಯವರ ಮಾತಿಗೆ ಒಪ್ಪಬೇಡಿ. ಪಾಕಿಸ್ತಾನವನ್ನು ಮಾಡಿಕೊಡುವ’ ಎಂದುದರ ಅಧ್ಯಯನ ವರದಿಗಳಿವೆ.

ನಿಜವಾಗಿ, ದೇಶ ವಿಭಜನೆ ಬ್ರಿಟಿಷರು ಮಾಡಿದ ಪರಿಸ್ಥಿತಿಯಾಗಿತ್ತು. ವಿಭಜನೆ ಯಾಕಾಯಿತು, ದೇಶೀಯ ರಾಜರು ವಿಲೀನಗೊಳ್ಳತಕ್ಕದ್ದು ಎಂದು ಶಾಸನ ಮಾಡಬಹುದಾಗಿದ್ದರೂ, ಅದನ್ನು ಮಾಡದೆ ದೇಶೀಯ ರಾಜರು ಸ್ವತಂತ್ರವಾಗಿ ಬೇಕಾದರೂ ಇರಬಹುದುದು ಎಂಬ ಷರತ್ತನ್ನು ಸ್ವಾತಂತ್ರ್ಯ ಶಾಸನದಲ್ಲಿ ಹಾಕಿದ್ದೇಕೆ ಎಂದೆಲ್ಲ ಅರ್ಥ ಮಾಡಿಕೊಳ್ಳದೆ ಔಪಚಾರಿಕ ಶಿಕ್ಷಣದೊಳಗೆಯೇ ದೇಶ ವಿಭಜನೆಯನ್ನು ಭಯಾನಕವಾಗಿ ಕಾಣಿಸುವುದು ಸಮಂಜಸ ಆಗಲಾರದು.



ವಾಚಕರ ವಾಣಿ

ವಿದೇಶಗಳಲ್ಲಿ ನೌಕರಿ: ಎಚ್ಚರಿಕೆ ಇರಲಿ

ಇಸ್ರೇಲ್‌ನ ಮಂತ್ರಿಮಂಡಲವು ಡೊನಾಲ್ಡ್ ಟ್ರಂಪ್ ಸೂಚಿತ ಶಾಂತಿ ಸೂತ್ರಕ್ಕೆ ಒಪ್ಪಿಗೆ ನೀಡಿದೆ. ಆ ಮೂಲಕ ಎರಡು ವರ್ಷಗಳಿಂದ ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ‘ಸಮರ’ ಕೊನೆಗೊಳ್ಳುವ ಆಶಾಭಾವ ಮೂಡಿದೆ. ಕರ್ನಾಟಕದಿಂದ ಹಲವಾರು ಉದ್ಯೋಗಾಕಾಂಕ್ಷಿಗಳು ಇಸ್ರೇಲ್‌ಗೆ ಹೋಗಬಯಸಿ ಕಾಯುತ್ತಿದ್ದಾರೆಂಬ ಮಾಹಿತಿಯಿದೆ. ಅಮೆರಿಕ, ಕೆನಡಾ, ಇಂಗ್ಲೆಂಡ್‌ನಲ್ಲಿ ಭಾರತೀಯರಿಗೆ ಈಗ ಪ್ರತಿಕೂಲ ಪರಿಸ್ಥಿತಿಯಿದೆ. ಇಸ್ರೇಲ್‌ಗೆ ಹೋಗಬಯಸುವವರ ವಿಷಯದಲ್ಲಿ ಕೇಂದ್ರ ಸರ್ಕಾರವಷ್ಟೇ ಅಲ್ಲ, ರಾಜ್ಯ ಸರ್ಕಾರವೂ ಕೆಲವು ಎಚ್ಚರಿಕೆಯ ಕ್ರಮಗಳನ್ನು ಸಮನ್ವಯದಿಂದ ಕೈಗೊಳ್ಳಬೇಕಿದೆ. ಯುದ್ಧ ಅಥವಾ ಆಂತರಿಕ ಸಂಘರ್ಷ ಇರುವ ದೇಶಗಳಲ್ಲಿ ಭಾರತೀಯರು ತೊಂದರೆಗೆ ಸಿಲುಕಿದಾಗ, ಅವರನ್ನು ವಾಪಸು ಕರೆತರಲು ಪಟ್ಟ ಶ್ರಮ ನೆನಪಿನಲ್ಲಿ ಇರಲಿ.

ಎಚ್.ಎಸ್. ಮಂಜುನಾಥ, ಗೌರಿಬಿದನೂರು

ಜೀವಪರ ಆಲೋಚನೆಗಳು ಹೆಚ್ಚಾಗಲಿ

ಹಗಲಿರುಳು ಕುಟುಂಬಕ್ಕಾಗಿ ಸಮಯ ಮೀಸಲಿಡುವ ಮಹಿಳಾ ಉದ್ಯೋಗಿಗಳ ಆರೋಗ್ಯದ ದೃಷ್ಟಿಯಿಂದ ‘ಒಂದು ದಿನದ ವೇತನಸಹಿತ ಋತುಚಕ್ರ ರಜೆ’ ಘೋಷಿಸಲಾಗಿದೆ. ಇದು ಜೀವಪರ ಮತ್ತು ಮಾನವೀಯ ಆಲೋಚನೆ ಎಂದು ಹೇಳಬಹುದು. ಸರ್ಕಾರದ ಈ ತೀರ್ಮಾನಕ್ಕೆ ರಾಜ್ಯದ ಎಲ್ಲ ಉದ್ಯೋಗಸ್ಥ ಮಹಿಳೆಯರ ಪರವಾಗಿ ಅನಂತ ಧನ್ಯವಾದಗಳು. ಋತುಚಕ್ರದ ಅವಧಿಯಲ್ಲಿ ಮಹಿಳೆ ಮಾನಸಿಕ ಮತ್ತು ಶಾರೀರಿಕ ಬದಲಾವಣೆಯ ಸಂಕಷ್ಟಕ್ಕೆ ಒಳಗಾಗುತ್ತಾಳೆ. ಆದರೆ, ಮುಟ್ಟಿನ ಸಮಯದಲ್ಲಿ ರಜೆ ತೆಗೆದುಕೊಳ್ಳುವುದು ಎಲ್ಲಾ ಉದ್ಯೋಗಸ್ಥ ಮಹಿಳೆಯರಿಗೂ ಸುಲಭವಾಗಿರಲಿಲ್ಲ. ಸರ್ಕಾರ ಇಂತಹ ಸಮಯದಲ್ಲಿ ‘ರಜೆ ನಮ್ಮ ಹಕ್ಕು’ ಎಂದು ಘೋಷಿಸಿದೆ. ಸರ್ಕಾರದ ಜೀವಪರ ಆಲೋಚನೆಗಳು ಮತ್ತು ಮಹಿಳಾಪರ ಯೋಜನೆಗಳು ಇನ್ನೂ ಹೆಚ್ಚಾಗಲಿ.

ನಿರ್ಮಲ ನಾಗೇಶ್, ಕಲಬುರಗಿ

> **ಬಂಗಾರ**
>
> ಲಂಗಿಲ್ಲ-ಲಗಾಮಿಲ್ಲ
> ಏರುತ್ತಲೇ ಇದೆ
> ಬಂಗಾರದ ರೇಟು
> ಅಷ್ಟಕ್ಕೆ ಇಷ್ಟಾದರೂ
> ಕೊಡಿಸಿದರಷ್ಟೇ ಹೆಂಗಸರ
> ಪಾಲಿಗೆ ಗಂಡಸರು ಸ್ವೀಟು!
>
> **ಆರ್. ನಾಗರಾಜ್,** ಗೊರೂರು

ಅಧಿಕಾರ ದಾಹ ಮತ್ತು ಧರ್ಮ ಸಂಘರ್ಷ

ಸಂವಿಧಾನದ ಬಲದಿಂದ ನಾವು ದೇಶದಲ್ಲಿ ಜಾತಿ ನಿರ್ಮೂಲನೆಯ ಅಂಚಿನಲ್ಲಿದ್ದೇವೆಂದು ಭಾವಿಸಿದ್ದೆವು. ಆದರೆ, ಈಗ ಅಧಿಕಾರದ ದಾಹದಿಂದಾಗಿ ರಾಜಕೀಯ ಪಕ್ಷಗಳು ಧರ್ಮದ ಹೆಸರಿನಡಿ ಜನರ ನಡುವೆ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸುತ್ತಿವೆ. ಇದು ಹೀಗೆಯೇ ಮುಂದುವರಿದರೆ, ದೇಶದಲ್ಲಿ ಧರ್ಮ ಧರ್ಮಗಳ ನಡುವೆ ಘೋರ ಸಂಘರ್ಷಕ್ಕೆ ಕಾರಣ ಆಗಬಹುದು. ರಾಜಕೀಯ ನೇತಾರರು ದ್ವೇಷ ಬದಿಗಿಟ್ಟು ಶಾಂತಿ, ಸಮಾನತೆಗಾಗಿ ಶ್ರಮಿಸಿದರಷ್ಟೇ ದೇಶದ ಅಭಿವೃದ್ಧಿ ಸಾಧ್ಯ.

ಆಂಜನೇಯ ಯರಮರಸ್, ರಾಯಚೂರು

ಮೃಗೀಯ ನಡವಳಿಕೆಗೆ ತಕ್ಕ ಶಿಕ್ಷೆ ಆಗಲಿ

ದಾಂಪತ್ಯ ಕಲಹದಿಂದಾಗಿ ಗಾಢನಿದ್ದೆಯಲ್ಲಿದ್ದ ಪತಿಯ ಮೇಲೆ ಪತ್ನಿಯು ಕುದಿಯುತ್ತಿದ್ದ ಎಣ್ಣೆ ಸುರಿದ ಸುದ್ದಿ ಓದಿ ನೋವಾಯಿತು. ನರಕದಲ್ಲಿ ಪಾಪಿಗಳಿಗೆ ಕಾದ ಎಣ್ಣೆ ಕಡಾಯಿಗಳಲ್ಲಿ ಮುಳುಗಿಸುವ ಶಿಕ್ಷೆ ನೀಡುತ್ತಾರೆಂದು ಕಥೆಗಳಲ್ಲಿ ಓದಿದ್ದು ನೆನಪಿಗೆ ಬಂತು. ಸಂತ್ರಸ್ತ ವ್ಯಕ್ತಿ ಆ ಕ್ಷಣದಲ್ಲಿ ಎಷ್ಟೊಂದು ಘೋರ ನೋವು ಅನುಭವಿಸಿರಬಹುದೆನ್ನುವ ಕಲ್ಪನೆಯಿಂದಲೇ ಮನಸ್ಸಿಗೆ ತುಂಬಾ ಬೇಸರವಾಯಿತು. ಮಾರಣಾಂತಿಕ ಹಿಂಸೆ ಅತ್ಯಂತ ಘೋರ. ಅಂತಹ ಉಗ್ರ ಶಿಕ್ಷೆ ನೀಡಿದ ಪತ್ನಿಗೆ ಕಾನೂನುರೀತ್ಯ ಶಿಕ್ಷೆ ವಿಧಿಸಬೇಕಿದೆ. ಮಾನವನಲ್ಲಿ ಎಂತಹ ಕ್ರೌರ್ಯ, ಮೃಗೀಯತೆ ಅಡಗಿದೆ ಎನ್ನುವುದಕ್ಕೆ ಈ ಘಟನೆ ನಿದರ್ಶನ.

ಎಲ್. ಚಿನ್ನಪ್ಪ, ಬೆಂಗಳೂರು

ಅರ್ಹರಿಗೆ ಸಂದ ನೊಬೆಲ್ ಶಾಂತಿ ಪ್ರಶಸ್ತಿ

ವೆನಿಜುವೆಲಾದ ರಾಜಕಾರಣಿ ಮಾರಿಯಾ ಕೊರಿನಾ ಮಚಾದೊ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಸಂದಿದೆ. ನೊಬೆಲ್ ಶಾಂತಿ ಪ್ರಶಸ್ತಿಗಾಗಿ ಹಪಹಪಿಸುತ್ತಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಭಾರಿ ನಿರಾಸೆಯಾಗಿರುವುದು ದಿಟ.

ಎಂ. ಪರಮೇಶ್ವರ, ಹಿರಿಯೂರು

ದಪ್ಪ ಚರ್ಮದ ಬಂದಿಖಾನೆ ಇಲಾಖೆ

ನಟ ದರ್ಶನ್ ಪ್ರಕರಣದಲ್ಲಿ, ಸುಪ್ರೀಂ ಕೋರ್ಟ್ ವಿಚಾರಣಾಧೀನ ಕೈದಿಗಳಿಗೆ ಜೈಲಿನ ನಿಯಮಾನುಸಾರ ಕನಿಷ್ಠ ಸೌಲಭ್ಯಗಳನ್ನಷ್ಟೇ ನೀಡಬೇಕು. ಹೆಚ್ಚಿನ ಸೌಲಭ್ಯ ನೀಡಿದರೆ ಸಂಬಂಧಿಸಿದ ಅಧಿಕಾರಿಗಳೇ ನೇರ ಹೊಣೆಗಾರರೆಂದು ಎಚ್ಚರಿಕೆ ನೀಡಿತ್ತು. ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ರಾಜ್ಯಗಳ ಕಾರಾಗೃಹಗಳಿಗೆ ಸುತ್ತೋಲೆ ಕಳುಹಿಸಲು ನಿರ್ದೇಶಿಸಿತ್ತು. ಈ ಆದೇಶದ ನಡುವೆಯೂ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ರೌಡಿಶೀಟರ್ ಹಾಗೂ ಆತನ ಸಹಚರರು ಹುಟ್ಟುಹಬ್ಬ ಆಚರಿಸಿಕೊಂಡಿರುವುದು ವರದಿಯಾಗಿದೆ. ಇದು ನ್ಯಾಯಾಲಯ ಆದೇಶದ ಸ್ಪಷ್ಟ ಉಲ್ಲಂಘನೆ. ಜೈಲಿನ ಅಧಿಕಾರಿಗಳಿಗೆ, ಅಲ್ಲಿನ ವ್ಯವಸ್ಥೆ ಬಗ್ಗೆ ಸುಪ್ರೀಂ ಕೋರ್ಟ್ ಚಾಟಿ ಬೀಸಿದ ನಂತರವೂ ರಾಜ್ಯ ಬಂದೀಖಾನೆ ಇಲಾಖೆಯು ಮೈಮರೆತಿರುವುದು ಸೋಜಿಗ.


ಚಂದ್ರಕುಮಾರ್ ಡಿ., ಬೆಂಗಳೂರು

ಹೀಗೊಂದು ಆಸೆ ಈಡೇರುವುದೇ?

ನನಗೊಂದು ಆಸೆ ಇದೆ. ಒಂದು ಸಲವಾದರೂ ಬೆಂಗಳೂರಿನಲ್ಲಿ, ನಿಲುಗಡೆ ಸ್ಥಳದಲ್ಲಿಯೇ ನಿಂತ ಬಿಎಂಟಿಸಿ ಬಸ್ ಹತ್ತಿ, ಸೀಟು ದೊರಕಿಸಿಕೊಂಡು, ನಿರ್ವಾಹಕನಿಂದ ತಕರಾರಿಲ್ಲದೆ ಅಗತ್ಯ ಚಿಲ್ಲರೆ ಪಡೆದುಕೊಂಡು, ಗುಂಡಿಗಳಿಲ್ಲದ ರಸ್ತೆಯಲ್ಲಿ ಪ್ರಯಾಣಿಸಿ, ರಸ್ತೆಯ ಮಧ್ಯೆಯೋ ಇನ್ನೆಲ್ಲೋ ಅಲ್ಲದೆ ನಿಲುಗಡೆ ಸ್ಥಳದಲ್ಲೇ ಇಳಿಯಬೇಕು ಎಂಬುದೇ ಆ ಆಸೆ. ಇಂಥ ಭಾರಿ ಆಸೆಯನ್ನು ಬಹುಶಃ ಆ ಭಗವಂತನೂ ಈಡೇರಿಸಲಾರನೇನೋ!

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಚುರುಮುರಿ



ನಗೋ ನೊಬೆಲ್!

• ತುರುವೇಕೆರೆ ಪ್ರಸಾದ್

‘ಲೇಯ್’, ಒಂದೊಂದಾಗಿ ನೊಬೆಲ್ ಪ್ರಶಸ್ತಿಗಳು ಬತ್ತಾ ಅವೆ ಕಣ್ರಲಾ’ ಎಂದ ಗುದ್ಲಿಂಗ!

‘ವ್ಹೂ ಕಣ್ಲಾ’ ಅಂತ ಹೂಗುಟ್ಟಿದ ಮಾಲಿಂಗ.

‘ನೊಬೆಲ್ ಪ್ರಶಸ್ತಿದು ಬಿಡ್ರೋ... ಇದ್ರ ಜೊತೆಗೇ ಪ್ರತಿವರ್ಷ ಇಗ್ನೊಬೆಲ್ ಪ್ರಶಸ್ತಿ ಅಂತ ಕೊಡ್ತಾರೆ. ಅದು ತುಂಬಾ ಸ್ವಾರಸ್ಯಕರವಾದ್ದು’ ಎಂದ ಪರ್ಮೇಶಿ.

‘ಇಗ್ನೊಬೆಲ್ಲಾ? ಅಂಗಂದ್ರೆ ಏನ್ಲಾ?’

‘ಎಡವಟ್ಟು ಸಾಧನೆಗಳಿಗೆ ಇಗ್ನೊಬೆಲ್ ಪ್ರಶಸ್ತಿ ಕೊಡ್ತಾರೆ. ಎಣ್ಣೆ ಹಾಕುದ್ರೆ ಫಾರಿನ್ ಲ್ಯಾಂಗ್ವೇಜ್ ಬಳಬಳ ಸಲೀಸಾಗಿ ಬತ್ತದಾ? ಹಸುಗಳ ಮೇಲೆ ಜೀಬ್ರಾಗಿರೊ ತರ ಗೆರೆಗಳನ್ನ ಪೈಂಟ್ ಮಾಡುದ್ರೆ ಸೊಳ್ಳೆ ಕಡಿಯಲ್ವಾ? ಆಫ್ರಿಕಾದ ಹಲ್ಲಿಗಳು ಸ್ಪೆಷಲ್ ಪಿಜ್ಜಾ ಇಷ್ಟಪಡುತ್ವಾ? ಇಂಗೆಲ್ಲಾ ಸಂಶೋಧನೆ ಮಾಡವ್ರಂತೆ ಕಣ್ರಲಾ’.

‘ಮೊದಲ್ನೆದಂತೂ ನಮ್ ಕುಡುಕರೇ ಸಂಶೋಧನೆ ಮಾಡವ್ರೆ. ನೈಂಟಿ ತಗಂತಿದ್ದಂಗೆ ಇಂಗ್ಲಿಷ್ ಯದ್ವಾತದ್ವಾ ಬುರ್ ಬುರ್ ನೊರೆ ತರ ನುಗ್ಗಿ ಬರಕಿಲ್ವಾ?’.

‘ನಮ್ಮೋರು ವಿಕಾಸ್ ಕುಮಾರ್ ಮತ್ತು ಸಾರ್ಥಕ್ ಮಿತ್ತಲ್ ಅನ್ನೋರಿಗೂ ಇಗ್ನೊಬೆಲ್ ಸಿಕ್ಕಿದೆ. ಶೂ, ಸಾಕ್ಸ್ ವಾಸನೆ ಕಮ್ಮಿ ಮಾಡೋಕೆ ಸ್ಪೆಷಲ್ ರ್‍ಯಾಕ್ ಡಿಸೈನ್ ಮಾಡಿದಾರಂತೆ...’

‘ರಸ್ತೆ ಗುಂಡಿ ಬಗ್ಗೆ ಸಂಶೋಧನೆ ಮಾಡಿ ರಸ್ತೇಲಿ ಹರಿಯೋ ನೀರಿನ ಒಳಗಿನ ಗುಂಡಿ ಕಾಣೋ ಸ್ಪೆಷಲ್ ಕನ್ನಡಕ, ಗುಂಡಿ ಹಾರ್‍ಸುದ್ರೂ ಸೊಂಟ ಮುರಿಯದ ಸ್ಪೈನಲ್ ಸ್ಪ್ರಿಂಗ್ ಕಂಡು ಹಿಡುದ್ರೆ ಫಿಸಿಕ್ಸ್ ಇಗ್ನೊಬೆಲ್ ಗ್ಯಾರಂಟಿ’.

‘ಗುಂಡೀನ ನೋಡುದ್ರೂ ಮುಚ್ಚಬಾರದು ಅನ್ನೋ ಸ್ಪೆಷಲ್ ಮೈಂಡ್‌ಸೆಟ್ ಮೇಲೆ ಥೀಸಿಸ್ ಬರುದ್ರೆ ಸೈಕಾಲಜಿ ಇಗ್ನೊಬೆಲ್ ಗ್ಯಾರಂಟಿ’.

‘ಇಗ್ನೊಬೆಲ್ ಶಾಂತಿ ಎಂಗೆ?’

‘ಯಾರಾರಾ ಗುಂಡಿ ಹಾರಿ ಬಿದ್ದು ಹರೋಹರ ಅಂತಾರಲ್ಲ, ಅವರಿಗೆ ನಮ್ ರಾಜಕೀಯದೋರು ‘ಎಕ್ಸ್’ನಲ್ಲಿ ಓಂ ಶಾಂತಿ ಅಂತ ಹಾಕಲ್ವಾ? ಅದೇ ಇಗ್ನೊಬೆಲ್ ಶಾಂತಿ’ ಎಂದ ಪರ್ಮೇಶಿ. ಎಲ್ಲಾ ‘ಜೈ ಇಗ್ನೊಬೆಲ್’ ಎಂದು ನಕ್ಕರು!

ಸಂಗತ

ಸಮೀಕ್ಷೆ: ‘ಮೌಲ್ಯವ್ಯವಸ್ಥೆ’ ಅರಿಯುವ ಕನ್ನಡಿ?

ಗ್ರಾಮೀಣ ಮತ್ತು ನಗರಗಳಲ್ಲಿನ ಮೌಲ್ಯವ್ಯವಸ್ಥೆಯ ಸ್ವರೂಪವನ್ನು ಸಮೀಕ್ಷೆ ಸೂಚಿಸುವಂತಿದೆ. ಎಲ್ಲೆಡೆ ಸಾಮಾನ್ಯ ಆಗಿರುವುದು ಒಂದೇ – ಅಸಹಾಯಕತೆ.

• ಸದಾಶಿವ ಸೊರಟೂರು

‘ಹಳ್ಳಿಗಳಲ್ಲಿ, ಕೊಳೆಗೇರಿಗಳಲ್ಲಿ ಇರುವವರೇ ಮೇಲು. ಮಾಹಿತಿ ಜೊತೆಗೆ ಲೋಟ ನೀರಾದರೂ ಕೊಡುತ್ತಾರೆ. ಪ್ರೀತಿಯಿಂದ ಮಾತನಾಡುತ್ತಾರೆ. ನಗರ ಪ್ರದೇಶದಲ್ಲಿ, ಶ್ರೀಮಂತರು ಹೆಚ್ಚಿರುವ ಬಡಾವಣೆಗಳಲ್ಲಿ ಅವಮಾನ ಮತ್ತು ಅನುಮಾನ ಎದುರಾಗುವುದೇ ಹೆಚ್ಚು’ ಎಂದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ತೊಡಗಿಕೊಂಡಿರುವ ಕೆಲವು ಸಮೀಕ್ಷಕರು ತಮ್ಮ ಅನುಭವ ಹಂಚಿಕೊಳ್ಳುತ್ತಿದ್ದಾರೆ.

ಬಂಗಲೆಗಳ ಒಳಗೆ ಹೋಗಲು ಅವಕಾಶವಿಲ್ಲ. ನಾಯಿ ಮತ್ತು ವಾಚ್‌ಮನ್ ದಾಟಿಕೊಂಡು ಒಳಗೆ ಹೋದರೂ ಅಲ್ಲಿನ ನಿವಾಸಿಗಳಿಗೆ ಸಮೀಕ್ಷೆ ಬಗ್ಗೆ ಯಾವ ಆಸಕ್ತಿ ಇಲ್ಲ, ನಂಬಿಕೆಯೂ ಇಲ್ಲ. ನಗರದಲ್ಲಿದ್ದರೂ ಅನಾಗರಿಕರಂತೆ ವರ್ತಿಸುತ್ತಾರೆ... ಹೀಗೆ, ನಗರಿಗರ ಕುರಿತು ಹತ್ತಾರು ದೂರುಗಳು ಕೇಳಿಬರುತ್ತಿವೆ. ಈ ವಿದ್ಯಮಾನವನ್ನು ನಗರದವರ ಅನಾಗರಿಕ ವರ್ತನೆ ಅಥವಾ ಸೌಜನ್ಯದ ಕೊರತೆ ಎಂದಷ್ಟೇ ನೋಡದೆ, ನಗರ ಮತ್ತು ಗ್ರಾಮೀಣ ಭಾರತದ ನಡುವಿನ ಮನೋವೈಜ್ಞಾನಿಕ ಮತ್ತು ಆರ್ಥಿಕ ಕಂದಕದ ದೃಷ್ಟಿಕೋನದಿಂದ ವಿಶ್ಲೇಷಿಸುವುದು ಅಗತ್ಯ.

ಹಳ್ಳಿಯ ಮತ್ತು ಬಡ ಸಮುದಾಯಗಳು ಸರ್ಕಾರದ ಯೋಜನೆಗಳು ಮತ್ತು ಸಬ್ಸಿಡಿಗಳ ಮೇಲೆ ಹೆಚ್ಚು ಅವಲಂಬಿತವಾಗಿರುತ್ತವೆ. ಪಡಿತರ, ನರೇಗಾ ಅಥವಾ ಸಂಧ್ಯಾ ಸುರಕ್ಷಾ ಸೇರಿದಂತೆ ಯಾವುದೋ ಒಂದು ಸರ್ಕಾರಿ ಯೋಜನೆಯ ಲಾಭವನ್ನು ಗ್ರಾಮೀಣ ಕುಟುಂಬಗಳು ಪಡೆಯುತ್ತಿರುತ್ತವೆ. ‘ಸರ್, ಒಂದು ಬಿಪಿಎಲ್ ಕಾರ್ಡ್ ಬರೋ ಹಾಗೆ ಮಾಡಿ’, ‘ಅರವತ್ತು ವರ್ಷ ಆಗಿದೆ, ಸಂಬಳ ಬರುವ ಹಾಗೆ ಮಾಡಿ’, ಈ ತರಹದ ಕೋರಿಕೆಗಳನ್ನು ಹಳ್ಳಿಗರು ಸಮೀಕ್ಷಾದಾರರ ಮುಂದಿಡುತ್ತಿದ್ದಾರೆ. ತಮ್ಮ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಸುಧಾರಿಸಲಿ ಎಂಬ ಆಶಾವಾದ ಅವರನ್ನು ಸಮೀಕ್ಷೆಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಂತೆ ಮಾಡುತ್ತಿರಬಹುದು. ಸರ್ಕಾರ ನಮಗೇನೊ ಒಳ್ಳೆಯದು ಮಾಡುತ್ತದೆ ಎಂಬ ನಂಬಿಕೆ ಅದು.



ಇದೆಲ್ಲಕ್ಕಿಂತ ಮುಖ್ಯವಾಗಿ, ಹಳ್ಳಿಗರ ಒಳ್ಳೆಯತನ ಬಂದದ್ದು ನೆಲದ ಮೂಲದಿಂದ. ಅವರು ಪ್ರಕೃತಿಗೆ ಹತ್ತಿರದ ಜನ. ಉಳುಮೆ, ಬೆಳೆ, ಪ್ರಾಣಿಗಳ ಒಡನಾಟ, ಕೂಡಿ ಬದುಕುವ ರೀತಿ, ಅವರಲ್ಲಿ ಇಂದಿಗೂ ಒಳ್ಳೆಯತನ ಉಳಿಸಿವೆ. ಅವರ ಮುಗ್ಧತೆ, ಪ್ರಾಮಾಣಿಕತೆಗಳು ಇನ್ನೂ ಉಳಿದಿವೆ.

ನಗರದ ಜನರಿಗೆ ‘ಸಮಾಜ’ ಎನ್ನುವುದಕ್ಕಿಂತ, ನನ್ನ ವೃತ್ತಿ, ನನ್ನ ಮನೆ ಮತ್ತು ನನ್ನ ಕುಟುಂಬ ಮುಖ್ಯ ಎನ್ನುವ ಭಾವನೆ ಹೆಚ್ಚು. ಸಮೀಕ್ಷೆಯು ಒಂದು ‘ಸಾಮಾಜಿಕ ಕಾರ್ಯ’ ಆಗಿದ್ದರೂ, ಅವರು ಅದನ್ನು ನನ್ನ ವೈಯಕ್ತಿಕ ಸಮಯವನ್ನು ಹಾಳು ಮಾಡುವ ಒಂದು ಕಿರಿಕಿರಿ ಎಂದು ಭಾವಿಸುವುದಿದೆ.

ಸಮೀಕ್ಷಕರು ಪ್ರಶ್ನೆ ಕೇಳಿದಾಗ, ‘ನೀವು ನಮ್ಮ ಸಾಲ ತೀರಿಸ್ತೀರಾ?’ ಎಂದು ಕೇಳುವ ಪ್ರಶ್ನೆ ಕೇವಲ ವ್ಯಂಗ್ಯದ್ದಲ್ಲ. ಆ ಪ್ರಶ್ನೆ, ಹಣಕಾಸಿನ ವಿಚಾರದಲ್ಲಿ ಅವರಲ್ಲಿರುವ ತೀವ್ರ ಅನುಮಾನ ಮತ್ತು ಅಸುರಕ್ಷಿತ ಭಾವನೆಯನ್ನು ಸೂಚಿಸುತ್ತದೆ. ಅವರು ತಮ್ಮ ಕಠಿಣ ಪರಿಶ್ರಮದಿಂದ ಗಳಿಸಿದ ಸಂಪತ್ತು ಅಥವಾ ಸಾಲದ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳಲು ಇಷ್ಟಪಡುವುದಿಲ್ಲ. ಇದು ‘ನಗರ ಮನಸು’.

ನಮ್ಮ ಈಗಿನ ಶಿಕ್ಷಣ ಕ್ರಮವು ಮೌಲ್ಯಕ್ಕಿಂತಲೂ ಹೆಚ್ಚಾಗಿ ‘ಲಾಭ’ ಕೇಂದ್ರೀಕೃತವಾಗಿದೆ. ಅದು ಪ್ರತಿ ಕೆಲಸವನ್ನೂ ‘ನನಗೆ ಇದರಿಂದ ಏನು ಪ್ರಯೋಜನ?’ ಎಂಬ ಮಾನದಂಡದಲ್ಲಿ ಅಳೆಯಲು ಕಲಿಸಿದೆ. ಶಿಕ್ಷಣವು ಬದುಕುವ ರೀತಿಯನ್ನು ಕಲಿಸುತ್ತಿಲ್ಲ. ಹೆಚ್ಚು ಓದಿದವರು ನಗರದಲ್ಲೇ ಇರುವುದರಿಂದ ಅವರ ಮನಸು ‘ಲಾಭ’ದ ಕಡೆ ಕೇಂದ್ರೀಕೃತವಾಗಿರುವುದು ಅಸಹಜವೇನಲ್ಲ.

ಸಮೀಕ್ಷೆಗೆ ಸಹಕರಿಸುವುದರಿಂದ ತಮ್ಮ ವೈಯಕ್ತಿಕ ವಿಚಾರಕ್ಕೆ ಯಾವುದೇ ನೇರ ಲಾಭವಿಲ್ಲದ ಕಾರಣ, ಅದನ್ನು ‘ನಿಷ್ಪ್ರಯೋಜಕ’ ಕೆಲಸ ಎಂದು ನಗರದವರು ತಳ್ಳಿಹಾಕಬಹುದು. ಲಾಭ–ನಷ್ಟದ ವಿಚಾರಗಳು ಅವರ ಸಾಮಾಜಿಕ ಬದ್ಧತೆಯನ್ನು ಮಸುಕುಗೊಳಿಸಿರುವಂತಿದೆ.

ನಗರದ ಕಾರ್ಪೊರೇಟ್ ಸಂಸ್ಕೃತಿಯಲ್ಲಿ, ಸೌಜನ್ಯವು ಒಂದು ವೃತ್ತಿಪರ ಅನಿವಾರ್ಯತೆ ಅಷ್ಟೇ. ತಮ್ಮ ವ್ಯಾಪ್ತಿಯ ಹೊರಗಿರುವ ವ್ಯಕ್ತಿಗಳ ಜೊತೆ ಮಾತನಾಡುವಾಗ, ಆ ಸೌಜನ್ಯದ ಪೋಷಾಕು ಕಳಚಿ ಹಾಕಿ, ತಮ್ಮ ನೈಜ ಗುಣವನ್ನು ಪ್ರದರ್ಶಿಸುತ್ತಾರೆ. ಅದು ಅನಿವಾರ್ಯದ ನಗರ ಸಂಸ್ಕೃತಿ. ಹಾಗೆಂದು, ಹಳ್ಳಿಯಲ್ಲಷ್ಟೇ ಒಳ್ಳೆಯತನವಿದೆ, ಮಾನವೀಯತೆ ಇದೆ ಎನ್ನಲಾಗದು; ನಗರದವರು ಅನಾಗರಿಕರು, ಹೃದಯವಿಲ್ಲದವರು ಎಂದು ಷರಾ ಬರೆಯಲಾಗದು. ಅವರು ಎದುರಿಸುವ ಕಷ್ಟ ಮತ್ತು ಸಂದರ್ಭಗಳು ಇದನ್ನು ತೀರ್ಮಾನಿಸುತ್ತವೆ. ನಾವು ಇನ್ನೂ ಮಾನವೀಯ ಮೌಲ್ಯಗಳನ್ನು ಕಳೆದುಕೊಂಡಿಲ್ಲ ಎಂಬುದನ್ನು ಸಾಬೀತು ಮಾಡುವ ಎಷ್ಟೊಂದು ಘಟನೆಗಳು ನಮ್ಮ ನಡುವೆ ನಡೆಯುತ್ತಲೇ ಇವೆ.

ಸಮೀಕ್ಷಕರ ಅನುಭವಗಳು ಹಳ್ಳಿಯವರ ಒಳ್ಳೆಯತನದಷ್ಟೇ, ನಗರದ ಜನರ ‘ಅಸಹಾಯಕತೆ’ಯನ್ನೂ ಸೂಚಿಸುತ್ತಿವೆ. ಭದ್ರತೆ, ಗೋಪ್ಯತೆ ಮತ್ತು ಸ್ವಹಿತಾಸಕ್ತಿಗಳ ಬೇಲಿಯೊಳಗೆ ನಗರದ ಜನ ಸಿಲುಕಿಕೊಂಡಿದ್ದಾರೆ. ಆ ಕಾರಣಕ್ಕೆ ತಮ್ಮ ಮೂಲಭೂತ ಸೌಜನ್ಯವನ್ನೂ ಮರೆತಿದ್ದಾರೆ. ಇದು ಅವರ ದೊಡ್ಡ ಅಸಹಾಯಕತೆ. ಹಳ್ಳಿಯವರ ಒಳ್ಳೆಯತನವೂ ಒಂದು ಅಸಹಾಯಕತೆಯೇ ಇರಬಹುದು.

ಆರ್‌ಎಸ್‌ಎಸ್‌ಗೆ 100

ದೇವನೂರರಿಗೊಂದು ದಾಳಿಂಬೆ ಕೊಡಿ

● ಕೋಟ ಶ್ರೀನಿವಾಸ ಪೂಜಾರಿ



ಆರ್‌ಎಸ್‌ಎಸ್ ಎಂಬ ಕಿರು ನಾಮಧೇಯದೊಂದಿಗೆ ಜನಮಿತ ಪಸರಿಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಸರಿಯಾಗಿ ವಿಜಯದಶಮಿಯಂದು ನೂರು ವರ್ಷಕ್ಕೆ ದೃಢ ಹೆಜ್ಜೆ ಇಟ್ಟ ಅನುಭವ. ಆಡುಭಾಷೆಯಲ್ಲಿ ಸಂಘವೆಂದು ಕರೆಯಲಾಗುವ ಆರ್‌ಎಸ್‌ಎಸ್, ಹೊಗಳುವವರು- ತೆಗಳುವವರ ಮಧ್ಯೆಗೆ ನಿರ್ಲಿಪ್ತ. ವಿಚಿತ್ರವೆಂದರೆ, ಪ್ರಪಂಚದ ಒಳಿತು ಕೆಡುಕುಗಳನ್ನು ವಿಮರ್ಶಿಸುವ, ಆಗುಹೋಗುಗಳನ್ನು ತರ್ಕಿಸುವ, ಸರಿ ತಪ್ಪುಗಳನ್ನು ಅವಲೋಕಿಸುವ ಬುದ್ಧಿಜೀವಿಗಳಿಗೆ ಸಾಹಿತ್ಯ ಲೋಕದ ಒಳಗೂ ಹೊರಗೂ ಗೌರವ ಹೊಂದಿರುವ ಅನೇಕ ಮಹನೀಯರು ಅದರಲ್ಲೂ ವಿಶ್ವ ಮಾನವತೆಗೆ ಅತಿ ಹತ್ತಿರದ ಕೆಲವರು ಆರ್‌ಎಸ್‌ಎಸ್‌ನ ಆಂತರ್ಯ ಅರಿಯದೆ ಮಾಡುವ ಟೀಕೆ ಟಿಪ್ಪಣಿಗಳು ಸಂಘದ ಬಗ್ಗೆ ಹೊರಪ್ರಪಂಚಕ್ಕೆ ಚಮತ್ಕಾರವೇ ಹೊರತು ತೆರೆದ ಮನಸ್ಸಿನ ಒಡಲಾಳದ ದನಿಯಲ್ಲ.

ಸಂಘದ ಸ್ಥಾಪಕ ಡಾಕ್ಟರ್ ಜೀ ಅವರನ್ನಾಗಲಿ, ಎರಡನೆಯ ಸರಸಂಘಚಾಲಕ ಗುರೂಜೀ ಅವರನ್ನಾಗಲಿ ತೆಗಳುವ ಮನಸ್ಸುಗಳಿಗೆ, ಇದೇ ಶಾಖೆಗೆ ಬಂದ ಸಂವಿಧಾನ ಸೃಷ್ಟಿಕರ್ತ ಬಾಬಾ ಸಾಹೇಬ್ ಅಂಬೇಡ್ಕರ್ ಅವರು, ಜಾತೀಯತೆ ಹೋಗಲಾಡಿಸುವ ತನ್ನ ಪ್ರಯತ್ನಕ್ಕೆ ಸಂಘ ಶಕ್ತಿ ಕೊಡುತ್ತಿದೆ ಎಂದು ಉದ್ಗರಿಸಿದ್ದು ನೆನಪಾಗುವುದೇ ಇಲ್ಲ. ಎರಡು ವರ್ಷಗಳ ಹಿಂದೆ ಎಡಪಂಥೀಯ ವಿಚಾರಧಾರೆಯ ಹಿರಿಯ ಲೇಖಕರೊಬ್ಬರು 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಎಂಬ ಕಿರುಪುಸ್ತಕವನ್ನು ಪ್ರಕಟಿಸಿದ್ದರು. ಅದಕ್ಕೆ ಪೂರಕ ಪ್ರಾಸ್ತಾವಿಕ ನುಡಿ ಬರೆದ ಗಣ್ಯರೊಬ್ಬರು ಈ ಕಿರು ಪುಸ್ತಕ ಆರ್‌ಎಸ್‌ಎಸ್‌ನ ನಿಜಸ್ವರೂಪವನ್ನು ತಿಳಿಸಿ, ಭಾರತ ಸಂವಿಧಾನದ ಮತ್ತು ದೇಶದ ಏಕತೆಯನ್ನು ಗಟ್ಟಿಗೊಳಿಸಲು ಶಕ್ತಿ ನೀಡುತ್ತದೆ ಎಂದು ಘೋಷಿಸಿದ್ದರು. ಆರ್‌ಎಸ್‌ಎಸ್ ವಿರೋಧಿ ಪುಟಾಣಿ ಪುಸ್ತಕ ಪ್ರಕಟವಾಗಿ ಒಂದೇ ವಾರದಲ್ಲಿ ಹತ್ತಾರು ಸಾವಿರ ಪ್ರತಿಗಳನ್ನು ಖರೀದಿ ಮಾಡಿ ಆ ಪುಸ್ತಕಗಳನ್ನು ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚಲಾಗಿತ್ತು. ದೇಶಭಕ್ತ ಸಂಸ್ಥೆಯೊಂದರ ಬಗ್ಗೆ ಕೆಟ್ಟ ಅಭಿಪ್ರಾಯ ಕ್ರೋಡೀಕರಿಸಲು ನಗರ ನಕ್ಸಲರ ತಂತ್ರವಿದು ಎಂದು ಹೊರ ಸಮಾಜಕ್ಕೆ ಅರಿವಾಗುವ ಮೊದಲು ಸಂಘ ವಿರೋಧಿ ಸಂಚೊಂದು ಅಕ್ಷರದ ರೂಪದಲ್ಲಿ ಎಳೆಯ ಮಕ್ಕಳ ಉದರವನ್ನು ಸೇರಿಯಾಗಿತ್ತು.

ಮಹಾತ್ಮ ಗಾಂಧಿ ಅವರು 1925ರ ಮಾರ್ಚ್‌ನಲ್ಲಿ ಕೇರಳಕ್ಕೆ ಕಾಲಿಟ್ಟು ಅಸ್ಪೃಶ್ಯತೆ ಮತ್ತು ಶೂದ್ರತ್ವ ಕೆಟ್ಟ ಪದ್ಧತಿಗಳೆಂದು ನುಡಿದು ಈ ಬಗ್ಗೆ ವೈದಿಕರೊಂದಿಗೆ ಚರ್ಚೆಗಿಳಿದ ವರ್ಷವೇ ಅಸ್ತಿತ್ವಕ್ಕೆ ಬಂದ ಆರ್‌ಎಸ್‌ಎಸ್ ಹೇಗೆ ಅಸ್ಪೃಶ್ಯತೆಗೆ ಕಾರಣವಾಗುತ್ತದೆ? ಸಂಘದಲ್ಲಿ ಅಸ್ಪೃಶ್ಯತೆಯೂ ಇಲ್ಲ, ಜಾತೀಯತೆಯೂ ಇಲ್ಲ. ಸಂಘವನ್ನು ಶೂದ್ರ ವಿರೋಧಿ ಎಂದು ಹೇಳುವವರಿಗೆ ಸಂಘದ ಮೂಲಕವೇ ಪರಿಶಿಷ್ಟರೊಬ್ಬರು ದೇಶದ ರಾಷ್ಟ್ರಪತಿಯಾದಾಗ ಬಾಯಿ ಬಿಡಲಾಗದೆ ಚಡಪಡಿಸುವ ಪರಿಸ್ಥಿತಿ. ಬುಡಕಟ್ಟು ಜನಾಂಗದ ಪರಿಶಿಷ್ಟ ಪಂಗಡದ ಮಹಿಳೆಯೊಬ್ಬರು ದೇಶದ ಅತ್ಯುನ್ನತ ಸ್ಥಾನವೇರಿದಾಗ ಕೆಲವರ ಒಳಮನಸ್ಸು ಕನಲಿ ಕೆಂಡವಾಗಿತ್ತು. ಸಂಘದಲ್ಲಿರುವ ವಿಭಜಿಸುವ, ತಾರತಮ್ಯದ ಮತ್ತು ಅಪಮೌಲ್ಯದ ಆಲೋಚನೆಗಳನ್ನು ವಿಸರ್ಜಿಸಿ ಎಂಬ ಗುಡುಗಿನ ಹಿಂದೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಂಘ ಆವರಿಸಿಕೊಂಡ ಸಾಮಾಜಿಕ ನ್ಯಾಯದ ಕೆಲಸಗಳಿಂದ ಬಂದ ಕಣ್ಣುರಿಯ ನುಡಿ ಕಂಪನವಿರಬಹುದೇ?

ಆರ್‌ಎಸ್‌ಎಸ್‌ನ ವಿರೋಧಿ ನಿಲುವಿನ ಗುಂಪಿನ ವಿಮರ್ಶೆಗೆ ಸಿಗದಿರುವ ಅಚ್ಚರಿಯೆಂದರೆ, 100 ವರ್ಷಗಳ ಹಿಂದೆ ಹುಟ್ಟಿದ ಸಂಘ ಇಂದು ಜಗತ್ತಿನ 47 ರಾಷ್ಟ್ರಗಳಲ್ಲಿ ಸಂಘ ಶಿಕ್ಷಣ ನೀಡುವ ಶಾಖೆಗಳನ್ನು ನಡೆಸುತ್ತಿದೆ. ವಿದೇಶಿ ನೆಲದಲ್ಲಿ ಭಾರತೀಯ ಸಂಸ್ಕೃತಿಯ ಮೌಲ್ಯ, ಜೀವನಶೈಲಿಗಳು ಸಂಘದ ಮೂಲಕ ಜಗದಗಲ ವಿಸ್ತರಣೆಯಾಗುತ್ತಿವೆ. ಉನ್ನತ ಶಿಕ್ಷಣ ಪಡೆದ ಲಕ್ಷಾಂತರ ಯುವಕರು ಸಂಘದ ಕಾರ್ಯಕ್ಕಾಗಿಯೇ ಜೀವನ ಮುಡಿಪಾಗಿ ಇಟ್ಟಿದ್ದಾರೆ. ಅದರೊಂದಿಗೆ ದಲಿತ, ಹಿಂದುಳಿದ ಜನಾಂಗದ ಯುವಕರು ಕೈಜೋಡಿಸಿದ್ದಾರೆ. ಇದಕ್ಕೆ ಪ್ರೇರಣೆ ಅವರಲ್ಲಿರುವ ರಾಷ್ಟ್ರಭಕ್ತಿ.

1948ರಲ್ಲಿ ಗಾಂಧೀಜಿಯವರು ಹತ್ಯೆಯಾದಾಗ ಅಂದಿನ ಪ್ರಧಾನಿ ನೆಹರೂ ಅವರು ಸಂಘವನ್ನು ನಿಷೇಧಿಸಿದ್ದರು. ನಂತರ 1962ರಲ್ಲಿ ಭಾರತ ಚೀನಾ ಯುದ್ಧದ ಸಂದರ್ಭ ಯುದ್ಧ ತಾರಕಕ್ಕೇರಿದಾಗ ಪ್ರಧಾನಿ ನೇತೃತ್ವದಲ್ಲಿ ಸರ್ವ ಪಕ್ಷಗಳ ದುಂಡು ಮೇಜಿನ ಚರ್ಚೆ ನಡೆದಿತ್ತು. ಅಂದಿನ ವಿಶೇಷವೆಂದರೆ, ಸಂಘದ ಎರಡನೇ ಸರಸಂಘಚಾಲಕ ಗೋಲ್ವಲ್ಕರ್ ಆಹ್ವಾನಿತರಾಗಿದ್ದರು. ಸರ್ಕಾರ ಮತ್ತು ವಿಪಕ್ಷಗಳ ಮಾತಿನ ಸಮರದ ನಡುವೆ ನೆಹರೂ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ವಿಪಕ್ಷ ನಾಯಕರು, 'ಚೀನಿ ಸರ್ಕಾರ ಇಷ್ಟೊಂದು ಭಾರತದ ಭೂಭಾಗ ಆವರಿಸಿಕೊಳ್ಳುವಾಗ ನಿಮ್ಮ ಸೇನೆ ಏನು ಮಾಡುತ್ತಿತ್ತು' ಎಂದು ಪ್ರಧಾನಿಯನ್ನು ಪ್ರಶ್ನಿಸಿ ಟೀಕಿಸಿದ್ದರು. ಸಭೆ ಮೌನವಾಗುತ್ತಲೇ ಗುರೂಜಿ ಗೋಲ್ವಲ್ಕರ್ 'ನಾನೊಂದು ಮಾತನಾಡಬಹುದೇ' ಎಂದು ಕೇಳಿದ್ದರು. ನೆಹರೂ, 'ನೀವು ಮಾತಾಡಿ' ಎನ್ನುತ್ತಲೇ ಗುರೂಜಿ ಹೇಳಿದ್ದು, 'ನಿಮ್ಮ ಸೇನೆ, ನಿಮ್ಮ ಸೇನೆ ಎನ್ನುವ ಬದಲು ನಮ್ಮ ಸೇನೆ ಎಂಬ ಶಬ್ದ ಪ್ರಯೋಗ ಮಾಡಬಹುದೇ' ಎಂದು ವಿಪಕ್ಷಗಳ ಶಬ್ದ ಬಳಕೆಯನ್ನು ತಿದ್ದಿ ಹೇಳಿದ್ದರು. ಸರಸಂಘಚಾಲಕರ ಮಾತಿಗೆ ಪ್ರಧಾನಿ ನೆಹರೂ ಕಣ್ಣಲ್ಲೇ ಕೃತಜ್ಞತೆ ಅರ್ಪಿಸಿದ್ದರು. ಇದನ್ನು ಹೇಳಿದರೂ ನಮ್ಮ ರಾಜ್ಯದ ಬಹಳ ಪ್ರಭಾವಿ ಬುದ್ಧಿಜೀವಿಗಳು ಇದು ಒಡೆದು ಆಳುವ ಸಂಘದ ನೀತಿ ಎನ್ನಬಹುದೇನೋ?

ರಾಜ್ಯದಲ್ಲಿರುವ ಸರ್ಕಾರಿ ಕೃಪಾಪೋಷಿತ ಬುದ್ಧಿಜೀವಿ ಲೇಖಕರ ನೇತಾರರು ಸತ್ಯದ ತಲೆಯ ಮೇಲೆ ಹೊಡೆದಂತೆ ಸುಳ್ಳು ಹೇಳಲು ಹೊರಟಿದ್ದಾರೆ. ಒಂದು ಶತಮಾನ ಪೂರೈಸಿರುವ ಸಂಘವಿಂದು ಅಸಲಿಗೆ ಇಡೀ ದೇಶ ಆವರಿಸಿರುವ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಅವರಿಗೆ ಉಗುಳಲೂ ಆಗದೆ, ನುಂಗಲೂ ಆಗದೆ ಗಂಟಲಿಗೆ ಸಿಕ್ಕಿಹಾಕಿಕೊಂಡಿರುವ ಅನುಭವ ಆಗುತ್ತಿದೆ.

ಅಂದು ಅಸಹಿಷ್ಣುತೆಯ ಹೆಸರಲ್ಲಿ ಸಮಾಜವನ್ನು ದಾರಿ ತಪ್ಪಿಸಿದವರೇ ಇಂದು, 'ಸಂಘದೊಡಲಿನಲ್ಲಿ ವಿಷಕಾರಿ ಪದಾರ್ಥ ತುಂಬಿದೆ; ಅದನ್ನು ಹೊರಹಾಕಿದರೆ ಸ್ವಾಗತಾರ್ಹ' ಎನ್ನುತ್ತಾರೆ. ನಿಜಕ್ಕೂ ಸಂಘದ ಹೃದಯದಲ್ಲಿ ವಿಷಕಾರಿ ಅಂಶ ಹಿಂದೆಯೂ ಇರಲಿಲ್ಲ, ಮುಂದೂ ಬರುವುದಿಲ್ಲ. ಇದನ್ನು ಅರ್ಥ ಮಾಡಿಕೊಂಡ ನೆಹರೂ, ಮಾಡಿದ ತಪ್ಪನ್ನು ಸರಿಪಡಿಸಿಕೊಂಡು ಅಂದಿನ ಕೇಂದ್ರ ಸರ್ಕಾರದ ಪರವಾಗಿ ಭಾರತದ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಸಮವಸ್ತ್ರದಲ್ಲಿ ಭಾಗವಹಿಸಲು ಸಂಘವನ್ನು ಆಹ್ವಾನಿಸುತ್ತಾರೆ. ಆದರೆ, ಸಂಘವನ್ನು ದೂಷಿಸುವುದನ್ನೇ ಉದ್ಯೋಗ ಮಾಡಿಕೊಂಡ ರಾಜ್ಯದ ಬರಹಗಾರರು ಆರ್‌ಎಸ್‌ಎಸ್ ವಿರುದ್ಧ ಕೆಂಡ ಕಾರುವುದರಲ್ಲೇ ಆಯುಷ್ಯ ಕಳೆಯುತ್ತಿದ್ದಾರೆ.

ಸಂಘದ ಬಗ್ಗೆ ನೂರು ಸುಳ್ಳನ್ನು ಹೇಳಿ ಕಂಠಪಾಠ ಮಾಡಿಸಿ ಸತ್ಯವೆಂಬಂತೆ ಬಿಂಬಿಸುವುದನ್ನು ಕಂಡಾಗ, ಹಿಂದೆ ಸಂತರೊಬ್ಬರ ಬಳಿ ಶಿಷ್ಯನೊಬ್ಬ ಬಂದು, 'ನನ್ನನ್ನು ನೋಡಿದರೆ ನೆರೆಮನೆಯ ಗೆಳೆಯ ಉರಿದು ಬೀಳುತ್ತಾನೆ, ನಾನು ಕೆಟ್ಟವನೆಂದು ಬಿಂಬಿಸಲು ಯತ್ನಿಸುತ್ತಾನೆ, ನನ್ನ ಕಂಡರೆ ಕೋಪದಿಂದ ಕುದಿಯುತ್ತಾನೆ, ನನ್ನನ್ನು ಬದುಕಲೇ ಬಿಡಬಾರದೆಂದು ತೀರ್ಮಾನಿಸಿದಂತೆ ವರ್ತಿಸುತ್ತಾನೆ. ನನ್ನಿಂದ ಯಾವ ತಪ್ಪೂ ಅವನಿಗೆ ಆಗಿಲ್ಲ. ನಾನೇನು ಮಾಡಲಿ' ಎಂದು ಪ್ರಶ್ನಿಸುತ್ತಾನೆ. ಸಂತರು ಮೌನ ಮುಂದುವರಿಸಿದಾಗ ಮತ್ತೆ ಮತ್ತೆ... 'ನಾನು ಏನು ಮಾಡಬಹುದು ಹೇಳಿ' ಎಂದು ಗೋಗರೆಯುತ್ತಾನೆ. ಸಂತರು ಮೌನ ಮುರಿದು, 'ನಿನ್ನನ್ನು ದ್ವೇಷಿಸುವ ನೆರೆಮನೆಯ ಗೆಳೆಯನಿಗೆ ಸಿಹಿಯಾದ ದಾಳಿಂಬೆ ಹಣ್ಣನ್ನು ಕೊಡು' ಎನ್ನುತ್ತಾರೆ. ಶಿಷ್ಯ 'ನನ್ನನ್ನು ದ್ವೇಷಿಸುವವನಿಗೆ, ನನ್ನ ಬಗ್ಗೆ ಹೊಟ್ಟೆಕಿಚ್ಚು ಪಡುವವನಿಗೆ ಸಿಹಿ ದಾಳಿಂಬೆ ಯಾಕೆ ಕೊಡಬೇಕು' ಎಂದು ಪ್ರಶ್ನಿಸುತ್ತಾನೆ. ಸಾವಧಾನದಿಂದ ಉತ್ತರಿಸಿದ ಸಂತರು 'ನಿನ್ನನ್ನು ದ್ವೇಷಿಸುವ ನೆರೆಮನೆಯ ಗೆಳೆಯನ ಉದರದ ತುಂಬಾ ಹೊಟ್ಟೆಕಿಚ್ಚು ಉರಿಯುತ್ತಿದೆ, ನೀನು ಸಿಹಿಯಾದ ದಾಳಿಂಬೆ ಕೊಟ್ಟಾಗ ಅವನು ಅದನ್ನು ಜಗಿದು ತಿಂದಾಗ ದಾಳಿಂಬೆ ಒಳಗಿನ ಸಿಹಿ ಮತ್ತು ಒಗರಿನ ಅಂಶ ಅವನ ಹೊಟ್ಟೆ ಉರಿಯನ್ನು ಕಡಿಮೆ ಮಾಡುತ್ತದೆ. ದ್ವೇಷ ಕಡಿಮೆ ಆಗುತ್ತದೆ. ಮೊದಲದನ್ನು ಮಾಡು' ಎನ್ನುತ್ತಾರೆ. ಆರ್‌ಎಸ್‌ಎಸ್ ವಿರೋಧಿಸುವವರಿಗೆ ಸದ್ಯಕ್ಕಿರುವ ಏಕೈಕ ಔಷಧವೆಂದರೆ ಸಿಹಿಯಾದ ದಾಳಿಂಬೆ ನೀಡುವುದು.

ವೈಚಾರಿಕವಾಗಿ ಏನೇ ಅಭಿಪ್ರಾಯ ಭೇದಗಳಿದ್ದರೂ, ಹಿರಿಯ ಸಾಹಿತಿ ದೇವನೂರ ಮಹಾದೇವ ಒಂದು ಕಡೆ ಹೇಳುತ್ತಾರೆ. 'ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ. ಇಂದಲ್ಲಾ ನಾಳೆ ಫಲ ಕೊಡುವುದು' ಎಂದು. ಒಂದು ಶತಮಾನದ ಹಿಂದೆ ಸಂಘ ಬಿತ್ತಿದ ಬೀಜ ಇಂದು ಫಲ ಕೊಡುತ್ತಿದೆ.

ಲೇಖಕ: ಉಡುಪಿ-ಚಿಕ್ಕಮಗಳೂರು ಸಂಸದ

ಆರ್‌ಎಸ್‌ಎಸ್ ನೂರು ವರ್ಷ ಪೂರೈಸಿದ ಬಗ್ಗೆ ಹಿರಿಯ ಸಾಹಿತಿ ದೇವನೂರ ಮಹಾದೇವ ಅವರ ಲೇಖನ ಅಕ್ಟೋಬರ್ 3ರಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿತ್ತು. ಅವರ ಲೇಖನಕ್ಕೆ ಅನೇಕರು ಪ್ರತಿಕ್ರಿಯಿಸಿದ್ದಾರೆ. ಕೆಲವರು ದೇವನೂರು ಅವರ ವಾದವನ್ನು ಸಮರ್ಥಿಸಿದರೆ, ಮತ್ತೆ ಕೆಲವರು ಅದರಲ್ಲಿ ಲೋಪಗಳಿವೆ ಎಂದಿದ್ದಾರೆ. ಅವುಗಳಲ್ಲಿ ಆಯ್ದ ಅಭಿಪ್ರಾಯಗಳು ಇಲ್ಲಿವೆ



ಆರ್‌ಎಸ್‌ಎಸ್ ಧೋರಣೆಯ ತೀಕ್ಷ್ಣ ವಿಶ್ಲೇಷಣೆ

● ಬಿ.ಕೆ.ಹರಿಪ್ರಸಾದ್



ವಿವಿಧತೆಯಲ್ಲಿ ಏಕತೆ, ವೈವಿಧ್ಯಮಯ ಸಂಸ್ಕೃತಿ, ಧರ್ಮ ಮತ್ತು ಭಾಷೆಗಳ ಸಂಗಮವಾಗಿರುವ ಭಾರತ ದೇಶವನ್ನು ಒಂದು ಧರ್ಮದ ಚೌಕಟ್ಟಿಗೆ ಸೀಮಿತಗೊಳಿಸುವ ಪ್ರಯತ್ನವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಅತ್ಯಂತ ವ್ಯವಸ್ಥಿತವಾಗಿ ಮಾಡುತ್ತಿದೆ. ದೇವನೂರ ಮಹಾದೇವ ಅವರು ತಮ್ಮ ಲೇಖನದಲ್ಲಿ ಭಾರತೀಯ ಸಮಾಜದಲ್ಲಿ ಆರ್‌ಎಸ್‌ಎಸ್‌ನ ಪ್ರಭಾವ ಮತ್ತು ಅದರ ಧೋರಣೆಗಳ ಕುರಿತಾದ ವಿಶ್ಲೇಷಣೆಯನ್ನು ಬಹಳ ತೀಕ್ಷ್ಣವಾಗಿ ಮಾಡಿದ್ದಾರೆ. ಅವರು ಸಂಘದ ಧಾರ್ಮಿಕ-ರಾಜಕೀಯ ತತ್ವಗಳನ್ನು ಮಾತ್ರವಲ್ಲದೇ, ಅದರ ಸಾಮಾಜಿಕ ಪರಿಣಾಮಗಳನ್ನೂ ಸಮಗ್ರವಾಗಿ ಪರಿಶೀಲಿಸಿದ್ದಾರೆ. ಲೇಖನವು ವಿಶೇಷವಾಗಿ ಸಂಘದ ನಿಗೂಢ ಕಾರ್ಯಪದ್ಧತಿಗಳು, ಸಂಘದಲ್ಲಿ ಕಾರ್ಯಕರ್ತರು ಮತ್ತು ನಾಯಕರ ವಿವೇಚನಾರಹಿತ ಜೀತಗಾರಿಕೆ ಬಗ್ಗೆ ಒಳನೋಟಗಳನ್ನು ಒದಗಿಸುತ್ತದೆ.

ಕನ್ನಡದ ಪ್ರಮುಖ ಕವಿ ಗೋವಿಂದ ಪೈ ಅವರ 'ಮನುಜ ದೇವತೆ' ಕಾವ್ಯದಲ್ಲಿರುವ ಮಾನವತೆಯ ಬೋಧನೆ, ಎಲ್ಲ ಧರ್ಮಗಳ ಜನರ ನಡುವೆ ಸಮಾನತೆ ಎಂಬ ವಿಚಾರಕ್ಕೆ ಆರ್‌ಎಸ್‌ಎಸ್‌ನ ನಿಲುವುಗಳು ವಿರುದ್ಧವಾಗಿವೆ. ಕುವೆಂಪು ತಮ್ಮ 'ರಾಮಾಯಣ ದರ್ಶನ' ಕೃತಿಯಲ್ಲಿ ಧರ್ಮದ ಅಂಧಭಕ್ತಿಗಿಂತ ಮಾನವೀಯ ಮೌಲ್ಯಗಳಿಗೆ ಒತ್ತು ನೀಡುತ್ತಾರೆ. ಕುವೆಂಪು ಅವರ ಪ್ರಕಾರ, 'ವಿಶ್ವಮಾನವತ್ವವೇ ನಿಜವಾದ ಧರ್ಮ'. ಈ ಮಾತು ಆರ್‌ಎಸ್‌ಎಸ್‌ನ 'ಹಿಂದೂ ರಾಷ್ಟ್ರ'ದ ಸೀಮಿತ ಚಿಂತನೆಗೆ ಸೈದ್ಧಾಂತಿಕ ಉತ್ತರವಾಗಿದೆ.

ನಮ್ಮ ಸಂವಿಧಾನ ಶಿಲ್ಪಿ ಡಾ.ಬಿ. ಆರ್.ಅಂಬೇಡ್ಕರ್, ಪೆರಿಯಾರ್ ಇ.ವಿ. ರಾಮಸ್ವಾಮಿ ಮತ್ತು ಇತ್ತೀಚಿನ ಕಾಲದಲ್ಲಿ ಯುರೋಪಿಯನ್ ಇತಿಹಾಸಕಾರ ಕ್ರಿಸ್ಟೋಫರ್ ಜೆಫ್ರೆಲಾಟ್ ಮುಂತಾದವರು 'ಆರ್‌ಎಸ್‌ಎಸ್‌ನ ಉದ್ದೇಶ ಭಾರತದ ಬಹುಸಂಸ್ಕೃತಿಯ ಸ್ವಭಾವಕ್ಕೆ ಧಕ್ಕೆ ಮಾಡುವಂಥದ್ದು' ಎಂದು ಅಭಿಪ್ರಾಯಪಟ್ಟಿದ್ದಾರೆ. ಅಂಬೇಡ್ಕರ್ ತಮ್ಮ 'ಥಾಟ್ಸ್ ಆನ್ ಪಾಕಿಸ್ತಾನ್' ಕೃತಿಯಲ್ಲಿ, ಹಿಂದೂ ರಾಷ್ಟ್ರದ ಕಲ್ಪನೆ ಅಸಮಾನತೆ ಮತ್ತು ದ್ವೇಷದ ಬೀಜ ಬಿತ್ತುತ್ತದೆ ಎಂದು ಎಚ್ಚರಿಸಿದ್ದರು. ಸಂಘವು ಹೇಗೆ ಹಿಂದೂ ಮುಸ್ಲಿಂ ಭಾವೈಕ್ಯತೆಗೆ ಅಪಾಯಕಾರಿಯಾದುದು ಮತ್ತು ಮುಸ್ಲಿಮರನ್ನು ಅಭದ್ರತೆಗೆ ಸಿಲುಕಿಸಿ ಹೇಗೆ ಅವರನ್ನೂ ಕೋಮುವಾದಿಗಳನ್ನಾಗಿಸುತ್ತದೆ ಎಂದು 'ಥಾಟ್ಸ್ ಆನ್ ಪಾಕಿಸ್ತಾನ್' ಕೃತಿಯ ಪುಟ ಸಂಖ್ಯೆ 241ರಿಂದ ಅಂಬೇಡ್ಕರ್ ಅವರು ವಿವರಿಸುತ್ತಾರೆ.

ಆರ್‌ಎಸ್‌ಎಸ್ 1925ರಲ್ಲಿ ಕೇಶವ ಬಲಿರಾಮ ಹೆಡ್ಗೇವಾರ್ ಅವರಿಂದ ಸ್ಥಾಪಿತವಾದ ಒಂದು 'ಭೂಗತ ಸಂಘಟನೆ'ಯಾಗಿದೆ. ಅದರ ಘೋಷಿತ ಉದ್ದೇಶ 'ಹಿಂದೂ ರಾಷ್ಟ್ರ' ನಿರ್ಮಾಣವಾದರೂ, ಸೈದ್ಧಾಂತಿಕವಾಗಿ ಅದು ಭಾರತೀಯ ಸಂವಿಧಾನದ 'ಸಮಾನತೆ ಮತ್ತು ಸಾಮಾಜಿಕ ನ್ಯಾಯ' ಎಂಬ ಮೌಲ್ಯಗಳ ವಿರುದ್ಧ ನಿಂತಿದೆ. ಸಂಘದ ಚಿಂತನೆಗಳಲ್ಲಿ ಸಾವರ್ಕರ್ 'ಹಿಂದುತ್ವ'– ಅಂದರೆ ಧರ್ಮಕ್ಕಿಂತ ಹೆಚ್ಚಾಗಿ ರಾಷ್ಟ್ರೀಯವಾದದ ಹೆಸರಿನ ಸಂಸ್ಕೃತಿ ಆಧರಿತ ಮೂಲಭೂತವಾದವೇ ಪ್ರಮುಖವಾಗಿದ್ದು, ಇದು ಗಾಂಧೀಜಿಯ ಜಾತ್ಯತೀತತೆ, ಭಾವೈಕ್ಯತೆ, ಅಹಿಂಸೆ ಮತ್ತು ಅಂಬೇಡ್ಕರರ ಬಹುಜನವಾದದ ಭಾರತದ ಪರಿಕಲ್ಪನೆಗೆ ವಿರುದ್ಧವಾಗಿದೆ.

'1930 ಮತ್ತು 1940ರ ದಶಕದ ಉತ್ತರಾರ್ಧದಲ್ಲಿ ಅನೇಕ ಆರ್‌ಎಸ್‌ಎಸ್ ಸದಸ್ಯರು ಯುರೋಪಿಯನ್ ಫ್ಯಾಸಿಸ್ಟ್‌ಗಳೆಡೆಗೆ ಆಕರ್ಷಿತರಾಗಿದ್ದರು. ಈ ಅವಧಿಯಲ್ಲಿ, ಗೋಲ್ವಲ್ಕರ್ ಅವರು ಆರ್‌ಎಸ್‌ಎಸ್ ಅನ್ನು ನಾಜಿ ಶೈಲಿಗೆ ಪರಿವರ್ತಿಸಲು ಪ್ರಯತ್ನಿಸಿದರು' ಎಂದು ದಾಖಲೆಗಳು ಹೇಳುತ್ತವೆ.

ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳದೇ, ಬ್ರಿಟಿಷರ ಒಡೆದು ಆಳುವ ನೀತಿಗೆ ಪೂರಕವಾಗಿ ದೇಶವನ್ನು ಧರ್ಮದ ಮೇಲೆ ಒಡೆಯುವಲ್ಲಿ ಆರ್‌ಎಸ್‌ಎಸ್ ಬ್ರಿಟಿಷರಿಗೆ ಸಹಕಾರ ನೀಡಿತ್ತು. ಮಹಾತ್ಮ ಗಾಂಧಿ ನೇತೃತ್ವದ ಚಳವಳಿ ದೇಶವನ್ನು ಸ್ವತಂತ್ರಗೊಳಿಸಲು ಸಿದ್ಧತೆ ನಡೆಸುತ್ತಿದ್ದಾಗ, ದೇಶದಲ್ಲಿ ಮತೀಯ ಭಾವನೆಗಳ ಮೂಲಕ ಸ್ವಾತಂತ್ರ್ಯ ಹೋರಾಟದಲ್ಲೇ ಆಂತರಿಕ ಸಂಘರ್ಷವನ್ನು ಆರ್‌ಎಸ್‌ಎಸ್ ಸೃಷ್ಟಿಸಿತು.

ಗಾಂಧಿಯವರ ಹತ್ಯೆಯ ನಂತರ ಆರ್‌ಎಸ್‌ಎಸ್ ಮೇಲೆ ಸರ್ಕಾರವು ಅನಿವಾರ್ಯವಾಗಿ ದಮನ ಕ್ರಮ ಕೈಗೊಂಡಿತು. ಆರ್‌ಎಸ್‌ಎಸ್ ಅನ್ನು ಒಂದೂವರೆ ವರ್ಷ ಕಾಲ ನಿಷೇಧಿಸಲಾಯಿತು. ಗಾಂಧಿ ಹತ್ಯೆಯ ನಂತರ ಇಂದಿನವರೆಗೂ ಆರ್‌ಎಸ್‌ಎಸ್ ಭೂಗತ ಕಾರ್ಯಾಚರಣೆಯನ್ನೇ ನಡೆಸುತ್ತಿದೆ. ಆರ್‌ಎಸ್‌ಎಸ್ ಇಂದಿಗೂ ನೋಂದಾವಣೆಗೊಳ್ಳದ ಸಂಘಟನೆಯಾಗಿದ್ದು, ದೇಶದ ಎಲ್ಲಾ ಮತೀಯ ಗಲಭೆಗಳು, ಆಂತರಿಕ ಭಯೋತ್ಪಾದನೆಗಳು, ಸಾಮೂಹಿಕ ಹತ್ಯೆಗಳಲ್ಲಿ ಆರ್‌ಎಸ್‌ಎಸ್ ಪಾತ್ರವಿದ್ದರೂ ಅದು ಕಾನೂನಿನ ಕೈಗೆ ಸಿಗದಂತೆ ಭೂಗತ ಕಾರ್ಯಾಚರಣೆಯನ್ನೇ ಇಂದಿಗೂ ನಡೆಸುತ್ತಿದೆ.

ಭಾರತದ ಕಾರ್ಮಿಕ ವರ್ಗ, ರೈತರು ಮತ್ತು ಶೋಷಿತರ ಶಕ್ತಿ ಯಾವಾಗಲೂ ಸಾಮಾಜಿಕ ಬದಲಾವಣೆಯ ಮೂಲವಾಗಿದೆ. ಆದರೆ, ಈ ಶಕ್ತಿಯ ಸಂಘಟಿತ ಧಾರೆಗೆ ಅಡ್ಡಿಯಾಗುತ್ತಿರುವ ಪ್ರಮುಖ ಸಂರಚನೆಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಕೂಡ ಒಂದು. ತನ್ನನ್ನು ಸಾಂಸ್ಕೃತಿಕ ಸಂಸ್ಥೆ ಎಂದು ಕರೆದುಕೊಳ್ಳುವ ಈ ಸಂಘವು ವಾಸ್ತವದಲ್ಲಿ ವರ್ಗಭೇದ, ಜಾತಿಭೇದ ಮತ್ತು ಪಿತೃತ್ವಾಧಾರಿತ ವ್ಯವಸ್ಥೆಯನ್ನು ಕಾಪಾಡುವ ರಾಜಕೀಯ–ಸಾಮಾಜಿಕ ಸಂಘಟನೆಯಾಗಿದೆ. ಇದನ್ನು ದೇವನೂರರ ಲೇಖನವು ಸೂಚ್ಯವಾಗಿ ದಾಖಲಿಸಿದೆ.

ಆರ್‌ಎಸ್‌ಎಸ್‌ನ ಆಧಾರವಾದ ಹಿಂದುತ್ವ ಸಿದ್ಧಾಂತ ದುಡಿಯುವ ವರ್ಗವನ್ನು ವಿಭಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಒಂದು ಕಡೆ 'ಹಿಂದೂ ಏಕತೆ' ಎಂಬ ಘೋಷಣೆಯನ್ನು ಕೂಗುತ್ತಾ, ಮತ್ತೊಂದು ಕಡೆ ಜಾತಿ, ಮತ, ಭಾಷೆ ಆಧಾರಿತ ವಿಭಜನೆಗಳನ್ನು ಮಾಡುತ್ತಿದೆ. ಈ ವಿಭಜನೆಗಳು ದುಡಿಯುವ ವರ್ಗದ ಏಕತೆಯ ವಿರುದ್ಧವಾದ ಅಸ್ತ್ರಗಳಾಗಿ ಕಾರ್ಯನಿರ್ವಹಿಸುತ್ತವೆ.

ಕೃಷಿ, ಕಾರ್ಖಾನೆ ಮತ್ತು ಕಟ್ಟಡ ಕಾರ್ಮಿಕರ ಹೋರಾಟಗಳಲ್ಲಿ ಆರ್‌ಎಸ್‌ಎಸ್-ಬಿಜೆಪಿ ಪ್ರಭಾವಿತ ಸಂಘಟನೆಗಳು 'ರಾಷ್ಟ್ರಪ್ರೇಮ' ಅಥವಾ 'ಧರ್ಮರಕ್ಷಣೆ' ಎಂಬ ಹೆಸರಿನಲ್ಲಿ ಕಾರ್ಮಿಕರ ಮೂಲ ಹಕ್ಕುಗಳನ್ನು ಕುಗ್ಗಿಸಲು ಯತ್ನಿಸುತ್ತಿವೆ. ಕೇಂದ್ರದ ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆಗಳು, ವೇತನ ಕಡಿತ ಇವುಗಳೆಲ್ಲವೂ ಆರ್ಥಿಕ ಶೋಷಣೆಯೊಂದಿಗೆ ಸಾಂಸ್ಕೃತಿಕ ನಿಯಂತ್ರಣವನ್ನು ಕೂಡ ಬಲಪಡಿಸುತ್ತವೆ.

ಕರ್ನಾಟಕದಲ್ಲಿ ಆರ್‌ಎಸ್‌ಎಸ್‌ನ ಕಾರ್ಮಿಕ ವಿರೋಧಿ ನಿಲುವುಗಳಿಗೆ ಹಲವು ಸ್ಪಷ್ಟ ಉದಾಹರಣೆಗಳು ಸಿಗುತ್ತವೆ. ಪೀಣ್ಯ, ಚಿಕ್ಕಬಳ್ಳಾಪುರ, ಬೆಳಗಾವಿ ಮುಂತಾದ ಪ್ರದೇಶಗಳಲ್ಲಿ ಕಾರ್ಮಿಕರು ವೇತನ ಹೆಚ್ಚಳಕ್ಕಾಗಿ ಹೋರಾಡಿದಾಗ, ಆರ್‌ಎಸ್‌ಎಸ್‌ನಿಂದ ಪ್ರೇರಿತವಾದ ಸಂಘಟನೆಗಳು 'ರಾಷ್ಟ್ರದ ಹಿತ' ಎಂಬ ನೆಪದಲ್ಲಿ ಮುಷ್ಕರ ವಿರೋಧಿ ನಿಲುವು ತಳೆದವು. ರೈತ ಚಳವಳಿಗಳ ಸಂದರ್ಭದಲ್ಲಿ ಸಹ, ಹಿಂದೂ ಧರ್ಮದ ಹೆಸರಿನಲ್ಲಿ ಸರ್ಕಾರದ ಪರ ನಿಂತು 'ವಿದೇಶಿಪ್ರೇರಿತ ರೈತ ಹೋರಾಟ, ಖಲಿಸ್ತಾನಿಪ್ರೇರಿತ ರೈತ ಹೋರಾಟ' ಎಂದು ರೈತ ನಾಯಕರ ವಿರುದ್ಧ ದ್ವೇಷದ ಪ್ರಚಾರ ನಡೆಸಿತು.

ಆರ್‌ಎಸ್‌ಎಸ್‌ನ ಮೂಲ ತತ್ವವು ದುಡಿಯುವ ವರ್ಗದ ವಿಮೋಚನೆಗೆ ವಿರುದ್ಧವಾಗಿದೆ. ಕಾರ್ಮಿಕರ ರಾಜಕೀಯ ಶಕ್ತಿಯನ್ನು ನಿರ್ಲಕ್ಷ್ಯ ಮಾಡುವುದಷ್ಟೇ ಅಲ್ಲ, ಅವರನ್ನು 'ರಾಷ್ಟ್ರದ ಯೋಧರು' ಎಂಬ ಭಾವನಾತ್ಮಕ ಬಲೆಯಿಂದ ಬುದ್ಧಿಶೋಷಣೆಗೆ ಒಳಪಡಿಸುತ್ತದೆ. ಈ ಬಲೆಗೆ ಸಿಲುಕದವರನ್ನು 'ರಾಷ್ಟ್ರದ್ರೋಹಿಗಳು' ಎಂದು ಆರ್‌ಎಸ್‌ಎಸ್ ಕರೆಯುತ್ತದೆ.

ಅಲ್ಪಸಂಖ್ಯಾತ ಸಮುದಾಯಗಳ ಅಮಾಯಕ ಬಡ ಜನರ ಬದುಕಿನ ಮೇಲೆ ಬುಲ್ಡೋಜರ್ ಸಂಸ್ಕೃತಿಯ ಹೇರಿಕೆಗೆ ಆರ್‌ಎಸ್‌ಎಸ್ ಮುನ್ನುಡಿ ಬರೆದಿರುವುದು ದೇಶದ ದುಡಿಯುವ ವರ್ಗದ ಮೇಲಿನ ಭೀಕರ ದಾಳಿಗೆ ಸಾಕ್ಷಿ.

ಆರ್‌ಎಸ್‌ಎಸ್ ಬಗ್ಗೆ ಯುವಸಮುದಾಯ ಎಚ್ಚೆತ್ತುಕೊಳ್ಳದೇ ಇದ್ದರೆ ಅದು ದೇಶವನ್ನು ಆಪೋಷನ ತೆಗೆದುಕೊಳ್ಳುತ್ತದೆ. ಭೂಗತ ಸಂಘಟನೆಯೊಂದು ದೇಶವನ್ನು ನಿಗೂಢವಾಗಿ ಆಳುತ್ತಾ, ಮತ್ತೊಂದೆಡೆ ದೇಶವನ್ನು ಜಾತಿ, ಧರ್ಮಗಳ ಮೂಲಕ ಒಡೆದು ಸಾವು–ನೋವಿಗೆ ಕಾರಣವಾಗುತ್ತಾ ರಾಷ್ಟ್ರವನ್ನು ಅಧಃಪತನದತ್ತ ಕೊಂಡೊಯ್ಯುತ್ತದೆ ಎಂಬ ಎಚ್ಚರಿಕೆ ನಮಗಿರಬೇಕು. ದೇವನೂರರು ಈ ಆಶಯವನ್ನು ತಮ್ಮದೇ ರೀತಿಯಲ್ಲಿ ಪ್ರಸ್ತುತಪಡಿಸಿದ್ದಾರೆ.

ಲೇಖಕ: ವಿಧಾನ ಪರಿಷತ್ ಸದಸ್ಯ

ದೇಮ ಲೇಖನ ನಿಖರ

● ಕೆ.ಪಿ.ಸುರೇಶ

ಒಂದು ಪದವೂ ಅಳಿಸುವಂತಿಲ್ಲ ಎಂಬಷ್ಟು ದೇಮ ಬರೆದ ಲೇಖನ ನಿಖರವಾಗಿದೆ!

ಸರ್ವೋಚ್ಚ ನಾಯಕನ ಆಣತಿಯನ್ನು ಚಾಚೂ ತಪ್ಪದೇ ಅನುಸರಿಸುವ, ಅವನ ಮಾತು, ನಕಾಶೆಗಳನ್ನಷ್ಟೇ ನಂಬುವ ಒಂದು ಪಡೆ ನಿರ್ಮಾಣ ಆರ್‌ಎಸ್‌ಎಸ್‌ನ ಗುರಿ. ಇಂಥಾ ಹಲವಾರು ಪಂಥಗಳು ಜಗತ್ತಿನಾದ್ಯಂತ ಇವೆ. ಸಂಖ್ಯೆ ಕಡಿಮೆ ಇದ್ದಲ್ಲಿ ಯಾರನ್ನೂ ಮುಟ್ಟಿಸಿಕೊಳ್ಳದೇ ಕೂತಿರುತ್ತವೆ. ಸಂಖ್ಯಾಬಾಹುಳ್ಯ ದಕ್ಕಿದಾಗ ಭೀಕರ ಯಜಮಾನಿಕೆ ಶುರು ಮಾಡುತ್ತವೆ. ಆರ್‌ಎಸ್‌ಎಸ್, ಕಾಲಕಾಲದ ಸವಾಲುಗಳನ್ನು ನಿಭಾಯಿಸುವ ರಿಫ್ಲೆಕ್ಸ್ ಹೊಂದಿದೆ. ಅದಕ್ಕೇ ಅದು ಉಳಿದ ಜಾಗತಿಕ ವಿಕೃತ ಸಂಘಟನೆಗಳಿಗಿಂತ ಹೆಚ್ಚು ಬಲಾಢ್ಯವಾಗಿದೆ.

ಅರ್ಧ ಶತಮಾನದ ಹಿಂದೆ ತನ್ನ ಒಳತಿರುಳಾಗಿದ್ದ ಸಾಂಪ್ರದಾಯಿಕ ಚಾತುರ್ವರ್ಣದ ಅಧಿಪತ್ಯಕ್ಕೆ ಅದು ಹೊಸ ತಿರುವು ಕೊಟ್ಟಿದೆ. ನಾಲ್ಕು ವರ್ಣಗಳ ಆಚೆಯ ಸಮುದಾಯಗಳಿಗೆ ಅಧಿಕಾರ, ಸ್ಥಾನಮಾನಗಳ ಕೇಕ್‌ನ ಸಣ್ಣ ತುಣುಕು ಎಸೆದು ಊಟದ ಮೇಜಿನ ಮೂಲೆಯಲ್ಲಿ ಜಾಗ ಕೊಟ್ಟಿದೆ. ಈ 'ಸಹಿಷ್ಣುತೆ', ಪ್ರತಿರೋಧವನ್ನು ಜೀರ್ಣಿಸಿಕೊಳ್ಳುವ ತಂತ್ರ. ಆದ್ದರಿಂದಲೇ ಎಸ್‌ಸಿ, ಎಸ್‌ಟಿ ಮೀಸಲು ಸಂಸತ್/ ಶಾಸನ ಸಭಾ ಸ್ಥಾನಗಳಲ್ಲೂ ಬಿಜೆಪಿ ಹೆಚ್ಚು ಸ್ಥಾನ ಪಡೆದಿದೆ. ದ್ವೇಷಪೂರಿತ ಯಜಮಾನಿಕೆಯ ಪೌರುಷ ಪ್ರದರ್ಶನಕ್ಕೆ, ತನ್ಮೂಲಕ ಗಮನ ಸೆಳೆವ ಚಪಲಕ್ಕೊಲಿದ ಹಿಂದುಳಿದ ಜಾತಿ ಯುವಕರನ್ನೇ ಕಣಕ್ಕಿಳಿಸಿದೆ! ಈ ಕಾರ್ಯತಂತ್ರದ ಅರಿವಿಲ್ಲದೇ ಆರ್‌ಎಸ್‌ಎಸ್ ಶಕ್ತಿಯನ್ನು ಉಡುಗಿಸುವುದು ಹುತ್ತ ಕೆಡವಿದಷ್ಟೇ ನಿಷ್ಪ್ರಯೋಜಕ.

ಲೇಖಕ: ಚಿಂತಕ

ಸಿದ್ಧಾಂತದ ಸೆರೆಯಲ್ಲಿ ಸಿಲುಕಿದ ಚಿಂತನೆ

● ಡಾ.ನಿರಂಜನ ಪೂಜಾರ

ದೇವನೂರ ಮಹಾದೇವ ಅವರ ಲೇಖನವು ಆರ್‌ಎಸ್‌ಎಸ್ ಕುರಿತು ಅವರ ಅಪೂರ್ಣ ಅಧ್ಯಯನ ಮತ್ತು ಪೂರ್ವಗ್ರಹಗಳ ಪ್ರತಿಬಿಂಬ. ತಮ್ಮನ್ನು 'ಮುಕ್ತ ಚಿಂತಕ' ಎಂದು ಕರೆದುಕೊಳ್ಳುವ ಅವರು, ಕಾರ್ಲ್ ಮಾರ್ಕ್ಸ್‌ನ ವರ್ಗಸಂಘರ್ಷದ ಸೀಮಿತ ಚೌಕಟ್ಟಿನಲ್ಲಿಯೇ ಬಂಧಿತರಾಗಿರುವುದು ವಿಪರ್ಯಾಸ.

ಸಂಘದ ಆಳ ಮತ್ತು ಅಗಲವನ್ನು ಅರಿಯಲು ಕೇವಲ ಪುಸ್ತಕದ ಓದು ಸಾಕಾಗದು; ಶಾಖೆಗೆ ಬಂದು ಅದರ ಸ್ಪಂದನೆಯನ್ನು ಅನುಭವಿಸಬೇಕು. ಆರ್‌ಎಸ್‌ಎಸ್ ಶಾಖೆಯು ಭಾರತದಲ್ಲಿ ಜಾತಿ-ಭೇದ ಅಸ್ತಿತ್ವದಲ್ಲೇ ಇಲ್ಲದ ಏಕೈಕ ಸ್ಥಳ. ಇಲ್ಲಿ ಎಲ್ಲ ಸ್ವಯಂಸೇವಕರು ಒಂದೇ ಸಾಲಿನಲ್ಲಿ ನಿಂತು ವ್ಯಾಯಾಮ ಮಾಡುತ್ತಾರೆ, ಎಲ್ಲರೂ ಒಟ್ಟಾಗಿ ಊಟ ಮಾಡುತ್ತಾರೆ, ಆಟ ಆಡುತ್ತಾರೆ, ಒಂದೇ ಧ್ವಜಕ್ಕೆ ಪ್ರಣಾಮ ಸಲ್ಲಿಸುತ್ತಾರೆ. 'ಸಮಾನತೆ' ಬಗ್ಗೆ ಘೋಷಣೆ ಕೂಗುವ ರಾಜಕೀಯ ಪಕ್ಷಗಳು ತಮ್ಮದೇ ಸಂಘಟನೆಯಲ್ಲಿ ಅದನ್ನು ಜಾರಿಗೊಳಿಸಲು ವಿಫಲವಾಗಿವೆ. ಆದರೆ ಸಂಘ ಎಂದೂ, ಯಾರನ್ನೂ ಜಾತಿ ಕೇಳಿಲ್ಲ.

ಸಂಘದ ಮೇಲೆ 'ಕೋಮುವಾದಿ' ಎಂಬ ಆರೋಪ ಮಾಡುವವರು, ಸಂಘದ ನೂರಾರು ಸಮಾಜಸೇವಾ ಯೋಜನೆಗಳತ್ತ ದೃಷ್ಟಿ ಹರಿಸಬೇಕು. ಸೇವಾ ಭಾರತಿ, ಹಳ್ಳಿಗಳಲ್ಲಿ ಶಾಲೆಗಳು, ಆಸ್ಪತ್ರೆಗಳು, ಬಾಲ ಸಂಸ್ಕಾರ ಕೇಂದ್ರಗಳು, ಅನಾಥಾಶ್ರಮಗಳು ಮತ್ತು ಮಹಿಳಾ ಸಬಲೀಕರಣ ಯೋಜನೆಗಳ ಮೂಲಕ ಕೋಟ್ಯಂತರ ಜನರ ಬದುಕನ್ನು ಬದಲಾಯಿಸಿದೆ. ಸಮಾಜವನ್ನು ವಿಭಜನೆಯ ಬದಲಿಗೆ ಒಗ್ಗೂಡಿಸುವ ಇಷ್ಟು ದೊಡ್ಡ ಕಾರ್ಯವನ್ನು ಮಾಡಿದ ಇನ್ನೊಂದು ಸಂಸ್ಥೆ ಭಾರತದ ಇತಿಹಾಸದಲ್ಲಿ ಇಲ್ಲ.

ಲೇಖಕ: ಕೇಂದ್ರೀಯ ವಿವಿಯಲ್ಲಿ ಪ್ರಾಧ್ಯಾಪಕ

ತೀವ್ರ ಆಲೋಚನೆ ಮಾಡಬೇಕು

● ನಾಗೇಗೌಡ ಕೆ.ಎಸ್.

'ಕೂಡಿಸುವುದು ದೈವ; ವಿಭಜಿಸುವುದು ದೆವ್ವ' ಎನ್ನುವುದು ಭಾರತೀಯ ವಿವೇಕ ಎಂದು ಮಹಾದೇವರು ಹೇಳುತ್ತಾರೆ. ಆರ್‌ಎಸ್‌ಎಸ್ ಒಂದು ರೀತಿಯಲ್ಲಿ ಡೀಪ್ ನೇಷನ್– 'ನಾಡ ಜನರ ಹತೋಟಿ ಕೂಟ' ಎಂದು ದಿನೇಶ್ ನಾರಾಯಣ್ ತಮ್ಮ ಪುಸ್ತಕದಲ್ಲಿ ಹೇಳುತ್ತಾರೆ. ದೇಶದ ಪ್ರತಿ ಪ್ರಜೆ-ಸಂಸ್ಥೆಯನ್ನೂ, ಪ್ರಜಾಪ್ರಭುತ್ವ ಸಂರಚನೆಯಲ್ಲಿನ ಸರ್ಕಾರ, ನ್ಯಾಯಾಂಗ, ಮಿಲಿಟರಿ, ಪೊಲೀಸ್ ಎನ್ನದೇ ಎಲ್ಲವನ್ನೂ ಆರ್‌ಎಸ್‌ಎಸ್ ತನ್ನ ಸಿದ್ಧಾಂತದ ಹತೋಟಿಗೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಲೇ ಇದೆ ಮತ್ತು ನೂರು ವರ್ಷಗಳಲ್ಲಿ ಬಹುಪಾಲು ಯಶವನ್ನೂ ಕಂಡಿದೆ.

ಆರ್‌ಎಸ್‌ಎಸ್ ತನ್ನನ್ನು ತಾನು ಕಾನೂನಿನ ಚೌಕಟ್ಟಿನೊಳಗೆ ಎಂದಿಗೂ ನೋಂದಣಿ ಮಾಡಿಕೊಳ್ಳುವುದಿಲ್ಲ. 'ಶಾಖೆ' ಎಂಬುದು ಗೋಲ್ವಲ್ಕರ್ ಅವರಿಗೆ ಕಲಿಸಿದ ಬೀಜಮಂತ್ರ. ಅದರ ಸಿದ್ಧಾಂತದ ಗುರಿಯೇ ವ್ಯಕ್ತಿ, ಸಮಾಜ, ನಾಗರಿಕ-ಪ್ರಜಾಪ್ರಭುತ್ವ ಸಂಸ್ಥೆಗಳೆಲ್ಲವನ್ನೂ ಆರ್‌ಎಸ್‌ಎಸ್ ಶಾಖೆಯ ತದ್ರೂಪಗಳನ್ನಾಗಿಸುವುದು. ಈ ಕ್ಲೋನಿಂಗ್ ಪ್ರಕ್ರಿಯೆ ಸಫಲವಾದಲ್ಲಿ ಆರ್‌ಎಸ್‌ಎಸ್ ಸಿದ್ಧಾಂತವು ದೆವ್ವದ ರೀತಿಯಲ್ಲಿ ವಿರಾಟಪುರುಷ ರೂಪ ತಳೆಯುತ್ತದೆ. ನಂತರದಲ್ಲಿ ನೋಂದಣಿ ಮಾಡಿಸಲು ಯಾವುದೇ ಪ್ರಜಾಪ್ರಭುತ್ವದ ಸಂಸ್ಥೆಗಳೇ ಉಳಿದಿರುವುದಿಲ್ಲ. ಇದನ್ನೇ 'ಡೀಪ್ ನೇಷನ್' ಎಂದು ಕರೆಯುವುದು.

ಈ 'ಡೀಪ್ ನೇಷನ್'ನಿಂದ ಮುಕ್ತಿ ಪಡೆಯಲು ಮಹಾದೇವರು ಬಹಳ ಸೌಮ್ಯ ಸಾಂಪ್ರದಾಯಿಕ ನೆಲೆಯಲ್ಲಿ ಪರಿಹಾರವನ್ನು ಸೂಚಿಸಿದ್ದಾರೆ. ಆದರೆ, ಜನರನ್ನು ವಿಭಜಿಸುವ ಆರ್‌ಎಸ್‌ಎಸ್ ಸಿದ್ಧಾಂತವನ್ನು ತದ್ರೂಪದಲ್ಲಲ್ಲ, ಮೂಲಘಟಕದಲ್ಲೇ ಕಿತ್ತು ಇಲ್ಲವಾಗಿಸಲು ತೀವ್ರತರವಾದ ಆಲೋಚನೆ ಮಾಡಬೇಕೆಂಬುದು ನನ್ನ ಅಭಿಮತ.

ಅಂಬೇಡ್ಕರ್ ಮಾತುಗಳನ್ನು ಸ್ಮರಿಸಿ

● ಕೆ.ಮುಕುಡಪ್ಪ

ದೇವನೂರ ಮಹಾದೇವ ಅವರು ಆರ್‌ಎಸ್‌ಎಸ್‌ಗೆ ಎಳೆತನದಲ್ಲಿಯೇ ಬುದ್ಧಿ ಸ್ಥಗಿತಗೊಂಡು ದೇಹ ಮಾತ್ರ ದಡೂತಿಯಾಗಿದೆ ಎಂದು ವ್ಯಂಗ್ಯಭರಿತ ಲೇಖನ ಬರೆದಿದ್ದಾರೆ. ಆರ್‌ಎಸ್‌ಎಸ್ ವಿರೋಧಿಸುವವರಿಗೆ ನಾನು ಹೇಳಬಯಸುವುದಿಷ್ಟೆ: ನೀವು ಇತಿಹಾಸದ ಕಡೆ ಗಮನಹರಿಸಿ. ಈ ದೇಶದಲ್ಲಿ ಬ್ರಿಟಿಷರು ಬಂದು ಹಿಂದೂ ಮುಸ್ಲಿಮರ ನಡುವೆ ದ್ವೇಷದ ಬೀಜ ಬಿತ್ತಿದರು. ಗಾಂಧೀಜಿ ಮತ್ತು ಸಮಾಜವಾದಿಗಳು ಅದಕ್ಕೆ ನೀರೆರೆದು ಬೆಳೆಸಿದರು; ಕೆಲವರು ಈಗಲೂ ಬೆಳೆಸುತ್ತಲೇ ಇದ್ದಾರೆ.

ದೇಶದಲ್ಲಿ ಕಾಂಗ್ರೆಸ್ ಮತ್ತು ಗಾಂಧೀಜಿ ಅವರ ಮುಸ್ಲಿಂ ಓಲೈಕೆ ಜಾಸ್ತಿಯಾಗಿ, ಹಿಂದೂಗಳಿಗೆ ಅಭದ್ರತೆ ಕಾಡುತ್ತಿರುವುದನ್ನು ಮನಗಂಡು, ಕೇಶವ ಬಲಿರಾಮ ಹೆಡ್ಗೇವಾರ್ ನೇತೃತ್ವದಲ್ಲಿ ಆರ್‌ಎಸ್‌ಎಸ್ ಸ್ಥಾಪನೆಯಾಯಿತು. ಇನ್ನೊಂದೆಡೆ, ಮುಸ್ಲಿಮರ ಪ್ರತ್ಯೇಕ ಮತದಾನದ ಪ್ರತಿಪಾದನೆಯನ್ನು ಬೆಂಬಲಿಸಿದ ಗಾಂಧೀಜಿ, ದಲಿತರ ಪ್ರತ್ಯೇಕ ಕಾಯ್ದೆಯನ್ನು ವಿರೋಧಿಸಿದರು. ಗಾಂಧೀಜಿ ಮತ್ತು ಕಾಂಗ್ರೆಸ್ ಎಂದೂ ದಲಿತ ಪರ ಇರಲಿಲ್ಲ ಎಂದು ಅಂಬೇಡ್ಕರ್ ಹೇಳಿದ್ದಾರೆ. ಬಂಡಾಯ ಸಾಹಿತಿಯಾದ ದೇವನೂರರು, ಅಂಬೇಡ್ಕರ್ ಹೃದಯದ ಅಂತರಾಳದ ಮಾತುಗಳನ್ನು ಸ್ಮರಿಸಲಿ. ಜಾತ್ಯತೀತ ನಾಯಕರು, ಗಾಂಧಿ ಹಾಗೂ ಕಾಂಗ್ರೆಸ್ ಅಸ್ಪೃಶ್ಯರಿಗೆ ಏನು ಮಾಡಿವೆ ಎಂದು ಒಮ್ಮೆ ಅವರು ಆತ್ಮನಿರೀಕ್ಷೆ ಮಾಡಿಕೊಳ್ಳಲಿ.

ಲೇಖಕ: ಕೆಪಿಎಸ್‌ಸಿ ಮಾಜಿ ಸದಸ್ಯ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

11 ಅಕ್ಟೋಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಪಂಚಮಿ ಗಂ. 16-44 ನಕ್ಷತ್ರ: ರೋಹಿಣಿ ಗಂ. 15-20, ಯೋಗ: ವ್ಯತೀಪಾತ ಗಂ. 14-07 ಕರಣ: ಕೌಲವ ಗಂ. 6-08 ಕನ್ಯಾ ಮಾಸದ 24 ನೇ ದಿನ. ಮಳೆ ನಕ್ಷತ್ರ : ಚಿತ್ತಾ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 10-30 ಸೂರ್ಯೋದಯ : 06-24 ಸೂರ್ಯಾಸ್ತ : 06-10, ಮುಸ್ಲಿಂ ದಿನಾಂಕ : 18 ರಬಿಯುಸ್ಸಾನಿ. ಅದೃಷ್ಟ ಸಂಖ್ಯೆ : 5, 9

ಮೇಷ: ಸಾವಧಾನದಿಂದ ದಿನದ ಕೆಲಸಗಳನ್ನು ಮಾಡಿ ಮುಗಿಸುವಿರಿ. ಮದುವೆಯ ವಿಷಯದಲ್ಲಿ ಮಗನೊಡನೆ ಮುಕ್ತ ಮನಸ್ಸಿನ ಮಾತುಕತೆ ನಡೆಯುವುದು. ಆರೋಗ್ಯ ಉತ್ತಮವಾಗಿರುವುದು.

ವೃಷಭ: ಕಳುವಾಗಿದ್ದ ವಸ್ತುಗಳು ಪುನಃ ದೊರೆತು ಸಂತಸವಾಗಲಿದೆ. ಲೇಖನ ಬರೆಯುವುದರಿಂದ ಜನಸಂಪರ್ಕ ಅಭಿವೃದ್ಧಿಯಾಗಲಿದೆ. ಮಾತಿನಲ್ಲಿ ಹಿಡಿತವಿರಲಿ.

ಮಿಥುನ: ತಾಳ್ಮೆಯಿಂದ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ತಂದೆ ಅವರಿಂದ ಎಚ್ಚರಿಕೆಯ ಮಾತು ಕೇಳಿ ಬರಲಿದೆ. ಮದುವೆಯ ವಿಷಯಕ್ಕೆ ಸಂಬಂಧಿಸಿದಂತೆ ತಾಯಿಯ ಮನವೊಲಿಸುವಲ್ಲಿ ಯಶಸ್ವಿಯಾಗುವಿರಿ.

ಕರ್ಕಾಟಕ: ಖರ್ಚುವೆಚ್ಚಗಳು ನಿಯಂತ್ರಣದಲ್ಲಿ ಇರಲಿ . ಮನೆಯಲ್ಲಿ ಅಲಂಕಾರಿಕ ವಸ್ತುಗಳ ಖರೀದಿಗೆ ಅಧಿಕ ಖರ್ಚು ಬಂದೀತು.ಸಣ್ಣ ವಿಚಾರದಲ್ಲಿ ಅಶಾಂತಿ ತೋರಿಬಂದು ದಾಂಪತ್ಯದಲ್ಲಿ ಕಿರಿಕಿರಿ ಎನಿಸಲಿದೆ.

ಸಿಂಹ: ಕೌಟುಂಬಿಕವಾಗಿ ಪ್ರಮುಖ ವಿಷಯವೊಂದು ತಿಳಿದುಬರಲಿದೆ. ಮುಕ್ತ ಮನಸ್ಸಿನ ಮಾತುಕತೆಗಳಿಂದ ಸರಿಪಡಿಸಿಕೊಳ್ಳಬಹುದು. ಕೆಲಸಗಳೆಲ್ಲವೂ ನಿರಾತಂಕವಾಗಿ ಸಾಗಲಿವೆ. ಸತ್ಕಾರ ಕೂಟಗಳಿಗೆ ಆಹ್ವಾನ ಬರಲಿದೆ.

ಕನ್ಯಾ: ಉದ್ಯೋಗ ಬದಲಿಸುವ ವಿಚಾರದಲ್ಲಿ ಯೋಚಿಸಿ. ಅಂದುಕೊಂಡಿರುವ ಕೆಲಸಗಳು ಉತ್ತಮವಾಗಿ ನೆರವೇರುವುದರಿಂದ ನೆಮ್ಮದಿ ಇರುವುದು. ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸುವಿರಿ.

ತುಲಾ: ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲ ಬದಲಾವಣೆಗಳನ್ನು ಮಾಡಿಕೊಂಡಲ್ಲಿ ವ್ಯವಹಾರಗಳಲ್ಲಿ ಉತ್ತಮ ಧನಲಾಭ ಕಾಣುವಿರಿ. ರಾಜಕೀಯ ಸನ್ನಿವೇಶಗಳು ಅನುಕೂಲವಾಗಿರುವುದು.

ವೃಶ್ಚಿಕ: ಕ್ರೀಡಾಪಟುಗಳಿಗೆ ಸಂತಸಕರ ಸುದ್ದಿ ಬರಲಿದೆ. ವಿವಾಹಯೋಗ್ಯರಿಗೆ ವಿವಾಹ ಭಾಗ್ಯ ಒದಗಿಬರುವುದು. ವಿದೇಶ ವ್ಯವಹಾರಗಳಿಂದ ಲಾಭವನ್ನು ಕಾಣುವಿರಿ. ಅನಗತ್ಯ ಚಿಂತೆ ಮೈಮೇಲೆ ಎಳೆದುಕೊಳ್ಳಬೇಡಿ.

ಧನು: ಓದು ಅಥವಾ ಉದ್ಯೋಗ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸಲಹೆ ದೊರೆಯಲಿದೆ. ಹೂಡಿಕೆ ಮಾಡುವುದು ಸದ್ಯ ಲಾಭದಾಯಕವಾಗಿ ತೋರುವುದಿಲ್ಲ. ತೋಟದ ಕೆಲಸಗಳಿಗೆ ಶ್ರಮ ಪಡುವಂತಾಗಲಿದೆ.

ಮಕರ: ವಿಮಾ ಕ್ಷೇತ್ರದಲ್ಲಿ ಸಾಧನೆ ತೋರಿದ್ದಕ್ಕೆ ಸಂಸ್ಥೆಯವರಿಂದ ವಿಶೇಷ ಪುರಸ್ಕಾರಗಳು ದೊರೆಯಲಿವೆ. ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವ ಅವಕಾಶ ಸಿಗಲಿದೆ. ಆರೋಗ್ಯದಲ್ಲಿ ಗಮನವಿರಲಿ.

ಕುಂಭ: ಆದಾಯವಿರುವುದರಿಂದ ನೆಮ್ಮದಿ ತೋರುವುದು. ಕ್ರಯ ವಿಕ್ರಯಗಳಿಗೆ ಇದು ಉತ್ತಮ ಕಾಲ. ಸಾಧ್ಯವಾದಷ್ಟು ಸಮಾಧಾನವಿದ್ದಲ್ಲಿ ಮಾನಸಿಕ ನೆಮ್ಮದಿ ಕಾಣುವಿರಿ. ಆರ್ಥಿಕವೃದ್ಧಿ, ಆರೋಗ್ಯವೃದ್ಧಿ.

ಮೀನ: ನೂತನ ಕಾರ್ಯ ಅಥವಾ ಗೃಹ ನಿರ್ಮಾಣದಂಥ ಕೆಲಸಗಳಿಗಾಗಿ ಸಮಯ ವಿನಿಯೋಗಿಸುವಿರಿ. ರಕ್ತದೊತ್ತಡ ಕಡಿಮೆಯಾಗಿ ಮನಸ್ಸಿಗೆ ಸಮಾಧಾನ ಉಂಟಾಗಲಿದೆ. ಔಷಧ ವ್ಯಾಪಾರಗಳಿಂದ ಲಾಭ ಹೊಂದುವಿರಿ.

ಪದಬಂಧ 6190


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆನೆಗಳ ಒಡೆಯ (4)
3.ಗಾಳಿಪಟದ ಕೆಳಗೆ ಸಮತೋಲನಕ್ಕಾಗಿ ಕಟ್ಟುವ ಕುಚ್ಚು (4)
5.ರಾಮನ ಮಗ ಹಿಡಿದಿರುವ ಉಪ್ಪು (3)
7.ಶರಣ ಹಿಡಿದಿರುವ ಬಾಣ (2)
9.ನೀನೊಲಿದರೆ ಕೊರಡು ಹೀಗೆ ಚಿಗುರೀತು! (3)
10.ಮುಷ್ಟಿಯಿಂದ ಹೊಡೆಯುವಿಕೆ (2)
11.ಸೂರು ಅಥವಾ ಕಪಾಟು (2)
12. ಕಟಕಟ ಸದ್ದು ಮಾಡುವ ಬಂಡಿ (3)
14.ರಭಸದಲ್ಲಿ ಚಲ್ಲಿರುವ ದ್ರವ (2)
16.ಸ್ಲೇಟಿನ ಮೇಲೆ ಬರೆಯುವ ಸಾಧನ (3)
18.ಕಲೆಯೊಳಡಗಿರುವ ಆಹ್ವಾನ (4)
19.ಹಣ್ಣಿನಿಂದ ಮಾಡಿದ ಖಾದ್ಯ (4)

ಮೇಲಿಂದ ಕೆಳಕ್ಕೆ

1.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
2.ತಿರುಮಲದಲ್ಲಿ ಖರೀದಿಸಿರುವ ಎಳ್ಳು (2)
3.ಬಾದಾರಾಯಣ ಕಾಲದ ಶರ (2)
4.ಕನ್ನಡಿಗ ಹಿಡಿದಿರುವ | ಡೈನಮೈಟ್! (4)
6.ವನದಲ್ಲಿ ನೀಡಿರುವ ವಾಗ್ದಾನ (3)
8.ಉತ್ತರದ ಕಡೆಯವರ ವಿಪುಲತೆ! (3)
10.ಗುಡಾಣವಿರುವ ಡೇರೆ (3)
11.ಮನಸ್ಸಿಗೆ ಸಂಬಂಧಿಸಿದ್ದು (4)
13.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ! (3)
15.ನೆಮ್ಮದಿ ಹೀಗೆ ಬಂದಿದೆ (4)
16.ಅಬಲೆ ಬೀಸಿದ ಗಾಳ (2)
17.ವಿರೋಧದ ವಿರುದ್ಧ ಪದ (2)



6189ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುಖಸಂಸಾರ 3.ಕರಾರು
5.ಅವಸರ 7.ರಾಮನಗರ
9.ಧಾರವಾಡ 10.ಸವಾರ
11.ಪಳಿಯುಳಿಕೆ

ಮೇಲಿಂದ ಕೆಳಕ್ಕೆ:
2.ಸಾಗರ 3.ಕಲಘಟಗಿ
4.ರುಚೂಯರಾ 5.ಅಮೀನಘಡ
6.ವಿಜಯಪುರ 8.ರಸಾಭಾಸ
9.ಧಾರಾ

ಸುಡೊಕು 6574

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


1		3	5		6		4	7
	9			4				
7		4	9			5		3
9	1							8
		7		9			1	
5	2							4
8		1					6	
	5		1		4	8		9
4		9		6			5	1

6573 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಗೆರೆಗಳಲ್ಲಿ ಗಾಂಧಿ ನೆರಳು

ಬೆಂಗಳೂರಿನ ಮಿಡ್‌ಫೋರ್ಡ್ ಹೌಸ್‌ನಲ್ಲಿ ಗಾಂಧೀಜಿ ವ್ಯಂಗ್ಯಚಿತ್ರಗಳ ಅಂತರರಾಷ್ಟ್ರೀಯ ಪ್ರದರ್ಶನ ಅ. 31ರವರೆಗೆ ನಡೆಯಲಿದೆ





ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು
ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಶನಿವಾರ • ಅಕ್ಟೋಬರ್ 11, 2025



ರಿಷಬ್ ಶೆಟ್ಟಿ

₹509 ಕೋಟಿ ಬಾಚಿದ 'ಕಾಂತಾರ'

ಇದೇ 2ರಂದು ತೆರೆಕಂಡಿರುವ, ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ: ಒಂದು ದಂತಕಥೆ, ಚಾಪ್ಟರ್-1' ಸಿನಿಮಾ ಮೊದಲ ವಾರದಲ್ಲಿ ವಿಶ್ವದಾದ್ಯಂತ ₹509.25 ಕೋಟಿ ಗಳಿಸಿದೆ ಎಂದು ಸಾಮಾಜಿಕ ಮಾಧ್ಯಮಗಳ ಮುಖಾಂತರ ಹೊಂಬಾಳೆ ಫಿಲ್ಮ್ಸ್ ಅಧಿಕೃತವಾಗಿ ತಿಳಿಸಿದೆ.

2022ರ 'ಕಾಂತಾರ'ದ ಯಶಸ್ಸಿನ ನಂತರ ಇದೇ ಸಿನಿಮಾದ ಪ್ರೀಕ್ವೆಲ್ ಇದೀಗ ಹೊಂಬಾಳೆಯ ಹಿಟ್ ಪಟ್ಟಿಗೆ ಸೇರ್ಪಡೆಯಾಗಿದೆ. ಈ ಹಿಂದೆ ವಿಶ್ವದ 10 ಸಾವಿರಕ್ಕೂ ಅಧಿಕ ಪರದೆಗಳಲ್ಲಿ ತೆರೆಕಂಡಿದ್ದ ಹೊಂಬಾಳೆ ನಿರ್ಮಾಣದ 'ಕೆ.ಜಿ.ಎಫ್ ಚಾಪ್ಟರ್-2' ಭಾರತದಲ್ಲಿ ಮೊದಲ ದಿನವೇ ₹134.5 ಕೋಟಿ ಬಾಚಿತ್ತು.

ದೇಶದಾದ್ಯಂತ ಏಳು ಸಾವಿರಕ್ಕೂ ಅಧಿಕ ತೆರೆಗಳಲ್ಲಿ ಬಿಡುಗಡೆಯಾಗಿದ್ದ 'ಕಾಂತಾರ ಚಾಪ್ಟರ್ 1' ಸಿನಿಮಾ ಉತ್ತರ ಅಮೆರಿಕದಲ್ಲೇ ಸುಮಾರು ₹26 ಕೋಟಿಗೂ ಅಧಿಕ ಹಣ ಗಳಿಸಿದೆ. ಬಿಡುಗಡೆಯಾದ ದಿನವೇ ಈ ಸಿನಿಮಾದ 12 ಲಕ್ಷಕ್ಕೂ ಅಧಿಕ ಟಿಕೆಟ್‌ಗಳು ಮಾರಾಟವಾಗಿದ್ದವು. ಸಿನಿಮಾ ಬಿಡುಗಡೆಯಾಗಿ ವಾರ ಉರುಳಿದ್ದರೂ ಸಿನಿಮಾ ಪ್ರೇಕ್ಷಕರನ್ನು ಸೆಳೆಯುತ್ತಲೇ ಇದೆ. ಶುಕ್ರವಾರ(ಅ.10) ಬುಕ್‌ಮೈಶೋನಲ್ಲಿ ಪ್ರತಿ ಗಂಟೆಗೆ ಸುಮಾರು 30 ಸಾವಿರ ಟಿಕೆಟ್‌ಗಳ ಮಾರಾಟ ಕಂಡುಬಂತು. ಬೆಂಗಳೂರಿನಲ್ಲಿ ನೂರಕ್ಕೂ ಅಧಿಕ ಏಕಪರದೆ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ 'ಕಾಂತಾರ' ಸಿನಿಮಾ ಪ್ರದರ್ಶನ ಮುಂದುವರಿದಿದೆ.

ಎಐನಲ್ಲಿ ಪುನೀತ್

ಈಗಾಗಲೇ 'ಅಯ್ಯನ ಮನೆ', 'ಶೋಧ' ವೆಬ್‌ಸರಣಿಗಳ ಮೂಲಕ ಸದ್ದು ಮಾಡಿರುವ ಜೀ5ನ ಮತ್ತೊಂದು ಕನ್ನಡ ವೆಬ್‌ಸರಣಿ ಪ್ರೇಕ್ಷಕರೆದುರಿಗೆ ಬರಲು ದಿನಾಂಕ ನಿಗದಿಯಾಗಿದೆ. ಅ.31ರಿಂದ 'ಮಾರಿಗಲ್ಲು' ಸರಣಿ ಸ್ಟ್ರೀಮ್ ಆಗಲಿದ್ದು, ವಿಶೇಷವೆಂದರೆ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಎಐ ಮೂಲಕ ಇಲ್ಲಿ ಜೀವತಳೆದಿದ್ದಾರೆ.

'ಪಿಆರ್‌ಕೆ ಪ್ರೊಡಕ್ಷನ್ಸ್' ಸಹಯೋಗದಲ್ಲಿ 'ಮಾರಿಗಲ್ಲು' ವೆಬ್‌ಸರಣಿ ನಿರ್ಮಾಣವಾಗಿದೆ. ಕನ್ನಡದ ಮೊತ್ತಮೊದಲ ರಾಜಮನೆತನವಾದ ಕದಂಬರ ರಾಜ ಮಯೂರವರ್ಮನಾಗಿ ಪುನೀತ್ ಇಲ್ಲಿ ಕಾಣಿಸಿಕೊಂಡಿದ್ದಾರೆ. 'ಕದಂಬರ ಸಿರಿ ಸಂಪತ್ತು ಹುಡುಕಿದರೆ ಮತ್ತೆ ಸಿಗಬಹುದೇ' ಎನ್ನುವ ಪ್ರಶ್ನೆಯನ್ನೆತ್ತುತ್ತಾ ಈ ಸರಣಿಯ ಟೀಸರ್ ಬಿಡುಗಡೆಯಾಗಿದೆ. ನಟ ಧನಂಜಯ ನಿರೂಪಣೆ ಈ ಟೀಸರ್‌ಗಿದೆ. 4ನೇ ಶತಮಾನದ ಕದಂಬರ ಆಳ್ವಿಕೆಯ ಕಾಲದ ಕಥೆ ಇದರಲ್ಲಿ ಇರಲಿದೆ. ಕದಂಬರ ಕಾಲದ ನಿಧಿ ಹುಡುಕಲು ಹೊರಟ ಶಿರಸಿಯ ಹುಡುಗರ ಕಥೆಯನ್ನು ಇಲ್ಲಿ ಹೆಣೆಯಲಾಗಿದೆ. ಅಲ್ಲದೆ ಶಿರಸಿಯ ಪ್ರಖ್ಯಾತ ಬೇಡರ ವೇಷವನ್ನು ಈ ಸರಣಿಯಲ್ಲಿ ಕಾಣಬಹುದು.

'ಮಾರಿಗಲ್ಲು' ವೆಬ್‌ಸರಣಿಯಲ್ಲಿ ನಟರಾದ ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ ಮತ್ತು ಪ್ರವೀಣ್ ತೇಜ್ ನಟಿಸಿದ್ದಾರೆ. ಎ.ಎಸ್.ಸೂರಜ್, ಪ್ರಶಾಂತ್ ಸಿದ್ದಿ ಮತ್ತು ನಿನಾದ ಹೃತ್ಸಾ ತಾರಾಬಳಗದಲ್ಲಿದ್ದಾರೆ. ಈ ವೆಬ್‌ಸರಣಿಯನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ನಿರ್ಮಿಸಿದ್ದು, ದೇವರಾಜ್ ಪೂಜಾರಿ ಬರೆದು ನಿರ್ದೇಶಿಸಿದ್ದಾರೆ. ಎಸ್.ಕೆ.ರಾವ್ ಛಾಯಾಚಿತ್ರಗ್ರಹಣ, ಎಲ್.ವಿ. ಮುತ್ತು ಮತ್ತು ಎಲ್.ವಿ. ಗಣೇಶ್ ಸಂಗೀತ ನಿರ್ದೇಶನ ಸರಣಿಗಿದೆ.

'ಈ ಸರಣಿ ಅಪ್ಪು ಅವರ ಕನಸುಗಳಲ್ಲಿ ಒಂದನ್ನು ಪ್ರತಿಬಿಂಬಿಸುತ್ತದೆ. ಪುನೀತ್ ಯಾವಾಗಲೂ ನಮ್ಮ ಕಥೆಗಳನ್ನು ವೆಬ್‌ಸರಣಿ ಮೂಲಕ ಹೇಳಲು ಬಯಸುತ್ತಿದ್ದರು. ಈ ಕಥೆಗಳು ನಮ್ಮ ನೆಲದಲ್ಲಿ ಬೇರೂರಿದ್ದರೂ ಭಾವನೆಯಲ್ಲಿ ಅವು ಸಾರ್ವತ್ರಿಕ' ಎನ್ನುತ್ತಾರೆ ಅಶ್ವಿನಿ ಪುನೀತ್ ರಾಜ್‌ಕುಮಾರ್.



ಪುನೀತ್ ರಾಜ್‌ಕುಮಾರ್

'ಕನಕರಾಜ'ನಾದ ಅನೂಪ್ ರೇವಣ್ಣ



ನಿಮಿಷಾ

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಭಿಮಾನಿಯೊಬ್ಬರ ಕುರಿತಾದ ಕಥೆಯನ್ನು ಹೊಂದಿರುವ 'ಕನಕರಾಜ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ವಿ.ಎಂ.ರಾಜು, ನೀಲ್ ಕೆಂಗಾಪುರ ನಿರ್ದೇಶನದ ಚಿತ್ರಕ್ಕೆ ವಿ.ನಾಗೇಂದ್ರ ಪ್ರಸಾದ್ ಕಥೆ, ಚಿತ್ರಕಥೆ, ಸಂಗೀತ, ಸಂಭಾಷಣೆಯಿದೆ. ಚಿತ್ರದ ಮೊದಲ ದೃಶ್ಯಕ್ಕೆ ಸಚಿವ ಎಚ್.ಎಂ.ರೇವಣ್ಣ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಭಿಮಾನಿ 'ಕನಕರಾಜ'ನಾಗಿ ಅನೂಪ್ ರೇವಣ್ಣ ಕಾಣಿಸಿಕೊಳ್ಳುತ್ತಿದ್ದಾರೆ. ನಿಮಿಶಾ ಚಿತ್ರದ ನಾಯಕಿ. 'ಯುವಕರು ರಾಜಕಾರಣಕ್ಕೆ ಬರಬೇಕೆಂದು ರಾಜಕಾರಣಿಗಳು ಆಗಾಗ ಹೇಳುತ್ತಿರುತ್ತಾರೆ. ಅದೇ ಕಥೆಯನ್ನು ಹೊಂದಿರುವ ಚಿತ್ರವಿದು. ಚಿತ್ರದ ನಾಯಕ ಮುಖ್ಯಮಂತ್ರಿಗಳ ಅಭಿಮಾನಿಯಾಗಿರುತ್ತಾನೆ. ಅವರಂತೆ ತಾನೂ ಬೆಳೆಯಬೇಕೆಂದು ಹಂಬಲಿಸುತ್ತಾನೆ. ರಾಜಕಾರಣಕ್ಕೆ ಬರಲು ಏನೆಲ್ಲ ಮಾಡುತ್ತಾನೆ, ಹೇಗೆ ಹೋರಾಟ ನಡೆಸುತ್ತಾನೆಂಬುದು ಚಿತ್ರಕಥೆ ಎಂದರು ವಿ.ನಾಗೇಂದ್ರ ಪ್ರಸಾದ್.

ಸಿದ್ದರಾಮಯ್ಯನವರ ಆಪ್ತವಲಯದಲ್ಲಿ ಗುರುತಿಸಿಕೊಂಡಿರುವ ಸನತ್‌ಕುಮಾರ್ ಚಿತ್ರದ ನಿರ್ಮಾಪಕ.

'ಎಚ್.ಎಂ.ರೇವಣ್ಣ ಪುತ್ರ ಅನೂಪ್ ರೇವಣ್ಣ ಈ ಪಾತ್ರಕ್ಕೆ ಸೂಕ್ತ ಎಂದು ಆಯ್ಕೆ ಮಾಡಿದ್ದೇವೆ. ಅವರ ರಕ್ತದಲ್ಲಿಯೇ ರಾಜಕಾರಣವಿದೆ. ಮುಖ್ಯಮಂತ್ರಿಗಳ ಪಾತ್ರವೂ ಬರುತ್ತದೆ. ಆದರೆ ಹೆಸರು ಬೇರೆ ಇರುತ್ತದೆ. ಬಹಳ ಬೇಗ ಚಿತ್ರವನ್ನು ಸಿದ್ಧಪಡಿಸಿ ತೆರೆಗೆ ತರುತ್ತೇವೆ' ಎಂದರು ಸನತ್‌ಕುಮಾರ್.

'ಕಂದೀಲು' ತೆರೆಗೆ ಬರಲು ಸಿದ್ಧ



ಚಿತ್ರತಂಡ

ಈಗಾಗಲೇ ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು, ಪ್ರಶಸ್ತಿ ಪಡೆದುಕೊಂಡಿರುವ 'ಕಂದೀಲು' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಯಶೋದಾ ಕೊಟ್ಟುಕತ್ತಿರ ನಿರ್ದೇಶನದ ಈ ಚಿತ್ರಕ್ಕೆ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಕೂಡ ಲಭಿಸಿದೆ.

'ಏಳೆಂಟು ವರ್ಷಗಳಿಂದ ಚಿತ್ರರಂಗದಲ್ಲಿ ಗುರುತಿಸಿಕೊಂಡು ಎರಡು ಕೊಡವ, ಎರಡು ಕನ್ನಡ ಸಿನಿಮಾಗಳನ್ನು ನಿರ್ಮಾಣ ಮಾಡಿದ್ದೇನೆ. ಸುಮನ್ ನಗರ್‌ಕರ್ ನಟನೆಯ 'ರಂಗಪ್ರವೇಶ' ಚಿತ್ರದ ಮೂಲಕ ನಿರ್ದೇಶಕಿಯಾಗಿ ಪರಿಚಯವಾದೆ. ಪ್ರೇಮಾ ಕಾರಂತ್, ಕವಿತಾ ಲಂಕೇಶ್ ನಂತರ ರಾಷ್ಟ್ರ ಪ್ರಶಸ್ತಿ ಪಡೆದ ನಿರ್ದೇಶಕಿ ಅಂತ ಹೇಳಿಕೊಳ್ಳಲು ಖುಷಿಯಾಗುತ್ತದೆ. 'ಆಯ್ದ ಹೆಣ' ಎನ್ನುವ ಕಥೆ ಆಧರಿಸಿದ ಚಿತ್ರವಿದು. 2008ರಲ್ಲಿ ನಡೆದ ಸತ್ಯ ಘಟನೆ ಆಧಾರಿತವಾಗಿದೆ. ಅಂದಿನ ಕೇಂದ್ರ ಸಚಿವೆ ಸುಷ್ಮಾ ಸ್ವರಾಜ್ ಭಾರತ ಮೂಲದವರೊಬ್ಬರ ಹೆಣವನ್ನು ವಿದೇಶದಿಂದ ತರಿಸಿಕೊಡಲು ಸಹಾಯ ಮಾಡಿದ್ದರು. ಆದರೂ ಹೆಣ ತಲುಪುವುದು ವಿಳಂಬವಾಗಿತ್ತು. ಅಂತಹ ಸಮಯದಲ್ಲಿ ಮನೆಯ ಪರಿಸ್ಥಿತಿ, ಧಾರ್ಮಿಕ ಹಾಗೂ ರಾಜಕೀಯ ಸ್ಥಿತಿಗಳು ಹೇಗೆ ಇರುತ್ತವೆ ಎಂಬುದೇ ಚಿತ್ರಕಥೆ' ಎಂದರು ನಿರ್ದೇಶಕಿ.

ಪ್ರಕಾಶ್ ಕಾರ್ಯಪ್ಪ ಬಂಡವಾಳ ಹೂಡಿದ್ದಾರೆ. ನಾಗೇಶ್ ಎನ್. ಸಂಭಾಷಣೆ ಜೊತೆಗೆ ಸಂಕಲನವನ್ನೂ ನಿಭಾಯಿಸಿದ್ದಾರೆ. ಸುರೇಶ್ ಸಂಗೀತ, ಪಿ.ವಿ.ಆರ್.ಸ್ವಾಮಿ ಛಾಯಾಚಿತ್ರಗ್ರಹಣವಿದೆ. ಪ್ರಭಾಕರ ಬ. ಕುಂದರ, ವನಿತಾ ರಾಜೇಶ್, ಖುಷಿ ಕಾವೇರಮ್ಮ ಮುಂತಾದವರು ಚಿತ್ರದಲ್ಲಿದ್ದಾರೆ. ಮುಂದಿನ ತಿಂಗಳು ಚಿತ್ರವನ್ನು ತೆರೆಗೆ ತರಲು ತಂಡ ಆಲೋಚಿಸಿದೆ.

ದೀಪಾವಳಿ ಆಗದಿರಲಿ ಹಾವಳಿ

ಕಾಳಜಿ



ಸದ್ಯದಲ್ಲೇ ದೀಪಾವಳಿ ಸಂಭ್ರಮ ಎಲ್ಲೆಲ್ಲೂ ಮನೆಮಾಡಲಿದೆ. ಎಲ್ಲರ ಬದುಕಲ್ಲೂ ಬೆಳಕನ್ನು ತರುವ ದೀಪಗಳ ಹಬ್ಬವು ನಿರ್ಲಕ್ಷ್ಯ ಹಾಗೂ ಬೇರೆಯವರ ತಪ್ಪಿನಿಂದ ಬಹಳಷ್ಟು ಜನರ ಬದುಕಲ್ಲಿ ಕರಾಳ ಹಬ್ಬವಾಗಿ ಬದಲಾಗುವುದೂ ಇದೆ. ಪಟಾಕಿ ಇಲ್ಲದೇ ದೀಪಾವಳಿ ಸಂಪನ್ನ ಆಗದು. ಹಾಗೆಂದು ಅಪಾಯವನ್ನು ಆಹ್ವಾನಿಸಿಕೊಳ್ಳುವುದು ತರವಲ್ಲ.

ಸುರಕ್ಷಿತ ದೀಪಾವಳಿಗಾಗಿ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಎಲ್ಲರೂ ಅನುಸರಿಸಬೇಕಾಗುತ್ತದೆ. ಅಂತಹ ಕ್ರಮಗಳ ಪಟ್ಟಿ ಹೀಗಿದೆ: ಹಸಿರು ಪಟಾಕಿಗಳಿಗೆ ಮಾತ್ರ ಅನುಮತಿ ನೀಡಿರುವುದರಿಂದ ಜನ ಅಂತಹ ಪಟಾಕಿಗಳನ್ನೇ ಖರೀದಿಸಬೇಕು. ಬಹಳಷ್ಟು ಜನ ಮನೆಯ ಕಾಂಪೌಂಡ್ ಒಳಗೆ ಅಥವಾ ಹೆಚ್ಚು ಮಂದಿ ಇರುವ ಸ್ಥಳಗಳಲ್ಲಿ ಪಟಾಕಿಗಳನ್ನು ಸಿಡಿಸುತ್ತಾರೆ. ಇದು ತುಂಬಾ ಅಪಾಯಕಾರಿ. ತೆರೆದ ಸ್ಥಳಗಳಲ್ಲಿ ಮಾತ್ರ ಪಟಾಕಿಗಳನ್ನು ಸಿಡಿಸಬೇಕು. ಮಕ್ಕಳು ಸ್ವತಂತ್ರವಾಗಿ ಪಟಾಕಿಗಳನ್ನು ಸಿಡಿಸಲು ಬಿಡಬೇಡಿ, ಈ ವೇಳೆ ಪಾಲಕರು ಅಥವಾ ಹಿರಿಯರು ಮಕ್ಕಳ ಜೊತೆ ಇರಿ. ದೀಪಾವಳಿಯು ದೀಪಗಳ ಹಬ್ಬ ಆಗಿರುವುದರಿಂದ ದಹಿಸುವ ವಸ್ತುಗಳನ್ನು ದೀಪಗಳಿಂದ ದೂರವಿಡಿ.

ಶ್ವಾಸಕೋಶ ಕಾಯಿಲೆಯಿಂದ ಬಳಲುವವರ ಆರೋಗ್ಯವನ್ನು ಪಟಾಕಿಗಳ ಹಾವಳಿಯು ಮತ್ತಷ್ಟು ಹದಗೆಡಿಸಬಹುದು. ಜೊತೆಗೆ ಹೊಗೆಗೆ ಒಡ್ಡಿಕೊಳ್ಳುವುದರಿಂದ ಉಸಿರಾಟದ ತೊಂದರೆಗಳು ಉಂಟಾಗಬಹುದು. ದೀಪಾವಳಿ ವೇಳೆ ಏನಾದರೂ ಬೆಂಕಿ ಅವಘಡ ಉಂಟಾದರೆ, ಗಾಯ ಆದ ಜಾಗಕ್ಕೆ ತಂಪಾದ ನೀರನ್ನು ಹಾಕುತ್ತಾ ಇರಿ. ಬೆಣ್ಣೆ, ಎಣ್ಣೆ ಅಥವಾ ಇತರ ಮನೆಮದ್ದುಗಳನ್ನು ಬಳಸಬೇಡಿ. ಚರ್ಮಕ್ಕೆ ಬಟ್ಟೆ ಅಂಟಿಕೊಂಡಿದ್ದರೆ ಅದನ್ನು ತೆಗೆಯಬೇಡಿ. ತಕ್ಷಣವೇ ವೈದ್ಯಕೀಯ ಸಹಾಯವನ್ನು ಪಡೆಯಿರಿ. ಸಾಮಾನ್ಯವಾಗಿ ಪಟಾಕಿ ಸಿಡಿಸುವುದನ್ನು ನೋಡುತ್ತಿರುವ ಜನ ಹಾಗೂ ಮಕ್ಕಳು ಗಾಯಗೊಂಡ ಅನೇಕ ಉದಾಹರಣೆಗಳಿವೆ. ಅದರಲ್ಲೂ ಅನೇಕರಿಗೆ ಕಣ್ಣಿನ ಗಾಯಗಳು ಆಗಿರುತ್ತವೆ. ಒಂದು ವೇಳೆ ಪಟಾಕಿಯ ಮದ್ದು ಕಣ್ಣಿಗೆ ಬಿದ್ದರೆ, ಕಣ್ಣನ್ನು ತೊಳೆಯಲು ಶುದ್ಧ ನೀರನ್ನು ಬಳಸಬೇಕು. ಆದರೆ, ಯಾವುದೇ ಕಾರಣಕ್ಕೂ ಕಣ್ಣನ್ನು ಉಜ್ಜಬಾರದು. ಗಾಯಾಳುಗಳು ತಕ್ಷಣವೇ ವೈದ್ಯರ ಸಹಾಯವನ್ನು ಪಡೆಯಬೇಕು. ಒಂದು ವೇಳೆ ಅಲರ್ಜಿಯಿಂದ ಉಸಿರಾಟದ ಸಮಸ್ಯೆ ಉಂಟಾದರೆ ವೈದ್ಯರು ಸೂಚಿಸಿರುವ ಇನ್‌ಹೇಲರ್‌ಗಳನ್ನು ಬಳಸಬಹುದು. ಚೆನ್ನಾಗಿ ಗಾಳಿಯಾಡುವ ಕೋಣೆಗೆ ಹೋಗಿ ಅಥವಾ ಉತ್ತಮ ಗಾಳಿಗಾಗಿ ವಾಯು ಶುದ್ಧೀಕಾರಕವನ್ನು ಬಳಸಿ. ಆದರೆ, ಉಸಿರಾಟದ ಸಮಸ್ಯೆ ಹೆಚ್ಚಾದರೆ ವೈದ್ಯರ ಸಹಾಯವನ್ನು ಪಡೆಯಿರಿ.

ಇನ್ನು, ದೀಪಾವಳಿ ಸಮಯದಲ್ಲಿ, ಪಟಾಕಿಗಳನ್ನು ಸಿಡಿಸುವಾಗ ಬರುವ ಭಾರಿ ಶಬ್ದವು ಮಕ್ಕಳು, ವೃದ್ಧರು ಮತ್ತು ಸಾಕುಪ್ರಾಣಿಗಳಲ್ಲಿ ಒತ್ತಡವನ್ನು ಉಂಟುಮಾಡಬಹುದು. ಪಟಾಕಿ ಶಬ್ದದಿಂದ ಯಾರಿಗಾದರೂ ಸಮಸ್ಯೆಯಾದರೆ ಅವರನ್ನು ನಿಶ್ಶಬ್ದ ಇರುವ ಸ್ಥಳಕ್ಕೆ ಕರೆದುಕೊಂಡು ಹೋಗಿ, ಕುಡಿಯಲು ನೀರು ಕೊಡಿ. ನಂತರ ಅವರ ಒತ್ತಡವನ್ನು ಕಡಿಮೆ ಮಾಡಲು ದೀರ್ಘ ಉಸಿರಾಟದ ವ್ಯಾಯಾಮಗಳನ್ನು ಅವರಿಂದ ಮಾಡಿಸಿ, ವಿಶ್ರಾಂತಿ ತೆಗೆದುಕೊಳ್ಳಲು ಸೂಚಿಸಿ. ಹೀಗೆ ಎಲ್ಲಾ ಬಗೆಯ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ಸುರಕ್ಷಿತವಾಗಿ ದೀಪಾವಳಿಯನ್ನು ಆಚರಿಸಿ.

ಡಾ. ಶ್ರುತಿ ಭಾಸ್ಕರನ್, ವಾಸವಿ ಆಸ್ಪತ್ರೆ

ಚಂದ್ರನೆಂಬ ಚೆನ್ನಿಗನ ನೋಡೋಣ ಬನ್ನಿ

• **ಎ.ಪಿ.ಭಟ್**




ಹುಣ್ಣಿಮೆಯ ಬೆಳದಿಂಗಳಿನ ಬೆಳಕಿಗೆ ಸಾಟಿಯಿಲ್ಲ. ಅದರಲ್ಲೂ ಶರತ್ಕಾಲದ ಆಶ್ವಯುಜ ಆಕಾಶ ಭವ್ಯವಾಗಿರುತ್ತದೆ. ಬಿಳಿಯಾಗಿ ತೇಲುವ ತಿಳಿ ಮೋಡಗಳ ಮಧ್ಯೆ ಬೆಳ್ಳಂಬೆಳದಿಂಗಳ ಚಂದ್ರಮ ನೋಡಲು ಮತ್ತಷ್ಟು ಆಕರ್ಷಕ. ಈ ಸುಂದರ ಅನುಭವವನ್ನು ನಮಗೆ ದಕ್ಕಿಸಿಕೊಡುವ ಈ ವರ್ಷದ 'ಸೂಪರ್‌ಮೂನ್' ಸರದಿ ಈಗಾಗಲೇ ಪ್ರಾರಂಭವಾಗಿದೆ. ಇದೇ 7ರಂದು 'ಸೂಪರ್' ದರ್ಶನಕ್ಕೆ ಚಂದ್ರಮ ನಾಂದಿ ಹಾಡಿದ್ದಾನೆ. ಇನ್ನುಳಿದ ಸರದಿ ನವೆಂಬರ್ 5 ಹಾಗೂ ಡಿಸೆಂಬರ್ 4ರದು. ಅಂದಿನ ಹುಣ್ಣಿಮೆಗಳು ಸಹ ಸೂಪರ್‌ಮೂನ್‌ಗಳೇ ಆಗಿರುತ್ತವೆ.


ಭೂಮಿ ಹಾಗೂ ಚಂದ್ರನ ನಡುವಿನ ಸರಾಸರಿ ದೂರ 3.84 ಲಕ್ಷ ಕಿ.ಮೀ. ಸೂಪರ್‌ಮೂನ್ ದಿನಗಳಲ್ಲಿ ಈ ದೂರ ಸುಮಾರು 3.61 ಲಕ್ಷ ಕಿ.ಮೀ. ಆಗುತ್ತದೆ. ಅಂದರೆ, ಚಂದ್ರನು ಅಂದು ಭೂಮಿಗೆ ಸುಮಾರು 23 ಸಾವಿರ ಕಿ.ಮೀ. ನಷ್ಟು ಸಮೀಪಕ್ಕೆ ಬರುತ್ತಾನೆ. ಹೀಗಾಗಿ, ಸುಮಾರು 18 ಅಂಶಗಳಷ್ಟು ದೊಡ್ಡದಾಗಿ ಕಾಣಿಸುತ್ತಾನೆ. ಸಹಜವಾಗಿಯೇ ಅಂದು ಬೆಳದಿಂಗಳೂ ಹೆಚ್ಚು.

ಶರತ್ಕಾಲದ ಸೂಪರ್‌ಮೂನ್‌ನ ಈ ಬೆಳದಿಂಗಳನ್ನು ಖುದ್ದಾಗಿ ಅನುಭವಿಸಿಯೇ ತೀರಬೇಕು. ತೇಲುವ ಮಂಜುಗಡ್ಡೆಗಳಂತಹ ಬಿಳಿ, ಹಳದಿ ವರ್ತುಲದ ಹ್ಯಾಲೊ ಕೂಡಾ ಅಲ್ಲಲ್ಲಿ ಕಾಣಸಿಗಬಹುದು. ಪ್ರಕೃತಿಯ ಈ ವೈಭವವನ್ನು ಆರಾಧಿಸಿ, ಆಸ್ವಾದಿಸಿ.



DORU AXINTE - ROMANIA





ESLAM ZAKI - EGYPT

ಗೆರೆಗಳಲ್ಲಿ ಗಾಂಧಿ ನೆರಳು

• ಉಮೇಶ ಭಟ್ಟ ಪಿ.ಎಚ್.

ಮಹಾತ್ಮ ಗಾಂಧಿ ಅವರನ್ನು ಗೆರೆಗಳಲ್ಲಿ ನೋಡಿದ್ದೀರಾ? ಶಾಂತಿ, ಸೌಹಾರ್ದ, ಸಹಿಷ್ಣುತೆಯ ಸಂದೇಶ ಸಾರಿದ ಬಾಪು ವ್ಯಂಗ್ಯಚಿತ್ರಕಾರರ ಕಂಗಳಲ್ಲಿ ಹೇಗೆ ಕಂಡಿರಬಹುದು? ಭಾರತದವರು ಮಾತ್ರವಲ್ಲದೆ ವಿವಿಧ ದೇಶಗಳ ಕಲಾವಿದರು ಗಾಂಧೀಜಿಯನ್ನು ನೋಡಿದ ಪರಿ ಹೇಗಿರಬಹುದು? ಬೆಂಗಳೂರಿನಲ್ಲಿ ಆರಂಭವಾಗಿರುವ ಗಾಂಧೀಜಿ ವ್ಯಂಗ್ಯಚಿತ್ರಗಳ ಅಂತರರಾಷ್ಟ್ರೀಯ ಪ್ರದರ್ಶನ ಇದಕ್ಕೆಲ್ಲ ಉತ್ತರದಂತಿದೆ.

ನೋಡಲು ಅವು ಸಾಮಾನ್ಯ ಗೆರೆಗಳು. ಆದರೆ, ಆ ಗೆರೆಗಳು ಸಾಮಾನ್ಯ ವ್ಯಕ್ತಿಯನ್ನು ಚಿತ್ರಿಸಿಲ್ಲ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಹಿಂಸೆ, ಶಾಂತಿಯ ಸಂದೇಶ, ಸರಳತೆಯ ಪ್ರಭಾವ ಬೀರಿ ಜಾಗತಿಕ ನಾಯಕರೆನಿಸಿದ ಗಾಂಧಿಯನ್ನು ಕಟ್ಟಿಕೊಡುವ ವ್ಯಂಗ್ಯಚಿತ್ರಗಳಿವು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ 75ನೇ ವಾರ್ಷಿಕೋತ್ಸವದ ಅಂಗವಾಗಿ ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ಈಜಿಪ್ಟ್ ಕಾರ್ಟೂನ್ ಪ್ಲಾಟ್‌ಫಾರ್ಮ್‌ನ ಸಹಯೋಗದೊಂದಿಗೆ ಟ್ರಿನಿಟಿ ಮೆಟ್ರೊ ನಿಲ್ದಾಣದ ಹಿಂಭಾಗದಲ್ಲಿರುವ ಮಿಡ್‌ಫೋರ್ಡ್ ಹೌಸ್‌ನಲ್ಲಿ ಪ್ರದರ್ಶನ ಹಮ್ಮಿಕೊಂಡಿದೆ.

ಅಲ್ಲಿ ಗಾಂಧೀಜಿಯನ್ನು ಶಾಂತಿದೂತ, ಪರಿಸರಪ್ರಿಯ, ಸ್ವಾತಂತ್ರ್ಯ ಹೋರಾಟಗಾರ ಸೇರಿದಂತೆ ಹತ್ತಾರು ರೂಪಗಳಲ್ಲಿ ನೋಡಬಹುದು.

ಭಾರತ, ಈಜಿಪ್ಟ್, ಇರಾನ್, ಇರಾಕ್, ಸೌದಿ ಅರೇಬಿಯಾ, ಬ್ರೆಜಿಲ್, ಯುಎಇ, ಕ್ಯೂಬಾ, ಯುಎಸ್‌ಎ, ಇಂಡೊನೇಷ್ಯಾ, ರೊಮೇನಿಯಾ, ಕೊಲಂಬಿಯಾ, ಸಿರಿಯಾ, ಇಟಲಿ, ಮೊರಾಕ್ಕೊ, ಪೋರ್ಚುಗಲ್, ಸೈಪ್ರಸ್, ಪೋಲೆಂಡ್, ಸ್ಪೇನ್, ಪೆರು, ನಿಕರಾಗುವಾ ದೇಶಗಳ ವ್ಯಂಗ್ಯಚಿತ್ರಕಾರರು ಗಾಂಧೀಜಿಯನ್ನು ಗೆರೆಗಳಲ್ಲಿ ಕಂಡಿದ್ದಾರೆ. ಎರಡು ದಶಕದ ಅವಧಿಯಲ್ಲಿ ರೂಪಿಸಿದ್ದ ವ್ಯಂಗ್ಯ-ಚಿತ್ರಗಳನ್ನು ಸಂಗ್ರಹಿಸಿ ಇಲ್ಲಿ ಪ್ರದರ್ಶಿಸಲಾಗಿದೆ. ಇಂಡೊನೇಷ್ಯಾ ಕಲಾವಿದ ಜಿತೆತ್ ಕುಸ್ತಾನ ಅವರು ಹಸಿರು ಸಂದೇಶದೊಂದಿಗೆ ಗಾಂಧಿ ನಮಸ್ಕಾರ ಮಾಡುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಈಜಿಪ್ಟ್‌ನ ಖಾಲಿದ್ ಸಲಾಹ್ ಅವರು ಶಾಂತಿ, ಸ್ವಾತಂತ್ರ್ಯದ ಪ್ರತಿರೂಪವಾಗಿ ಕಾಣುವಂತೆ ಗೆರೆಗಳಲ್ಲಿ ಸೆರೆಹಿಡಿದಿದ್ದಾರೆ. ವಿಕ್ಟರಿ ಚಿಹ್ನೆಯೊಂದಿಗೆ ನಗುವ ಗಾಂಧೀಜಿ ಕಂಡಿರುವುದು ಪೋಲೆಂಡ್‌ನ ಕ್ರೋಟೋಸ್ ಟಡೇಯಸ್ ಅವರ ಗೆರೆಗಳಲ್ಲಿ. ಶಾಂತಿಯ ದೀವಿಗೆಯನ್ನು ಹಿಡಿದು ರಕ್ತದ ನಡುವೆ ನಡೆದು ಹೋಗುತ್ತಿರುವ ಗಾಂಧಿಗೆ ರೂಪ ನೀಡಿದ್ದಾರೆ ಮೊರಾಕ್ಕೊದ ಕಲಾವಿದ ಹಸನ್ ಜಾಫಿ.

ದಿಗ್ಗಜರ ನೋಟ

ಸರ್ ಡೇವಿಡ್ ಲೋ, ಶಂಕರ್, ಆರ್.ಕೆ.ಲಕ್ಷ್ಮಣ್, ಪಿಸಿಯಲ್, ಅಹಮದ್, ಅಬು, ಪಿಕೆಎಸ್ ಕುಟ್ಟಿ, ರಂಗಾ, ಸೈಲಾ ಚಕ್ರವರ್ತಿ ಅವರಂತಹ ದಿಗ್ಗಜ ವ್ಯಂಗ್ಯಚಿತ್ರಕಾರರು ತಮ್ಮದೇ ರೀತಿಯಲ್ಲಿ ಗಾಂಧಿಯನ್ನು ಚಿತ್ರಿಸಿದ್ದಾರೆ. ಒಂದೊಂದು ಚಿತ್ರವೂ ವಿಭಿನ್ನ ಕಥೆ, ಘಟನಾವಳಿಗಳ ಮಹತ್ವ ಹೇಳುತ್ತದೆ.

ಸರ್ವಧರ್ಮ ಸಹಿಷ್ಣುತೆಯ ಸಂದೇಶ ಸಾರುತ್ತಿರುವ ಬಾಪುವನ್ನು ಯುಎಇಯ ಅಮ್ನಾ ಹಲ್ ಹಮ್ಮದಿ ಗೆರೆಗಳಲ್ಲಿ ಮೂಡಿಸಿದ್ದಾರೆ. ಪೆರುವಿನ ಒಮರ್ ಝುವಲ್ಲೋಸ್ ಅವರು ಚರಕವೆಂಬ ಪುಟ್ಟ ಯಂತ್ರದ ಮಹತ್ವವನ್ನು ಗಾಂಧಿ ರೂಪಕವಾಗಿ ಚಿತ್ರಿಸಿದ್ದಾರೆ. ಕರ್ನಾಟಕದ ಕಲಾವಿದ ವಿ.ಜಿ. ನರೇಂದ್ರ ಅವರು, ಹಾರಿಬರುತ್ತಿರುವ ಗಾಂಧಿಯೊಂದಿಗೆ ಹಸಿರು, ಶಾಂತಿಯ ಸಂದೇಶವನ್ನು ಸಾರಿದ್ದಾರೆ. ಶೋಷಣೆಮುಕ್ತ ಭಾರತದ ಚಿತ್ರಕ್ಕೆ ಜೀವ ತುಂಬಿದ್ದಾರೆ ಬಿ.ಜಿ.ಗುಜ್ಜಾರಪ್ಪ. ಜೇಮ್ಸ್ ವಾಜ್, ಎನ್. ಎಸ್.ನಾಗನಾಥ್, ಜಯರಾಮ ಉಡುಪ, ಸುಭಾಷ್ಚಂದ್ರ ಗೌಡ, ಜೀವನ್ ಶೆಟ್ಟಿ ಅವರ ವ್ಯಂಗ್ಯಚಿತ್ರಗಳೂ ವಿಭಿನ್ನವಾಗಿವೆ.

ಇದೇ 31ರವರೆಗೆ ನಿತ್ಯ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಪ್ರದರ್ಶನ ವೀಕ್ಷಣೆಗೆ ಅವಕಾಶವಿದೆ.

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ವತಿಯಿಂದ ಧನ್‌ತೇರೆಸ್ ಮತ್ತು ದೀಪಾವಳಿ ಹಬ್ಬದ ಮೆಗಾ ಆಫರ್!

ಚಿನ್ನದ ಆಭರಣಗಳ ಮೇಕಿಂಗ್ ಚಾರ್ಜಸ್‌ನ ಮೇಲೆ ಶೇ.25 ರಷ್ಟು ರಿಯಾಯಿತಿ;
ಪ್ರತಿ ಕ್ಯಾರೆಟ್ ವಜ್ರದ ಖರೀದಿಯ ಮೇಲೆ ರೂ.10ಸಾವಿರ ರಿಯಾಯಿತಿ





ಧನ್‌ತೇರೆಸ್ ಮತ್ತು ದೀಪಾವಳಿ ಹಬ್ಬಗಳಿಗೆ ಬಂಪರ್ ಆಫರ್!

- 10 ಕೋಟಿ ಬಹುಮಾನ ಗೆಲ್ಲುವ ಅವಕಾಶ
- ಚಿನ್ನದ ಆಭರಣಗಳ ಮೇಕಿಂಗ್ ಚಾರ್ಜಸ್‌ನ ಮೇಲೆ ಶೇ.25 ರಷ್ಟು ರಿಯಾಯಿತಿ
- ಪ್ರತಿ ಕ್ಯಾರೇಟ್ ವಜ್ರದ ಖರೀದಿಯ ಮೇಲೆ ರೂ. 10,000 ರಿಯಾಯಿತಿ
- ಶ್ರೀ ಸಾಯಿ ಅಕ್ಷಯ ಚಿನ್ನದ ಉಳಿತಾಯ ಯೋಜನೆಗೆ ಇಂದೇ ಸದಸ್ಯರಾಗಲು ಅವಕಾಶ

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಅಂತ್ಯಂತ ವಿಶ್ವಾಸಾರ್ಹ ಆಭರಣ ಮಳಿಗೆಯೆಂದೇ ಖ್ಯಾತಿ ಪಡೆದಿರುವ ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನ 7 ಶಾಖೆಗಳಲ್ಲಿ ಧನ್ ತೇರೆಸ್ ಮತ್ತು ದೀಪಾವಳಿ ಹಬ್ಬದ ಪ್ರಯುಕ್ತ ಮೆಗಾ ಆಫರ್‌ಗಳನ್ನು ನೀಡಲಾಗುತ್ತಿದೆ. ಸಾಲು ಸಾಲು ಹಬ್ಬಗಳ ಪ್ರಯುಕ್ತ ಚಿನ್ನ ಮತ್ತು ವಜ್ರದ ಆಭರಣ ಖರೀದಿಸುವ ಗ್ರಾಹಕರಿಗೆ ಆಕರ್ಷಕ ಕೊಡುಗೆಗಳನ್ನು ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ನೀಡುತ್ತಿದೆ.

ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನ ಎಲ್ಲಾ ಶಾಖೆಗಳು ತಮ್ಮಲ್ಲಿನ ಅತ್ಯುತ್ತಮ ಗ್ರಾಹಕ ಸೇವೆ ಮತ್ತು ಭಾರತದ ಅತ್ಯುತ್ತಮ ಆಭರಣಕಾರರ ಕೌಶಲ್ಯ ಮತ್ತು ಕಲಾತ್ಮಕತೆಯನ್ನು ಸಾರುವ ಆಭರ-ಣಗಳಿಂದಲೇ ಹೆಸರುವಾಸಿಯಾಗಿವೆ. ಜೈಪುರದ ರಾಜಮನೆತನದ ಇತಿಹಾಸವನ್ನು ಸಾರುವ ಪಾರಂಪರಿಕ ಒಡವೆಗಳು, ಭಾರತೀಯ ಸಂಸ್ಕೃತಿ ಮತ್ತು ಶತಮಾನಗಳ ಹಳೆಯ ವಿನ್ಯಾಸಗಳನ್ನು ಪ್ರತಿಧ್ವ-ನಿಸುವ ದೈವೀಕ ಆಭರಣಗಳು, ಭಕ್ತಿ ಬಿಂಬಿಸುವ ಲೈಟ್ ವೇಟ್ ಟೆಂಪಲ್ ಜ್ಯುವೆಲ್ಲರಿ, ಹೊಳೆಯುವ ವಜ್ರದ ಸೆಟ್‌ಗಳು, ಬೆಳ್ಳಿ ಆಭರಣಗಳು ಮತ್ತು ಚಿನ್ನದ ಆಂಟಿಕ್ ಆಭರಣಗಳ ಅದ್ಭುತ ಮತ್ತು ಅಮೋಘ ಸಂಗ್ರಹಗಳನ್ನು ಹೊತ್ತು ಪ್ರಿಯ ಗ್ರಾಹಕರನ್ನು ತನ್ನತ್ತ ಸೆಳೆಯುವುದರೊಂದಿಗೆ ತೃಪ್ತಿದಾಯಕ ಗ್ರಾಹಕ ಸೇವೆ ನೀಡಲು ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಸಿದ್ಧವಾಗಿದೆ.

ಹಬ್ಬಗಳಿಗೆ ವಿಶೇಷ ಆಫರ್‌ಗಳನ್ನು ಘೋಷಿಸಿರುವ ಡಾ.ಟಿ-.ಎ.ಶರವಣ ಈ ಬಗ್ಗೆ ಮಾಹಿತಿ ನೀಡಿ, ''ನಮ್ಮೆಲ್ಲಾ ಗ್ರಾಹಕರು ಕುಟುಂಬದವರಿದ್ದಂತೆ, ಅವರ ವಿಶ್ವಾಸವನ್ನು ಉಳಿಸಿಕೊಂಡು ಉತ್ತಮ ಗ್ರಾಹಕ ಸೇವೆಯನ್ನು ನೀಡುತ್ತಾ ಬಂದಿದ್ದೇವೆ. ಮಧ್ಯಮ ವರ್ಗದವರಿಗೆ ಒಂದೇ ಬಾರಿಗೆ ಚಿನ್ನ ಕೊಳ್ಳುವುದು ಕಷ್ಟವಾದ ಕೆಲಸ, ಇಂತಹ ಕುಟುಂಬಗಳಿಗಾಗಿ ಚಿನ್ನವನ್ನು ಉಳಿಸಲು ಮತ್ತು ಹೂಡಿಕೆ ಮಾಡಲು ಅನುಕೂಲಕರವಾಗುವಂತೆ ಶ್ರೀ ಸಾಯಿ ಅಕ್ಷಯ ಚಿನ್ನದ ಉಳಿತಾಯ ಯೋಜನೆಯನ್ನು ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಹೊಂದಿದೆ. ಜೊತೆಗೆ, ಧನ್ ತೇರೆಸ್ ಮತ್ತು ದೀಪಾವಳಿ ಈ ಸಂದರ್ಭದಲ್ಲಿ ವಿಶೇಷ ರಿಯಾಯಿತಿಯನ್ನು ಸಹ ನೀಡುತ್ತಿದ್ದೇವೆ. ಈ ಎಲ್ಲಾ ಕೊಡುಗೆಗಳು ನಮ್ಮ ಬಸವನಗುಡಿ, ಎಚ್ ಎಸ್ ಆರ್ ಲೇಔಟ್, ಯಲಹಂಕ, ಕೆ. ಆರ್. ಪುರಂ, ನಾಗರಬಾವಿ ಮತ್ತು ಮಲ್ಲೇಶ್ವರಂ ಶಾಖೆಗಳಲ್ಲಿ ಲಭ್ಯವಿದೆ. ಈ ಕೊಡುಗೆ ಅಕ್ಟೋಬರ್ 25, 2025ರವರೆಗೆ ಮಾತ್ರ. ಇಂದೇ ಎಲ್ಲರೂ ಹತ್ತಿರದ ಶಾಖೆಗೆ ಭೇಟಿ ನೀಡಿ ಈ ವಿಶೇಷ ರಿಯಾಯಿತಿಯನ್ನು ಸದುಪಯೋಗ ಮಾಡಿಕೊಳ್ಳ ಬೇಕೆಂದು ತಮ್ಮಲ್ಲಿ ಆತ್ಮೀಯವಾಗಿ ವಿನಂತಿಸಿಕೊಳ್ಳುತ್ತೇವೆ.' ಎಂದು ತಿಳಿಸಿದ್ದಾರೆ.



ಫಿಟ್‌ನೆಸ್ ರಹಸ್ಯ ಬಿಚ್ಚಿಟ್ಟ ತಮನ್ನಾ

ಇತ್ತೀಚಿನ ದಿನಗಳಲ್ಲಿ ದೇಹವನ್ನು ಫಿಟ್ ಆಗಿ ಇರಿಸಿಕೊಳ್ಳುವುದಕ್ಕೆ ನಟರು ಮಾತ್ರವಲ್ಲ, ನಟಿಯರು ಕೂಡ ತುಂಬಾ ಪ್ರಾಮುಖ್ಯತೆ ನೀಡುತ್ತಿದ್ದಾರೆ. ಅದರಲ್ಲೂ ಬಾಲಿವುಡ್ ಸಿನಿ ತಾರೆಯರು ಫಿಟ್‌ನೆಸ್‌ಗೆ ಅತಿ ಹೆಚ್ಚಿನ ಒತ್ತು ನೀಡುತ್ತಾರೆ. ಸದ್ಯ, ಮಿಲ್ಕಿ ಬ್ಯೂಟಿ ತಮನ್ನಾ ಭಾಟಿಯಾ ತಮ್ಮ ಫಿಟ್‌ನೆಸ್ ಕುರಿತು ಯೂಟ್ಯೂಬ್ ಬ್ಲಾಗರ್ ಒಬ್ಬರ ಬಳಿ ಮಾಹಿತಿ ಹಂಚಿಕೊಂಡಿದ್ದಾರೆ.

'ನನ್ನ ದಿನಚರಿ ಪ್ರತಿದಿನ ಬೆಳಿಗ್ಗೆ 4.30ಕ್ಕೆ ಆರಂಭವಾಗುತ್ತದೆ. ಶೂಟಿಂಗ್ ಇಲ್ಲದಿದ್ದರೆ ಬಹಳಷ್ಟು ಹೊತ್ತು ವರ್ಕೌಟ್ ಮಾಡುತ್ತೇನೆ. ಬೆಳಗಿನ ಸಮಯದಲ್ಲಿ ವ್ಯಾಯಾಮ, ಯೋಗ ಮಾಡುವುದರಿಂದ ದೇಹವು ಉಲ್ಲಾಸದಿಂದ ಕೆಲಸ ಮಾಡಲು ಸಹಕಾರಿಯಾಗುತ್ತದೆ' ಎಂದು ತಮನ್ನಾ ಹೇಳಿಕೊಂಡಿದ್ದಾರೆ.

ದೇಹವನ್ನು ಸದೃಢವಾಗಿ ಇರಿಸಿಕೊಳ್ಳಲು ಏನಾದರೂ ಮಂತ್ರ ಇದೆಯೇ ಎಂದು ಬ್ಲಾಗರ್ ಕೇಳಿದಾಗ, ದೇಹ ಫಿಟ್ ಆಗಿರಲು ಡಯಟ್, ಪ್ರತಿನಿತ್ಯ ವರ್ಕೌಟ್ ಮಾಡಬೇಕು ಎಂದು ಪ್ರತಿಕ್ರಿಯೆ ನೀಡಿದ್ದಾರೆ.

ಸಾಂಸ್ಕೃತಿಕ

ಸಂಗೀತ– ಸಂವಾದ

ಶ್ರೀ ರಾಜರಾಜೇಶ್ವರಿ ಕಲಾನಿಕೇತನ ಸಂಸ್ಥೆಯ ವತಿಯಿಂದ ಇದೇ 11 ಮತ್ತು 12ರಂದು ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ 'ಸಂಗೀತ, ಮನಸ್ಸು ಮತ್ತು ಸಮಾಜ ನಿರ್ಮಾಣ' ಸಂಗೀತ ಉತ್ಸವವನ್ನು ಆಯೋಜಿಸಲಾಗಿದೆ.

ಸಂವಾದ ಸಹ ಇರಲಿದೆ. ಅತಿಥಿಗಳು: ಸುಶೀಲಾ ಮೆಹ್ತಾ, ಅ.ನ.ಯಲ್ಲಪ್ಪ ರೆಡ್ಡಿ. ಸಂಗೀತ ಮೂಲಾಧಾರ: ಸುಪ್ರೀತಾ ಪ್ರದೀಪ್, ನಮ್ರತಾ ಪ್ರದೀಪ್, ಚಂದನಾ ಮುರಳೀಧರ, ವಿದುಲಾ ವೇಣುಗೋಪಾಲ್, ಷಡಜ್ ಗೋಡ್ಖಿಂಡಿ, ಮೌನಾ ರಾಮಚಂದ್ರ. ಸಂಜೆ 4ರಿಂದ.

12ರಂದು ಭಾಗವತ ಸಂಕೀರ್ತನ ಮತ್ತು ಇತರ ಸಂಗೀತ ಕಾರ್ಯಕ್ರಮ. ವರ್ಷಾ ಚಕ್ರವರ್ತಿ, ನಿವೇತಾ ರಾಮ್, ಯೋಗಕೀರ್ತನಾ, ಸ್ಫೂರ್ತಿ ರಾವ್, ಸುಚೇತನ್ ರಂಗಸ್ವಾಮಿ ಮತ್ತು ತಂಡ. ಬೆಳಿಗ್ಗೆ 8ರಿಂದ.

ಗುರುನಾಮಸ್ಮರಣೆ, ಗುರುಭಿಕ್ಷೆ

ಸದ್ಗುರು ಶ್ರೀಶಂಕರಲಿಂಗ ಭಗವಾನ್ ಸರಸ್ವತೀ ಪರಮಹಂಸರ ಬೆಂಗಳೂರು ಭಜನಾ ಮಂಡಳಿಯಿಂದ 23ನೇ ವಾರ್ಷಿಕೋತ್ಸವ 11 ಮತ್ತು 12ರಂದು ನಡೆಯಲಿದೆ.

11ರಂದು– ಪುಣ್ಯಾಹ, ಉದಕ ಶಾಂತಿ, ಮಂಟಪಾರೋಹಣ, ಶ್ರೀಗುರು ಕಥಾಮೃತ ಪಾರಾಯಣ ಬೆಳಿಗ್ಗೆ 8.30. ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಮಧ್ಯಾಹ್ನ 12.30. ಪ್ರವಚನ– ಸ್ವಾಮಿ ನಾರಾಯಣಾನಂದ ಸರಸ್ವತಿ, ಮಧ್ಯಾಹ್ನ 3.30. ಸದ್ಗುರುಗಳ ಪಾದುಕೆಗಳಿಗೆ ಅಡ್ಡಪಲ್ಲಕ್ಕಿ ಉತ್ಸವ, ಸಂಜೆ 5. ನಿತ್ಯಭಜನೆ, ಅಷ್ಟಾವಧಾನ ಸೇವಾ ಆರತಿ, ಸಂಜೆ 6.

12ರಂದು– ಭಜನೆ, ಸೂರ್ಯನಮಸ್ಕಾರ, ಶ್ರೀಗುರು ಕಥಾಮೃತ ಪಾರಾಯಣ. ಬೆಳಿಗ್ಗೆ 5.30. ಶ್ರೀಗುರು ನಾಮಸ್ಮರಣೆ ಹಾಗೂ ಶ್ರೀ ಗುರುಭಿಕ್ಷೆ. ಬೆಳಿಗ್ಗೆ 11.30ರಿಂದ. ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ಮಧ್ಯಾಹ್ನ 12.30ರಿಂದ.

ಸ್ಥಳ: ಶ್ರೀಪಾದ ಶ್ರೀ ವಲ್ಲಭ ಮಂದಿರ, ಶ್ರೀ ದತ್ತಾತ್ರೇಯ ದೇವಸ್ಥಾನ, 3ನೇ ಬ್ಲಾಕ್, ತ್ಯಾಗರಾಜನಗರ.

ಇಗೋ 'ಮಾಯಾ ದ್ವೀಪ'

ಕಲಾಪ್ರೇಮಿ ಫೌಂಡೇಷನ್ ವತಿಯಿಂದ 'ನೆನಪು ಕಲ್ಚರಲ್ ಆ್ಯಂಡ್ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್'ನ ಸದಸ್ಯರು ಅಭಿನಯಿಸುವ 'ಮಾಯಾ ದ್ವೀಪ' ನಾಟಕ ಪ್ರದರ್ಶನ 11ರಂದು ನಡೆಯಲಿದೆ. ಮೂಲ: ವಿಲಿಯಂ ಷೇಕ್ಸ್‌ಪಿಯರ್, ರಂಗಪಠ್ಯ, ವಿನ್ಯಾಸ ಮತ್ತು ನಿರ್ದೇಶನ: ಪುನೀತ್ ರಂಗಾಯಣ. ನಿರ್ವಹಣೆ: ದಿಲೀಪ್ ಬಿ.ಎಂ., ಸಂಗೀತ: ಹರಿಪ್ರಸಾದ್. ಸ್ಥಳ: ಸೇವಾ ಸದನ, ಮಲ್ಲೇಶ್ವರಂ. ಸಂಜೆ 6.30ಕ್ಕೆ.

ಸಂಗೀತ ಚಿಕಿತ್ಸೆ

ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್‌ನ ಸ್ಥಾಪಕ ದಿನಾಚರಣೆ ಪ್ರಯುಕ್ತ 11ರಂದು ಸಂಗೀತ ಚಿಕಿತ್ಸೆ ಕುರಿತ ಪ್ರಾತ್ಯಕ್ಷಿಕೆ ಹಮ್ಮಿಕೊ-ಳ್ಳಲಾಗಿದೆ. ಅತಿಥಿಗಳು: ಡಾ. ಜಯಲಕ್ಷ್ಮಿ, ಡಾ. ರೇಖಾ ಶ್ರೀರಾಮಚಂದ್ರಮೂರ್ತಿ. ನಂತರ ಯುಗಳ ಗಾಯನ ಕಾರ್ಯಕ್ರಮ ಇರಲಿದೆ. ಪಿಟೀಲು: ವಿದುಷಿ ಸಿ.ಎಸ್. ಉಷಾ, ಮೃದಂಗ: ವಿದುಷಿ ಅನಿರುದ್ಧ್ ವಾಸುದೇವ್. ಸ್ಥಳ: ಶ್ರೀ ರಾಮಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರಂ, ಸಂಜೆ 6.

ಯಕ್ಷಗಾನ ಪ್ರದರ್ಶನ

ತೆಂಕು ಬಡಗಿನ ಬಯಲಾಟ ಮೇಳದ ಆಯ್ದ ಮೇರು ಕಲಾವಿದರ 'ಯಕ್ಷ ಬಾಂಧವ್ಯ' ಪ್ರಸ್ತುತಪಡಿಸುವ 'ಮಾತೆ ಮಂದಾಕಿನಿ' ಯಕ್ಷಗಾನ ಪ್ರದರ್ಶನವನ್ನು 11ರಂದು ಆಯೋಜಿಸಲಾಗಿದೆ.

ಹಿಮ್ಮೇಳ: ಭಾಗವತರು– ನಗರ ಅಣ್ಣಪ್ಪ ಶೆಟ್ಟಿ, ದೇವಿಪ್ರಸಾದ್ ಆಳ್ವ, ಗಜೇಂದ್ರ ಶೆಟ್ಟಿ ಆಜ್ರಿ, ಮಧುಕರ್ ಹೆಗಡೆ. ಚಂಡೆ– ಶ್ರೀಕಾಂತ್ ಶೆಟ್ಟಿ ಎಡಮೊಗೆ, ಪನ್ನಗ ಮಯ್ಯ. ಮದ್ದಳೆ– ಶ್ರೀಧರ್ ಭಂಡಾರಿ, ಅಕ್ಷಯ್ ಕುಮಾರ್ ವಿಟ್ಲ.

ಮುಮ್ಮೇಳ: ಸ್ತ್ರೀವೇಷದಲ್ಲಿ: ಗೋವಿಂದ ವಂಡಾರು, ಮಹೇಶ್ ಸಾಣೂರು, ಮನೋಹರ್ ಕುಮಾರ್, ವಸಂತ್ ನಾಯಕ್ ಚಿಕ್ಕೊಳ್ಳಿ. ಹಾಸ್ಯ: ಸತೀಶ್ ಹಟ್ಟಿಯಂಗಡಿ, ಸೂರಾಗ್ ಹೇರೂರು. ರಂಗದಲ್ಲಿ: ಸುಧಾಕರ್ ಉಪ್ಪುಂದ, ರಾಜೇಶ್ ಬಂಡಾರಿ ಗುಣವಂತೆ, ರವಿ ಕೊಂಡ್ಲಿ, ಭರತ್ ಪರ್ಕಳ, ಸುಬ್ರಹ್ಮಣ್ಯ ಕೋಣೆ, ದಿನೇಶ್ ಕನ್ನಾರ್, ಸುಧಾಕರ್ ನಾಯಕ್, ಸತೀಶ್ ನಾಯಕ್, ಸಂಪತ್ ಕನ್ನತ್ ಕುಡೇರಿ, ಪ್ರಣುತ್ ಗಾಣಿಗ, ಪ್ರದೀಪ್, ಅನೂಪ್ ನಾಯಕ್, ಪ್ರಸಾದ್ ಮಂದಾರ್ತಿ, ಸಚಿನ್ ನೈಕಂಬ್ಳಿ, ಕೌಸ್ತುಭ ಉಡುಪ. ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ 10ರಿಂದ.

ಕಲಾವಿದೆಯ ಪಿಸುಮಾತು

ಆರ್ಟೆಲಾ ಅರ್ಪಿಸುವ, ಕಲಾವಿದೆ ಸಯೀದಾ ಅಲಿ ಅವರ 'ವಿಸ್ಪರ್ಸ್ ಆಫ್ ದಿ ಸೋಲ್' ಚಿತ್ರಕಲಾ ಪ್ರದರ್ಶನದ ಉದ್ಘಾಟನಾ ಸಮಾರಂಭವನ್ನು 11ರಂದು ಸಂಜೆ 5.30ಕ್ಕೆ ಆಯೋಜಿಸಲಾಗಿದೆ. ಅತಿಥಿಗಳು: ಎಸ್.ಜಿ.ವಾಸುದೇವ್, ನಳಿನಿ ಮಾಳವೀಯ, ದರ್ಶನ್ ಕುಮಾರ್ ವೈ.ಯು.

ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಗ್ಯಾಲರಿ ನಂ. 1 ಮತ್ತು 2, ಕುಮಾರಕೃಪಾ ರಸ್ತೆ. ಪ್ರದರ್ಶನವು 19ರವರೆಗೆ ಇರಲಿದೆ. ಪ್ರದರ್ಶನದ ಸಮಯ: ಬೆಳಿಗ್ಗೆ 10ರಿಂದ ಸಂಜೆ 6.

55ರ ಹರೆಯದಲ್ಲೂ ಸೈಫ್ ಸಖತ್ ಫಿಟ್

ಪ್ರಸ್ತುತ ದಿನಗಳಲ್ಲಿ ಜಟಿಲವಾದ ಜೀವನಶೈಲಿ ನಿಯಂತ್ರಿಸಲು ಅನೇಕರು ಯೋಗದ ಮೊರೆ ಹೋಗುವುದನ್ನು ಕಾಣಬಹುದು. ಇದಕ್ಕೆ ಸೆಲೆಬ್ರಿಟಿಗಳೂ ಹೊರತಲ್ಲ. ಸಮತೋಲಿತ ಆಹಾರ ಮತ್ತು ಉತ್ತಮ ನಿದ್ದೆಯ ಜೊತೆಗೆ ಯೋಗದ ಅಭ್ಯಾಸ ಮಾಡುವುದು ಡಿಜಿಟಲ್ ಯುಗದಲ್ಲಿನ ಗೊಂದಲಮಯ ಜೀವನಶೈಲಿಗೆ ಉತ್ತಮ ಪರಿಹಾರವಾಗಿದೆ. ಅದರಂತೆ ಬಾಲಿವುಡ್ ನಟ ಸೈಫ್ ಅಲಿ ಖಾನ್ ಯೋಗಾಭ್ಯಾಸ ಮಾಡುವುದರಿಂದಲೇ ಆರೋಗ್ಯವಂತ ದೇಹ ಹೊಂದಿದ್ದಾರೆ ಎಂದು ಅವರ ಯೋಗ ತರಬೇತುದಾರರು ಮಾಹಿತಿ ಹಂಚಿಕೊಂಡಿದ್ದಾರೆ.

ಸೈಫ್ ತಮ್ಮ ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಂಡಿರುವುದರ ಕುರಿತು ಅವರ ತರಬೇತುದಾರರಾಗಿರುವ ರೂಪಲ್ ವಿವರಿಸಿದ್ದಾರೆ. ಸೈಫ್ ಅಲಿ ಖಾನ್ ಕೈಗಳ ಮೇಲೆ ನಿಲ್ಲುವುದು, ಆಳವಾಗಿ ಹಿಂದಕ್ಕೆ ಬಾಗುವುದು ಮತ್ತು ಮುಂದಕ್ಕೆ ಬಾಗುವುದನ್ನು ಕರಗತ ಮಾಡಿಕೊಂಡಿದ್ದಾರೆ.

ಅವರು ಪ್ರದರ್ಶಿಸುವ ಪ್ರತಿ ಭಂಗಿಯೂ ಅವರ ಫಿಟ್‌ನೆಸ್‌ನಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈ ಎಲ್ಲಾ ಆಸನಗಳು ಒಟ್ಟಾಗಿ ಅವರಿಗೆ ಬಲವಾದ, ಹೊಂದಿಕೊಳ್ಳುವ ಮತ್ತು ಸಮತೋಲಿತ ದೇಹ ರಚನೆಗೆ ಸಹಾಯಕವಾಗಿವೆ ಎಂದು ತಿಳಿಸಿದ್ದಾರೆ.

55ರ ಹರೆಯದಲ್ಲೂ ಸೈಫ್ ಸದೃಢ ದೇಹ ಹೊಂದಿರುವುದರ ಕುರಿತು ಹೇಳಿರುವ ರೂಪಲ್, 'ಸೈಫ್ ಅಲಿ ಖಾನ್ ಅವರು ಶಕ್ತಿ ಮತ್ತು ಚುರುಕುತನವನ್ನು ತಮ್ಮ ಯೋಗಾಭ್ಯಾಸದಿಂದಲೇ ಹೆಚ್ಚಿಸಿಕೊಂಡಿದ್ದಾರೆ. ಅವರು ದೇಹವನ್ನು ಸದೃಢವಾಗಿ ಇಟ್ಟುಕೊಳ್ಳಲು ಕಾರಣವಾಗಿರುವ ಯೋಗ ಹಾಗೂ ವ್ಯಾಯಾಮದ ವಿಶಿಷ್ಟ ಭಂಗಿಗಳನ್ನು ನಿಮ್ಮ ಮುಂದೆ ಹಂಚಿಕೊಳ್ಳುತ್ತಿದ್ದೇನೆ' ಎಂದು ಚಿತ್ರಸಹಿತ ಬರೆದುಕೊಂಡಿದ್ದಾರೆ.



ಸೈಫ್ ಅಲಿ ಖಾನ್



ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ

ರಶ್ಮಿಕಾ– ವಿಜಯ್ ನಿಶ್ಚಿತಾರ್ಥ: ಫೆಬ್ರುವರಿಯಲ್ಲಿ ಮದುವೆ?

'ನ್ಯಾಷನಲ್ ಕ್ರಷ್' ಎಂದೇ ಖ್ಯಾತರಾಗಿರುವ ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಅವರು ನಟ ವಿಜಯ್ ದೇವರಕೊಂಡ ಅವರೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಹೈದರಾಬಾದ್‌ನಲ್ಲಿರುವ ವಿಜಯ್ ಅವರ ನಿವಾಸದಲ್ಲಿ ನಿಶ್ಚಿತಾರ್ಥ ನಡೆದಿದ್ದು, ಕಾರ್ಯಕ್ರಮದಲ್ಲಿ ಈ ಎರಡು ಕುಟುಂಬದವರಷ್ಟೇ ಭಾಗವಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

2026ರ ಫೆಬ್ರುವರಿಯಲ್ಲಿ ರಶ್ಮಿಕಾ–ವಿಜಯ್ ಜೋಡಿ ದಾಂಪತ್ಯ ಜೀವನಕ್ಕೆ ಕಾಲಿಡುವ ಸಾಧ್ಯತೆ ಇದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ಗೀತಾ ಗೋವಿಂದಂ', 'ಡಿಯರ್ ಕಾಮ್ರೇಡ್' ಚಿತ್ರಗಳಲ್ಲಿ ಒಟ್ಟಿಗೆ ನಟಿಸಿರುವ ರಶ್ಮಿಕಾ ಹಾಗೂ ವಿಜಯ್ ಪ್ರೀತಿಯ ಬಲೆಗೆ ಬಿದ್ದಿದ್ದಾರೆ ಎಂಬ ವದಂತಿ ಬಹಳ ಕಾಲದಿಂದಲೂ ಇತ್ತು.

ಜೂನ್‌ನಲ್ಲಿ ಇಬ್ಬರೂ ಒಟ್ಟಿಗೆ ಮುಂಬೈಗೆ ಆಗಮಿಸಿದಾಗ, ಅವರ ಡೇಟಿಂಗ್ ಬಗ್ಗೆ ಹೆಚ್ಚಿನ ಸುದ್ದಿಗಳು ಹರಿದಾಡಿದ್ದವು.

ಆನ್‌ಲೈನ್ ಗೇಮ್‌ನಲ್ಲಿ ಮಗಳ ನಗ್ನ ಫೋಟೊ ಕೇಳಲಾಗಿತ್ತು: ಅಕ್ಷಯ್



ಅಕ್ಷಯ್ ಕುಮಾರ್

ತಮ್ಮ ಹದಿಹರೆಯದ ಮಗಳು ಮೊಬೈಲ್‌ನಲ್ಲಿ ಆನ್‌ಲೈನ್ ವಿಡಿಯೊ ಗೇಮ್ ಆಡುವಾಗ ನಗ್ನ ಫೋಟೊ ಕಳುಹಿಸಲು ದುಷ್ಕರ್ಮಿಯೊಬ್ಬ ಕೇಳಿದ್ದ. ಕೂಡಲೇ ಮಗಳು ಮೊಬೈಲ್ ಫೋನ್ ಅನ್ನು ಸ್ವಿಚ್ ಆಫ್ ಮಾಡಿದ್ದಳು ಎಂದು ಬಾಲಿವುಡ್ ನಟ ಅಕ್ಷಯ್ ಕುಮಾರ್ ಹೇಳಿದ್ದಾರೆ.

ಮುಂಬೈನಲ್ಲಿ ನಡೆದ ಸೈಬರ್ ಸುರಕ್ಷತಾ ಜಾಗೃತಿ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತು ಹಿರಿಯ ಪೊಲೀಸ್ ಅಧಿ-ಕಾರಿಗಳನ್ನೂ ಒಳಗೊಂಡಂತೆ ಸೇರಿದ್ದ ಜನರ ಮುಂದೆಯೇ ನಟ ಈ ಆತಂಕಕಾರಿ ಘಟನೆಯನ್ನು ಹಂಚಿಕೊಂಡರು. ಕೆಲವು ತಿಂಗಳ ಹಿಂದೆ ನನ್ನ ಮಗಳು ಆನ್‌ಲೈನ್ ವಿಡಿಯೊ ಗೇಮ್ ಆಡುತ್ತಿದ್ದಾಗ, ಅಪರಿಚಿತ ವ್ಯಕ್ತಿಯು ಆರಂಭದಲ್ಲಿ ಸ್ನೇಹಪರ ಮತ್ತು ಪ್ರೋತ್ಸಾಹದಾಯಕ ಸಂದೇಶಗಳನ್ನು ಕಳುಹಿಸಿದ್ದ. ಕೂಡಲೇ ನನ್ನ ಮಗಳು ತಾಯಿಯ ಬಳಿಗೆ ಹೋಗಿ ಈ ಕುರಿತು ವಿವರಿಸಿದ್ದಳು ಎಂದು ಅಕ್ಷಯ್ ಹೇಳಿದ್ದಾರೆ. ಅವಳ ಜಾಗರೂಕ ನಡೆಯು ಸೈಬರ್ ಅಪರಾಧಿಗಳಿಗೆ ಆಕೆ ಬಲಿಯಾಗುವುದನ್ನು ತಡೆಯಿತು ಎಂದು ಹೇಳಿದ್ದಾರೆ.


ದಕ್ಷಿಣ ಮುಂಬೈನಲ್ಲಿರುವ ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಸೈಬರ್ ಜಾಗೃತಿ ಮಾಸದ ಉದ್ಘಾಟನೆಯ ನಂತರ ಮಾತನಾಡಿದ ನಟ, ರಾಜ್ಯದ 7ರಿಂದ 10ನೇ ತರಗತಿಯ ವಿದ್ಯಾರ್ಥಿ-ಗಳಿಗೆ ಶಾಲೆಗಳಲ್ಲಿ ಸೈಬರ್ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಫಡಣವೀಸ್ ಅವರಿಗೆ ಮನವಿ ಮಾಡಿದರು. ತಮ್ಮ ಮಗಳು ಆನ್‌ಲೈನ್ ಗೇಮ್ ಆಡುತ್ತಿದ್ದಾಗ ಮೊದಲು ಆಕೆಯನ್ನು ಪರಿಚಯ ಮಾಡಿಕೊಂಡಿದ್ದ ವ್ಯಕ್ತಿ, ಆಕೆಯ ಮೂಲ ಹೆಣ್ಣೋ ಗಂಡೋ ಎಂಬೆಲ್ಲ ಮಾಹಿತಿ ಪಡೆದು ಬಳಿಕ ನಗ್ನ ಚಿತ್ರ ಕಳುಹಿಸುವಂತೆ ಕೇಳಿದ್ದ ಎಂದಿದ್ದಾರೆ. 'ಇದು ಸಹ ಸೈಬರ್ ಅಪರಾಧದ ಒಂದು ಭಾಗ. ಕೆಲ ಪ್ರಕರಣಗಳಲ್ಲಿ ಸುಲಿಗೆಯೂ ನಡೆದಿದೆ. ಈ ರೀತಿ ಹಲವು ಪ್ರಕರಣಗಳಿವೆ. ಕೆಲ ಪ್ರಕರಣಗಳಲ್ಲಿ ಸಂತ್ರಸ್ತರು ಜೀವ ಕಳೆದುಕೊಂಡಿದ್ದಾರೆ' ಎಂದು ಅಕ್ಷಯ್ ಕುಮಾರ್ ಹೇಳಿದ್ದಾರೆ.

'ಶಾಲೆಯಲ್ಲಿ ನಾವು ಇತಿಹಾಸ ಮತ್ತು ಗಣಿತವನ್ನು ಕಲಿಯುತ್ತೇವೆ. 2 ಪ್ಲಸ್ 2 ನಾಲ್ಕು ಎಂದು ಅರಿಯುತ್ತೇವೆ. ಆದರೆ, ಸೈಬರ್ ಜಗತ್ತಿನಲ್ಲಿ ನಾಲ್ಕು ಎನ್ನುವುದು ಶೂನ್ಯವಾಗಬಹುದು. ನಮ್ಮ ಮಕ್ಕಳು ಇದನ್ನೆಲ್ಲಾ ಕಲಿಯಬೇಕು' ಎಂದಿದ್ದಾರೆ.

ಪ್ರತಿಭಾ ಜ್ಯುವೆಲ್ಲರಿಯಿಂದ ಹಬ್ಬಕ್ಕೆ ವಿಶೇಷ ಕೊಡುಗೆ!

ಧನತ್ರಯೋದಶಿ ಮತ್ತು ದೀಪಾವಳಿ ಹಬ್ಬಕ್ಕೆ ಆಕರ್ಷಕ ವಿನ್ಯಾಸದ ಆಭರಣಗಳೊಂದಿಗೆ ಗಮನ ಸೆಳೆಯುತ್ತಿರುವ ಬೆಂಗಳೂರಿನ ರಿಚಮಂಡ್ ಸರ್ಕಲ್‌ನ ಪಾರಂಪರಿಕ 'ಪ್ರತಿಭಾ ಜ್ಯುವೆಲ್ಲರಿ ಹೌಸ್'

ರಾಜ್ಯ ರಾಜಧಾನಿ ಬೆಂಗಳೂರಿನ ಪ್ರಮುಖ ಆಭರಣ ಮಳಿಗೆಗಳ ಪಟ್ಟಿಯಲ್ಲಿ ತನ್ನದೇ ಆದ ಛಾಪು ಮೂಡಿಸಿರುವ 'ಪ್ರತಿಭಾ ಜ್ಯುವೆಲ್ಲರಿ' ಧನತ್ರಯೋದಶಿ ಮತ್ತು ದೀಪಾವಳಿಗೆ ವಿಶೇಷ ಆಫರ್‌ಗಳೊಂದಿಗೆ ಗ್ರಾಹಕರ ಗಮನ ಸೆಳೆಯುತ್ತಿದೆ. ತನ್ನ ಪಾರಂಪರಿಕ ಹಿನ್ನೆಲೆಯೊಂದಿಗೆ ಗ್ರಾಹಕರಿಗೆ ಸದಾ ಆಭರಣ ಕ್ಷೇತ್ರದಲ್ಲಿ ನೈಪುಣ್ಯ ಸೇವೆ ನೀಡುತ್ತಿರುವ 'ಪ್ರತಿಭಾ ಜ್ಯುವೆಲ್ಲರಿ' ತನ್ನ ಕೊಡುಗೆಗಳನ್ನು ಮುಂದುವರೆಸುತ್ತಿದೆ. 1952ರಿಂದ ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಚಿಕ್ಕ ಮಳಿಗೆಯಿಂದ ಪ್ರಾರಂಭಗೊಂಡು ಇಂದು ಬೃಹದಾಕಾರವಾಗಿ ಬೆಳೆದು ಆಭರಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಹಿಂದೂಪುರ ಮೂಲದ ದಿ.ಸಕಲ ನರಸಿಂಹುಲು ಚೆಟ್ಟಿ ಮತ್ತು ಅವರ ಮಾವನವರಾದ ದಿ.ದೇವತಾ ಶ್ರೀರಾಮಯ್ಯ ಚೆಟ್ಟಿಯವರು ಒಟ್ಟಾಗಿ ಸಂಸ್ಥೆಯನ್ನು ಆರಂಭಿಸಿದರು. ಆರಂಭದಲ್ಲೇ ಸಾಕಷ್ಟು ಸವಾಲುಗಳನ್ನು ಎದುರಿಸಿದ 'ಪ್ರತಿಭಾ ಜ್ಯುವೆಲ್ಲರಿ', ಅಂತಾರಾಷ್ಟ್ರೀಯ ಮಾರುಕಟ್ಟೆಯ ಮೇಲೆ ಎದುರಾದ ಯುದ್ಧಗಳ ಪರಿಣಾಮಗಳ ಹೊಡೆತವನ್ನು ನೇರ ಹೊರಬೇಕಾಗಿತ್ತು. ಈ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಬೆಂಗಳೂರಿನಲ್ಲಿಂದು ಗ್ರಾಹಕರ ಸೇವೆ ನೀಡುತ್ತಾ ಬಂದಿದೆ. ಜೊತೆಗೆ, ಅಮೃತ ಮಹೋತ್ಸವದ ಹೊಸ್ತಿಲಿನಲ್ಲಿ ಗ್ರಾಹಕರಿಗೆ ಧನತ್ರಯೋದಶಿ ಮತ್ತು ದೀಪಾವಳಿ ಆಫರ್ ನೀಡಲು ಸಜ್ಜಾಗಿದೆ.



ಪ್ರತಿಭಾ ಜ್ಯುವೆಲ್ಲರಿ ಮೈಲಿಗಲ್ಲುಗಳು!

- ದಿ.ಸಕಲ ನರಸಿಂಹುಲು ಚೆಟ್ಟಿ ಮತ್ತು ದಿ.ದೇವತಾ ಶ್ರೀರಾಮಚೆಟ್ಟಿಯವರಿಂದ 1952ರಲ್ಲಿ ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಮೊದಲ ಮಳಿಗೆ ಸ್ಥಾಪನೆ
- 1970ರ ಬಳಿಕ ದಿ.ನರಸಿಂಹುಲು ಚೆಟ್ಟಿಯವರ ಪುತ್ರರಾದ ಶರತ್ ಕುಮಾರ್ ಮತ್ತು ಮುರಳಿ ಮೋಹನ್ ಇಂಜಿನಿಯರಿಂಗ್ ಪದವಿ ಮುಗಿಸಿ ವ್ಯವಹಾರಕ್ಕೆ ಪ್ರವೇಶ
- 1977ಕ್ಕೆ ರಜತ ಮಹೋತ್ಸವದೊಂದಿಗೆ ಸ್ವಂತ ಕಟ್ಟಡ 'ಸಕಲಾಜಿ ಮಾರ್ಕೆಟ್'ಗೆ ಸ್ಥಳಾಂತರ
- 2003ಕ್ಕೆ ಬೆಂಗಳೂರಿನ ರಾಜಾರಾಮ ಮೋಹನ್ ರಾಯ್ ರಸ್ತೆ, ರಿಚಮಂಡ್ ಸರ್ಕಲ್ ಬಳಿ 6ಸಾವಿರ ಚದರ ಅಡಿ ವಿಸ್ತೀರ್ಣದ 3 ಮಹಡಿಗಳ ಬೃಹತ್ ಶೋರೂಂ ಉದ್ಘಾಟನೆ
- 2013ಕ್ಕೆ ವೈಭವದ ವಜ್ರ ಮಹೋತ್ಸವವನ್ನು ಗ್ರಾಹಕರೊಂದಿಗೆ 'ಪ್ರತಿಭಾ ಜ್ಯುವೆಲ್ಲರಿ' ಆಚರಿಸಿದೆ.



ಸಾಮಾಜಿಕ ಸೇವೆಯಲ್ಲೂ ಅಗ್ರಗಣ್ಯ!
ಪ್ರತಿಭಾ ಜ್ಯುವೆಲ್ಲರಿ ಕೇವಲ ಉದ್ಯಮ ಕ್ಷೇತ್ರದಲ್ಲಿ ಮಾತ್ರವಲ್ಲದೇ ಸಾಮಾಜಿಕ ವಲಯದಲ್ಲೂ ತನ್ನ ಛಾಪು ಮೂಡಿಸಿದೆ. ಪ್ರತಿಭಾ ಜ್ಯುವೆಲ್ಲರಿ ಸಂಸ್ಥಾಪಕರಾದ ದೇವತಾ ಶ್ರೀರಾಮಯ್ಯ ಚೆಟ್ಟಿಯವರ ಹೆಸರಿನಲ್ಲಿ 'ದೇವತಾ ಶ್ರೀರಾಮಯ್ಯ ಚೆಟ್ಟಿ ಚಾರಿಟೀಸ್' ಸ್ಥಾಪನೆ ಮಾಡುವ ಮೂಲಕ ಸಾಕಷ್ಟು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ದೇವತಾ ಹಾಸ್ಟೆಲ್, ವಿವೇಕಾನಂದ ಹಾಸ್ಟೆಲ್ ಸೇರಿದಂತೆ ವಿವಿಧ ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸಿ, ಶೈಕ್ಷಣಿಕ ಕ್ಷೇತ್ರಕ್ಕೆ ನೆರವು ನೀಡಿದ್ದಾರೆ. ಜೊತೆಗೆ, ಅನಶಕ ಬಡವರಿಗೆ ಸಹಾಯಹಸ್ತ ನೀಡಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 96067 67285

ಪ್ರಜಾವಾಣಿ ಶನಿವಾರ • ಅಕ್ಟೋಬರ್ 11, 2025

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

SALE BDA 30x40 Anjanapura 5th G Block South facing 40x60 west facing commercial site 2nd Block. Contact 9620041313, 9945373839

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

SALE 40X60 West Facing BDA Site 4th Block 6th Stage Banashankari 12000/=. Psft. negotiable 9886044313.

BANASHANKARI _6TH Stage,4th Block 30x40,North Facing A'Khatha 1.35Crs_ 7th Block BDA_40X60 West_Facing, 11000/- 9845600007

SALE BSK 6th Stage 4th B-Block 40x60 west Facing 2Cr also 40x60 South Facing 6th Block 2.10Cr behind 100ft Road, site owners 9945373839, 9620041313

BDA BSK 5TH STAGE 30X40 E/F UTTARAHALLI KENGERI MAIN ROAD OPP MANTRI ALPHYNE APARTNENT: 8618385836/ 9448531837

BANASHANKARI 6TH Stage,BDA 40x60, Site For Sale Near 100 Feet Road Cheque Payment: 9916817739

Bannerghatta Road

BANNERGHATTA ROAD, Nisarga Garden Layout site 50x80 East facing. E-khatha. price 5250/sft. Negotiable. 9380593096, 9964378966.

Bangalore North

40X60 EAST FACING TELECOM-SOCIETY LAYOUT NISARGA RAJANUKUNTE YELAHANKA e-khatha BIAPPA APPROVED CLEAR-TITLES 3200/sqft CONTACT: 9448010599/8277629599

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Kanakapura Road

DIRECT OWNER_NEAR Vajarahalli Metro Station 46x80, North Facing Kanakapura Main Road Genuine Buyers Contact: 8904210201

J P Nagar

"J.P.NAGAR, SRINIDHI_LAYOUT 30x51 Residential Site, East Facing, BBMP A_Katha, Full White. Owner: 9845088449/ 9845249799"

Kempegowda Layout

NADA PRABHU Kempegowda layout BDA Site For Sale 30x40, 40x60, 50x80 Contact: 7676900174 6363496142

SITES FOR sale Nadaprabhu Kempegowda Layout 'BDA' no. 1678, 40*60 south facing 'E' Sector 8th block, and no. 1046, 50*80 west facing 'K' Sector 1st block 330 feet peripheral ring road commercial property. 9980339217/ 9448709882

Magadi Road

BEL 2ND Stage Bharthnagar 30x40, East Facing, 11500/- Per Sft, Near Gandhi Park. Contact: 9845497047

Mysore Road

PRICE 1900 sft_only Mysore Road Near PunithForms township 40x60 EKhatha Site. Only Immediately Settlement 9535195656.

Out-Station

PENUKONDA NEAR KIA Car Factory Madakasira Highway 50X100 (4-SITES) Resi Converted, Gated Community, 400/-PerSqft: 8310681025

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

"50X80 NF RESIDENTIAL BDA SITE SALE VISHVESHWARAIAH LAYOUT 8TH BLOCK, NEAR NAGARABHAVI D-GROUP. 9845143579"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

DIRECT OWNER NO.134, E/F 30x40 ARUNACHALAM LAYOUT Adjacent to Vishveswaraiah Layout Block-1 Rs. 10000/- 8496030007/ 8310885235

30X40 SALE 1st Block East Face Vishveswaraiah Layout Allotted Site Full White/ Normal White: 9844845864

Malur

MALUR. LUXURY Resort Villa Plots, 0 KMS from Xpress Highway, MPA/ BMRDA Approved, Ekatha Ready for Registration. 50 + Premium Amenities. Call: 8404084041.

Jigani

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Kengeri Satellite Town

***30X40 BDA** W/F SITE* SALE,Kengeri Satellite Town, SEMI COMMERCIAL/ RESIDENTIAL,close to Surana College. 8217341837

House

Basaveshwaranagar

BASAVESWARNAGAR HOUSE for sale with rental income near Pavithra Paradise. Ready Position 5.25 Crores Negotiable/Ready for Exchange commercial building. Brokers Excuse:-9845596542.

Rajarajeshwari Nagar

2640 SQFT N/W Corner Site with Duplex House for Sale Ideal Home, R.R Nagar. 9611880033

Yelahanka

1500 SFT site with rental residential units at Dwarakanagar, Bagalur Main Road. Contact 9986037756

Flat

Banashankari

FOR SALE New Ready to move Flats Sale @ Banashankari 2nd Stage Near BDA Complex 3 BHK 1750 sft 2.54 Cr & 2000 sft 2.90 Cr with individual E-Khatha Brokers excuse Call: 9741868566

"BANASHANKARI 2ND_STAGE 2BHK_Flat 1375 Sq.ft with club house North_door Rs.1.65_Crore "Sri.Ganesh Estate"- 9845286505"

Kanakapura Road

3BHK APARTMENT for`Sale 40x60, 2400.Sqft. Individual Floor near_Vajarahalli and Raghuvanahalli Metro_Station 1`KM. Call_9740148870 9341050991.

Rajarajeshwari Nagar

3 BHK FLAT NE Corner East_Facing, Furnished, 2_Carpark, Behind Nimishamba Temple, 2cr. Negotiable. Call_9902288900.

Industrial & Factory

Out-Station

INDUSTRIAL LAND FOR SALE
10/5 - acre Corner Plot Located in APIIC Industrial Area Gollapuram Village, Hindupur, Andhra Pradesh
Enquiries: 948 083 4451 944 828 6981

Agricultural Land

Jigani

FOR SALE 5.5 GUNTAS AGRICULTURE FARM PLOTS ON ANEKAL/ JIGANI– HAROHALLI MAIN 80 FEET ROAD, ADJACENT TO PROPOSED STRR (SATELLITE TOWN RING ROAD) 7 KMS FROM NEW IIM (INDIAN INSTITUTE OF MANAGEMENT) CAMPUS, 15 KMS FROM JIGANI & ANEKAL & 15 KMS FROM HAROHALLI, GOOD INVESTMENT AND RETURNS. CONTACT VICTORY PROPERTIES. 7411692219/ 8618576685/ 9482303339. www.victoryproperties.in

FOR SALE 14 ACRES AGRICULTURE GATED PROPERTY NEAR ANEKAL/ JIGANI– HAROHALLI ROAD, IDEAL FOR FARMLAND PROJECT,GENERAL PROPERTY WITH CLEAR TITLES. CONTACT VICTORY PROPERTIES. 7411692219/ 8618576685/ 9482303339. www.victoryproperties.in

FOR SALE 100 ACRES AGRICULTURE LANDS ON ANEKAL/ JIGANI- HAROHALLI MAIN ROAD. CONTACT VICTORY PROPERTIES,7411692219/ 8618576685/ 9482303339. www.victoryproperties.in

South

FOR SALE, AGRICULTURE FARM PLOTS OF 5.5 GUNTAS, AT PRIME LOCATION NELGULLI/ SOMANAHALLI, BANGALORE SOUTH, 2.5 KMS FROM BANGALORE-KANAKAPURA NATIONAL HIGHWAY, WITHIN GREATER BANGALORE AUTHORITY, 28KMS FROM BANGALORE-560082 PIN CODE. CONTACT VICTORY PROPERTIES. 7411692219/ 8618576685/ 9482303339. www.victoryproperties.in

Commerical

Nandini Layout

INDUSTRIAL LAND with threefloors building each 1200sqft forsale in truck terminal Kanteerava Studiogate Road Contact 9483400249

Farm House/ Land/ Resorts

Out-Station

JACKANARAI, KALLAR, NILGIRIS, Tamil Nadu: 65 Acres Patta Land with Teak Wood many more for SALE Contact: 9848392893, 9052200009

Residential/ Commercial

Devanahalli

NANDIHILLS ROAD 19602Sqft Converted eKhata 15Rooms Suitable-Airbnb ResortHotel Cafe WellnessRetreat ResidentialVillas 10Cr Ph 9900106706

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA_SITES Anjanapura- Arkavathi Banashankari 6th.Stage, Vishweswaraiah, Kempegowda. SAPTHAGIRI (Opp.BDA_Head Office, Kumara Park). 9036360366.

Nagarabhavi

WANTED BDA_SITE 30x40, 40x60, 50x80 Nagarabhavi, Rajajinagar Housing Cooperative Society, Visweswaraiah layout Kempegowda Layout. 8105688602.

Vishweshwariah Layout

"WANTED VISHVESHWARAIAH All Blocks Nagarabhavi_RHSCS 30x40, 40x60, 50x80 direct Registration Genuine Sellers. 7259675150/ 9448733456"

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Doddaballapur Road

SITES WANTED Shivakote, Rajankunte, Suradanapura, Doddaballapura Main Road 30x40, 30x50 Contact: 8296895858

RENTAL PROPERTIES

Accommodation Available

Commercial

BANASHANKARI 6TH_STAGE 80`Feet Road,11th`Block 50x80 Site Built-to-Suit. And 2nd`Block, 80`Feet Road,50x80 RENT for Vacant`Site. Call_9945724472

TOLET COMMERCIAL/ Office, 1500 Sq.ft, 1st Floor, Budikere Main Road, Opp: Chudamani Silk, Kanakapura. 9845162186

Industrial And Factory

AVAILABLE OF Industrial Shed of 75000`sqft at Soukya Road, Whitefield. Available Built-to-Suit Warehouse 160000 sqft`Vijipura Hoskote Contact: 9341234288/ 9663224353/ 9845417487.

Godown

AVAILABLE ON_RENT 1,000 Sqft. Space for Office/Godown near_Dhobhi Ghat, Rajajinagar, Bengaluru. Contact: 9449853323, 9845922704.

Villas/Bunglows

FOR RENT Vasanth Nagar 5 BHK Bunglow. Near Mahaveer Jain Hospital. Vegetarians Only: 9844072344/ 9844830500

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PUBLIC NOTICE

OUTREACH ASSOCIATION OF VOLUNTEERS FOR RURAL DEVELOPMENT, BENGALURU

RE-TENDER NOTICE

Sealed tenders are invited under a two-bid system (Technical and Financial) from eligible suppliers for the supply of the following items under the **GIZ-supported project titled "Promotion of ELS Cotton in Karnataka State":**

1. **Griege/Grey Fabric Cotton Bags of Size, 50 cm (L) x 60 cm (W)for Picking cotton: Quantity: 11,600**
2. **Griege/Grey Fabric Cotton Bags of Size: 120 cm (L)x 90 cm (W) for Collection and Transportation of Cotton: Quantity: 11,600**
3. **Griege/Grey Fabric Cotton Head Caps of Size: 30cm (L)x17 cm (W): Quantity: 23,200**

The items are to be delivered as part of the ongoing project activities in Mysuru and Haveri districts of Karnataka. This is a re-tender; therefore, bids submitted in response to the previous tender call will not be considered.

The last date for submission of sealed tenders is 21.10.2025 by 5:00 PM (during office hours).

For the detailed tender notification, including eligibility criteria, terms and conditions, and submission guidelines,
please visit:
www.outreachindia.org
Executive Director
Contact No.: 94490 77530

PROPERTY CORNER

ಕ್ಲಾಸಿಫೈಡ್ಸ್

CREDAI KARNATAKA
ಕ್ರೆಡೈ ಕರ್ನಾಟಕ

LOOKING TO INVEST IN BENGALURU?

ಬೆಂಗಳೂರಿನ ಪ್ರತಿಷ್ಠಿತ 48 ಡೆವಲಪರ್‌ಗಳು ತಮ್ಮ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸುತ್ತಿದ್ದಾರೆ

CREDAI KARNATAKA Presents
REALTY EXPO 2025

ಅಕ್ಟೋಬರ್
10TH ಶುಕ್ರವಾರ ಮಧ್ಯಾಹ್ನ 3:30 ರಿಂದ ರಾತ್ರಿ 8:00 ಗಂಟೆವರೆಗೆ
11TH ಶನಿವಾರ ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆವರೆಗೆ
12TH ಭಾನುವಾರ ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆವರೆಗೆ

Displaying properties from:
ಬೆಂಗಳೂರು | ಮಂಗಳೂರು | ಮೈಸೂರು

KTPO, Whitefield
ಕುಂದಲಹಳ್ಳಿ / ನಲ್ಲೂರಹಳ್ಳಿ ಮೆಟ್ರೋ ಸ್ಟೇಷನ್ ಹತ್ತಿರ, ಬೆಂಗಳೂರು.

ENTRY FREE | AMPLE CAR PARKING

Scan to Register

Call us: +91 99645 93355 | +91 99645 92255

#YourDreamHome www.credaikarnataka.com #OoralliOnduMane

FOR SALE

BDA SITE No. 90, BTM 1 st stage, North facing 40 X 60, opp: Income tax tribunal, Adjacent to JALA BHAVAN, Approx 100 mtr to Bannerghatta Main Road.
Genuine Buyers Call: Muralidhar
9741929567
9845301599

COMMERCIAL SPACE FOR RENT

Ground Floor - 1200 Sqft for Godown
1st Floor- 2400 Sqft,
2nd Floor- 2400 Sqft,
Suitable for Office Space, Banks and Call Centers.(Lift facility)
Location:
Kengeri Outer Ring Road, Jagajyothi Layout, Nagdevanahalli, Bengaluru - 56
Contact:
9844050968, 9611329777

PROPERTY FLIPPING
Most Lucrative Investment Strategy

* 100% Safe, Secured Investment Strategy
* Short Term - Max 6 to 9 Months only
* Asset backed Legal Investment
* Become Director in LLP Company
* Unbelievable ROI in just 6-9 Months
* Min Investment is 25.00 Lakhs Above

Jayashree Projects & Marketing Pvt Ltd
Call: 91139 47586 I 63603 83661
www.jpm-propertyflipping.com



BUSINESS

Business to Business

Business

PROPERY COLLATERALS/ Joint Ventures/ Schools/ Colleges/ Hospitals/ Takeovers/ Selling/ Buying/ New Ideas. Dr. Swamy Naidu (Vamshadhara Projects & Serivces).... 9342247637.

BUSINESS PARTNER Required For_Real estate Company Required 30Lakhs to 1crore Investment, secured hugely Returns: 9535195656

Business Offers

Business For Sale

FACTORY FOR Sale, Well Established, SAMBRANI CUPS manufacturing factory for SALE. situated in Rental Premises at Bangalore. Contact: 6364343709

PERSONAL

Change of Name

CHANGE OF NAME

I, **RITA KUMARI JAIN,** residing at # 73, Shankarmutt Parallel Road, Shankarpuram, Bengaluru - 560004 have changed my name to **RITA JAIN** vide affidavit dated 10-10-2025 before notary V. Srinivasa Reddy, Bengaluru. Henceforth I shall be called as **RITA JAIN** only.

CHANGE OF NAME

I, **SHAMEEM FARUKDHIN** W/o. Fooruquddin. Resident of No. 17, Ananda nagar 1st cross, Vijayapura, Devanahalli Taluk, Banglore Rural District- 562135. I state that i have changed my name from **SHAMEEM FARUKDHIN** to **SHAMIM TAJ** and also State that **FARUKDHIN** and **FOORUQUDDIN** both names are same and belongs to the same person that is my Husband. vide affidavit dated: 09/10/2025, sworn before A. Narayanaswamy, Notary Public, AT Devanahalli.

I, VAISHALI BHASKAR VARMA, residing at OMQ-379. Officers Mess, Station House, Air Force Station, Jalahalli East, Bangalore-560014 have changed my name as VAISHALI VARMA, vide affidavit dated 8/10/2025 before Notary T.V.Bhadravijaya, Bengaluru

I, PRAVEENA H.M, residing at Hassan-573213 have changed my name as PRAVEEN H.M vide affidavit dated 10/10/2025 before Notary K.S. Bammappanavar, Bengaluru

I, MUJEEB HUSSAIN S/O MIR KHIZER ALI (late) residing at Alipur, thondebhavi hobli, gowri bidanur taluk, Chikkaballapur district, Karnataka, have changed my name to SYED MUJEEB HUSSAIN vide affidavit dated 10.10.2025 before notary HM adinarayana gowda gowri bidanur.

I, JYOTHI, Residing at No. 5/133, Ward No.4, Municipal Layout, Chickballapur-562101, have changed my name to JYOTHI KOTHANUR MUNIKRISHNAPPA Vide Affidavit dated 10.10.2025 sworn before advocate and notary K.H. Venkatappa, Chickaballapur.

I, SHILPA, Residing at No. 1593/72, WARD No.6, 2nd CROSS, MUNICIPAL LAYOUT, M.G. ROAD, CHICKBALLAPUR-562101, have changed my name to SHILPA SRINIVASA Vide Affidavit dated 10.10.2025 sworn before advocate and notary K.H. Venkatappa, Chickaballapur.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

